Digitized by Arya Samaj Foundation Chennai and eGangotri

ತಮಿಳು ಭಾಷಾ ಚರಿತ್ರೆ

100824

ಡಾ|| ತಂಗ. ಮಣಿಯನ್

CC-0. In Public Domain. Gurukul Kangri Collection, Haridwar

ತಮಿಳು ಭಾಷಾ ಚರಿತ್ರೆ—ಡಾ॥ ತಂಗ. ಮಣಿಯನ್

Gurukul Kan

j Foundation

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಮಿಳು ಭಾಷಾ ಚರಿತ್ರೆ

DONATION

पुस्तकालय
पुस्तकालय
गुरुकुल कांगड़ी विश्वविद्यालय

100824

ಡಾ. ತಂಗ. [illegible]

ತಮಿಳು ಅಧ್ಯಾಪಕರು

ಕನ್ನಡ ಅಧ್ಯಯನ ಸಂಸ್ಥೆ

ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

Presented free of cost
with best compliments
from the Central Indian
Institute of Languages
(Govt. of India)
Mysore-6

ಮಾಣಿಕ್ಕಂ ಪ್ರಕಾಶನ

ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Tamilu Bhasha Charitre (History of Tamil Language) by Dr. Thanga. Manian, Lecturer, Institute of Kannada Studies, Manasagangotri, Mysore; Published by Manikkam Prakashana, Manasagangotri, Mysore–570 006.

ಮೊದಲನೆಯ ಮುದ್ರಣ : ೧೯೯೧

© ಮ. ಪಗುತ್ತಱಿವು

ಬೆಲೆ : 40 ರೂಪಾಯಿಗಳು

ಪ್ರತಿಗಳಿಗೆ ಬರೆಯಿರಿ :

ಮಾಣಿಕ್ಕಂ ಪ್ರಕಾಶನ
ಎಲ್–14, ಅಧ್ಯಾಪಕರ ನಿವೇಶನ
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬.

ಮುದ್ರಕರು :
ಶ್ರೀ ಮೀರಾ ಪ್ರಿಂಟರ್ಸ್, ಶಿವರಾಂಪೇಟೆ, ಮೈಸೂರು–೫೭೦ ೦೦೧.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕನ್ನಡ ತಾಯಿಯ ಹಿರಿಯಮಕ್ಕಳಲ್ಲಿ ಒಬ್ಬರಾದ

ಡಾ. ಹಾ. ಮಾ. ನಾಯಕ ಅವರಿಗೆ

ಒಲುಮೆಯ ಕಾಣಿಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನನ್ನ ಮಾತು

1980 ರಿಂದ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ತಮಿಳು ಅಧ್ಯಾಪಕನಾಗಿ ಕೆಲಸ ಮಾಡುತ್ತಿರುವಾಗ, ದ್ರಾವಿಡ ಸಾಹಿತ್ಯ ಅಧ್ಯಯನವನ್ನು ಐಚಿಕವಾಗಿ ಕಲಿಯುವ ಕನ್ನಡ ಎಂ.ಎ. ವಿದ್ಯಾರ್ಥಿಗಳಿಗೂ ದಕ್ಷಿಣ ಬಾರತೀಯ ಅಧ್ಯಯನದ ವಿದ್ಯಾರ್ಥಿಗಳಿಗೂ ತಮಿಳು ಭಾಷೆ ಮತ್ತು ಸಾಹಿತ್ಯ ಚರಿತ್ರೆಯನ್ನು ಕುರಿತು ಪಾಠಹೇಳುವ ಅವಕಾಶ ನನಗೆ ದೊರಕಿತು. ಆಗ ಕನ್ನಡದಲ್ಲಿ ತಮಿಳು ಭಾಷಾ ಚರಿತ್ರೆಯನ್ನು ಕುರಿತ ಪುಸ್ತಕಗಳು ಇಲ್ಲವಾದ್ದರಿಂದ ವಿದ್ಯಾರ್ಥಿಗಳು ಅನುಭವಿಸುವ ಕಷ್ಟಗಳನ್ನು ಕಂಡೆನು. ಅಂದೆ ನನಗೆ ತಮಿಳು ಭಾಷಾ ಚರಿತ್ರೆಯನ್ನು ಕನ್ನಡದಲ್ಲಿ ಬರೆಯಬೇಕು ಎಂಬ ಆಸೆ ಅಂಕುರಿಸಿತು. ಅಂದಿನಿಂದ ವಿದ್ಯಾರ್ಥಿಗಳಿಗೆ ಪಾಠಹೇಳುವುದಕ್ಕಾಗಿ ಸಂಗ್ರಹಿಸಿದ ಮಾಹಿತಿಗಳ ಆಧಾರದಮೇಲೆ ಒಂದೊಂದು ಪ್ರಕರಣವಾಗಿ ಬರೆಯಲಿಕ್ಕೆ ತೊಡಗಿದೆನು. ಹೀಗೆ ಅಂದು ಅಂಕುರಿಸಿದ ನನ್ನ ಆಸೆ ಮೊಳಕೆಬಿಟ್ಟು ಗಿಡವಾಗಿ ಮರವಾಗಿ ಹೂಬಿಟ್ಟು, ಕಾಯಾಗಿ ಹಣ್ಣಾಗಿ ಇಂದು ನಿಮ್ಮ ಕೈಗೆ ಸೇರಿದೆ. ಇದು ವ್ಯಾಕರಣವೆಂಬ ಹಣ್ಣಾಗಿರುವುದರಿಂದ ಆರಂಭದಲ್ಲಿ ಸ್ವಲ್ಪ ಕಹಿಯಾಗಿರಬಹುದು; ಆದರೆ ಕೊನೆಯಲ್ಲಿ ಇದು ಸಿಹಿಯನ್ನು ನೀಡುತ್ತದೆ ಎಂಬುದು ನನ್ನ ನಂಬಿಕೆ.

ತಮಿಳು ಭಾಷಾ ಚರಿತ್ರೆಯನ್ನು ಎರಡು ರೀತಿಯಲ್ಲಿ ವಿವರಿಸಿರುವ ಕಾರಣದಿಂದ ಈ ಕೃತಿಯಲ್ಲಿ ಎರಡು ಭಾಗಗಳಿವೆ. 'ಭಾಗ_೧' ಪ್ರಮುಖ ಕಾಲಗಳನ್ನು ಆಧಾರವಾಗಿಟ್ಟುಕೊಂಡು ಒಂದೊಂದು ಕಾಲದಲ್ಲೂ ತಮಿಳು ಭಾಷೆ ಹೇಗಿತ್ತು ಎಂಬುದನ್ನು ವಿವರಿಸುತ್ತದೆ. 'ಭಾಗ-೨' ಒಂದೊಂದು ವ್ಯಾಕರಣ ಅಂಶವೂ ಕಾಲಕ್ರಮೇಣ ಬೆಳೆದು ಬಂದ ರೀತಿಯನ್ನು ಸ್ಪಷ್ಟಪಡಿಸುತ್ತದೆ. ಎರಡನೆಯ ವಿಧಾನ ಹೊಸ ವಿಧಾನವಾದುದರಿಂದ ಇದನ್ನು ಅಳವಡಿಸಿ ಕೆಲವು ವ್ಯಾಕರಣ ಅಂಶಗಳನ್ನು ವಿವರಿಸಲಾಗಿದೆ ಎಂಬುದು ಗಮನಾರ್ಹ ಅಂಶ.

ಪಾರಿಭಾಷಿಕ ಶಬ್ದಗಳನ್ನುಕುರಿತು ಒಂದು ಮಾತು ಹೇಳಲು ಬಯಸುತ್ತೇನೆ. ಕೆಲವು ವ್ಯಾಕರಣ ಅಂಶಗಳಿಗೆ ಪಾರಿಭಾಷಿಕ ಶಬ್ದಗಳನ್ನು ರಚನೆಮಾಡುವಾಗ ಕೆಲವು ಪ್ರಶ್ನೆಗಳನ್ನು ಎದುರಿಸಬೇಕಾಯಿತು. ಅವನ್ನು ಬಗೆಹರಿಸಲು ಆದಷ್ಟು ಪ್ರಯತ್ನಿಸಿದ್ದೇನೆ. ಆದರೂ ಪಾರಿಭಾಷಿಕ ಶಬ್ದಗಳ ರಚನೆಯಲ್ಲಿ ದೋಷಗಳಿರಬಹುದು. ಅವನ್ನು ಓದುಗರು ತಿಳಿಸಿದರೆ ತಿದ್ದಿಕೊಳ್ಳಲಿಕ್ಕೆ ಸಾದ್ಯವಾಗುತ್ತದೆ ಎಂಬುದು ನನ್ನ ಬಯಕೆ.

ಜೇನಿನ ಈ ಗೂಡನ್ನು ನಾನೊಬ್ಬನೇ ಕಟ್ಟುವುದು ಅಸಾಧ್ಯ. ಇದನ್ನು ಕಟ್ಟಲು ಸಹಾಯ ಮಾಡಿದ ದುಂಬಿಗಳು ಹಲವು. ಆ ದುಂಬಿಗಳನ್ನು ಈ ಸಮಯದಲ್ಲಿ ನೆನೆಸಿಕೊಳ್ಳಬೇಕಾದುದು ನನ್ನ ಕರ್ತವ್ಯ. ಅಂಥವರಲ್ಲಿ ಮೊದಲಿಗರು ಗುಲ್ಬರ್ಗ ವಿಶ್ವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿದ್ಯಾನಿಲಯದ ಉಪಕುಲಪತಿಗಳಾಗಿಯೂ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿಯೂ ಇದ್ದ ಡಾ. ಹಾ. ಮಾ. ನಾಯಕ ಅವರು. ನನ್ನನ್ನು ನೋಡುವಾಗಲೆಲ್ಲಾ ಪ್ರೀತಿಯಿಂದ ಮಾತನಾಡಿಸಿ 'ಏನು ಮಾಡುತ್ತಿದ್ದೀರಿ; ಏನಾದರೂ ಬರೆಯುತ್ತಿದ್ದೀರಾ' ಎಂದು ಪ್ರಶ್ನಿಸಿ, ನಾನು ಸತತವಾಗಿ ಕೆಲಸ ಮಾಡುವುದಕ್ಕೆ ಉತ್ಸಾಹ ಕೊಟ್ಟವರು ಅವರು. ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುವುದರೊಂದಿಗೆ ಈ ಕೃತಿಯನ್ನು ಕಾಣಿಕೆಯಾಗಿ ಅರ್ಪಿಸುವುದರಲ್ಲಿ ಸಂತೋಷ ಪಡುತ್ತೇನೆ.

ಅವರಂತೆಯೇ ನನ್ನನ್ನು ನೋಡುವಾಗಲೆಲ್ಲಾ ತಮಿಳುನಾಡಿನ ರಾಜಕೀಯದಿಂದ ನನ್ನ ಬರಹದ ಬೆಳವಣಿಗೆಯವರೆಗೂ ಪ್ರೀತಿಯಿಂದ ವಿಚಾರಿಸುವ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ ಅವರಿಗೆ ನನ್ನ ಕೃತಜ್ಞತೆಗಳು.

ನನ್ನಲ್ಲಿ ಪ್ರೀತಿ ತೋರಿಸುವ ಮತ್ತೊಬ್ಬರು ಭಾಷಾವಿಜ್ಞಾನ ಪ್ರಾಧ್ಯಾಪಕರಾದ ಡಾ. ಕೆ. ಕೆಂಪೇಗೌಡ ಅವರು. ಈ ಕೃತಿಯನ್ನು ಬರೆಯುತ್ತಿರುವಾಗ ನಾನಾ ಬಗೆಯ ಸಲಹೆಗಳನ್ನು ನೀಡಿದವರು ಅವರು. ಅವರಿಗೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಕಾಯಿ ಹಣ್ಣಾಗುವುದು ಎರಡು ರೀತಿಯಲ್ಲಿ. ಒಂದು ತಾನೇ ಮಾಗಿಹಣ್ಣಾಗುವುದು ; ಮತ್ತೊಂದು ಕಾಯನ್ನು ಕಿತ್ತು ತಂದು ಹೂಟಿಟ್ಟು ಹಣ್ಣಾಗುವಂತೆ ಮಾಡುವುದು. ನನ್ನ ಈ ಹಣ್ಣು ತಾನೇ ಮಾಗಿದ ಹಣ್ಣಲ್ಲ ; ಪಕ್ವಪಡಿಸಿ ಮಾಗುವಂತೆ ಮಾಡಿದ್ದು. ನಾನು ಕೊಟ್ಟ ಕಾಯನ್ನು ಹೂಟಿಟ್ಟು ಒಳ್ಳೆಯ ಹಣ್ಣಾಗಿ ಮಾಡಿದವರು ನನ್ನ ಗೆಳೆಯರಾದ ಡಾ. ಸಿ. ಎಸ್. ರಾಮಚಂದ್ರ, ಶ್ರೀ ಕೆ. ರಾಮನ್ ಮತ್ತು ಶ್ರೀ ಬಿ. ಎಂ. ಶರಬೇಂದ್ರಯ್ಯ. ಇವರನ್ನು ನಾನು ಅಭಿನಂದಿಸುವುದು ಬರೀ ಸಂಪ್ರದಾಯವೇ ವಿನಹ ಬೇರೇನಿಲ್ಲ. ಈ ಶಿಲ್ಪಿಗಳಿಗೆ ನನ್ನ ವಂದನೆಗಳು.

ಈ ಕೃತಿಯನ್ನು ಸಿದ್ಧಪಡಿಸುತ್ತಿರುವಾಗ ಪ್ರಯೋಜನಕರವಾದ ಹಲವಾರು ಸಲಹೆಗಳನ್ನು ನೀಡಿದವರು ಡಾ. ಕೆ. ರಾಮಸ್ವಾಮಿ, ಡಾ. ಸೋಮಶೇಖರಗೌಡ, ಡಾ. ಪದ್ಮಾಶೇಖರ್, ಡಾ. ಆರ್. ರಾಮಕೃಷ್ಣ ಮತ್ತು ಶ್ರೀ ಆರ್. ನಕ್ಕೀರರ್. ಇವರನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳುತ್ತೇನೆ.

ನನ್ನ ಬಾಳ ಸಂಗಾತಿ ಪಗುತ್ತಱಿವು ಎಂ. ಎ. ಅವರ ಸಹಾಯವಿಲ್ಲದೆ ಈ ಕೃತಿಯನ್ನು ಬರದು ಪೂರೈಸುವುದು ಅಸಾಧ್ಯ. ಅವರನ್ನು ನೆನೆಸಿಕೊಳ್ಳುವುದು ಅನಿವಾರ್ಯ.

ಈ ಹೊತ್ತಗೆಗೆ ಮುಖಪುಟವನ್ನು ರಚಿಸಿದ ಶ್ರೀ ಬಿ. ಜಿ. ಕನಕೇಶಮೂರ್ತಿ ಅವರಿಗೆ ವಂದನೆಗಳು.

ಈ ಗ್ರಂಥವನ್ನು ಸುಂದರವಾಗಿ ಮುದ್ರಿಸಿಕೊಟ್ಟ ಶ್ರೀ ಮೀರಾ ಪ್ರಿಂಟರ್ಸ್‌ನ ಮಾಲೀಕರಿಗೂ ಮತ್ತು ಸಿಬ್ಬಂದಿವರ್ಗದವರಿಗೂ ನನ್ನ ಅಭಿನಂದನೆಗಳು ಸಲ್ಲುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಳಗೆ

ಪುಟ

ನನ್ನ ಮಾತು v

ಭಾಗ-೧

೧. ತಮಿಳು ಭಾಷೆ ೩
೨. ಭಾಷಾ ಚರಿತ್ರೆ ೮
೩. ಭಾಷಾ ಚರಿತ್ರೆಗೆ ನೆರವಾಗುವ ಪುರಾವೆಗಳು ೧೧
೪. ತಮಿಳು ಭಾಷಾ ಚರಿತ್ರೆ ಮತ್ತು ವ್ಯಾಕರಣಗಳು ೧೯
೫. ತಮಿಳು ಭಾಷೆಯ ಆಂತರಿಕ ಚರಿತ್ರೆ ೨೩
೬. ಗುಹಾಶಾಸನಗಳ ತಮಿಳು ಭಾಷೆ ೩೧
೭. ತೊಲ್ಕಾಪ್ಪಿಯರ್ ಕಾಲದ ತಮಿಳು ಭಾಷೆ ೩೯
೮. ಸಂಘ ಕಾಲದ ತಮಿಳು ಭಾಷೆ ೭೨
೯. ಪಲ್ಲವರ್ ಕಾಲದ ತಮಿಳು ಭಾಷೆ ೮೧
೧೦. ಚೋಳರ್ ಕಾಲದ ತಮಿಳು ಭಾಷೆ ೮೯
೧೧. ನಾಯಕ್ಕರ್ ಕಾಲದ ತಮಿಳು ಭಾಷೆ ೧೦೧
೧೨. ಆಧುನಿಕ ಕಾಲದ ತಮಿಳು ಭಾಷೆ ೧೧೨
೧೩. ತಮಿಳು ಭಾಷೆಯ ಬಾಹ್ಯ ಚರಿತ್ರೆ ೧೨೭

ಭಾಗ-೨

೧೪. ಸರ್ವನಾಮಗಳು ೧೩೭
೧೫. ವಿಭಕ್ತಿಗಳು ೧೪೫
೧೬. ಕ್ರಿಯಾಪದಗಳ ರಚನೆ ಮತ್ತು ವರ್ಗೀಕರಣ ೧೫೪
೧೭. ಕಾಲಸೂಚಕ ಪ್ರತ್ಯಯಗಳು ೧೭೭
೧೮. ಲಿಂಗ ಪ್ರತ್ಯಯಗಳು ೧೮೪
೧೯. ನಿಷೇಧಾರ್ಥಕಗಳು ೧೯೨
Reference books ೧೯೭
ಪಾರಿಭಾಷಿಕ ಪದಗಳು ೧೯೯

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾಗ ೧

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೧. ತಮಿಳು ಭಾಷೆ

ದ್ರಾವಿಡ ಭಾಷೆಗಳಲ್ಲಿ ಬಹು ಪ್ರಾಚೀನವಾದ ಭಾಷೆ ತಮಿಳು ಭಾಷೆ. ಹೆಚ್ಚು ಕಡಿಮೆ ಎರಡು ಸಾವಿರದ ಐನೂರು ವರ್ಷದ ಸತತವಾದ ಸಾಹಿತ್ಯ ಮತ್ತು ವ್ಯಾಕರಣ ಚರಿತ್ರೆಯನ್ನು ಹೊಂದಿರುವುದು ತಮಿಳು ಭಾಷೆ. ಈ ಪ್ರಾಚೀನ ಭಾಷೆಯನ್ನು ತಮಿಳು ನಾಡಿನಲ್ಲೂ, ಶ್ರೀಲಂಕಾ, ಸಿಂಗಪೂರ್, ಮಲೇಯಾ, ಬರ್ಮಾ ಮುಂತಾದ ಹೊರ ದೇಶಗಳಲ್ಲೂ ಇರುವ ಜನರು ಮಾತನಾಡುತ್ತಾರೆ.

ಹಲವಾರು ವಿಶಿಷ್ಟತೆಗಳ ಕಾರಣವಾಗಿ ತಮಿಳು ಭಾಷೆ ದ್ರಾವಿಡ ಭಾಷೆಗಳಲ್ಲಿ ಮೊದಲನೇ ಸ್ಥಾನವನ್ನು ಪಡೆದುಕೊಂಡಿದೆ. ಅವು :

1) ಇತರ ದ್ರಾವಿಡ ಭಾಷೆಗಳೊಂದಿಗೆ ಹೋಲಿಸಿ ನೋಡುವಾಗ, ಸಂಸ್ಕೃತ ಭಾಷೆಯ ಪ್ರಭಾವ ಕಡಿಮೆಯಾಗಿ ಕಾಣಸಿಕೊಳ್ಳುವುದು ತಮಿಳು ಭಾಷೆಯಲ್ಲೇ. ತಮಿಳು ಭಾಷೆಯಲ್ಲಿ ಕಾಣಿಸಿಕೊಳ್ಳುವ ಕೆಲವು ಸಂಸ್ಕೃತ ಪದಗಳೂ ತಮಿಳು ಭಾಷೆಯ ಸ್ವರೂಪಕ್ಕೆ ತಕ್ಕಂತೆ ಬದಲಾವಣೆಯಾಗಿದೆ.

2) ಇತರ ದ್ರಾವಿಡ ಭಾಷೆಗಳಿಗಿಂತ ಪ್ರಾಚೀನ ಸಾಹಿತ್ಯಗಳನ್ನೂ ವ್ಯಾಕರಣಗಳನ್ನೂ ಪಡೆದಿದೆ.

3) ಇತರ ದ್ರಾವಿಡ ಭಾಷೆಗಳಿಗಿಂತ ಆಡು ಭಾಷೆಯೂ ಬರಹ ಭಾಷೆಯೂ ಕಡಿಮೆ ವ್ಯತ್ಯಾಸವನ್ನು ಹೊಂದಿದೆ.

4) ಸಂಘ ಕಾಲದಿಂದ ಇಂದಿನವರೆಗೂ ತಮಿಳು ಭಾಷೆ ಅಷ್ಟೊಂದು ಮಾರ್ಪಾಡುಗಳನ್ನು ಪಡೆದಿಲ್ಲ. ಆದ್ದರಿಂದ ಸಂಘಕಾಲ ಸಾಹಿತ್ಯಗಳನ್ನು ಇಂದಿನವರೂ ಓದಿ ಆನಂದಿಸಬಹುದು.

5) ಇತರ ದ್ರಾವಿಡ ಭಾಷೆಗಳಲ್ಲಿ ಹಳೆಯ ಶಾಸನಗಳು ಅನ್ಯ ಭಾಷೆಯಲ್ಲಿರುವಾಗ ತಮಿಳಿನ ಪ್ರಾಚೀನ ಶಾಸನಗಳಲ್ಲಿ ಬಹಳಷ್ಟು ಶಾಸನಗಳು ತಮಿಳು ಭಾಷೆಯಲ್ಲಿವೆ.

6) ಮೂಲ ದ್ರಾವಿಡ ಭಾಷೆಯ ಪದಗಳನ್ನು ಹೆಚ್ಚಾಗಿ ಹೊಂದಿರುವ ಭಾಷೆ ತಮಿಳುಭಾಷೆ.

ವ್ಯಾಕರಣ ಪ್ರಾಚೀನತೆ :

ತಮಿಳು ಭಾಷೆಯಲ್ಲಿ ಕಾಣಸಿಕೊಳ್ಳುವ ಮೊಟ್ಟಮೊದಲ ಕೃತಿಯೇ ''ತೊಲ್ಕಾಪ್ಪಿಯಂ'' ಎನ್ನುವ ವ್ಯಾಕರಣ ಗ್ರಂಥ. ಇದರ ಕಾಲ ಕ್ರಿ. ಪೂ. 3ನೇ ಶತಮಾನ. ದೊರೆತಿರುವ ಕೃತಿಗಳಲ್ಲಿ ಇದು ಮೊದಲ ಕೃತಿಯಾದರೂ ಇದಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಂಚೆಯೆ ತಮಿಳು ಭಾಷೆಯಲ್ಲಿ ವ್ಯಾಕರಣ ಕೃತಿಗಳೂ ಸಾಹಿತ್ಯ ಕೃತಿಗಳೂ ಇದ್ದವು ಎಂಬುದು ತೊಲ್ಕಾಪ್ಪಿಯಂನಲ್ಲಿ ಹಿಂದಿನವರ ಅಭಿಪ್ರಾಯವೆಂದೂ ಹಿಂದಿನ ಕೃತಿಗಳಲ್ಲಿ ಹೇಳಲ್ಪಟ್ಟಿರುವವೆಂದೂ ಬರುವ ಸೂಚನೆಗಳಿಂದ ತಿಳಿಯಾಗಿ ಗೊತ್ತಾಗುತ್ತದೆ. ಜಗತ್ತಿನ ವ್ಯಾಕರಣಗಳೆಲ್ಲವೂ ಧ್ವನಿಮಾ ವಿಜ್ಞಾನ, ಆಕೃತಿಮಾ ವಿಜ್ಞಾನ, ವಾಕ್ಯವಿಜ್ಞಾನ ಮುಂತಾದವುಗಳನ್ನು ಮಾತ್ರವೇ ವಿವರಿಸುವಾಗ ಇದು ತಮಿಳರ ಬಾಳಿಗೂ ಲಕ್ಷಣವನ್ನು ಹೇಳುತ್ತದೆ. ಒಂದು ಪ್ರತ್ಯೇಕ ಭಾಗದಲ್ಲಿ ತಮಿಳರ ಬಾಳನ್ನು ಬಹಳ ಸೊಗಸಾಗಿ ವಿವರಿಸುತ್ತದೆ. ಈ ಭಾಗ ಈ ಕೃತಿಯ ಮೆಚ್ಚುಗೆಗೆ ಕಾರಣವಾಗುತ್ತದೆ.

ತಮಿಳು ಅಕ್ಷರಗಳು :

ತಮಿಳುನಾಡಿನ ಹಳೆಯ ಶಾಸನಗಳು ಬ್ರಾಹ್ಮಿ ಅಕ್ಷರದಲ್ಲೂ 'ವಟ್ಟೆಟುತ್ತು' ಎಂಬ ಅಕ್ಷರದಲ್ಲೂ ಗ್ರಂಥ ಅಕ್ಷರದಲ್ಲೂ ಇವೆ. ಕ್ರಿ. ಶ. 7ನೇ ಶತಮಾನದ ಅನಂತರ ಬಂದ ಶಾಸನಗಳು ಇಂದಿನ ತಮಿಳು ಅಕ್ಷರಗಳಲ್ಲಿ ಇವೆ. ಇಂದಿನ ತಮಿಳು ಅಕ್ಷರಗಳು ವಟ್ಟೆಟುತ್ತಿನಿಂದ ವಿಕಾಸಗೊಂಡಿವೆ.

ತಮಿಳು ಭಾಷೆಯಲ್ಲಿ 12 ಸ್ವರಗಳು ಇವೆ. ಅವುಗಳಲ್ಲಿ ಹ್ರಸ್ವ ಸ್ವರಗಳು ಐದು ; ದೀರ್ಘ ಸ್ವರಗಳು ಐದು ; ಸಂಧ್ಯಕ್ಷರಗಳು ಎರಡು. ಕ, ಚ, ಟ, ತ, ಪ, ಱ, ಎಂಬ ಸ್ಪರ್ಶ ಅಕ್ಷರಗಳಾರೂ ಅವುಗಳ ಸಜಾತೀಯ ಅನುನಾಸಿಕ ಅಕ್ಷರಗಳಾದ ಙ, ಞ, ನ (n), ಮ, ನ (ṉ) ಎಂಬ ಆರೂ ಯ, ರ, ಲ, ವ, ೞ, ಳ ಎಂಬ ನಡುವರ್ಗ ಅಕ್ಷರಗಳಾರೂ ಸೇರಿ ಒಟ್ಟು 18 ವ್ಯಂಜನಗಳೂ ; ಸ್ಪರ್ಶ ಅಕ್ಷರಗಳನ್ನು ಮೃದು ಪಡಿಸುವ 'ಆಯ್ದಂ' ಎಂಬ ಅಕ್ಷರವೂ ತಮಿಳಿನಲ್ಲಿ ಇವೆ. ತಮಿಳಿನಲ್ಲಿ ಘೋಶ ಅಕ್ಷರಗಳೂ ಸಂಘರ್ಷಿ ಅಕ್ಷರಗಳೂ ಇರಲಿಲ್ಲ. ಆದರೆ ಅಘೋಷ ಸ್ಪರ್ಶ ಅಕ್ಷರಗಳು ಅವು ಬರುವ ಸ್ಥಳಕ್ಕೆ ತಕ್ಕಂತೆ ಘೋಷ ಅಕ್ಷರಳಾಗಿಯೂ ಸಂಘರ್ಷಿ ಅಕ್ಷರಳಾಗಿಯೂ ಉಚ್ಚರಿಸಲ್ಪಡುತ್ತವೆ. ಸಂಖ್ಯಾವಾಚಕಗಳನ್ನು ಗುರುತಿಸಲು ತಮಿಳಿನಲ್ಲಿ ವಿಶೇಷ ಅಕ್ಷರಗಳಿವೆ.

ದೇವನಾಗರಿಯಲ್ಲಿಲ್ಲದ ಎ, ಒ, ಎಂಬ ಸ್ವರಗಳು ತಮಿಳಿನಲ್ಲಿ ಇವೆ. ದ್ರಾವಿಡ ಭಾಷೆಗಳಿಗೆ ಇವೆರಡು ಅಕ್ಷರಗಳೂ ವಿಶಿಷ್ಟ ಅಕ್ಷರಗಳಾಗಿಯೂ ಅಗತ್ಯ ಅಕ್ಷರಗಳಾಗಿಯೂ ಕಾಣಿಸಿಕೊಳ್ಳುತ್ತವೆ. ಇದರಂತೆಯೇ 'ರ' ಕಾರ 'ಱ' ಕಾರಗಳೂ ನ(n) 'ಕಾರ' ನ(ṉ) ಕಾರಗಳೂ 'ಲ' ಕಾರ 'ಳ' ಕಾರಗಳೂ ತಮಿಳು ಭಾಷೆಗೆ ಅಗತ್ಯ ಅಕ್ಷರಗಳಾಗಿವೆ. ತಮಿಳಿನ ವಿಶಿಷ್ಟ ಅಕ್ಷರವಾಗಿ 'ೞ' ಕಾರ ಕಾಣಿಸಿಕೊಳ್ಳುತ್ತದೆ.

ತಮಿಳು ಪದಗಳು :

ತಮಿಳು ಭಾಷೆಯಲ್ಲಿ ನಾಲ್ಕು ವಿಧವಾದ ಪದಗಳಿದ್ದರೂ ಅವುಗಳನ್ನು ಎರಡೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಧಗಳಲ್ಲಿ ಸೇರಿಸಬಹುದು. ಅವು ನಾಮಪದ ಮತ್ತು ಕ್ರಿಯಾಪದ.

ನಾಮಪದಗಳು ಮಾನವ, ಅಮಾನವ ಭೇದಗಳನ್ನು ತೋರಿಸುವುದರೊಂದಿಗೆ ಲಿಂಗ, ವಚನ, ಪುರುಷ ಮುಂತಾದುವುಗಳನ್ನೂ ಸೂಚಿಸುತ್ತವೆ. ತಮಿಳು ವ್ಯಾಕರಣಗಳು ಮಾನವನನ್ನು ಕುರಿತು ಬರುವ ನಾಮಪದಗಳನ್ನು ಮಾನವ ನಾಮಪದಗಳೆಂದೂ ಉಳಿದವುಗಳನ್ನು ಅಮಾನವ ನಾಮಪದಗಳೆಂದೂ ಕರೆಯುತ್ತವೆ.

ಮಾನವ ನಾಮಪದಗಳಲ್ಲಿ ಪುಲ್ಲಿಂಗ, ಸ್ತ್ರೀಲಿಂಗ, ಪುಂಸ್ತ್ರೀಲಿಂಗ ಎಂಬ ಮೂರು ವಿಧವಾದ ಲಿಂಗ ಭೇದಗಳು ಕಾಣಿಸಿಕೊಳ್ಳುತ್ತವೆ. ಇವುಗಳಲ್ಲಿ ಪುಲ್ಲಿಂಗ ಮತ್ತು ಸ್ತ್ರೀಲಿಂಗ ಎಂಬುವು ಏಕವಚನವನ್ನೂ ಪುಂಸ್ತ್ರೀಲಿಂಗ ಎಂಬುದು ಬಹುವಚನವನ್ನೂ ಸೂಚಿಸುತ್ತವೆ.

ಅಮಾನವ ನಾಮಪದಗಳು ನಪುಂಸಕಲಿಂಗ ಏಕವಚನ ಮತ್ತು ನಪುಂಸಕಲಿಂಗ ಬಹುವಚನ ಎಂದು ಎರಡು ವಿಧಗಳಲ್ಲಿವೆ.

ನಾಮಪದಗಳು ಉತ್ತಮಪುರುಷ, ಮಧ್ಯಮಪುರುಷ, ಪ್ರಥಮಪುರುಷ ಎಂದು ಮೂರು ವಿಧವಾದ ಪುರಷಾರ್ಥಕ ನಾಮಪದಗಳಾಗಿ ಕಾಣಿಸಿಕೊಳ್ಳುತ್ತವೆ.

ಕ್ರಿಯಾ ಪದಗಳು, ಪೂರ್ಣ ಕ್ರಿಯಾ ಪದ ಮತ್ತು ಅಪೂರ್ಣ ಕ್ರಿಯಾ ಪದವೆಂದು ವಿಂಗಡಿಸಲ್ಪಡುತ್ತವೆ. ಪೂರ್ಣ ಕ್ರಿಯಾ ಪದಗಳಲ್ಲಿ ಹೆಚ್ಚು ಕಡಿಮೆ ಎಲ್ಲಾ ಕ್ರಿಯಾ ಪದಗಳೂ ನಾಮ ಪದದಂತೆಯೆ ಮಾನವ ಅಮಾನವ ಬೇಧಗಳನ್ನು ವ್ಯಕ್ತಪಡಿಸುವುದರೊಂದಿಗೆ ಲಿಂಗ, ವಚನ, ಪುರುಷ ಮುಂತಾದವುಗಳನ್ನೂ ತೋರಿಸುತ್ತವೆ; ಅವುಗಳನ್ನು ಸೂಚಿಸುವ ಪ್ರತ್ಯಯಗಳನ್ನು ಕೂಡಿ ಬರುತ್ತವೆ. ಅಪೂರ್ಣ ಕ್ರಿಯಾ ಪದಗಳಲ್ಲಿ ಮೇಲೆ ಹೇಳಿದ ಲಿಂಗ ಮುಂತಾದವುಗಳನ್ನು ಸೂಚಿಸುವ ಪ್ರತ್ಯಯಗಳು ಬರುವುದಿಲ್ಲ.

ತಮಿಳು ಭಾಷೆಯ ಪದಗಳು, ಧಾತುಗಳೊಂದಿಗೆ ಹಲವಾರು ಬಗೆಯಾದ ಪ್ರತ್ಯಯಗಳನ್ನು ಸೇರಿಸುವುದರ ಮೂಲಕ ರಚನೆಯಾಗುತ್ತವೆ. ಆದ್ದರಿಂದ ಪದಗಳ ರಚನೆಗಳು ಪ್ರತ್ಯಕ್ಷವಾಗಿ ಗೊತ್ತಾಗುತ್ತವೆ.

ವಾಕ್ಯ ರಚನೆ ಅಂದಿನಿಂದ ಇಂದಿನವರೆಗೂ ಒಂದೇ ರೀತಿಯಾಗಿ ಕಾಣಿಸಿಕೊಳ್ಳುತ್ತದೆ. ಅಂದರೆ ವಾಕ್ಯಗಳು ಕರ್ತೃ, ಕರ್ಮ, ಕ್ರೀಯೆ ಎಂಬ ಕ್ರಮದಲ್ಲೇ ರಚನೆಯಾಗುತ್ತವೆ. ಇದರಲ್ಲಿ ಗುರುತಿಸ ತಕ್ಕ ಬದಲಾವಣೆ ಯಾವುದೂ ಇಲ್ಲ.

ಸಾಹಿತ್ಯಗಳು :

ತೊಲ್ಕಾಪ್ಪಿಯಂ ಎಂಬ ವ್ಯಾಕರಣ ಗ್ರಂಥಕ್ಕೆ ಅನಂತರ ರಚಿತವಾದ ಸಾಹಿತ್ಯಗಳಲ್ಲಿ ಪ್ರಾಚೀನವಾದುದು ಸಂಘ ಸಾಹಿತ್ಯಗಳೇ. ಇವು ಗೃಹಸ್ಥ ಜೀವನವನ್ನೂ, ಬಾಹ್ಯ ಜೀವನವನ್ನೂ ಕುರಿತು ವಿವರಿಸುವವು. ಈ ಸಾಹಿತ್ಯಗಳು ಯಾವ ಭಾಷೆಯ ಸಾಹಿತ್ಯಗಳಿಂದಲೂ ಅನುವಾದಿಸಲ್ಪಟ್ಟವಲ್ಲ ಅಥವಾ ಸ್ವೀಕರಿಸಿಕೊಳ್ಳಲ್ಪಟ್ಟವುಗಳೂ ಅಲ್ಲ. ತಮಿಳರಿಗೆ, ತಮಿಳು ಭಾಷೆಗೆ ಸ್ವಂತವಾದ ಸಾಹಿತ್ಯಗಳು; ತಮಿಳರ ಬಾಳನ್ನು

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಚಿತ್ರಿಸುವ ಸಾಹಿತ್ಯಗಳು; ಇವು ತಮಿಳರು ಬಾಳನ್ನು ಕುರಿತುಕೊಂಡಿದ್ದ ಅವರ ಅಭಿಪ್ರಾಯಗಳನ್ನು ತಿಳಿಯಾಗಿ ತಿಳಿದುಕೊಳ್ಳಲು ಸಹಾಯವಾಗುವ ಸಾಹಿತ್ಯಗಳು. ಈ ವಿಶಿಷ್ಟ ಸಾಹಿತ್ಯಗಳು ತಮಿಳರ ವಿಶಿಷ್ಟತೆಯನ್ನು ಸಾರುವವು. ಇವುಗಳಲ್ಲಿ ಬರುವ ಹಾಡುಗಳು ತನಿ ಹಾಡುಗಳಾಗಿ ಕಾಣಿಸಿಕೊಳ್ಳುತ್ತವೆ.

ಅನಂತರ ಬರುವುದು ಕಾವ್ಯಕಾಲ. ಈ ಕಾಲದಲ್ಲಿ ದ್ವಿಕಾವ್ಯಗಳು ಎನ್ನಲ್ಪಡುವ 'ಶಿಲಪ್ಪದಿಗಾರಂ' ಮತ್ತು 'ಮಣಿಮೇಖಲೈ' ಎಂಬ ಕಾವ್ಯಗಳು ರಚಿತವಾದವು. ಸಂಘ ಸಾಹಿತ್ಯಗಳಂತೆಯೇ ಈ ದ್ವಿಕಾವ್ಯಗಳೂ ತಮಿಳರ ಶ್ರೇಷ್ಠ ಮತ್ತು ಅಮೂಲ್ಯವಾದ ಸೊತ್ತಾಗಿ ಪರಿಗಣಿಸಲ್ಪಡುತ್ತವೆ. ಈ ಕಾವ್ಯಗಳು ತಮಿಳು ನಾಡಿನಲ್ಲಿ ನಡೆದ ಕಥೆಯನ್ನು ಆಧಾರವಾಗಿ ಇಟ್ಟುಕೊಂಡು ಬರೆಯಲ್ಪಟ್ಟ ಕಾವ್ಯಗಳು. ಅರಸರನ್ನೂ ಅರಸಿಯರನ್ನೂ ಕಾವ್ಯ ನಾಯಕರುಗಳನ್ನಾಗಿ ಚಿತ್ರಿಸುವ ಬಳಕೆ ಇದ್ದ ಆ ಕಾಲದಲ್ಲಿ ಸಾಧಾರಣ ಪ್ರಜೆಗಳನ್ನು ಕಾವ್ಯ ನಾಯಕರನ್ನಾಗಿಯೂ ನಾಯಕಿಯರನ್ನಾಗಿಯೂ ಚಿತ್ರಿಸಿರುವುದು ತಮಿಳರ, ತಮಿಳು ಸಾಹಿತ್ಯಗಳ ವಿಶಿಷ್ಟತೆಯನ್ನು ಸಾರುವುದಕ್ಕಾಗಿ ಕಾಣಿಸಿಕೊಳ್ಳುತ್ತದೆ.

ಇದೇ ಕಾಲದಲ್ಲಿ ಮತ್ತೊಂದು ಬಗೆಯಾದ ಸಾಹಿತ್ಯಗಳು ತಮಿಳಿನಲ್ಲಿ ರಚಿತವಾದುವು. ಅವು ನೀತಿ ಸಾಹಿತ್ಯಗಳು. ನೀತಿ ಸಾಹಿತ್ಯ ಸಂಕಲನದಲ್ಲಿ 18 ಸಾಹಿತ್ಯಗಳು ಕಾಣಿಸಿಕೊಂಡರೂ ಅವುಗಳಲ್ಲಿ ಕೀರ್ತಿ ಹೊಂದಿದವು 'ತಿರುಕ್ಕುಱಳ್' ಮತ್ತು 'ನಾಲಡಿಯಾರ್' ಎಂಬುವುಗಳೇ. ಇವುಗಳಲ್ಲೂ ತಿರುಕ್ಕುಱಳ್ ಲೋಕ ನೀತಿ ಗ್ರಂಥಗಳ ಸಾಲಿನಲ್ಲಿ ಇಟ್ಟು ನೋಡತಕ್ಕದ್ದು. ಈ ನೀತಿ ಗ್ರಂಥಕ್ಕೆ ಇಷ್ಟೊಂದು ಕೀರ್ತಿ ಬರುವುದಕ್ಕೆ ಅದು ಯಾವ ಜಾತಿಗೂ, ಯಾವ ಕುಲಕ್ಕೂ, ಯಾವ ನಾಡಿನವರಿಗೂ ಸೀಮಿತವಾಗದೆ ಇಡೀ ಮಾನವ ಕುಲಕ್ಕೆ ಸೀಮಿತವಾಗಿರುವುದೆ ಕಾರಣ.

ನೀತಿ ಗ್ರಂಥಗಳ ನಂತರ ಬರುವುದು ಭಕ್ತಿ ಸಾಹಿತ್ಯಗಳು. ನಾಯನ್ಮಾರರ ತೇವಾರಂ ಮತ್ತು ಅಳ್ವಾರರ ನಾಲಾಯಿರ ದಿವ್ಯಪ್ರಬಂಧಂ ಎರಡೂ ಈ ಕಾಲದ ಶ್ರೇಷ್ಠ ಸಾಹಿತ್ಯ ಸಂಕಲನಗಳು. ನಾಯನ್ಮಾರರೂ ಆಳ್ವಾರರೂ ಭಕ್ತಿಯಿಂದಲೂ ಸಂಗೀತದಿಂದಲೂ ತಮಿಳು ಭಾಷೆಯನ್ನು ಬೆಳಸಿದ ಕಾಲವಿದು. ಇದೇ ಕಾಲದಲ್ಲಿ ಪೆರುಂಗಥೈ, ವಳೈಯಾಪತಿ, ಜೀವಕ ಚಿನ್ತಾಮಣಿ ಮುಂತಾದ ಕಾವ್ಯಗಳೂ ರಚಿತವಾದುವು.

ಕಾವ್ಯ ಕಾಲದ ಸುವರ್ಣಯುಗವಾಗಿ ಪರಿಗಣಿಸಲ್ಪಡುವುದು ಕಂಬರ್‌ರವರ ಕಾಲವೇ. ಈ ಕಾಲ ತಮಿಳು ಸಾಹಿತ್ಯ ಬೆಳವಣಿಗೆಯ ಶ್ರೇಷ್ಠ ಕಾಲ. ಕಂಬರ್‌ರವರಿಂದ ತಮಿಳು ಭಾಷೆಯೂ ತಮಿಳು ಭಾಷೆಯಿಂದ ಕಂಬರೂ ಸಮೃದ್ಧಿ ಹೊಂದಿದ ಕಾಲವಿದು.

ಕಂಬರ್‌ರವರ ಕಾಲಕ್ಕೆ ಅನಂತರ ತಮಿಳು ಸಾಹಿತ್ಯ ಚರಿತ್ರೆಯಲ್ಲಿ ಒಂದು ಮಂದ ಸ್ಥಿತಿಯನ್ನು ನೋಡಬಹುದು. ಈ ಕಾಲದಲ್ಲಿ ಉಲಾ, ಪ್ರಬಂಧ, ಅನ್ತಾದಿ ಮುಂತಾದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಿರು ಸಾಹಿತ್ಯಗಳು ರಚಿತವಾದರೂ ಅವು ಅಷ್ಟೊಂದು ಒಳ್ಳೆಯ ಸಾಹಿತ್ಯಗಳಾಗಿ ಇರಲಿಲ್ಲ.

ಐರೋಪ್ಪಿಯರ ಬರುವಿಕೆಗೆ ಅನಂತರ ತಮಿಳು ಭಾಷೆ ಒಂದು ವಿಧವಾದ ಸ್ಫೂರ್ತಿಯನ್ನು ಪಡೆದುಕೊಂಡಿತು. ಗದ್ಯ, ಸಣ್ಣ ಕಥೆ, ಕಾದಂಬರಿ, ನಾಟಕ ಮುಂತಾದುವುಗಳು ಹುಟ್ಟಿ ಬೆಳೆದವು. ಇಪ್ಪತ್ತನೇ ಶತಮಾನದಲ್ಲಿ ಗದ್ಯ ಸಾಹಿತ್ಯಗಳೊಂದಿಗೆ ಭಾರತಿ, ಭಾರತಿದಾಸನ್, ನಾಮಕ್ಕಲ್ ರಾಮಲಿಂಗಂಪಿಳ್ಳೈ ಮುಂತಾದವರ ಪದ್ಯಗಳೂ ತಮಿಳು ಭಾಷೆಯನ್ನು ಸಮೃದ್ಧಿಗೊಳಿಸಿದವು.

ಇಂಥ ಪ್ರಾಚೀನವಾದ ವ್ಯಾಕರಣ ಮತ್ತು ಸಾಹಿತ್ಯ ಚರಿತ್ರೆಯನ್ನು ಹೊಂದಿ ಶ್ರೇಷ್ಠತೆಯೊಂದಿಗೆ ಬೆಳಗುವ ಭಾಷೆ ತಮಿಳು ಎಂದರೆ ತಪ್ಪಾಗಲಾರದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೨. ಭಾಷಾ ಚರಿತ್ರೆ

ಭಾಷಾ ಚರಿತ್ರೆ :

ಮಾನವಕುಲ ಎಂದು ಉಗಮವಾಯಿತ್ತೋ ಅಂದೇ ಭಾಷೆಗಳೂ ಉಗಮವಾದವು. ಆದರೆ ಅವುಗಳಿಗೆ ಅಂದೇ ಲಿಪಿಗಳು ರೂಪುಗೊಂಡಿರಲಿಲ್ಲ. ಹಲವಾರು ವರ್ಷಗಳ ಅನಂತರ ಮಾನವನು ತಾನು ಆಡುವ ಭಾಷೆಗೆ ಲಿಪಿರೂಪವನ್ನು ರೂಪಿಸಿಕೊಂಡನು. ಆದುವರೆಗೂ ಅವನ ಭಾಷೆ ಆಡು ಭಾಷೆಯಾಗಿಯೇ ಉಳಿದಿತ್ತು. ಆದ್ದರಿಂದ ಒಂದು ಭಾಷೆಯ ಚರಿತ್ರೆಯನ್ನು ವಿವರಿಸುವಾಗ ಅದರ ಉಗಮಕಾಲದಿಂದ ವಿವರಿಸಬೇಕು. ಅಂದರೆ ಆ ಭಾಷೆ ಲಿಪಿರೂಪವನ್ನು ಹೊಂದುವುದಕ್ಕೆ ಮುಂಚೆ ಹೇಗಿತ್ತು ಎಂಬುದನ್ನೂ ಬರಹ ಭಾಷೆಯಾದ ಮೇಲೆ ಹೇಗೆ ಮಾರ್ಪಾಡುಗಳನ್ನು ಹೊಂದುತ್ತಾ ಬಂದಿದೆ ಎಂಬುದನ್ನೂ ವಿವರಿಸಬೇಕು. ಬರಹ ಭಾಷೆಯಾಗುವುದಕ್ಕೆ ಮುಂಚೆ ಒಂದು ಭಾಷೆ ಹೇಗಿತ್ತು ಎಂಬುದನ್ನು ವಿವರಿಸುವುದು ಪೂರ್ವ ಬರಹ ಭಾಷಾ ಚರಿತ್ರೆ (Pre-history of language) ಎಂದೂ ಬರಹ ಭಾಷೆಯಾದ ಮೇಲೆ ಅದು ಹೇಗೆ ಬೆಳೆದಿದೆ ಎಂಬುದನ್ನು ವಿವರಿಸುವುದು ಬರಹ ಭಾಷಾ ಚರಿತ್ರೆ (history of written language) ಎಂದೂ ಭಾಷಾ ವಿಜ್ಞಾನಿಗಳು ಹೆಸರಿಸುತ್ತಾರೆ.

ಪೂರ್ವ ಬರಹ ಭಾಷಾ ಚರಿತ್ರೆ :

ಒಂದು ಭಾಷೆ ಬರಹ ಭಾಷೆಯಾಗುವುದಕ್ಕೆ ಮುಂಚೆ ಹೇಗಿತ್ತು ಎಂಬುದನ್ನು ವಿವರಿಸಲಿಕ್ಕೆ ಭಾಷಾವಿಜ್ಞಾನಿಗಳು ನಾಲ್ಕು ವಿಧವಾದ ಕ್ರಮಗಳನ್ನು ಅಳವಡಿಸಿಕೊಳ್ಳುತ್ತಾರೆ. ಅವು ಆಂತರಿಕ ಪುನರ್ರಚನೆ (Internal reconstruction), ಬಾಹ್ಯ ಪುನರ್ರಚನೆ ಅಥವಾ ತೌಲನಿಕ ಪದ್ಧತಿ (External reconstruction), ಉಪಭಾಷಾ ಭೂಗೋಳ (Dialcet geography) ಮತ್ತು ಭಾಷಾಕಾಲಕ್ರಮ ವಿಜ್ಞಾನ (Glotto chronology).

ಬರಹ ಭಾಷಾ ಚರಿತ್ರೆ :

ಒಂದು ಭಾಷೆ ಬರಹ ಭಾಷೆಯಾದ ಮೇಲೆ ಹೇಗೆ ಕಾಲಾನಂತರದಲ್ಲಿ ಮಾರ್ಪಾಡುಗಳನ್ನು ಹೊಂದಿ ಬೆಳೆದುಬಂದಿದೆ ಎಂಬುದನ್ನು ಅಧ್ಯಯನ ಮಾಡಲಿಕ್ಕೆ ಆ ಭಾಷೆಯಲ್ಲಿ ದೊರೆಯುವ ಬರಹಗಳು ನೆರವಾಗುತ್ತವೆ. ಭಾಷಾ ವಿಜ್ಞಾನಿಗಳು ಆ ಭಾಷೆಯಲ್ಲಿ ಲಭ್ಯವಿರುವ ಸಾಹಿತ್ಯಗಳು, ಶಾಸನಗಳು, ವಿದೇಶಿಯರ ಬರಹಗಳು, ವಿದೇಶಿಯರ ವ್ಯಾಕರಣಗಳು, ಸ್ವದೇಶಿಯರ ವ್ಯಾಕರಣಗಳು, ನಿಘಂಟುಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಂತಾದವುಗಳನ್ನು ಆಧಾರಗಳಾಗಿ ಬಳಸುತ್ತಾರೆ. ಬರಹ ಭಾಷೆಯ ಚರಿತ್ರೆ ಆಂತರಿಕ ಮತ್ತು ಬಾಹ್ಯ ಚರಿತ್ರೆ ಎಂದು ಎರಡು ವಿಧಗಳಿಂದ ಕೂಡಿದೆ.

ಭಾಷೆಯ ಆಂತರಿಕ ಚರಿತ್ರೆ :

ಬರಹ ಭಾಷೆಯ ಆಂತರಿಕ ಚರಿತ್ರೆ ಆ ಭಾಷೆಯಲ್ಲಿ ಕಾಲಾನಂತರದಲ್ಲಿ ಕಂಡು ಬರುವ ಬದಲಾವಣೆಗಳನ್ನು ಅವಲಂಭಿಸಿದೆ. ಒಂದು ಭಾಷೆಯ ಆಂತರಿಕ ಚರಿತ್ರೆಯನ್ನು ಎರಡು ವಿಧಗಳಲ್ಲಿ ಅಧ್ಯಯನ ಮಾಡಬಹುದು :

1. ಭಾಷೆಯ ಇತಿಹಾಸ ಕಾಲವನ್ನು ಹಲವಾರು ಹಂತಗಳಾಗಿ ವಿಭಾಗಿಸಿಕೊಂಡು ಆ ಒಂದೊಂದು ಹಂತದಲ್ಲೂ ಭಾಷೆಯ ವ್ಯವಸ್ಥೆ ಹೇಗಿತ್ತು ಎಂಬುದನ್ನು ನಿರ್ಧರಿಸಬಹುದು. ಹಾಗೆ ನಿರ್ಧರಿಸಲ್ಪಟ್ಟ ಹಲವಾರು ಹಂತದ ಭಾಷಾ ಸ್ವರೂಪವನ್ನು ಹೋಲಿಸಿದರೆ ಆ ಭಾಷೆಯಲ್ಲಿ ಇಂದಿನವರೆಗೂ ನಡದ ಬದಲಾವಣೆಗಳು ಅಥವಾ ಬೆಳವಣಿಗೆಗಳನ್ನು ತಿಳಿದುಕೊಳ್ಳಬಹುದು.

ಈ ಪದ್ಧತಿಯನ್ನು ಅಳವಡಿಸಿ ಭಾಷೆಯ ಚರಿತ್ರೆಯನ್ನು ಅಧ್ಯಯನ ಮಾಡುವವರು ಆ ಭಾಷೆಯ ಇತಿಹಾಸ ಕಾಲವನ್ನು ಮೂರು ಹಂತಗಳಾಗಿ ಅಂದರೆ ಪ್ರಾಚೀನ ಕಾಲ, ಮಧ್ಯಕಾಲ ಮತ್ತು ಆಧುನಿಕ ಕಾಲ ಎಂದು ವಿಭಾಗಿಸಿಕೊಳ್ಳುತ್ತಾರೆ. ಹೀಗೆ ವಿಭಾಗಿಸಿಕೊಂಡಮೇಲೆ ಆಯಾಯಾ ಕಾಲದ ಭಾಷೆಯ ಸ್ವರೂಪವನ್ನು ಅಧ್ಯಯನ ಮಾಡಿ ಅನಂತರ ಅವುಗಳನ್ನು ಹೋಲಿಸಿ ಭಾಷೆಯ ವಿಕಾಸತೆಯನ್ನು ಗುರುತಿಸುತ್ತಾರೆ.

ತಮಿಳು ಭಾಷೆಯ ಚರಿತ್ರೆಯನ್ನು ವಿವರಿಸುವವರು ಅದರ ಇತಿಹಾಸ ಕಾಲವನ್ನು ಮೇಲೆ ತಿಳಿಸಿದಂತೆ ಮೂರು ತೆರನಾಗಿ ವಿಂಗಡಿಸಿಕೊಂಡು ಆಯಾಯಾ ಕಾಲದ ಭಾಷೆಯನ್ನು ಅಧ್ಯಯನ ಮಾಡಿ ಅನಂತರ ಅವುಗಳನ್ನು ಹೋಲಿಸಿ ತಮಿಳು ಭಾಷೆಯ ಚರಿತ್ರೆಯನ್ನು ವಿವರಿಸುತ್ತಾರೆ. ಇನ್ನೂ ಕೆಲವು ವಿದ್ವಾಂಸರು ತಮಿಳು ಭಾಷೆಯ ಚರಿತ್ರೆಯನ್ನು ಸ್ಥೂಲವಾಗಿ ಅಧ್ಯಯನ ಮಾಡಲು ಬಯಸಿ ಅದರ ಇತಿಹಾಸ ಕಾಲವನ್ನು ಸಂಘಕಾಲ, ಪಲ್ಲವರ್ ಕಾಲ, ಚೋಳರ್‌ಕಾಲ ನಾಯಕರ್ ಕಾಲ, ಆಧುನಿಕ ಕಾಲ ಎಂದು ವಿಭಾಗಿಸಿಕೊಂಡು ಆಯಾಯಾ ಕಾಲದ ತಮಿಳು ಭಾಷೆಯ ಸ್ವರೂಪವನ್ನು ಅಧ್ಯಯನ ಮಾಡಿ ಅನಂತರ ಅವುಗಳನ್ನು ಹೋಲಿಸಿ ತಮಿಳು ಭಾಷೆಯ ಚರಿತ್ರೆಯನ್ನು ವಿವರಿಸುತ್ತಾರೆ.

2. ಕೆಲವು ವಿದ್ವಾಂಸ ಮಹನೀಯರು ಮೇಲೆ ಹೇಳಿದಂತೆ ಭಾಷೆಯ ಚರಿತ್ರೆಯನ್ನು ವಿವರಿಸದೆ ಭಾಷೆಯ ಒಂದೊಂದು ವ್ಯಾಕರಣ ಅಂಶವನ್ನೂ ತೆಗೆದುಕೊಂಡು ಅದು ಅಂದಿನಿಂದ ಇಂದಿನವರೆಗೂ ಪಡೆದು ಬಂದಿರುವ ಬೆಳವಣಿಗೆಗಳು ಅಥವಾ ಬದಲಾವಣೆಗಳನ್ನು ವಿವರಿಸುವುದರ ಮೂಲಕ ಭಾಷೆಯ ಚರಿತ್ರೆಯನ್ನು ನಿರ್ಧರಿಸುತ್ತಾರೆ.

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಈ ಪದ್ಧತಿಯನ್ನು ಅಳವಡಿಸಿ ತಮಿಳು ವಿದ್ವಾಂಸರು ಸರ್ವನಾಮ ಎಂಬ ವ್ಯಾಕರಣ ಅಂಶವನ್ನು ತೆಗೆದುಕೊಂಡು ಅಧ್ಯಯನ ಮಾಡಿ ಅದು ಕಾಲಾನಂತರದಲ್ಲಿ ಪಡೆದಿರುವ ಬದಲಾವಣೆಗಳನ್ನು ಗುರುತಿಸುತ್ತಾರೆ. ಸಂಘ ಕಾಲದ ತಮಿಳು ಭಾಷೆಯಲ್ಲಿ ಪ್ರಥಮ ಪುರುಷ ಸರ್ವನಾಮ 'ತಾನ್', 'ತಾಂ' ಎಂಬ ಎರಡು ರೂಪದಲ್ಲಿ ಕಾಣಿಸಿಕೊಂಡಿದೆ. ಆದರೆ ಇಂದಿನ ತಮಿಳು ಭಾಷೆಯಲ್ಲಿ 'ತಾನ್', 'ತಾಂ' ಎಂಬುವು ಆತ್ಮಾರ್ಥಕ ಸರ್ವ ನಾಮವಾಗಿ ಬದಲಾವಣೆಯಾಗಿ ನಿರ್ದೇಶಕ ಸರ್ವ ನಾಮಗಳು ಪ್ರಥಮ ಪುರುಷ ಸರ್ವನಾಮಗಳಾಗಿ ಬಳಸಲ್ಪಡುತ್ತವೆ. ಈ ನಿರ್ದೇಶಕ ಸರ್ವ ನಾಮದ ಬೆಳವಣಿಗೆಯನ್ನು ಅಧ್ಯಯನ ಮಾಡಿದರೆ ಅದು ಸಂಘ ಕಾಲದಲ್ಲಿ ಐದು ವಿಧವಾಗಿಯೂ ಆಧುನಿಕ ಕಾಲದ ತಮಿಳಿನಲ್ಲಿ ಆರು ವಿಧವಾಗಿಯೂ ಆಡು ಭಾಷೆಯಲ್ಲಿ ಎಂಟು ವಿಧವಾಗಿಯೂ ಬರುವುದನ್ನು ನೋಡಬಹುದು. ಹಾಗೆಯೇ ಒಂದೊಂದು ವ್ಯಾಕರಣ ಅಂಶವೂ ಹೇಗೆ ಕಾಲಾನಂತರದಲ್ಲಿ ಬದಲಾವಣೆಗಳನ್ನು ಹೊಂದಿ ಬೆಳೆದು ಬಂದಿದೆ ಎಂಬುದನ್ನು ಸ್ಪಷ್ಟವಾಗಿ ವಿವರಿಸಬಹುದು.

ಭಾಷೆಯ ಬಾಹ್ಯ ಚರಿತ್ರೆ :

ಒಂದು ಭಾಷೆಯ ಬಾಹ್ಯ ಚರಿತ್ರೆ ಆ ಭಾಷೆಯಲ್ಲಿ ದೊರೆಯುವ ಸ್ವೀಕರಣ ಪದಗಳನ್ನು ಅವಲಂಬಿಸಿದೆ. ರಾಜಕೀಯ, ಸಂಸ್ಕೃತಿ ಬದಲಾವಣೆ ವಾಣಿಜ್ಯ, ತಾಂತ್ರಿಕ ಬೆಳವಣಿಗೆ ಇತ್ಯಾದಿ ಕಾರಣಗಳಿಂದ ಕಾಲಕ್ರಮದಲ್ಲಿ ಹಲವಾರು ಭಾಷೆಗಳಿಂದ ಹಲವಾರು ಪದಗಳು ಒಂದು ಭಾಷೆಯಲ್ಲಿ ಬಂದು ಸೇರಿಕೊಳ್ಳುವುದು ಸಹಜ. ಹೀಗೆ ಬಂದು ಸೇರುವ ಸ್ವೀಕರಣ ಪದಗಳು ಆ ನಾಡಿನ ಚರಿತ್ರೆಯನ್ನು ಮಾತ್ರವಲ್ಲದೆ ಆ ಭಾಷೆಯ ಚರಿತ್ರೆಯನ್ನೂ ಪ್ರತಿಫಲಿಸುತ್ತವೆ. ಒಂದು ಭಾಷೆಯ ಬಾಹ್ಯ ಚರಿತ್ರೆಯನ್ನು ಅಧ್ಯಯನ ಮಾಡುವುದರಿಂದ ಆ ಭಾಷೆಯನ್ನು ಆಡುವ ಜನರು ಬೇರೆ ಬೇರೆ ಭಾಷೆಯನ್ನು ಆಡುವ ಜನರೊಂದಿಗೆ ಹೊಂದಿದ್ದ ಸಂಪರ್ಕ, ಆದರ ಹಿನ್ನೆಲೆ ಮುಂತಾದವುಗಳನ್ನು ತಿಳಿಯಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೩. ಭಾಷಾ ಚರಿತ್ರೆಗೆ ನೆರವಾಗುವ ಪುರಾವೆಗಳು

ಕಾಲಕ್ರಮೇಣ ಒಂದು ಭಾಷೆಯಲ್ಲಿ ಉಂಟಾಗುವ ಬದಲಾವಣೆಗಳನ್ನೇ ಭಾಷಾ ಚರಿತ್ರೆ ಎನ್ನುವರು. ಒಂದು ಭಾಷೆಯ ಚರಿತ್ರೆಯನ್ನು ನಿರ್ಧರಿಸಲಿಕ್ಕೆ ಹಲವಾರು ಪುರಾವೆಗಳು ಉಪಯೋಗವಾಗುತ್ತವೆ. ಅವುಗಳಲ್ಲಿ ಮುಖ್ಯವಾದವು ಸಾಹಿತ್ಯಗಳು, ಶಾಸನಗಳು, ತಮಿಳು ವ್ಯಾಕರಣಗಳು, ವ್ಯಾಖ್ಯಾನಗಳು, ವಿದೇಶಿಯರ ವ್ಯಾಕರಣಗಳು, ನಿಘಂಟುಗಳು, ವಿದೇಶಿಯರ ಬರಹಗಳು, ಉಪಭಾಷೆಗಳು ಮುಂತಾದವು.

ಸಾಹಿತ್ಯಗಳು :

ಒಂದು ನಾಡಿನ ಇತಿಹಾಸವನ್ನೂ ಭಾಷಾ ಚರಿತ್ರೆಯನೂ ತಿಳಿದುಕೊಳ್ಳಲಿಕ್ಕೆ ಬರಹಗಳು ಉಪಯೋಗವಾಗುತ್ತವೆ. ಆದರಲ್ಲೂ ಭಾಷೆಯ ಚರಿತ್ರೆಯನ್ನು ನಿರ್ಧರಿಸಲಿಕ್ಕೆ ಸಾಹಿತ್ಯಗಳು ಬಹಳ ಉತ್ತಮವಾದ ಪುರಾವೆಗಳಾಗುತ್ತವೆ. ಸಂಘ ಕಾಲದ ಸಾಹಿತ್ಯಗಳ ಆಧಾರದ ಮೇಲೆ ಸಂಘ ಕಾಲದ ಭಾಷೆಯನ್ನು ಅಧ್ಯಯನ ಮಾಡಬಹುದು. ಅದರಂತೆಯೇ ಆಯಾಯ ಕಾಲದಲ್ಲಿ ರಚಿತವಾದ ಸಾಹಿತ್ಯಗಳ ಆಧಾರದ ಮೇಲೆ ಆಯಾಯ ಕಾಲದ ಭಾಷೆಯನ್ನು ನಿರ್ಧರಿಸಬಹುದು. ಈ ರೀತಿ ನಿರ್ಧರಿಸಲ್ಪಟ್ಟ ಭಾಷೆಗಳನ್ನು ಹೋಲಿಸಿ ಅಧ್ಯಯನ ಮಾಡಿದರೆ ಒಂದು ಭಾಷೆಯ ಚರಿತ್ರೆಯನ್ನು ಅಥವಾ ಬೆಳವಣಿಗೆಯನ್ನು ತಿಳಿದುಕೊಳ್ಳಬಹುದು. ಸಾಹಿತ್ಯಗಳು ಬರಹ ಸಾಹಿತ್ಯಗಳೆಂದೂ ಜನಪದ ಸಾಹಿತ್ಯಗಳೆಂದೂ ಎರಡು ವಿಧವಾಗಿರುತ್ತವೆ. ಈ ಎರಡು ವಿಧ ಸಾಹಿತ್ಯಗಳೂ ಭಾಷೆಯ ಚರಿತ್ರೆಯನ್ನು ತಿಳಿದುಕೊಳ್ಳಲಿಕ್ಕೆ ಉಪಯೋಗವಾಗುತ್ತವೆ.

ಬರಹ ಸಾಹಿತ್ಯಗಳು :

ತಮಿಳಿನ ಮೊಟ್ಟಮೊದಲಿನ ಪ್ರಾಚೀನ ಲಕ್ಷಣ ಗ್ರಂಥ ವಾದ 'ತೊಲ್ಕಾಪ್ಪಿಯಂ' ನಲ್ಲಿ 'ಆಲ್' ಎಂಬ ಪ್ರತ್ಯಯ, ಉತ್ತಮ ಪುರುಷ ಏಕವಚನ ಭವಿಷ್ಯತ್‌ಕಾಲ ಪ್ರತ್ಯಯ ವಾಗಿ ಸೂಚಿಸಲ್ಪಟ್ಟಿದೆ. ಈ ಲಕ್ಷಣಗ್ರಂಥಕ್ಕೆ ಅನಂತರ ರಚಿತವಾದ 'ಶಿಲಪ್ಪದಿಗಾರಂ' ಎಂಬ ಕಾವ್ಯದಲ್ಲಿ 'ಅನ್' ಎಂಬ ಪ್ರತ್ಯಯ, ಉತ್ತಮ ಪುರುಷ ಏಕವಚನ ಭವಿಷ್ಯತ್ ಕಾಲ ಪ್ರತ್ಯಯವಾಗಿ ಗುರುತಿಸಲಾಗುತ್ತದೆ. ಹೀಗೆ ಒಂದೊಂದು ಕಾಲದ ಸಾಹಿತ್ಯ ವನ್ನೂ ಪರಿಶೀಲಿಸಿದರೆ ಈ ಪ್ರತ್ಯಯದ ಬೆಳವಣಿಗೆ ಯನ್ನು ತಿಳಿದುಕೊಳ್ಳಬಹುದು.

ಕ್ರಿ.ಶ. 7ನೇ ಶತಮಾನಕ್ಕೆ ಸೇರಿದ ತಿರುನಾವುಕ್ಕರಸರ್ ರಚಿಸಿದ 'ತೇವಾರಂ' ಎಂಬ ಕೃತಿ ಸಂಸ್ಕೃತ ಪದಗಳು ತಮಿಳು ಭಾಷೆಯಲ್ಲಿ ಹೇಗೆ ಸ್ವೀಕರಿಸಲ್ಪಟ್ಟವೆ ಎಂಬು

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ದನ್ನು ತಿಳಿದುಕೊಳ್ಳಲಿಕ್ಕೆ ಸಹಾಯುವಾಗುತ್ತದೆ. ಅದರಲ್ಲಿ ತಿರುನಾವುಕ್ಕುರಸರ್ 'ಪ್ರಳಯ' ಎಂಬ ಪದವನ್ನು 'ಪಿರಳಯಂ' ಎಂದೂ 'ಕ್ಷವಿ' ಎಂಬ ಪದವನ್ನು 'ಸವಿ' ಎಂದೂ ತಮಿಳು ಭಾಷೆಯ ಚಾಯಮಾನಕ್ಕೆ ತಕ್ಕಂತೆ ಸಂಸ್ಕೃತ ಪದಗಳನ್ನು ಬದಲಾಯಿಸಿ ಸ್ವೀಕರಿಸಿದ್ದಾರೆ. ಹೀಗೆ ಬರುವ ಪದಗಳು ಭಾಷಾ ಸ್ವೀಕರಣದ ಚರಿತ್ರೆಯನ್ನು ತಿಳಿದುಕೊಳ್ಳಲಿಕ್ಕೆ ಉಪಯೋಗವಾಗುತ್ತವೆ.

ತೊಲ್ಕಾಪ್ಪಿಯರ್ ವರ್ತಮಾನಕಾಲ ಪ್ರತ್ಯಯಗಳನ್ನು ಕುರಿತು ಏನೂ ಸ್ಪಷ್ಟವಾಗಿ ಹೇಳಲಿಲ್ಲ. ಆದರೆ ವರ್ತಮಾನಕಾಲ ಪ್ರತ್ಯಯಗಳಾದ 'ಕಿಱು,' 'ಕಿನ್ನು' ಎಂಬುವು ಸಂಘ ಕಾಲದ ಸಾಹಿತ್ಯಗಳಲ್ಲಿ ಅಪರೂಪವಾಗಿಯೂ ಅನಂತರದ ಸಾಹಿತ್ಯಗಳಲ್ಲಿ ಹೆಚ್ಚಾಗಿಯೂ ಬಳಸಲಾಗಿವೆ. ಇದು ವರ್ತಮಾನಕಾಲ ಪ್ರತ್ಯಯಗಳ ಬೆಳವಣಿಗೆಯನ್ನು ಸ್ಪಷ್ಟಪಡಿಸುತ್ತದೆ.

ಜನಪದ ಸಾಹಿತ್ಯಗಳು :

ಕ್ರಿ.ಶ. 17ನೇ ಶತಮಾನದ ಅನಂತರವೇ ಆಡು ಭಾಷೆಗಳಿಗೆ ಸಾಹಿತ್ಯಗಳಲ್ಲಿ ಅವಕಾಶ ದೊರೆತಿರುವುದು. ಅಂದರೆ 17ನೇ ಶತಮಾನಕ್ಕೆ ಅನಂತರವೇ ಜಾನಪದ ಅಂಶಗಳಿಗೆ ಸಾಹಿತ್ಯರೂಪ ಕೊಟ್ಟರು ಎಂದರ್ಥ. 18ನೇ ಶತಮಾನದ ಜನಪದ ಸಾಹಿತ್ಯವಾದ 'ಮಹಾ ಪುರಾಣ ಅಮ್ಮಾನೈ' ಎಂಬುದು ತಮಿಳು ಧ್ವನಿಗಳ ಪರಿವರ್ತನೆಯನ್ನು ವ್ಯಕ್ತಪಡಿಸುತ್ತದೆ. ಇದರಲ್ಲಿ ಪದದ ಅಂತ್ಯದಲ್ಲಿ ಸ್ಪರ್ಶ ಧ್ವನಿಗಳೊಂದಿಗೆ ಬರುವ 'ಉ' ಕಾರ 'ಇ' ಕಾರವಾಗಿ ಪರಿವರ್ತನೆ ಹೊಂದುತ್ತದೆ.

ಉದಾ :— --ಉ > —ಇ

ಪುಕ್ಕು > ಪುಕ್ಕಿ

ಇರುಬತ್ತು > ಇರುಬತ್ತಿ.

ಪದದ ಅಂತ್ಯದಲ್ಲಿ ಬರುವ 'ಉ' ಕಾರದಂತೆಯೇ ಮಧ್ಯದಲ್ಲಿ ಬರುವ 'ಉ' ಕಾರವು 'ಇ' ಕಾರವಾಗುತ್ತದೆ.

ಉದಾ :— —ಉ— > — ಇ —

ಅರುವ್ವೈ > ಅರಿವ್ವೈ

ಚಿರುಮೊಟಿ > ಚಿರಿಮೊಟಿ

ಚಿರುಇಲ್ಲೈ > ಚಿರಿಯಿಲ್ಲೈ.

ಕ್ರಿ.ಶ. 17ನೇ ಶತಮಾನವನ್ನು ಸೇರಿದ 'ರಾಮಪ್ಪಯ್ಯನ್ ಅಮ್ಮಾನೈ'ಯಿಂದ ಆ ಕಾಲದ ಆಡು ಭಾಷೆಯನ್ನೂ ಮಧುರೈ ಮತ್ತು ರಾಮನಾಥಪುರಂನ ತಮಿಳು ಭಾಷೆಯ ಸ್ವರೂಪವನ್ನೂ ತಿಳಿದುಕೊಳ್ಳಬಹುದು. ಇದರಲ್ಲಿ

ಅಡೈಕ್ಕಾಯ್ ವಿದನಂ

ವೆಳ್ಳಿಲೈ ಮನ್ನಾಪ್ಪು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚೆಂಬಾರಂ ಕಲನ್ಜೈ

ಮುಂತಾದ ಪದಗಳನ್ನು ನೋಡಬಹುದು. ಈ ಪದಗಳು ಆ ಪ್ರಾಂತ್ಯಕ್ಕೆ ಸೀಮಿತವಾದ ಆಡು ಭಾಷೆಗಳಲ್ಲಿ ಮಾತ್ರವೇ ಬರುತ್ತವೆ.

ಶಾಸನಗಳು :

ತಮಿಳುನಾಡಿನ ದಕ್ಷಿಣ ಜಿಲ್ಲೆಗಳಲ್ಲಿ ಈ ಶತಮಾನದ ಆರಂಭದಿಂದ ಹಲವಾರು ಶಾಸನಗಳು ದೊರೆತಿವೆ. ಇವುಗಳನ್ನು ಅಧ್ಯಯನಮಾಡಿದ ವಿದ್ವಾಂಸರು ಈ ಶಾಸನಗಳು ಕ್ರಿ.ಪೂ. 3ನೇ ಶತಮಾನಕ್ಕೆ ಸೇರಿದವುಗಳಾಗಿ ಇರಬಹುದು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ತಮಿಳು ನಾಡಿನಲ್ಲಿ ದೊರೆತಿರುವ ಈ ಶಾಸನಗಳ ಭಾಷೆಗಳನ್ನು ಅಧ್ಯಯನ ಮಾಡಿದರೆ ತಮಿಳು ಭಾಷೆ ಬೆಳೆದು ಬಂದಿರುವ ರೀತಿಯನ್ನೂ ಸಾಹಿತ್ಯ ಮತ್ತು ಶಾಸನ ಭಾಷೆಗಳ ನಡುವೆ ಕಾಣಸಿಕೊಳ್ಳುವ ವ್ಯತ್ಯಾಸವನ್ನೂ ಸ್ಪಷ್ಟವಾಗಿ ತಿಳಿದುಕೊಳ್ಳಬಹುದು. ತಮಿಳು ಧ್ವನಿಗಳು ಈ ಶಾಸನಗಳಲ್ಲಿ ಕೆಳಕಂಡಂತೆ ಪರಿವರ್ತನೆಯಾಗಿವೆ.

6ನೆಯ ಶತಮಾನದಲ್ಲಿ :—

ಉದಾ :— — ಜ್ಞ — → — ತ್ತ —

ಏಜ್ಞಂ > ಏತ್ತಂ

7ನೆಯ ಶತಮಾನದಲ್ಲಿ :—

ಉದಾ :— — ಅ — > — ಎ —

ಅರಸರ್ > ಅರಸೆರ್

— ಉ — > — ಇ —

ಇವರುಡೈಯ > ಇವರಿಡೈಯ

— ಐ — > — ಎಯ್ —

ಇರುಪತ್ತೈನ್ತು > ಇರುಪತ್ತೆಯ್‌ನ್ತು

8ನೆಯ ಶತಮಾನದಲ್ಲಿ :—

ಉದಾ :— — ಕ — > — ಯ —

ತಿರುಪ್ಪತಿಕಂ > ತಿರುಪತಿಯಂ

ಞ — > ನ —

ಞಾನ್ಱು > ನಾನ್ಱು

— ಯ > ಚ —

ಕುಯುಕ್ಕ್ಯನಂ > ಕುಚಕ್ಕ್ಯನಂ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

9ನೆಯ ಶತಮಾನದಲ್ಲಿ :—

ಉದಾ :— — ಇ — > — ಅ —

ಇಾಯಿರು > ಇಾಯರು

— ಯ — > ϕ

ಪಾಯ್ಕ್ಕಾಲ್ > ಪಾಕ್ಕಾಲ್

12ನೆಯ ಶತಮಾನದಲ್ಲಿ :—

ಉದಾ :— — ಜಿ — > — ರ —

ನಿಜುತ್ತ > ನಿರುತ್ತ

14ನೆಯ ಶತಮಾನದಲ್ಲಿ :—

ಉದಾ :— — ಕ — > — ವ —

ತಕಪ್ಪನಾರ್ > ತವಪ್ಪನಾರ್

— ಳ್ > — ϕ

ಮಕ್ಕಳ್ > ಮಕ್ಕ

— ನ್ > — ϕ

ಕೊಳ್ವಾನ್ > ಕೊಳ್ವಾ

— ϕ — > — ರ್ —

ಕೋವೈ > ಕೋರ್ವೈ

ಶಾಸನಗಳ ಭಾಷೆಯಲ್ಲಿ ಸ್ವರಯುಗ್ಮಗಳು ಹೆಚ್ಚಾಗಿ ಬರುತ್ತವೆ. ಶಾಸನಗಳ ಭಾಷೆಯಲ್ಲಿ ಪದಗಳು ಸೇರುವಾಗ ಮಧ್ಯದಲ್ಲಿ ಬರುವ ವಿಸರ್ಪ ಸ್ವರಗಳು ಕಾಣಿಸಿ ಕೊಳ್ಳಲಿಲ್ಲ. ಆದ್ದರಿಂದ ಶಾಸನ ಭಾಷೆಯಲ್ಲಿ ಅನೇಕ ಸ್ವರಾನುಕ್ರಮಗಳು ಬರುತ್ತವೆ.

ಉದಾ : ಕೋ ಇಲುಕ್ಕು

ಆ ಇರಂ

ತಮಿಳು ವ್ಯಾಕರಣಗಳು :

ಸಾಹಿತ್ಯ ಮತ್ತು ಶಾಸನಗಳಂತೆಯೇ ಸ್ವದೇಶಿಯರ ವ್ಯಾಕರಣಗಳೂ ಭಾಷೆಯ ಚರಿತ್ರೆಯನ್ನು ನಿರ್ಧರಿಸಲಿಕ್ಕೆ ಉಪಯೋಗವಾಗುತ್ತವೆ. ತೊಲ್ಕಾಪ್ಪಿಯಂ, ಯಾಪ್ಪ ರುಂಗಲಂ, ಯಾಪ್ಪರುಂಗಲಕ್ಕಾರಿಗೈ, ವೀರಚೋಟಿಯಂ, ನನ್ನೂಲ್, ಪಿರಯೋಗ ವಿವೇಗಂ, ಇಲಕ್ಕಣವಿಳಕ್ಕಂ, ಇಲಕ್ಕಣಕೊತ್ತು, ತೊನ್ನೂಲ್ ವಿಳಕ್ಕಂ, ನೇಮಿನಾಥಂ– ಮುಂತಾದ ವ್ಯಾಕರಣಗಳನ್ನು ಹೋಲಿಸಿ ನೋಡಿದರೆ ತಮಿಳು ಭಾಷೆಯ ಬೆಳವಣಿಗೆ ಸ್ಪಷ್ಟವಾಗುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೊಲ್ಕಾಪ್ಪಿಯಂ ಎಂಬ ಪ್ರಾಚೀನ ಲಕ್ಷಣ ಗ್ರಂಥ 'ಱ' ಕಾರವನ್ನು ಸ್ಪರ್ಶ ಧ್ವನಿಯಾಗಿ ವಿವರಿಸುತ್ತದೆ. ಆದರೆ ಮಧ್ಯ ಕಾಲದ ನನ್ನೂಲ್ ಎಂಬ ವ್ಯಾಕರಣ ಈ ಧ್ವನಿಯನ್ನು ಕಂಪನ ಧ್ವನಿಯಾಗಿ ವಿವರಿಸುವುದನ್ನು ನೋಡಬಹುದು. ಹೀಗೆ ಲಕ್ಷಣ ಗ್ರಂಥಗಳನ್ನು ಹೋಲಿಸಿ ನೋಡಿದರೆ ಹಲವಾರು ಧ್ವನಿ ಪರಿವರ್ತನೆಗಳನ್ನೂ ಬೆಳವಣಿಗೆಗಳನ್ನೂ ತಿಳಿದುಕೊಳ್ಳಬಹುದು. (ಮುಂದಿನ ಅಧ್ಯಾಯವನ್ನು ನೋಡಿ)

ವ್ಯಾಖ್ಯಾನಗಳು :

ತಮಿಳು ಲಕ್ಷಣ ಗ್ರಂಥಗಳಿಗೆ ವ್ಯಾಖ್ಯಾನ ಬರೆದವರೆಲ್ಲರೂ ಅವರವರ ಕಾಲದ ತಮಿಳು ಭಾಷೆಯ ಸ್ವರೂಪಕ್ಕೆ ತಕ್ಕಂತೆ ವ್ಯಾಖ್ಯಾನ ಬರೆದಿದ್ದಾರೆ. ಒಬ್ಬೊಬ್ಬರೂ ಹಿಂದಿನ ಕಾಲದಲ್ಲಿ ಇಲ್ಲದಿದ್ದ ಕೆಲವು ಪ್ರತ್ಯಯಗಳು, ಪದಗಳು, ಪ್ರಯೋಗಗಳು ಮುಂತಾದವುಗಳನ್ನು ಎತ್ತಿ ಹೇಳುವುದರಿಂದ ಅವುಗಳನ್ನು ಹೋಲಿಸಿ ಅಧ್ಯಯನ ಮಾಡಿದರೆ ತಮಿಳು ಭಾಷೆಯ ಬೆಳವಣಿಗೆಯನ್ನು ಗುರುತಿಸಬಹುದು.

'ತೊಲ್ಕಾಪ್ಪಿಯರ್' ತನ್ನ ಲಕ್ಷಣ ಗ್ರಂಥದಲ್ಲಿ ಇಚ್ಛಾರ್ಥಕ ಪ್ರತ್ಯಯವನ್ನು ಕುರಿತು ಏನೂ ಹೇಳಿಲ್ಲ. ಆದರೆ ಅದರ ವ್ಯಾಖ್ಯಾನಕಾರರುಗಳಾದ ಇಳಂಪೂರಣರ್ ಮತ್ತು ತೆಯ್ವಚ್ಚಿಲೈಯಾರ್ ಎಂಬುವರು 'ಕ' ಎಂಬ ಪ್ರತ್ಯಯವನ್ನು ಇಚ್ಛಾರ್ಥಕ ಪ್ರತ್ಯಯವಾಗಿ ಸೂಚಿಸಿದ್ದಾರೆ. ಮತ್ತೊಬ್ಬ ವ್ಯಾಖ್ಯಾನಕಾರ ಚೇನಾವರೈಯರ್ 'ಕ', 'ಯ', 'ಅಲ' ಮುಂತಾದ ಪ್ರತ್ಯಯಗಳನ್ನು ಎತ್ತಿ ಹೇಳಿದ್ದಾರೆ. ನಚ್ಚಿನಾರ್ಕ್ಕಿನಿಯರ್, ಕಲ್ಲಾಡರ್ ಮುಂತಾದ ವ್ಯಾಖ್ಯಾನಕಾರರು ಕ, ಯ, ಅಲ್, ಆಲ್, ಆರ್, ವಾರ್, ಉಂ, ಐ ಮುಂತಾದ ಪ್ರತ್ಯಯಗಳನ್ನು ಎತ್ತಿ ತೋರಿಸಿದ್ದಾರೆ. ಈ ರೀತಿ ಅವರು ಎತ್ತಿ ತೋರಿಸುವ ಪ್ರತ್ಯಯಗಳು ಅವರವರ ಕಾಲದ ತಮಿಳು ಭಾಷೆಯ ಸ್ವರೂಪವನ್ನೂ ಬೆಳವಣಿಗೆಯನ್ನೂ ಸ್ಪಷ್ಟಪಡಿಸುತ್ತವೆ.

ವಿದೇಶಿಯರ ವ್ಯಾಕರಣಗಳು :

ಸ್ವದೇಶಿಯರಲ್ಲದೆ ವಿದೇಶಿಯರೂ ತಮಿಳು ಭಾಷೆಯನ್ನು ಕಲಿತುಕೊಳ್ಳುವ ಉದ್ದೇಶಕ್ಕಾಗಿ ಬರೆದ ತಮಿಳು ವ್ಯಾಕರಣಗಳು ಸಾಕಷ್ಟು ಇವೆ. ಇವು ಪಶ್ಚಿಮ ದೇಶದವರ ಸಂಪರ್ಕದಿಂದ ದೊರೆತ ಮುಖ್ಯ ಕೊಡುಗೆಗಳಾಗಿವೆ. 1672ರಲ್ಲಿ ಬಾಲ್ಡಸ್ ಎಂಬುವರು ಭಾರತ ದೇಶವನ್ನು ಕುರಿತು ಬರೆದ ಒಂದು ಕೃತಿಯಲ್ಲಿ ತಮಿಳು ಭಾಷೆಯನ್ನು ಕುರಿತ ಒಂದು ಭಾಗವಿದೆ. ಈ ಭಾಗದಿಂದ ತಮಿಳು ಭಾಷೆಯ ಉಚ್ಚಾರಣೆಗಳು, ನಾಮಪದಗಳ ಬಗೆಗಳು, ಕ್ರಿಯಾಪದಗಳ ವಿಕಲ್ಪಗಳು ಮುಂತಾದವುಗಳನ್ನು ತಿಳಿದುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ : 1680 ರಲ್ಲಿ ಕೊಸ್ಟಾಬಾಲ್ತ್ಸರಾ ಎಂಬುವರು ಒಂದು ಲಕ್ಷಣ ಗ್ರಂಥವನ್ನು ರಚಿಸಿರುವುದು ತಿಳಿಯುತ್ತದೆ. 1685ರಲ್ಲಿ ಬ್ರುನೊ ಎಂಬುವರೂ 1716ರಲ್ಲಿ ಸೀಗನಬಲ್ಗ್ ಎಂಬು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವರೂ 1806ರಲ್ಲಿ ಬೆಸ್ಕಿ ಎನ್ನುವ ವೀರಮಾಮುನಿವರೂ 1836ರಲ್ಲಿ ರೆನಿಯಸ್ ಎಂಬುವರೂ ರಚಿಸಿದ ಲಕ್ಷಣ ಗ್ರಂಥಗಳು ದೊರೆತಿವೆ.

ತಮಿಳು ಭಾಷೆಯ ಲಕ್ಷಣ ಗ್ರಂಥಗಳು ಸರ್ವನಾಮಗಳನ್ನು ಪ್ರತ್ಯೇಕವಾಗಿ ವಿವರಿಸಲಿಲ್ಲ. ಅವೆಲ್ಲವೂ ಸರ್ವನಾಮವನ್ನು ನಾಮಪದದ ಒಂದು ಅಂಗವಾಗಿ ವಿವರಿಸಿವೆ. ಆದರೆ ಈ ವಿದೇಶಿಯರ ಲಕ್ಷಣ ಗ್ರಂಥಗಳಲ್ಲಿ ಸರ್ವನಾಮಗಳು ಒಂದು ಪ್ರತ್ಯೇಕ ಅಂಶವಾಗಿ ಪರಿಗಣಿಸಿಕೊಳ್ಳುವುದಲ್ಲದೆ ಪ್ರತ್ಯೇಕ ಭಾಗದಲ್ಲೂ ವಿವರಿಸಲ್ಪಡುತ್ತದೆ. ತಮಿಳು ಲಕ್ಷಣ ಗ್ರಂಥಗಳು 'ತಾನ್', 'ತಾಮ್' ಎಂಬುವುಗಳನ್ನೇ ಪ್ರಥಮ ಪುರುಷ ಸರ್ವನಾಮಪದಗಳಾಗಿ ವಿವರಿಸುತ್ತವೆ. ಆದರೆ ವಿದೇಶಿಯರ ಲಕ್ಷಣ ಗ್ರಂಥಗಳು ಅವನ್, ಅವಳ್, ಅವರ್, ಅದು, ಅವೈ ಮುಂತಾದವುಗಳನ್ನು ಪ್ರಥಮ ಪುರುಷ ಸರ್ವನಾಮಗಳಾಗಿ ಗುರುತಿಸುತ್ತವೆ.

ವಿದೇಶಿಯರು ತಮ್ಮ ಲಕ್ಷಣ ಗ್ರಂಥಗಳಲ್ಲಿ ಕ್ರಿಯಾಪದಗಳನ್ನು ನಿರ್ಬಲ ಕ್ರಿಯಾ ಪದಗಳು, ಆತ್ಮನೇಯ ಕ್ರಿಯಾಪದಗಳು, ಸಬಲ ಕ್ರಿಯಾಪದಗಳು ಎಂದು ಮೂರು ವಿಧವಾಗಿ ವಿಭಾಗಿಸಿದ್ದಾರೆ. ಅನಂತರ ನಿರ್ಬಲ ಕ್ರಿಯಾಪದಗಳಲ್ಲಿ ಬರುವ ಕಾಲ ಪ್ರತ್ಯಯಗಳನ್ನೂ ಸಬಲ ಕ್ರಿಯಾಪದಗಳಲ್ಲಿ ಬರುವ ಕಾಲ ಪ್ರತ್ಯಯಗಳನ್ನೂ ಆತ್ಮನೇಯ ಕ್ರಿಯಾ ಪದಗಳಲ್ಲಿ ಬರುವ ಕಾಲ ಪ್ರತ್ಯಯವನ್ನೂ ಸ್ಪಷ್ಟಪಡಿಸಿದ್ದಾರೆ. ಆದರೆ ತಮಿಳು ಭಾಷೆಯ ಲಕ್ಷಣ ಗ್ರಂಥಗಳು ಕ್ರಿಯಾಪದದ ಈ ಬಗೆಯನ್ನು ಕುರಿತೂ ಅವುಗಳಿಗೆ ಬರುವ ಕಾಲ ಪ್ರತ್ಯಯಗಳನ್ನು ಕುರಿತೂ ಏನೂ ಗುರುತಿಸಲಿಲ್ಲ.

ನಿಘಂಟುಗಳು :

ಇತರ ಪುರಾವೆಗಳಂತೆಯೇ ನಿಘಂಟುಗಳೂ ಭಾಷಾ ಚರಿತ್ರೆಯನ್ನು ನಿರ್ಧರಿಸಲಿಕ್ಕೆ ನೆರವಾಗುತ್ತವೆ. ನಿಘಂಟುಗಳು ಯುರೋಪಿಯನ್ನರ ಕೊಡುಗೆಗಳೆಂದು ಹೇಳಬಹುದು. 1732ರಲ್ಲಿ ವೀರಮಾಮುನಿವರ್ ಎಂಬುವರು 'ಚತುರ ಗರಾಡಿ' ಎನ್ನುವ ನಿಘಂಟನ್ನು ರಚಿಸಿದರು. ಅನಂತರ ಮದ್ರಾಸ್ ವಿಶ್ವವಿದ್ಯಾನಿಲಯ 'ತಮಿಳು ನಿಘಂಟು' ಎಂಬ ನಿಘಂಟನ್ನು ಪ್ರಕಟಿಸಿತ್ತು. ಟಿ. ಬರೋ ಮತ್ತು ಎಂ. ಬಿ. ಎಮೆನೋ ಎನ್ನುವ ವಿದ್ವಾಂಸರುಗಳು 'ಎ ದ್ರವಿಡಿಯನ್ ಎಟಿಮಿಲಾಜಿಕಲ್ ಡಿಕ್ಷನರಿ' ಎಂಬ ನಿಘಂಟನ್ನು ಪ್ರಕಟಿಸಿ ದ್ರಾವಿಡ ಭಾಷೆಗಳ ಅಧ್ಯಯನ ಬೆಳೆಯುವುದಕ್ಕೆ ಕಾರಣರಾದರು. ಈಗ ತಮಿಳು ಭಾಷೆಗೆ ಹಲವಾರು ನಿಘಂಟುಗಳು ಕೊಡುಗೆಯಾಗಿ ದೊರೆತಿವೆ.

ಈ ನಿಘಂಟುಗಳಿಂದ ತಮಿಳು ಪದಗಳ ಉಚ್ಚಾರಣೆಯನ್ನೂ ಆಯಾಯ ಕಾಲದ ತಮಿಳು ಭಾಷೆಯ ಧ್ವನಿ ವ್ಯವಸ್ಥೆಯನ್ನೂ ಅರಿತುಕೊಳ್ಳಲಿಕ್ಕೆ ಆಗುತ್ತದೆ. ಈ ನಿಘಂಟುಗಳು ಕೆಲವು ಪದಗಳ ಪರಿವರ್ತನೆಯನ್ನು ಸೂಚಿಸುತ್ತವೆ. ಪರಿಶೀಲಿಸಿ ನೋಡಿದರೆ ಈಗಿನ ಕಾಲದ ನಿಘಂಟುಗಳಲ್ಲಿ ಹಳೆಯ ನಿಘಂಟುಗಳಲ್ಲಿ ಸ್ಥಾನ ಪಡೆಯದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ವಾರಿಯಂ', 'ಒನ್ರಿಯಂ' ಮುಂತಾದ ಪದಗಳು ಹೊಸ ಪದಗಳ ಸ್ಥಾನ ಪಡೆದಿರುವುದನ್ನು ತಿಳಿಯಬಹುದು. ಹಿಂದಿನ ಕಾಲದ ನಿಘಂಟುಗಳಲ್ಲಿ 'ತೊಗುದಿ' ಎಂಬ ಪದ 'ರಾಶಿ' ಎಂಬ ಅರ್ಥದಲ್ಲಿ ಬಳಸಲ್ಪಟ್ಟಿದೆ. ಆದರೆ ಈ ಪದ ಈಗಿನ ನಿಘಂಟುಗಳಲ್ಲಿ ಈ ಅರ್ಥದೊಂದಿಗೆ 'ಕ್ಷೇತ್ರ' ಎನ್ನುವ ಅರ್ಥದಲ್ಲೂ ಬಳಸಲಾಗಿದೆ, ಇದರಿಂದ ಪದಗಳ ಅರ್ಥ ಕಾಲಾನಂತರದಲ್ಲಿ ಹೇಗೆ ಬದಲಾವಣೆಯಾಗುತ್ತಾ ಬರುತ್ತದೆ ಎಂಬುದನ್ನು ತಿಳಿದುಕೊಳ್ಳಬಹುದು.

ವಿದೇಶಿಯರ ಬರಹಗಳು :

ವಿದೇಶಿಯರ ಬರಹಗಳಲ್ಲಿ ಬರುವ ಕೆಲವು ಪದಗಳು ತಮಿಳು ಪದಗಳ ಧ್ವನಿಗಳು ಹೇಗೆ ಉಚ್ಚರಿಸಲ್ಪಟ್ಟವು ಎಂಬುದನ್ನು ತಿಳಿದುಕೊಳ್ಳಲಿಕ್ಕೆ ನೆರವಾಗುತ್ತವೆ. ಕ್ರಿ.ಪೂ. 2ನೇ ಶತಮಾನಕ್ಕೆ ಸೇರಿದ 'ಪತಂಜಲಿ' ಎಂಬುವರು ತಮ್ಮ ಬರಹದಲ್ಲಿ 'ಕಾಂಜಿ' ಎಂಬ ಪದವನ್ನು ಗುರುತಿಸಿದ್ದಾರೆ. ಗ್ರೀಕ್ ಭಾಷೆಯಲ್ಲಿ ತಮಿಳುನಾಡನ್ನು 'ದಮರಿಕಾ' ಎಂದು ಸೂಚಿಸಲಾಗಿದೆ. ಕ್ರಿ. ಶ. 14ನೇ ಶತಮಾನಕ್ಕೆ ಸೇರಿದ 'ಲೀಲಾತಿಲಕಂ' ಎಂಬ ವ್ಯಾಕರಣ ಗ್ರಂಥದಿಂದ ಪಾಂಡ್ಯನಾಡು ಮತ್ತು ಚೋಳ ನಾಡಿನ ಭಾಷಾ ಪ್ರಯೋಗಗಳನ್ನು ತಿಳಿದುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ.

ವಿದೇಶಿಯರು ತಮಿಳು ಭಾಷೆಯ ಪದಗಳನ್ನು ಕೇಳಿ ಅವರವರ ಭಾಷಾ ಜಾಯಮಾನಕ್ಕೆ ತಕ್ಕಂತೆ ಅವುಗಳನ್ನು ಬರೆದಿರುವುದನ್ನು ನೋಡಬಹುದು. ಅವರ ಬರಹಗಳಲ್ಲಿ—

ಕೊರ್ಕ್ಕೈ ಎಂಬುದು ಕೊಲ್ಕೈ ಎಂದೂ
ಮನ್ನಾರ್‌ಕುಡಾ ಎಂಬುದು ಕೊಲ್ಲಿಸ್ಕ್ಕುಡಾ ಎಂದೂ
ಮೈಲಾಪುರ್ ಎಂಬುದು ಮಲ್ಲಿಯರ್‌ಪಾ ಎಂದೂ
ಭಗವನ್ ಎಂಬುದು ಒಕವನ್ ಎಂದೂ ಬರುತ್ತವೆ.

17ನೇ ಶತಮಾನಕ್ಕೆ ಸೇರಿದ ರಾಬರ್ಟ್-ಡಿ-ನೊಬಲಿ ಎಂಬುವರು 'ಚ' ಎನ್ನುವ ಧ್ವನಿಯನ್ನು 'ಟ್ಚ' ಎಂದು ಬರೆದಿರುವುದನ್ನು ನೋಡಬಹುದು. 18ನೇ ಶತಮಾನಕ್ಕೆ ಸೇರಿದ ವೀರಮಾಮುನಿವರ್ 'ಚ' ಎಂಬುದನ್ನು 'ಸ' ಎಂದು ಗುರುತಿಸಿದ್ದಾರೆ. ಆದ್ದರಿಂದ ವಿದೇಶಿಯರ ಬರಹಗಳು ತಮಿಳು ಧ್ವನಿಗಳ ಉಚ್ಚಾರಣಾ ರೀತಿಯನ್ನು ನಿಖರವಾಗಿ ವ್ಯಕ್ತಪಡಿಸುತ್ತವೆ ಎಂದರೆ ಅದು ತಪ್ಪಾಗಲಾರದು.

ಉಪಭಾಷೆಗಳು :

ಉಪಭಾಷೆಗಳು ಭಾಷೆಯ ಚರಿತ್ರೆಯನ್ನು ತಿಳಿದುಕೊಳ್ಳಲಿಕ್ಕೆ ಸಹಾಯವಾಗುತ್ತವೆ. ಉಪಭಾಷೆಗಳ ಅಧ್ಯಯನದಿಂದ ತಮಿಳಿನ ಕೆಲವು ಹಳೆಯ ಪದಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೆಳಕಿಗೆ ಬಂದಿವೆ. ಅದರಂತೆಯೇ ಭಾಷೆಯಲ್ಲಿ ಕಂಡು ಬರುವ ಹೊಸ ಪ್ರತ್ಯಯು ಗಳೂ ಬಯಲಾಗಿವೆ. ತಿರುನೆಲ್‌ವೇಲಿ ಜಿಲ್ಲೆಯ ಉಪಭಾಷೆಯನ್ನು ಅಧ್ಯಯನ ಮಾಡಿದರೆ ತಮಿಳಿನ ಹಳೆಯ ಪದವಾದ 'ನೀಮ್' ಎಂಬುದು ಉಪಯೋಗದಲ್ಲಿರು ವುದನ್ನೂ 'ತ್' ಎಂಬ ಪ್ರತ್ಯಯ ವರ್ತಮಾನ ಕಾಲ ಪ್ರತ್ಯಯವಾಗಿ ಉಪಯೋಗ ವಾಗುವುದನ್ನೂ ತಿಳಿದುಕೊಳ್ಳುವುದು ಸಾಧ್ಯ.

ಹೀಗೆ ಹಲವಾರು ಪುರಾವೆಗಳು ತಮಿಳು ಭಾಷೆಯ ಚರಿತ್ರೆಯನ್ನು ತಿಳಿದು ಕೊಳ್ಳಲಿಕ್ಕೆ ನೆರವಾಗುವುದನ್ನು ತಿಳಿಯಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೪. ತಮಿಳು ಭಾಷಾ ಚರಿತ್ರೆ ಮತ್ತು ವ್ಯಾಕರಣಗಳು

ಭಾಷೆಯ ಚರಿತ್ರೆಯನ್ನು ಅಧ್ಯಯನ ಮಾಡುವುದಕ್ಕೆ ಹಲವಾರು ಪುರಾವೆಗಳು ನೆರವಾಗುತ್ತವೆ ಎಂಬುದನ್ನು ಹಿಂದಿನ ಅಧ್ಯಾಯದಲ್ಲಿ ನೋಡಿದೆವು. ಅವುಗಳಲ್ಲಿ ವ್ಯಾಕರಣಗಳು ಭಾಷೆಯ ಚರಿತ್ರೆಯನ್ನು ವಿವರಿಸಲಿಕ್ಕೆ ಬಹಳ ಉಪಯೋಗವಾಗುತ್ತವೆ. ಬೇರೆ ಬೇರೆ ಕಾಲಗಳಲ್ಲಿ ರಚಿತವಾದ ವ್ಯಾಕರಣಗಳನ್ನು ಹೋಲಿಸಿ ಅಧ್ಯಯನ ಮಾಡಿ ಭಾಷೆಯ ಚರಿತ್ರೆಯನ್ನು ನಿರ್ಧರಿಸಬಹುದು. ಕೆಳಗೆ ತಮಿಳು ವ್ಯಾಕರಣಗಳು ತಮಿಳು ಭಾಷೆಯ ಚರಿತ್ರೆಯನ್ನು ನಿರ್ಧರಿಸಲಿಕ್ಕೆ ಉಪಯೋಗವಾಗುವ ರೀತಿಯನ್ನು ಕುರಿತು ವಿವರಿಸಲಾಗಿದೆ.

ಪುರಾತನ ಕಾಲದ ತಮಿಳು ಭಾಷೆ, ಮಧ್ಯಕಾಲದ ತಮಿಳು ಭಾಷೆ ಮತ್ತು ಆಧುನಿಕ ಕಾಲದ ತಮಿಳು ಭಾಷೆಗಳನ್ನು ಹೋಲಿಸಿ ಅಧ್ಯಯನ ಮಾಡುವುದರಿಂದ ತಮಿಳು ಭಾಷೆಯ ಚರಿತ್ರೆಯನ್ನು ವಿವರಿಸಬಹುದು ಎಂದು ಹೇಳಿದೆವು. ತಮಿಳು ವ್ಯಾಕರಣಗಳನ್ನು ಈ ಮೂರು ಕಾಲಕ್ಕೆ ತಕ್ಕಂತೆ ವಿಂಗಡಿಸಿಕೊಳ್ಳಬಹುದು ತೊಲ್ಕಾಪ್ಪಿಯಂ ಪುರಾತನ ಕಾಲದ ತಮಿಳು ಭಾಷೆಯನ್ನೂ ಯಾಪ್ಪರುಂಗಲಂ, ಯಾಪ್ಪರುಂಗಲಕ್ಕಾರಿಗೈ, ವೀರಚೋೞಿಯಂ, ನನ್ನೂಲ್–ಮುಂತಾದವು ಮಧ್ಯ ಕಾಲದ ತಮಿಳು ಭಾಷೆಯನ್ನೂ ಪಿರಯೋಗ ವಿವೇಗಂ, ಇಲಕ್ಕಣ ವಿಳಕ್ಕಂ, ಇಲಕ್ಕಣಕ್ಕೊತ್ತು, ತೊನ್ನೂಲ್‌ವಿಳಕ್ಕಂ, ನೇಮಿನಾಥಂ–ಮುಂತಾದುವು ಆಧುನಿಕ ಕಾಲದ ತಮಿಳು ಭಾಷೆಯನ್ನೂ ಪ್ರತಿಪಾದಿಸುತ್ತವೆ. ಈ ಮೂರು ಕಾಲದ ವ್ಯಾಕರಣ ಗಳನ್ನು ಹೋಲಿಸಿ ಅಧ್ಯಯನ ಮಾಡಿದರೆ ತಮಿಳು ಭಾಷೆಯ ಧ್ವನಿ, ಧ್ವನಿಮಾ, ಸಂಧಿ, ವ್ಯಾಕರಣ ಮುಂತಾದ ಸ್ತರಗಳಲ್ಲಿ ಕಂಡು ಬರುವ ಬದಲಾವಣೆಗಳನ್ನು ಅಥವಾ ಬೆಳವಣಿಗೆಗಳನ್ನು ನಿಖರವಾಗಿ ತಿಳಿದು ಕೊಳ್ಳಬಹುದು.

ಧ್ವನಿ ಪರಿವರ್ತನೆ :

"ಅಣರಿನುನಿನಾ ಅಣ್ಣಂ ಒಱ್ಱ
ಱಃಹಾನ್ ನಃಹಾನ್ ಆಯಿರಣ್ಡುಂ ಪಿಱಕ್ಕುಂ"

ಎಂಬ ತೊಲ್ಕಾಪ್ಪಿಯದ ಸೂತ್ರದ ಪ್ರಕಾರ 'ಱ' ಎಂಬ ಧ್ವನಿ ಸ್ಪರ್ಶಧ್ವನಿ. ಅಂದರೆ ಈ ಧ್ವನಿಯನ್ನು ವರ್ತ್ಸ್ಯ ಸ್ಪರ್ಶದಂತೆಯೇ ಉಚ್ಚಾರ ಮಾಡಬೇಕು ಎಂದರ್ಥ. ಆದರೆ ನನ್ನೂಲ್ ಸೂತ್ರದ ಪ್ರಕಾರ ಈ 'ಱ' ಕಾರ ಧ್ವನಿ ಕಂಪನ ಧ್ವನಿಯಾಗಿರುತ್ತದೆ. ಇದನ್ನು ಗುರುತಿಸಲಿಕ್ಕೆ ನನ್ನೂಲಾರ್ 'ನನಿಉಱೀನ್' ಎಂಬ ಪದವನ್ನು ಉಪಯೋಗಿ ಸಿದ್ದಾರೆ. ನನ್ನೂಲಾರ್ 'ನನಿಉಱೀನ್' ಎಂದು ಹೇಳಿರುವುದರಿಂದ ತೊಲ್ಕಾಪ್ಪಿಯರ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾಲದಲ್ಲಿ ಸ್ಪರ್ಶ ಧ್ವನಿಯಾಗಿದ್ದ 'ಱ' ಕಾರ ನನ್ನೂಲಾರ್ ಕಾಲದಲ್ಲಿ ಕಂಪನ ಧ್ವನಿಯಾಗಿದೆ ಎಂಬುದು ತಿಳಿಯುತ್ತದೆ.

ಧ್ವನಿಮಾ ಪರಿವರ್ತನೆ :

1) ಎಲ್ಲಾ ತಮಿಳು ವ್ಯಾಕರಣಗಳೂ ತಮಿಳು ಧ್ವನಿಮಾಗಳ ಸಂಖ್ಯೆಯನ್ನು ಒಂದೇ ರೀತಿಯಲ್ಲಿ ಹೇಳಿದ್ದರೂ ಅವುಗಳ ವಿತರಣೆಯನ್ನು ವಿವರಿಸುವಾಗ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿವೆ. ತೊಲ್ಕಾಪ್ಪಿಯಂ 'ಚ' ಕಾರ ಅ, ಐ, ಔ ಎಂಬ ಧ್ವನಿಮಾಗಳನ್ನು ಬಿಟ್ಟು ಉಳಿದ ಎಲ್ಲಾ ಸ್ವರಗಳೊಂದಿಗೆಯೂ ಸೇರಿ ಪದದ ಆರಂಭದಲ್ಲಿ ಬರಬಹುದು ಎನ್ನುತ್ತದೆ. ಆದರೆ ಮಧ್ಯಕಾಲದ ವೀರಚೋೞಿಯಂ ಎಂಬ ವ್ಯಾಕರಣ 'ಚ' ಕಾರ ಎಲ್ಲಾ ಸ್ವರಗಳೊಂದಿಗೆಯೂ ಸೇರಿ ಪದದ ಆರಂಭದಲ್ಲಿ ಬರಬಹುದು ಎನ್ನುತ್ತದೆ.

2) ತೊಲ್ಕಾಪ್ಪಿಯಂ 'ಯ' ಕಾರ 'ಆ' ಕಾರದೊಂದಿಗೆ ಮಾತ್ರವೇ ಸೇರಿ ಪದದ ಆದಿಯಲ್ಲಿ ಬರುವುದಾಗಿ ಸೂಚಿಸಿದೆ. ಆದರೆ ವೀರಚೋೞಿಯಂ ಎಂಬ ವ್ಯಾಕರಣ 'ಯ' ಕಾರವು ಅ, ಆ, ಉ, ಊ, ಓ ಮತ್ತು ಔ ಮುಂತಾದ ಸ್ವರಗಳೊಂದಿಗೆ ಸೇರಿ ಪದದ ಆದಿಯಲ್ಲಿ ಬರಬಹುದು ಎಂದು ಹೇಳುತ್ತದೆ. ಈ ಅಭಿಪ್ರಾಯವನ್ನೇ ನನ್ನೂಲ್ ಎಂಬ ವ್ಯಾಕರಣವೂ ವ್ಯಕ್ತಪಡಿಸುತ್ತದೆ.

ಸಂಧಿ ಪರಿವರ್ತನೆ :

1) ಭಾಷೆಯಲ್ಲಿ ಸಂಧಿ ಮಟ್ಟದಲ್ಲೂ ಕೆಲವು ಪರಿವರ್ತನೆಗಳು ನಡೆದಿವೆ. ವೀರಚೋೞಿಯಂ ಎಂಬ ವ್ಯಾಕರಣ 'ಲ' ಕಾರವನ್ನು ಅಂತ್ಯವಾಗಿ ಉಳ್ಳ ಪದವೂ 'ಯ' ಕಾರವನ್ನು ಆದಿಯಾಗಿ ಉಳ್ಳ ಪದವೂ ಸೇರುವಾಗ ಇವುಗಳ ಮಧ್ಯದಲ್ಲಿ –ಇ– ಎಂಬ ಆಗಮ ಬರಬೇಕು ಎಂದು ಹೇಳುತ್ತದೆ.

ಉದಾ : ವೇಲ್ + ಯಾದು > ವೇಲಿಯಾದು

ಆದರೆ ಪ್ರಾಚೀನ ವ್ಯಾಕರಣವಾದ ತೊಲ್ಕಾಪ್ಪಿಯಂ ಇದನ್ನು ಕುರಿತು ಯಾವ ಸೂಚನೆಯನ್ನೂ ಕೊಟ್ಟಿಲ್ಲ. ಆದರೆ ನನ್ನೂಲ್ 'ಯ' ಕಾರವನ್ನು ಬಿಟ್ಟು ಉಳಿದ ಎಲ್ಲಾ ವ್ಯಂಜನಗಳ ಅಂತ್ಯದಲ್ಲೂ –ಇ– ಕಾರ ಆಗಮವಾಗಿ ಬರುತ್ತದೆ ಎಂದು ಸ್ಪಷ್ಟಪಡಿಸಿದೆ.

2) ಪ್ರಾಚೀನ ಮತ್ತು ಮಧ್ಯ ಕಾಲದ ವ್ಯಾಕರಣಗಳು ಪದದ ಅಂತ್ಯದಲ್ಲಿ ಬರುವ '–ಲ' ಕಾರ '–ಳ' ಕಾರಗಳು ಕ–, ಚ–, ತ–, ಪ– ಮುಂತಾದ ಸ್ಪರ್ಶ ಅಕ್ಷರಗಳನ್ನು ಆದಿಯಾಗಿ ಉಳ್ಳ ಪದಗಳೊಂದಿಗೆ ಸೇರುವಾಗ '–ಲ' ಕಾರ '–ಳ' ಕಾರಗಳು ಕ್ರಮವಾಗಿ '–ಱ' ಕಾರವಾಗಿಯೂ '–ಟ' ಕಾರವಾಗಿಯೂ ಪರಿವರ್ತನೆಗೊಳ್ಳಬೇಕು ಎಂದಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

—{ ಲ, ಳ } > { ಱ, ಟ } | { ಕ, ಚ, ತ, ಪ } —

ಉದಾ : ನಾಳ್ + ಕಳ್ > ನಾಟ್ಕಳ್

ಕಲ್ + ಕಂಡು > ಕಱ್ಕಂಡು

ಆದರೆ ಆಧುನಿಕ ಕಾಲದ ಭಾಷೆಯಲ್ಲಿ '–ಲ' ಕಾರ '–ಳ' ಕಾರಗಳು ಸಹಜವಾಗಿಯೇ ಇರುವುದನ್ನು ನೋಡಬಹುದು.

ಉದಾ : ನಾಳ್ + ಕಳ್ > ನಾಳ್ಕಳ್

ಕಲ್ + ಕಂಡು > ಕಲ್ಕಂಡು

ವ್ಯಾಕರಣ ಪರಿವರ್ತನೆ :

ವ್ಯಾಕರಣ ಪರಿವರ್ತನೆ, ರೂಪ ಪರಿವರ್ತನೆ ಇವು ಎರಡನ್ನೂ ವ್ಯಾಕರಣ ಪರಿವರ್ತನೆ ಎಂದು ಭಾಷಾ ವಿಜ್ಞಾನಿಗಳು ಹೆಸರಿಸಿದ್ದಾರೆ.

1) ವ್ಯಾಕರಣ ಪರಿವರ್ತನೆ :

೧) ತೊಲ್ಕಾಪ್ಪಿಯಂ —ಕಳ್ ಎಂಬ ಬಹುವಚನ ಪ್ರತ್ಯಯ ಅಮಾನವ ನಾಮಪದದೊಂದಿಗೆ ಮಾತ್ರವೇ ಬರಬಹುದು ಎನ್ನುತ್ತದೆ. ಆದರೆ ಮಧ್ಯ ಕಾಲದ ವ್ಯಾಕರಣಗಳು —ಕಳ್ ಎಂಬ ಬಹುವಚನ ಪ್ರತ್ಯಯ ಮಾನವ ಮತ್ತು ಅಮಾನವ ನಾಮಪದದೊಂದಿಗೆ ಬರಬಹುದು ಎನ್ನುತ್ತವೆ.

೨) ತೊಲ್ಕಾಪ್ಪಿಯರ್ ತಮ್ಮ ಗ್ರಂಥದಲ್ಲಿ ಮೂರು ಕಾಲಗಳನ್ನು ಹೆಸರಿಸಿದ್ದರೂ ಆ ಮೂರು ಕಾಲಗಳನ್ನು ಗುರುತಿಸುವ ಪ್ರತ್ಯಯಗಳನ್ನು ಕುರಿತು ಏನೂ ಹೇಳಿಲ್ಲ. ಆದರೆ ನನ್ನೂಲ್, ವೀರಚೋೞಿಯಂ ಮುಂತಾದ ವ್ಯಾಕರಣಗಳು -ಕಿಱು–, –ಕಿನ್ಱು–, ಮುಂತಾದ ಕಾಲ ಪ್ರತ್ಯಯಗಳನ್ನು ಸ್ಪಷ್ಟವಾಗಿ ಎತ್ತಿ ಹೇಳುತ್ತವೆ.

2) ರೂಪ ಪರಿವರ್ತನೆ :

ನೇಮಿನಾಥಂ ಎಂಬ ವ್ಯಾಕರಣ, ಪದಗಳಲ್ಲಿ 'ಯಾ—' ಕಾರಕ್ಕೆ ಬದಲಾಗಿ 'ಆ' ಕಾರ ಆದಿಯಲ್ಲಿ ಬರಬಹುದು ಎಂದಿದೆ.

ಉದಾ : ಯಾ— > ಆ—

ಯಾರು > ಆರು

ಯಾಡು > ಆಡು

ಆದರೆ ಈ ವಿಷಯವನ್ನು ಕುರಿತು ಪ್ರಾಚೀನ ವ್ಯಾಕರಣವಾದ ತೊಲ್ಕಾಪ್ಪಿಯಂ ಏನೂ ಹೇಳಿಲ್ಲ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾಷೆಯ ಚರಿತ್ರೆಯನ್ನು ತಿಳಿದುಕೊಳ್ಳಲಿಕ್ಕೆ ಮೇಲೆ ಹೇಳಿದಂತೆ ವ್ಯಾಕರಣಗಳು ನೆರವಾದರೂ ಕೆಲವೊಮ್ಮೆ ಅವು ಭಾಷೆಯ ಸ್ವರೂಪವನ್ನು ಸರಿಯಾಗಿ ವಿವರಿಸುವುದಿಲ್ಲ. ಏಕೆಂದರೆ ಆಧುನಿಕ ವ್ಯಾಕರಣಗಳು ಪ್ರಾಚೀನ ಕಾಲದ ವ್ಯಾಕರಣಗಳು ಹೇಳಿದ್ದನ್ನೇ ಎತ್ತಿ ಹಿಡಿಯುತ್ತವೆಯೇಹೊರತು ಅವುಗಳು ರಚಿತವಾದ ಕಾಲದ ಭಾಷೆಯ ಸ್ವರೂಪವನ್ನು ವಿವರಿಸುವುದಿಲ್ಲ. ಆದ್ದರಿಂದ ವ್ಯಾಕರಣ ಆಧಾರಗಳನ್ನು ಜಾಗರೂಕತೆಯಿಂದ ಬಳಸಬೇಕಾಗುತ್ತದೆ. ಉದಾಹರಣೆಗೆ ನಿರ್ಭಂದಿತ ಕ್ರಿಯಾ ಸೂಚಕ ಕೃದಂತವನ್ನೂ ಮಧ್ಯಮ ಪುರುಷ ಬಹುವಚನ ಸರ್ವನಾಮವನ್ನೂ ತೆಗೆದುಕೊಳ್ಳೋಣ.

1) ಆಧುನಿಕ ಕಾಲಕ್ಕೆ ಸೇರಿದ ಇಳಕ್ಕಣವಿಳಕ್ಕಂ ಎಂಬ ವ್ಯಾಕರಣ ತೋಲ್ಕಾಪ್ಪಿಯಂ ಮತ್ತು ನನ್ನೂಲ್ ಮುಂತಾದ ವ್ಯಾಕರಣಗಳು ಹೇಳಿದ್ದನ್ನೇ ಹೇಳುತ್ತದೆ ಹೊರತು ಅದರ ಕಾಲದ ಭಾಷೆಯನ್ನು ವಿವರಿಸಿಲ್ಲ. ತೊಲ್ಕಾಪ್ಪಿಯರ್ ತಮ್ಮ ಗ್ರಂಥದಲ್ಲಿ 'ಚೆಯಿನ್' ಎನ್ನುವ ನಿರ್ಭಂದಿತ ಕ್ರಿಯಾ ಸೂಚಕ ಕೃದಂತವನ್ನು ಗುರುತಿಸಿದ್ದಾರೆ. ಆದರೆ ಇದಕ್ಕೆ ಬದಲಾಗಿ 'ಚೆಯ್ತಾಲ್' ಎಂಬ ಪ್ರಯೋಗ ಸಂಘ ಕಾಲದಲ್ಲೇ ಬಳಕೆಗೆ ಬಂದು ಬಿಟ್ಟಿದೆ. ಆದರೂ ಅನಂತರ ರಚಿತವಾದ ವ್ಯಾಕರಣಗಳು ಆ ಹೊಸ ಪ್ರಯೋಗವನ್ನು ಕುರಿತು ಏನೂ ಹೇಳದೆ ತೊಲ್ಕಾಪ್ಪಿಯರವರ ಅಭಿಪ್ರಾಯವನ್ನೇ ಎತ್ತಿ ಹಿಡಿಯುತ್ತವೆ.

2) ಮಧ್ಯಮ ಪುರುಷ ಬಹುವಚನ ಸರ್ವನಾಮವಾದ 'ನೀಂಗಳ್' ಎಂಬ ರೂಪವನ್ನು ಯಾವ ತಮಿಳು ವ್ಯಾಕರಣವೂ ಗುರುತಿಸಲಿಲ್ಲ. ಈ ಕಾರಣಗಳಿಂದ ವ್ಯಾಕರಣಗಳನ್ನು ಉಪಯೋಗಿಸುವಾಗ ಎಚ್ಚರಿಕೆಯಿಂದ ಉಪಯೋಗಿಸಬೇಕು ಎಂಬುದು ಸ್ಪಷ್ಟವಾಗುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೫. ತಮಿಳು ಭಾಷೆಯ ಆಂತರಿಕ ಚರಿತೆ

ಒಂದು ಭಾಷೆ ಎಲ್ಲಾ ಕಾಲದಲ್ಲೂ ಒಂದೇ ರೀತಿಯಾಗಿ ಇರುವುದಿಲ್ಲ.ಒಂದೊಂದು ಕಾಲದಲ್ಲೂ ಆಯಾಯಾ ಕಾಲಕ್ಕೆ ತಕ್ಕಂತೆ ಪರಿವರ್ತನೆಗಳನ್ನು ಹೊಂದಿ ವಿಕಾಸಗೊಳ್ಳುತ್ತದೆ. ಈ ಪರಿವರ್ತನೆಗಳು ಭಾಷೆಯ ನಾಲ್ಕು ಮಟ್ಟದಲ್ಲೂ ಕಂಡು ಬರುತ್ತವೆ. ಅಂದರೆ ಭಾಷೆಯ ಧ್ವನಿಮಾತ್ಮಕ ಮಟ್ಟ, ಸಂಧಿ ಮಟ್ಟ, ವ್ಯಾಕರಣಾತ್ಮಕ ಮಟ್ಟ, ಅರ್ಥಾತ್ಮಕ ಮಟ್ಟ ಮುಂತಾದವುಗಳಲ್ಲಿ ಪರಿವರ್ತನೆಗಳು ಸಹಜವಾಗಿ ನಡೆಯುವುದನ್ನು ಜಗತ್ತಿನ ಎಲ್ಲಾ ಭಾಷೆಗಳಲ್ಲೂ ನೋಡಬಹುದು. ಈ ಬಗೆಯ ಪರಿವರ್ತನೆಗಳು ತಮಿಳು ಭಾಷೆಯಲ್ಲೂ ಕಾಣಿಸಿಕೊಳ್ಳುತ್ತವೆ. ಇದನ್ನೇ ತಮಿಳು ಭಾಷೆಯ ಆಂತರಿಕ ಚರಿತ್ರೆಯೆಂದು ಹೇಳುವುದು.

ಧ್ವನಿಮಾತ್ಮಕ ಮಟ್ಟದಲ್ಲಾಗುವ ಪರಿವರ್ತನೆಗಳು :

ಧ್ವನಿಮಾತ್ಮಕ ವ್ಯವಸ್ಥೆಯಲ್ಲಿ ಕಂಡು ಬರುವ ಪರಿವರ್ತನೆಗಳನ್ನು ಧ್ವನಿಮಾತ್ಮಕ ಪರಿವರ್ತನೆಯೆಂದು ಕರೆಯುತ್ತಾರೆ. ಇದು

1. ಧ್ವನ್ಯಾತ್ಮಕ ಪರಿವರ್ತನೆಗಳು
2. ಧ್ವನಿಮಾ ಪರಿವರ್ತನೆಗಳು

ಎಂದು ಎರಡು ವಿಧವಾಗಿದೆ.

ಧ್ವನ್ಯಾತ್ಮಕ ಪರಿವರ್ತನೆಗಳು :

೧) ಭಾಷೆಯ ಧ್ವನ್ಯಾತ್ಮಕ ವ್ಯವಸ್ಥೆಯಲ್ಲಿ ಎಂದರೆ ಧ್ವನಿಗಳ ಉಚ್ಚಾರಣೆಯಲ್ಲಿ ಆಗುವ ಪರಿವತನೆಗಳನ್ನು ಧ್ವನ್ಯಾತ್ಮಕ ಪರಿವರ್ತನೆಗಳು ಎಂದು ಕರೆಯುತ್ತಾರೆ. ಪ್ರಾಚೀನ ತಮಿಳು ಭಾಷೆಯಲ್ಲಿ ಪದಗಳ ಆರಂಭದಲ್ಲಿ ಬಂದ ತಾಲವ್ಯ ಅಘೋಷ ಸ್ಪರ್ಶ ಧ್ವನಿ ಕಾಲಾನಂತರದಲ್ಲಿ ವತ್ಸ್ರ್ಯ ಸಂಘರ್ಷ ಧ್ವನಿಯಾಗಿ ಪರಿವರ್ತನೆಯಾಗಿದೆ.

ಉದಾ : ಚ > ಸ

ಚಾಮಿ > ಸಾಮಿ

ಚೋಱು > ಸೋಱು

೨) ತೊಲ್ಕಾಪ್ಪಿಯರ್‌ರವರ ಕಾಲದಲ್ಲಿ ಸ್ಪರ್ಶ ಧ್ವನಿಯಾಗಿದ್ದ 'ಱ' ಕಾರ ನನ್ನೂಲಾರ್‌ರವರ ಕಾಲದಲ್ಲೂ ಆಧುನಿಕ ಕಾಲದಲ್ಲೂ ಕಂಪನ ಧ್ವನಿಯಾಗಿ ಪರಿವರ್ತನೆಯಾಗಿರುವುದನ್ನು ನೋಡಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಱ > ರ

ಕಱುಪ್ಪು > ಕರುಪ್ಪು

೩) ತೊಲ್ಕಾಪ್ಪಿಯರ್ ಮತ್ತು ನನ್ನೂಲಾರ್‌ರವರ ಕಾಲದಲ್ಲಿ ದಂತ್ಯ ಅನುನಾಸಿಕ ಧ್ವನಿಯಾಗಿದ್ದ ನ (n) ಕಾರ ಇಂದಿನ ತಮಿಳು ಭಾಷೆಯಲ್ಲಿ ವರ್ತ್ಸ್ಯ ಅನುನಾಸಿಕ ಧ್ವನಿಯಾಗಿ ಉಚ್ಚರಿಸಲ್ಪಡುತ್ತದೆ.

ಉದಾ : ನ (n) > ನ (ṉ)

n ā ṉ > ṉāṉ

ಧ್ವನಿಮಾ ಪರಿವರ್ತನೆಗಳು :

ಸಾಮಾನ್ಯವಾಗಿ ಧ್ವನಿಮಾ ವ್ಯವಸ್ಥೆಯಲ್ಲಿ ಕಂಡುಬರುವ ಪರಿವರ್ತನೆಗಳನ್ನು ಧ್ವನಿಮಾ ಪರಿವರ್ತನೆಗಳು ಎನ್ನುತ್ತಾರೆ. ಇದು.

1. ಧ್ವನಿಮಾಗಳ ಸಂಖ್ಯೆಯಲ್ಲಿ ಉಂಟಾಗಿರುವ ಪರಿವರ್ತನೆಗಳು

2. ಧ್ವನಿಮಾಗಳ ವಿತರಣೆಯಲ್ಲಿ ಉಂಟಾಗಿರುವ ಪರಿವರ್ತನೆಗಳು

ಎಂದು ಎರಡು ವಿಧವಾಗಿ ಭಾಷೆಯಲ್ಲಿ ಕಾಣಿಸಿಕೊಳ್ಳುತ್ತದೆ.

ಧ್ವನಿಮಾಗಳ ಸಂಖ್ಯೆಯಲ್ಲಿ ಉಂಟಾಗಿರುವ ಪರಿವರ್ತನೆಗಳು :

ಉಚ್ಚಾರಣಾ ಬದಲಾವಣೆಯಿಂದಲೂ ಅದರಿಂದ ಉಂಟಾಗುವ ಅರ್ಥ ಬದಲಾವಣೆಯಿಂದಲೂ ಧ್ವನಿಮಾಗಳ ಸಂಖ್ಯೆಯಲ್ಲಿ ಕಾಣಿಸಿಕೊಳ್ಳುವ ಬದಲಾವಣೆಗಳನ್ನು ಧ್ವನಿಮಾಗಳ ಸಂಖ್ಯೆಯಲ್ಲಿ ಉಂಟಾಗಿರುವ ಪರಿವರ್ತನೆಗಳು ಎನ್ನುತ್ತಾರೆ.

೧) ತೊಲ್ಕಾಪ್ಪಿಯರ್ ಕಾಲದಲ್ಲೂ ನನ್ನೂಲಾರ್ ಕಾಲದಲ್ಲೂ ತಮಿಳು ಭಾಷೆಯಲ್ಲಿ ಆರು ಸ್ಪರ್ಶ ಧ್ವನಿಮಾಗಳು ಇದ್ದವು. ಆದರೆ ಆಧುನಿಕ ಕಾಲದ ತಮಿಳು ಭಾಷೆಯಲ್ಲಿ ಹತ್ತು ಸ್ಪರ್ಶ ಧ್ವನಿಮಾಗಳು ಇರುವುದನ್ನು ಕಾಣಬಹುದು.

ಉದಾ : ಕ, ಚ, ಟ, ತ, ಪ, ಱ-ತೊಲ್ಕಾಪ್ಪಿಯರ್ ಮತ್ತು ನನ್ನೂಲಾರ್ ಕಾಲ.

ಕ, ಗ, ಚ, ಜ, ಟ, ಡ, ತ, ದ, ಪ, ಬ–ಆಧುನಿಕ ಕಾಲ.

೨) ತೊಲ್ಕಾಪ್ಪಿಯರ್ ಕಾಲದಲ್ಲಿ ಆರು ಅನುನಾಸಿಕ ಧ್ವನಿಮಾಗಳು ಇದ್ದವು. ಇವು ಸಂಘ ಕಾಲದಲ್ಲಿ ಐದಾಗಿಯೂ ಆಧುನಿಕ ಕಾಲದಲ್ಲಿ ಮೂರಾಗಿಯೂ ಬದಲಾವಣೆಯಾಗಿವೆ.

ಉದಾ : ಙ, ಞ, ಣ, ನ (n), ಮ, ನ (ṉ)-ತೊಲ್ಕಾಪ್ಪಿಯರ್ ಕಾಲ

ಞ, ಣ, ನ(n), ಮ, ನ (ṉ)–ಸಂಘಕಾಲ

ಞ, ನ (ṉ), ಮ–ಆಧುನಿಕ ಕಾಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧ್ವನಿಮಾಗಳ ವಿತರಣೆಯಲ್ಲಿ ಉಂಟಾಗಿರುವ ಪರಿವರ್ತನೆಗಳು :

ತಮಿಳು ಭಾಷೆಯ ಧ್ವನಿಮಾಗಳ ವಿತರಣೆಯಲ್ಲಿ ಹಲವಾರು ಮಾರ್ಪಾಡು ಗಳನ್ನು ನೋಡಬಹುದು. ಸ್ವರ ಧ್ವನಿಮಾಗಳ ಬರುವಿಕೆಯಲ್ಲಿ ಯಾವ ಬದಲಾವಣೆಯೂ ಕಾಣಿಸಿಕೊಳ್ಳಲಿಲ್ಲ. ಆದರೆ ವ್ಯಂಜನ ಧ್ವನಿಮಾಗಳ ಬರುವಿಕೆಯಲ್ಲಿ ಹಲವಾರು ಬದಲಾವಣೆಗಳನ್ನು ಗುರುತಿಸಬಹುದು

ತೊಲ್ಕಾಪ್ಪಿಯರ್ ವ್ಯಂಜನ ಧ್ವನಿಮಾಗಳ ಬರುವಿಕೆಯನ್ನು ವಿವರಿಸುವಾಗ ಒಂದೊಂದು ಧ್ವನಿಮಾವೂ ಪದದ ಆದಿ, ಮಧ್ಯ, ಮತ್ತು ಅಂತ್ಯದಲ್ಲಿ ಬರುವಾಗ ಹೇಗೆ ಬರುತ್ತದೆ ಎಂಬುದನ್ನು ತಿಳಿಯಾಗಿ ವಿವರಿಸಿದ್ದಾರೆ. ಧ್ವನಿಮಾಗಳ ಬರುವಿಕೆಗೆ ಕೆಲವು ನಿಯಮಗಳನ್ನೂ ಎತ್ತಿ ಹೇಳಿದ್ದಾರೆ. ಆದರೆ ತೊಲ್ಕಾಪ್ಪಿಯರ್‌ರವರ ನಿಯಮಗಳಿಗೆ ವಿರುದ್ಧವಾಗಿ ಮಧ್ಯ ಮತ್ತು ಆಧುನಿಕಕಾಲದಲ್ಲಿ ಕೆಲವು ಪ್ರಯೋಗಗಳು ತಮಿಳು ಭಾಷೆಯಲ್ಲಿ ಕಾಣಿಸಿಕೊಳ್ಳುತ್ತವೆ.

೧) 'ಯ' ಕಾರ ಪದದ ಆದಿಯಲ್ಲಿ ಬರುವಾಗ 'ಆ' ಕಾರದೊಂದಿಗೆ ಮಾತ್ರ ಬರಬೇಕು ಎಂಬುದು ತೊಲ್ಕಾಪ್ಪಿಯರ್‌ರವರ ನಿಯಮ. ಆದರೆ ನನ್ನೂಲಾರ್ ಕಾಲದಲ್ಲೂ ಆಧುನಿಕ ಕಾಲದಲ್ಲೂ 'ಯ' ಕಾರ 'ಆ' ಕಾರದೊಂದಿಗೆ 'ಅ' 'ಉ' 'ಊ' 'ಒ' 'ಔ' ಮುಂತಾದ ಸ್ವರಗಳೊಂದಿಗೆಯೂ ಪದದ ಆದಿಯಲ್ಲಿ ಬರುತ್ತದೆ.

ಉದಾ : ಯಾಮಂ — ತೊಲ್ಕಾಪ್ಪಿಯರ್ ಕಾಲ

ಯವನರ್
ಯುಗಂ
ಯೂಗಂ
ಯೋಗಂ
ಯೌವ್ವನಂ } ನನ್ನೂಲಾರ್ ಮತ್ತು ಆಧುನಿಕ ಕಾಲ

೨) ತೊಲ್ಕಾಪ್ಪಿಯರ್ 'ಚ' ಕಾರ ಪದದ ಆರಂಭದಲ್ಲಿ 'ಅ' 'ಐ' 'ಔ' ಎಂಬ ಸ್ವರಗಳೊಂದಿಗೆ ಬರಬಾರದು ಎಂದಿದ್ದಾರೆ. ಆದರೆ ನನ್ನೂಲಾರ್ ಕಾಲದಲ್ಲೂ ಆಧುನಿಕ ಕಾಲದಲ್ಲೂ 'ಚ' ಕಾರ ಮೇಲೆ ಹೇಳಿದ ಸ್ವರಗಳೊಂದಿಗೆಯೂ ಬರುತ್ತದೆ.

ಉದಾ : ಚಮರ್, ಚೈಯಂ, ಚೌಕ್ಕಿಯಂ

೩) 'ಞ' ಕಾರದ ಬರುವಿಕೆಯನ್ನು ವಿವರಿಸುವಾಗ ತೊಲ್ಕಾಪ್ಪಿಯರ್ ಇದು 'ಆ' 'ಎ' 'ಒ' ಎಂಬ ಮೂರು ಸ್ವರಗಳೊಂದಿಗೆ ಸೇರಿ ಪದದ ಆದಿಯಲ್ಲಿ ಬರಬಹುದು ಎಂದಿದ್ದಾರೆ. ಆದರೆ ನನ್ನೂಲಾರ್ 'ಞ' ಕಾರ ಈ ಸ್ವರಗಳೊಂದಿಗೆ 'ಅ' ಕಾರ ದೊಂದಿಗೆಯೂ ಪದದ ಆದಿಯಲ್ಲಿ ಬರಬಹುದು ಎಂಬುದನ್ನು ಎತ್ತಿ ತೋರಿಸಿದ್ದಾರೆ.

ಉದಾ : ಞಮಲಿ, ಞಾಲಂ, ಞೆಗಿಳ್, ಞೊಳ್ಳಿಙ್ಞ

೪) ತೊಲ್ಕಾಪ್ಪಿಯರ್‌ರವರು 'ಜ' ಕಾರ ಪದದ ಆದಿಯಲ್ಲಿ ಬರುವುದಿಲ್ಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಂದು ಹೇಳಿದ್ದಾರೆ. 'ಜನಂ' ಎನ್ನುವ ಪದದಲ್ಲಿ ಇದು ಪದದ ಆದಿಯಲ್ಲಿ ಬರುವು ದನ್ನು ನೋಡಿದ ನನ್ನೂಲಾರ್ 'ಜ' ಕಾರ ಪದದ ಆದಿಯಲ್ಲಿ ಬರಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

೫) ತೊಲ್ಕಾಪ್ಪಿಯರ್ ಮತ್ತು ನನ್ನೂಲಾರ್‌ರವರ ನಿಯಮಗಳ ಪ್ರಕಾರ 'ರ', 'ಲ', 'ಟ' ಮುಂತಾದ ಧ್ವನಿಮಾಗಳು ಪದದ ಆದಿಯಲ್ಲಿ ಬರಬಾರದು. ಆದರೆ ಆಧುನಿಕ ಭಾಷೆಯಲ್ಲಿ ಇವುಗಳೂ ಪದದ ಆರಂಭದಲ್ಲಿ ಬರುತ್ತವೆ.

ಉದಾ : ರಯಿಲ್, ಲಂಜಂ, ಡಾಕ್ಟರ್

೬) ಪದದ ಅಂತ್ಯದಲ್ಲಿ ಬರುವ ಧ್ವನಿಮಾಗಳನ್ನು ಕುರಿತು ವಿವರಿಸುವಾಗ ತೊಲ್ಕಾಪ್ಪಿಯರ್ ಮತ್ತು ನನ್ನೂಲಾರ್ ಇಬ್ಬರೂ ಸ್ಪರ್ಶ ಧ್ವನಿಮಾಗಳಾದ 'ಕ', 'ಚ', 'ಟ', 'ತ', 'ಪ' ಎಂಬುವು ಪದದ ಅಂತ್ಯದಲ್ಲಿ ಬರುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಆಧುನಿಕ ತಮಿಳು ಭಾಷೆಯಲ್ಲಿ ಇವುಗಳೂ ಪದದ ಅಂತ್ಯದಲ್ಲಿ ಬರುತ್ತವೆ.

ಉದಾ : ಕಿಳಾರ್ಕ್
ಪೋಟ್
ಬೆಂಚ್
ಕಿಳಪ್

ಮೇಲೆ ಹೇಳಿದ 'ರ', 'ಲ' ಮುಂತಾದ ಧ್ವನಿಗಳು ಪದದ ಆದಿಯಲ್ಲಿ ಬರು ವುದೂ 'ಕ', 'ಚ' ಮುಂತಾದ ಸ್ಪರ್ಶ ಧ್ವನಿಗಳು ಪದದ ಅಂತ್ಯದಲ್ಲಿ ಬರುವುದೂ ಸ್ವೀಕರಣ ಪದಗಳಲ್ಲೇಹೊರತು ಅಚ್ಚತಮಿಳು ಪದಗಳಲ್ಲಲ್ಲ ಎಂಬುದು ಗುರುತಿಸತಕ್ಕ ಅಂಶ.

ಸಂಧಿ ಮಟ್ಟದಲ್ಲಾಗುವ ಪರಿವರ್ತನೆಗಳು :

ಸಂಧಿ ಮಟ್ಟದಲ್ಲಾಗುವ ಪರಿವರ್ತನೆಗಳನ್ನು ಎರಡು ಬಗೆಯಾಗಿ ವಿಭಾಗಿಸಿಕೊಳ್ಳ ಬಹುದು. ಅವು ರೂಪ ಪರಿವರ್ತನೆ ಮತ್ತು ಸಂಧಿ ಪರಿವರ್ತನೆ.

ರೂಪ ಪರಿವರ್ತನೆಗಳು :

ಆಕೃತಿಮಾದಲ್ಲಿ ಬರುವ ಧ್ವನಿಮಾಗಳ ನಿರೂಪಣೆಯಲ್ಲಿ ಬರುವ ಪರಿವರ್ತನೆ ಗಳನ್ನು ರೂಪ ಪರಿವರ್ತನೆಗಳು ಎನ್ನುತ್ತಾರೆ.

ಉದಾ : 1. ಯಾ > ಆ
ಯಾಜು > ಆಜು
2. ಯಾ > ನಾ
ಯಾನ್ > ನಾನ್

ಮೇಲಿನ ಉದಾಹರಣೆಗಳಲ್ಲಿ 'ಯಾ' ಕಾರ 'ಆ' ಕಾರವಾಗಿಯೂ 'ನಾ' ಕಾರ ವಾಗಿಯೂ ಪರಿವರ್ತನೆಯಾಗಿರುವುದನ್ನು ನೋಡಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಧಿ ಪರಿವರ್ತನೆಗಳು :

೧) ಎರಡು ಪದಗಳು ಒಂದಕ್ಕೊಂದು ಸೇರುವಾಗ ಉಂಟಾಗುವ ಪರಿವರ್ತನೆಗಳು ಸಂಧಿಪರಿವರ್ತನೆಗಳಾಗುತ್ತವೆ. ಪ್ರಾಚೀನ ತಮಿಳಿನಲ್ಲಿ 'ನ' ಕಾರಾಂತ್ಯವಾಗಿ ಬರುವ ಪದಗಳೊಂದಿಗೆ 'ಕ', 'ಚ', 'ತ', 'ಪ' ಮುಂತಾದ ಅಕ್ಷರಗಳಲ್ಲಿ ಆರಂಭವಾಗುವ ಪದಗಳು ಸೇರಿದರೆ ಪೂರ್ವ ಪದದ ಅಂತ್ಯದಲ್ಲಿ ಬರುವ 'ನ' ಕಾರ 'ಱ' ಕಾರವಾಗುತ್ತದೆ.

ಉದಾ :—ನ > -ಱ

ಎನ್ + ತಂಬಿ > ಎನ್ಱಂಬಿ

ಮುನ್ + ಪಿಱವಿ > ಮುಱ್ಪಿಱವಿ

ಪೊನ್ + ಚಿಲೈ > ಪೊಱ್ಚಿಲೈ

ಆದರೆ ಆಧುನಿಕ ತಮಿಳು ಭಾಷೆಯಲ್ಲಿ ಪೂರ್ವ ಪದದ 'ನ' ಕಾರ ಯಾವ ಪರಿವರ್ತನೆಗೂ ಒಳಗಾಗದೆ ಸಹಜವಾಗಿರುತ್ತದೆ.

ಉದಾ : ಎನ್ + ತಂಬಿ > ಎನ್‌ತಂಬಿ

ಮುನ್ + ಪಿಱವಿ > ಮುನ್‌ಪಿಱವಿ

ಪೊನ್ + ಚಿಲೈ > ಪೊನ್ ಚಿಲೈ

೨) ಅಂತೆಯೇ 'ಲ' ಕಾರಾಂತ್ಯದೊಂದಿಗೆ 'ಕ', 'ಚ', 'ತ', 'ಪ' ಮುಂತಾದವುಗಳು ಸೇರುವಾಗ 'ಲ' ಕಾರ 'ಱ' ಕಾರವಾಗುವುದು.

ಉದಾ :—ಲ > - ಱ

ನೂಲ್ + ಕಳ್ > ನೂಱ್ಕಳ್

ಪಲ್ + ಕಳ್ > ಪಱ್ಕಳ್

ಆದರೆ ಇಂದಿನ ತಮಿಳಿನಲ್ಲಿ 'ಲ' ಕಾರ ಬದಲಾವಣೆಯಾಗದೆ ಸಹಜವಾಗಿಯೇ ಇರುತ್ತದೆ.

ಉದಾ : ನೂಲ್ + ಕಳ್ > ನೂಲ್‌ಕಳ್

ಪಲ್ + ಕಳ್ > ಪಲ್‌ಕಳ್

ಪಲ್ + ಪೊಡಿ > ಪಲ್‌ಪೊಡಿ

ಕಲ್ + ಚಟ್ಟಿ > ಕಲ್‌ಚಟ್ಟಿ

೩) 'ಳ' ಕಾರಾಂತ್ಯದೊಡನೆ 'ಕ', 'ಚ', 'ತ', 'ಪ' ಮುಂತಾದವು ಸೇರುವಾಗ 'ಳ' ಕಾರ 'ಟ' ಕಾರವಾಗಬೇಕು ಎಂಬುದು ತೊಲ್ಕಾಪ್ಪಿಯರ್ ಮತ್ತು ನನ್ನೂಲಾರ್ ರವರ ನಿಯಮ.

ಉದಾ :—ಳ > - ಟ

ತಾಳ್ + ಕಳ್ > ತಾಟ್ಕಳ್

ಮುಳ್ + ಚೆಡಿ > ಮುಟ್ಚೆಡಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆದರೆ ಇಂದಿನ ತಮಿಳು ಭಾಷೆಯಲ್ಲಿ 'ಳ' ಕಾರ ಸಹಜವಾಗಿ ಬರುತ್ತದೆ.

ಉದಾ : ತಾಳ್ + ಕಳ್ > ತಾಳ್ಕಳ್
ಮುಳ್ + ಚೆಡಿ > ಮುಳ್ಚೆಡಿ

೪) ತೊಲ್ಕಾಪ್ಪಿಯರ್‌ರವರ ಕಾಲದಲ್ಲಿ ಎರಡು ಸ್ವರಗಳು ಸೇರುವಾಗ ಅವುಗಳ ಮಧ್ಯದಲ್ಲಿ ವಿಸರ್ಪ ಸ್ವರ ಬರಬೇಕೆಂಬುದು ಕಡ್ಡಾಯವಾಗಿಲ್ಲವಾದ್ದರಿಂದ ಸ್ವರಾನುಕ್ರಮಗಳು ಹೆಚ್ಚಾಗಿ ಬಳಕೆಯಲ್ಲಿದ್ದವು. ಇಂದಿನ ತಮಿಳು ಭಾಷೆಯಲ್ಲಿ ಸ್ವರಗಳ ಮಧ್ಯದಲ್ಲಿ ವಿಸರ್ಪ ಸ್ವರ ಕಡ್ಡಾಯವಾಗಿ ಬರುವುದರಿಂದ ಸ್ವರಾನುಕ್ರಮಗಳು ಬಳಕೆಯಿಂದಲೇ ಮಾಯವಾಗಿವೆ.

ಉದಾ : ತಟು + ಇ > ತಿಟೀಇ – ತೊಲ್ಕಾಪ್ಪಿಯರ್ ಕಾಲ
ತಟು + ಇ > ತಟುವಿ – ಆಧುನಿಕ ಕಾಲ

ವ್ಯಾಕರಣಾತ್ಮಕ ಮಟ್ಟದಲ್ಲಾಗುವ ಪರಿವರ್ತನೆಗಳು :

ವ್ಯಾಕರಣ ವ್ಯವಸ್ಥೆಯಲ್ಲಿ ಆಗುವ ಪರಿವರ್ತನೆಗಳನ್ನು ಕೆಳಕಂಡಂತೆ ಎರಡು ವಿಧವಾಗಿ ವರ್ಗೀಕರಿಸಿಕೊಳ್ಳಬಹುದು.

1. ವ್ಯಾಕರಣಾತ್ಮಕ ಪರಿವರ್ತನೆಗಳು
2. ಪದ ಪರಿವರ್ತನೆಗಳು

ವ್ಯಾಕರಣಾತ್ಮಕ ಪರಿವರ್ತನೆಗಳು :

ವ್ಯಾಕರಣ ವ್ಯವಸ್ಥೆಯಲ್ಲಿ ಕಂಡು ಬರುವ ಪರಿವರ್ತನೆಗಳು ವ್ಯಾಕರಣಾತ್ಮಕ ಪರಿವರ್ತನೆಗಳಾಗುತ್ತವೆ.

೧) ಪ್ರಾಚೀನ ತಮಿಳು ಭಾಷೆಯಲ್ಲಿ ಎರಡು ಕಾಲಸೂಚನೆಗಳು ಮಾತ್ರ ಇದ್ದವು. ಅವು ಭೂತಕಾಲ ಮತ್ತು ಅಭೂತ ಕಾಲ.

ಉದಾ : ಚೆಯ್ತಾನ್-ಭೂತಕಾಲ
ಚೆಯ್ವಾನ್--ಅಭೂತಕಾಲ

ಆದರೆ ಮಧ್ಯಕಾಲ ಮತ್ತು ಆಧುನಿಕ ಕಾಲದ ತಮಿಳು ಭಾಷೆಯಲ್ಲಿ ಅಭೂತಕಾಲ, ವರ್ತಮಾನಕಾಲ ಮತ್ತು ಭವಿಷ್ಯತ್‌ಕಾಲವೆಂದು ವಿಕಾಸಗೊಂಡು ಕಾಲಸೂಚನೆಗಳು ಮೂರಾದುದನ್ನು ನೋಡಬಹುದು.

೨) ತೊಲ್ಕಾಪ್ಪಿಯರ್‌ರವರ ಕಾಲದಲ್ಲಿ 'ಯಾನ್' ಎಂಬ ಒಂದು ಉತ್ತಮ ಪುರುಷ ಏಕವಚನ ನಾಮ ಪದವೇ ಇತ್ತು. ಆದರೆ ಮಧ್ಯಕಾಲದಲ್ಲಿ ಇದರೊಂದಿಗೆ 'ನಾನ್', 'ನಾಂ' ಎಂಬುವು ಬಳಸಲ್ಪಟ್ಟಿವೆ. ಇದರಲ್ಲಿ 'ನಾಂ' ಎಂಬುದು ಗೌರವಾರ್ಥಕ ಉತ್ತಮ ಪುರುಷ ಏಕವಚನವಾಗಿ ಬಂದಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೩) ತೊಲ್ಕಾಪ್ಪಿಯರ್ ಮತ್ತು ನನ್ನೂಲಾರ್‌ರವರ ಕಾಲದಲ್ಲಿ 'ಅವನ್ ವರುಂ', 'ಅವಳ್ ವರುಂ' ಎಂಬುವು ವ್ಯಾಕರಣಬದ್ಧವಾಕ್ಯಗಳು. ಆದರೆ ಇಂದಿನ ಭಾಷೆಯಲ್ಲಿ ಈ ವಾಕ್ಯಗಳು 'ಅವನ್ ವರುವಾನ್', 'ಅವಳ್ ವರುವಾಳ್' ಎಂದು ಬದಲಾವಣೆಯಾಗಿವೆ.

೪) ಅಂತೆಯೇ ಪ್ರಾಚೀನಕಾಲದ ಪ್ರಯೋಗಗಳಾದ 'ನೀ ವರಲ್ ವೇಂಡುಂ' 'ನೀ ವರಲ್ ವೇಂಡಾ' ಎಂಬುವು ಆಧುನಿಕ ತಮಿಳು ಭಾಷೆಯಲ್ಲಿ 'ನೀ ವರವೇಂಡುಂ' 'ನೀ ವರವೇಂಡಾಂ' ಎಂದು ಬದಲಾವಣೆಯಾಗಿವೆ.

೫) ತೋಲ್ಕಾಪ್ಪಿಯರ್ ಮತ್ತು ನನ್ನೂಲಾರ್‌ರವರ ಕಾಲದಲ್ಲಿ ಕೆಲವು ವಾಕ್ಯಗಳಲ್ಲಿ ಕಾಣಿಸಿಕೊಂಡ ಸಮಾನಾರ್ಥ ಆಧುನಿಕ ತಮಿಳು ಭಾಷೆಯಲ್ಲಿ ಕಾಣಿಸಿಕೊಳ್ಳಲಿಲ್ಲ.

ಉದಾ : ತೊಲ್ಕಾಪ್ಪಿಯರ್ ಮತ್ತು

ನನ್ನೂಲಾರ್‌ರವರ ಕಾಲ		ಆಧುನಿಕ ಕಾಲ
ಅವನ್ ಅರಸನ್ ಅಲ್ಲನ್	→	ಅವನ್ ಅರಸನಲ್ಲ
ಅವಳ್ ಅರಸಿ ಅಲ್ಲಳ್	→	ಅವಳ್ ಅರಸಿಯಲ್ಲ
ಅವರ್‌ಗಳ್ ಮಾಣವರ್‌ಗಳ್ ಅಲ್ಲರ್	→	ಅವರ್‌ಗಳ್ ಮಾಣವರ್ ಅಲ್ಲ
ಅದು ಪುಲಿ ಅನ್ರು	→	ಅದು ಪುಲಿಯಲ್ಲ
ಅವೈ ಪುಲಿ ಅಲ್ಲ	→	ಅವೈ ಪುಲಿಯಲ್ಲ

ಪದ ಪರಿವರ್ತನೆಗಳು :

ಸಾಮಾನ್ಯವಾಗಿ ಭಾಷೆಯ ಪದಗಳ ಸಂಖ್ಯೆಯಲ್ಲಿ ಉಂಟಾಗುವ ಪರಿವರ್ತನೆಗಳು ಪದ ಪರಿವರ್ತನೆಗಳು.

೧) 'ಯಾಣರ್', 'ಪಕಟು' ಮುಂತಾದ ಪದಗಳು ಪ್ರಾಚೀನಕಾಲದ ತಮಿಳು ಭಾಷೆಯಲ್ಲಿದ್ದವು. ಆಧುನಿಕ ತಮಿಳು ಭಾಷೆಯಲ್ಲಿ ಇವು ಲೋಪವಾಗಿವೆ.

೨) ಸಂಘ ಕಾಲದ ತಮಿಳಿನಲ್ಲಿ 'ಚರಿತಂ', 'ಸಂಘಂ' ಮುಂತಾದ ಪದಗಳು ಬಳಸಲಾಗಿಲ್ಲ. ಆದರೆ ಮಧ್ಯಕಾಲದ ತಮಿಳಿನಲ್ಲಿ ಇವೆರಡೂ ಬಳಸಲಾಗಿವೆ.

೩) ಆಧುನಿಕಕಾಲದ ತಮಿಳಿನಲ್ಲಿ ಕಾಣಿಸಿಕೊಳ್ಳುವ 'ವಾರಿಯಂ', 'ಒನ್ರಿಯಂ', 'ವೇಟ್ಪಾಳರ್' ಮುಂತಾದ ಪದಗಳು ಸಂಘ ಕಾಲದ ತಮಿಳಿನಲ್ಲೂ ಮಧ್ಯ ಕಾಲದ ತಮಿಳಿನಲ್ಲೂ ಬಳಕೆಯಲ್ಲಿಲ್ಲ.

ಅರ್ಥಾತ್ಮಕ ಮಟ್ಟದಲ್ಲಾಗುವ ಪರಿವರ್ತನೆಗಳು :

ಕಾಲಾನಂತರದಲ್ಲಿ ಪದದ ಅರ್ಥದಲ್ಲಿ ಉಂಟಾಗುವ ಮಾರ್ಪಾಡುಗಳನ್ನೇ 'ಅರ್ಥ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಿವರ್ತನೆ' ಎನ್ನುತ್ತಾರೆ.

೧) 'ಕವಲೈ' ಎನ್ನುವ ಪದ ಪ್ರಾಚೀನಕಾಲದ ತಮಿಳಿನಲ್ಲಿ 'ಕವಲು ರಸ್ತೆ', 'ಕಳವಳ' ಎಂಬ ಅರ್ಥಗಳಲ್ಲಿ ಬಳಸಲಾಗಿತ್ತು. ಇಂದು ಅದು 'ಕಳವಳ' ಎಂಬ ಒಂದೇ ಅರ್ಥದಲ್ಲಿ ಬಳಸಲಾಗುತ್ತದೆ.

೨) 'ಪೋರ್' ಎಂಬುದು 'ಹುಲ್ಲಿನ ಬಣವೆ'ಯನ್ನೂ 'ಯುದ್ಧ'ವನ್ನೂ ಪ್ರಾಚೀನ ತಮಿಳಿನಲ್ಲಿ ಗುರುತಿಸಿತ್ತು. ಇಂದು 'ಯುದ್ಧ' ಎಂಬ ಒಂದೇ ಅರ್ಥದಲ್ಲಿ ಬಳಕೆಯಲ್ಲಿದೆ.

೩) ಸಂಘ ಕಾಲದ ತಮಿಳಿನಲ್ಲಿ 'ಮನೈ' ಎಂಬುದು 'ಮನೆ' ಎನ್ನುವ ಅರ್ಥದಲ್ಲಿ ಬಳಸಲಾಗಿದೆ. ಇಂದು ಇದು 'ಮನೆಕಟ್ಟುವ ಸ್ಥಳ' ವನ್ನು ಗುರುತಿಸುತ್ತದೆ.

೪) ಸಂಘ ಕಾಲದ ಭಾಷೆಯಲ್ಲಿ 'ಕಳಿಪ್ಪು' ಎಂಬುದು ಕಳ್ಳುಂಡು ಸಂತೋಷ ಪಡುವುದನ್ನು ಅರ್ಥೈಸುತ್ತದೆ. ಇಂದು ಅದು ಸಾಧಾರಣವಾಗಿ ಮನಸ್ಸು ಸಂತೋಷ ಪಡುವುದನ್ನು ಸೂಚಿಸುತ್ತದೆ.

೫) ಚಿನ್ನ, ಬೆಳ್ಳಿ, ಕಬ್ಬಿಣ ಮುಂತಾದ ಲೋಹಗಳನ್ನು ಗುರುತಿಸುವ ಪದವಾಗಿ 'ಪೊನ್' ಎನ್ನುವ ಪದ ಸಂಘ ಕಾಲದಲ್ಲಿ ಕಾಣಿಸಿಕೊಂಡಿದೆ. ಆದರೆ ಇಂದು ಇದು ಚಿನ್ನವನ್ನು ಮಾತ್ರ ಸೂಚಿಸುತ್ತದೆ.

೬) ಹಾಲಿನ ತುಪ್ಪವನ್ನೂ, ಎಳ್ಳಿನ ತುಪ್ಪವನ್ನೂ ಸೂಚಿಸಿದ 'ನೆಯ್' ಎನ್ನುವ ಪದ ಇಂದು ಹಾಲಿನ ತುಪ್ಪವನ್ನು ಮಾತ್ರ ಸೂಚಿಸುವುದನ್ನು ನೋಡಬಹುದು.

ಮೇಲಿನ ವಿವರಣೆಗಳಿಂದ ಒಂದು ಭಾಷೆಯ ಚರಿತ್ರೆ ಎಂಬುದು ಬರಹ ಭಾಷೆಯ ಚರಿತ್ರೆ ಮಾತ್ರವಲ್ಲ ಎಂಬುದನ್ನೂ ಬರಹ ಭಾಷೆಯ ಚರಿತ್ರೆ, ಬಾಹ್ಯ ಚರಿತ್ರೆ, ಆಂತರಿಕ ಚರಿತ್ರೆಯೆಂದು ಎರಡು ವಿಧವಾಗುತ್ತದೆ ಎಂಬುದನ್ನೂ ಆಂತರಿಕ ಚರಿತ್ರೆಯನ್ನು ಎರಡು ಬಗೆಯಲ್ಲಿ ಅಧ್ಯಯನ ಮಾಡಬಹುದು ಎಂಬುದನ್ನೂ ಭಾಷೆಯಲ್ಲಿ ಪರಿವರ್ತನೆಗಳು ಭಾಷೆಯ ನಾಲ್ಕು ಮಟ್ಟಗಳಲ್ಲೂ ಕಾಣಿಸಿಕೊಳ್ಳುತ್ತವೆಯೆಂಬುದನ್ನೂ ಸ್ಪಷ್ಟವಾಗಿ ತಿಳಿದುಕೊಳ್ಳಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೬. ಗುಹಾ ಶಾಸನಗಳ ತಮಿಳು ಭಾಷೆ

ಬರಹ ರೂಪದಲ್ಲಿ ಕಂಡುಬರುವ ದಾಖಲೆಗಳಲ್ಲಿ ಮೊಟ್ಟಮೊದಲನೆಯದು ಶಾಸನಗಳು ಎಂಬುದಕ್ಕೆ ಹಲವಾರು ಆಧಾರಗಳಿವೆ. ತಮಿಳು ಭಾಷೆಯ ಚರಿತ್ರೆಯನ್ನು ನಿರ್ಧರಿಸಲಿಕ್ಕೆ ಉಪಯೋಗವಾಗುವ ಪುರಾವೆಗಳಲ್ಲಿ ಬಹಳ ಮುಖ್ಯವಾದದ್ದು ಶಾಸನಗಳು. ಪಾಂಡ್ಯ ನಾಡಿನಲ್ಲಿ ದೊರೆತ ಶಾಸನಗಳನ್ನು ಅಧ್ಯಯನ ಮಾಡಿದ ಕೆ. ವಿ. ಸುಬ್ರಮಣ್ಯ ಅಯ್ಯರ್ ಎಂಬುವರು ಆ ಶಾಸನಗಳ ಭಾಷೆ ತಮಿಳು ಭಾಷೆ ಎಂದಿದ್ದಾರೆ. ಆ ಶಾಸನಗಳ ಭಾಷೆ ತಮಿಳು ಎಂಬುದಕ್ಕೆ ಅವರು ಎರಡು ಮುಖ್ಯ ಕಾರಣಗಳನ್ನು ಎತ್ತಿ ಹೇಳಿದ್ದಾರೆ.

1) ಶಾಸನದ ಭಾಷೆಯಲ್ಲಿ ಘೋಷ ಮಹಾಪ್ರಾಣ ಅಕ್ಷರಗಳು ಇಲ್ಲದಿರುವುದು.
2) ತಮಿಳು ಭಾಷೆಯ ವಿಶೇಷ ಅಕ್ಷರಗಳಾದ ಟ, ಳ, ಱ, ನ (n) ಮುಂತಾದುವು ಶಾಸನದಲ್ಲಿ ಬಳಸಲಾಗಿರುವುದು.

ಈ ಎರಡು ಕಾರಣಗಳಿಂದ ಆ ಶಾಸನದ ಭಾಷೆಗಳು ತಮಿಳು ಭಾಷೆಯೇ ಎಂದು ಸಮರ್ಥಿಸಿದ ಅವರು, ಅವು ಬ್ರಾಹ್ಮೀ ಅಕ್ಷರದಲ್ಲಿ ಬರೆಯಲ್ಪಟ್ಟಿರುವುದನ್ನೂ ಗುರುತಿಸಿದ್ದಾರೆ.

10824

ಸಧ್ಯಕ್ಕೆ 76 ಶಾಸನಗಳು ದೊರೆತಿವೆ. ಇವುಗಳಲ್ಲಿ ಕೆಲವು 'ತೊಲ್ಕಾಪ್ಪಿಯಂ'ಕ್ಕೆ ಹಿಂದಿನ ಕಾಲದ ಶಾಸನಗಳಾಗಿ ಇರಬಹುದು ಎಂಬುದು ವಿದ್ವಾಂಸರ ಅಭಿಪ್ರಾಯ. ಇದಕ್ಕೆ ಕೆಳಕಂಡ ಕಾರಣಗಳನ್ನು ವಿದ್ವಾಂಸರು ಎತ್ತಿ ಹೇಳುತ್ತಾರೆ.

1) ಶಾಸನದ ಭಾಷೆಯಲ್ಲಿ ಕಂಡುಬರುವ ವ್ಯಂಜನಗಳ ಮೇಲೆ ಬಿಂದುಗಳಿರಲಿಲ್ಲ. ಆದರೆ ತೊಲ್ಕಾಪ್ಪಿಯರ್ ವ್ಯಂಜನಗಳ ಸ್ವಭಾವ ಬಿಂದುಗಳೊಂದಿಗೆ ಬರುವುದು ಎಂದು ಸ್ಪಷ್ಟಪಡಿಸಿದ್ದಾರೆ.
2) ಶಾಸನದ ಭಾಷೆಯಲ್ಲಿ ಪ್ರತಿಯೊಂದು ಧ್ವನಿಗೂ ಒಂದೊಂದು ಅಕ್ಷರಗಳು ಇರಲಿಲ್ಲ. ಆದರೆ ತೊಲ್ಕಾಪ್ಪಿಯರ್ ಒಂದೊಂದು ಧ್ವನಿಗೂ ಒಂದೊಂದು ಅಕ್ಷರವಿರುವುದನ್ನು ಎತ್ತಿ ಹೇಳಿದ್ದಾರೆ.
3) ಶಾಸನದ ಭಾಷೆಯಲ್ಲಿ ಹ್ರಸ್ವ ಸ್ವರಗಳಾದ 'ಎ' ಕಾರ 'ಒ' ಕಾರಗಳಿಗೆ ಪ್ರತ್ಯೇಕ ಅಕ್ಷರಗಳಿಲ್ಲ. ಆದರೆ ತೊಲ್ಕಾಪ್ಪಿಯರು 'ಎ' ಕಾರ 'ಒ' ಕಾರಗಳೂ ವ್ಯಂಜನಗಳಂತೆಯೇ ಬಿಂದುಗಳನ್ನು ಪಡೆದುಕೊಂಡು ಬರುತ್ತವೆ ಎಂದು ವಿವರಿಸಿದ್ದಾರೆ.

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಅಕ್ಷರಗಳ ಸ್ವರೂಪಗಳು :

ತಮಿಳು ಧ್ವನಿಗಳಿಗೆ ಬ್ರಾಹ್ಮೀ ಅಕ್ಷರಗಳನ್ನು ತಮಿಳು ಬ್ರಾಹ್ಮೀ ಶಾಸನಗಳಲ್ಲಿ ಬಳಸಿಕೊಂಡಿದ್ದಾರೆ. ಆ ರೀತಿ ಬಳಸಿಕೊಳ್ಳುವಾಗ ಘೋಷಧ್ವನಿಗಳು, ವಿಸರ್ಗ ಧ್ವನಿಗಳು, ಊಷ್ಮ ಧ್ವನಿಗಳು, ಮಹಾಪ್ರಾಣ ಧ್ವನಿಗಳು, ಮುಂತಾದವುಗಳನ್ನು ಬಳಸಿಕೊಳ್ಳಲಿಲ್ಲ. ಬ್ರಾಹ್ಮೀ ಭಾಷೆಯಲ್ಲಿ ಇಲ್ಲದೆ ಇರುವ ತಮಿಳು ಭಾಷೆಯಲ್ಲಿ ಮಾತ್ರವೇ ಇರುವ ೞ, ಳ, ಱ, ನ ಮುಂತಾದ ಧ್ವನಿಗಳನ್ನು ಉಪಯೋಗಿಸಿದ್ದಾರೆ. ಪ್ರತಿಯೊಂದು ವ್ಯಂಜನ ಧ್ವನಿಗೂ ಪ್ರತಿಯೊಂದು ಅಕ್ಷರವನ್ನು ಬಳಸಿದ್ದಾರೆ.

ಶಾಸನದ ಧ್ವನಿಗಳು :

ಈ ಕೆಳಕಂಡ ಧ್ವನಿಗಳು ಶಾಸನದ ಭಾಷೆಯಲ್ಲಿ ಕಂಡು ಬರುತ್ತವೆ.

ಸ್ವರಗಳು : ಅ, ಆ, ಇ, ಈ, ಉ, ಊ, ಎ, ಏ, ಐ, ಒ, ಓ.
ವ್ಯಂಜನಗಳು : ಕ, ಙ, ಚ, ಞ, ಟ, ಣ, ತ, ನ(n),
ಪ, ಮ, ಯ, ರ, ಲ, ವ, ೞ, ಳ, ಱ, ನ(ṉ).

ಇವುಗಳೊಂದಿಗೆ ಸ್ವೀಕರಣ ಪದಗಳಲ್ಲಿ 'ಸ' ವೂ ಪ್ರಾಕೃತ ಪದಗಳಲ್ಲಿ ಧ, ಥ, ಮುಂತಾದ ಧ್ವನಿಗಳೂ ಬರುತ್ತವೆ.

ಧ್ವನಿಮಾಗಳು :

1) ಸ್ವರಗಳು : ಶಾಸನದ ಭಾಷೆಯಲ್ಲಿ ಹತ್ತು ಸ್ವರ ಧ್ವನಿಮಾಗಳು ಮಾತ್ರ ಇವೆ :

ಇ, ಈ ಉ, ಊ
ಎ, ಏ ಒ, ಓ
ಅ, ಆ

2) ವ್ಯಂಜನಗಳು : ಹದಿನೈದು ವ್ಯಂಜನಗಳು ಮಾತ್ರ ಶಾಸನದ ಭಾಷೆಯಲ್ಲಿ ಧ್ವನಿಮಾಗಳಾಗಿವೆ.

ಪ	ತ	ಱ	ಟ	ಚ	ಕ
ಮ	ನ(n)	—	ಣ	—	—
—	—	ಲ	ಳ	—	—
—	ವ	—	—	ಯ	—
—	—	—	ೞ	—	—
—	—	ರ	—	—	—

ಇವುಗಳೊಂದಿಗೆ 'ಸ' ಕಾರ 'ಧ' ಕಾರಗಳೂ ಧ್ವನಿಮಾಗಳಾಗಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧ್ವನಿಮಾಗಳ ವಿತರಣೆ :

1) ಸ್ವರ ಧ್ವನಿಮಾಗಳು :

'ಐ' ಕಾರವನ್ನು ಬಿಟ್ಟು ಉಳಿದ ಎಲ್ಲಾ ಸ್ವರ ಧ್ವನಿಮಾಗಳೂ ಪದದ ಆರಂಭದಲ್ಲಿ ಬರುತ್ತವೆ. 'ಐ' ಕಾರ ಕೆಲವೊಮ್ಮೆ ಶಾಸನದ ತಮಿಳಿನಲ್ಲಿ 'ಅ' ಕಾರವಾಗಿ ಬರುವುದನ್ನು ನೋಡಬಹುದು

'ಈ', 'ಎ', 'ಒ' ಮುಂತಾದ ಸ್ವರ ಧ್ವನಿಮಾಗಳು ಪದದ ಅಂತ್ಯದಲ್ಲಿ ಬರುವುದಿಲ್ಲ. ಅನೇಕ ಸ್ವರ ಯುಗ್ಮಗಳು ಕಂಡುಬರುವುದು ತಮಿಳು ಬ್ರಾಹ್ಮೀ ಶಾಸನಗಳ ಒಂದು ವಿಶಿಷ್ಟತೆ. ಶಾಸನದ ಭಾಷೆಯಲ್ಲಿ ಹದಿನಾಲ್ಕು ವಿಧವಾದ ಸ್ವರ ಯುಗ್ಮಗಳು ಕಂಡು ಬರುತ್ತವೆ. ಅವು

ಆಅ, ಈಇ, ಊಉ, ಅಅ, ಅಊ, ಆಇ, ಇಇ,

ಇಒ, ಉಅ, ಉಇ, ಉಉ, ಎಇ, ಐಅ, ಐಉ ಎಂಬುವು.

ತೊಲ್ಕಾಪ್ಪಿಯರ್ ಸ್ವರ ಯುಗ್ಮಗಳನ್ನು ಕುರಿತು ಹೇಳುವಾಗ ಪದ್ಯದಲ್ಲಿ ರಾಗ ಇಳಿಮುಖವಾದಾಗ ಅದನ್ನು ತುಂಬಲು ಪದದ ಆದಿ, ಅಂತ್ಯ, ಮಧ್ಯ ಸ್ಥಾನಗಳಲ್ಲಿ ಸ್ವರಗಳು ಎಳೆಯಲ್ಪಡುತ್ತವೆ ಎಂದೂ ಹಾಗೆ ಸ್ವರಗಳನ್ನು ಎಳೆಯುವಾಗ ದೀರ್ಘ ಸ್ವರದ ಪಕ್ಕದಲ್ಲಿ ಅದರ ಹ್ರಸ್ವ ಸ್ವರವನ್ನೇ ಬಳಸಬೇಕು ಎಂದೂ ಹೇಳಿದ್ದಾರೆ. ಇವುಗಳೊಂದಿಗೆ ಎರಡು ಪದಗಳಲ್ಲಿ ಮೂರು ಸ್ವರಗಳು ಸೇರಿ ಬರುವುದನ್ನು ಶಾಸನದ ಭಾಷೆಯಲ್ಲಿ ನೋಡಬಹುದು.

ಉದಾ : ಇರವಿಇಅ

ಎಲಾಅಅದನ್

2) ವ್ಯಂಜನ ಧ್ವನಿಮಾಗಳು :

ಶಾಸನದ ಭಾಷೆಯಲ್ಲಿ ಕ, ಚ, ತ, ನ, ಪ, ಮ, ಯ, ವ—ಮುಂತಾದ ಎಂಟು ವ್ಯಂಜನಗಳು ಪದದ ಆದಿಯಲ್ಲಿ ಬರುತ್ತವೆ. 'ಯ' ಕಾರ 'ಆ' ಕಾರದೊಂದಿಗೆ ಮಾತ್ರ ಬರುತ್ತದೆ. 'ಚ' ಕಾರ ಆರಂಭದಲ್ಲಿ 'ಅ', 'ಐ' ಎಂಬ ಎರಡು ಸ್ವರಗಳನ್ನು ಬಿಟ್ಟು ಉಳಿದ ಎಲ್ಲಾ ಸ್ವರಗಳೊಂದಿಗೆಯೂ ಬರುತ್ತದೆ.

ಶಾಸನದ ಭಾಷೆಯ ವಿಶಿಷ್ಟ ಧ್ವನಿಮಾ ಪರಿವರ್ತನೆಗಳು :

1) ಸ್ವರ ಧ್ವನಿಮಾ ಪರಿವರ್ತನೆಗಳು :

1) ಸಾಹಿತ್ಯಗಳಲ್ಲಿ 'ಇ' ಕಾರವಾಗಿ ಬರುವುದೆಲ್ಲ ಶಾಸನ ಭಾಷೆಯಲ್ಲಿ 'ಎ' ಕಾರವಾಗಿ ಬರುತ್ತವೆ.

3

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಇ > ಎ

ಇಳ > ಎಳ

2) ಅಂತೆಯೇ 'ಒ' ಕಾರ 'ಉ' ಕಾರವಾಗುತ್ತದೆ

ಉದಾ : ಒ > ಉ

ಕೊಡು > ಕುಡು

3) ಕೆಲವೊಮ್ಮೆ ದೀರ್ಘ ಸ್ವರಗಳು ಹ್ರಸ್ವ ಸ್ವರಕ್ಕೆ ಬದಲಾಗಿ ಬರುತ್ತವೆ.

ಉದಾ : ಉ > ಊ

ಉಪ್ಪು > ಊಪು

2) ವ್ಯಂಜನ ಧ್ವನಿಮಾ ಪರಿವರ್ತನೆಗಳು :

1) ಶಾಸನದ ಭಾಷೆಯು ವಿಶಿಷ್ಟ ಪರಿವರ್ತನೆಗಳಲ್ಲಿ ಒಂದು ಸಜಾತೀಯ ಒತ್ತಕ್ಷರಗಳಿಗೆ ಬದಲಾಗಿ ಒಂದು ಅಕ್ಷರವನ್ನೇ ಬಳಸಲಾಗಿದೆ.

ಉದಾ : ಟ್ಟ > ಟ

ಕುಟ್ಟುಪ್ಪಿತ್ತ > ಕುಟುಪಿತ

ಪರು ಕೊಟ್ಟೂರ್ > ಪರುಕೊಟೂರ್

ತ್ತ > ತ

ಕುಟ್ಟುಪ್ಪಿತ್ತ > ಕುಟುಪಿತ

ಪ್ಪ > ಪ

ಉಪ್ಪು > ಊಪು

2) ಅನುನಾಸಿಕ ಧ್ವನಿಗಳು ಕೆಲವೊಮ್ಮೆ ಲೋಪ ಹೊಂದುತ್ತವೆ.

ಉದಾ : ಮ > ϕ

ಪೆರುಂಪರಣನ್ > ಪೆರುಪರಣನ್

ಞ > ϕ

ಕಾಞ್ಚನಂ > ಕಾಚನಂ

ನ > ϕ

ಆನ್ತೈ > ಆತೈ

3) ಪದದ ಮಧ್ಯದಲ್ಲಿ ಬರುವ 'ಕ' ಕಾರ ಕೆಲವು ಕಡೆ ಮಾಯವಾಗುತ್ತದೆ.

ಉದಾ : ಕ > ϕ

ಮಕನ್ > ಮಾನ್

ಉಪಾಚಕನ್ > ಉಪಾಚನ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

4) 'ಣ' ಕಾರ 'ಳ' ಕಾರವಾಗಿ ಪರಿವರ್ತನೆ ಹೊಂದುತ್ತದೆ.

ಉದಾ : ಣ > ಳ

ವೇಣ್ > ವೇಳ್

5) 'ಱ' ಕಾರ 'ಟ' ಕಾರವಾಗುತ್ತದೆ.

ಉದಾ : ಱ > ಟ

ಕಱು > ಕಟು

ಎಱುಪ್ಪು > ಎಟುಪ್ಪು

6) ಕೆಲವು ಪದಗಳಲ್ಲಿ 'ಯು' ಕಾರ 'ಇ' ಕಾರವಾಗಿ ಬರುತ್ತದೆ.

ಉದಾ : ಯು > ಇ

ಕನಿಯ್ > ಕನಿಇ

ಚೆಯು > ಚೆಇಅ

ನಾಯ್ > ನಾಇ

ಆಕೃತಿಮಾ :

ಸಂಖ್ಯಾ ವಾಚಕಗಳು :

ಮೂನ್ಱು, ನಾಲ್ಲು. ಏಱು, ನೂಱು ಮುಂತಾದ ಸಂಖ್ಯಾವಾಚಕಗಳು ಶಾಸನದ ಭಾಷೆಯಲ್ಲಿ ಬರುತ್ತವೆ.

ಸರ್ವನಾಮಗಳು :

'ನಾಮ್' ಎಂಬುದು ಉತ್ತಮ ಪುರುಷ ಬಹುವಚನ ಸರ್ವನಾಮವಾಗಿಯೂ 'ಎಂ' ಎಂಬುದು ಅದರ ಪರಿವರ್ತಿತ ವಿಭಕ್ತಿ ರೂಪವಾಗಿಯೂ ಬರುತ್ತವೆ. 'ಅವನ್' ಎಂಬುದು ಪ್ರಥಮ ಪುರುಷ ಪುಲ್ಲಿಂಗ ಏಕವಚನ ನಾ ು ರೂಪವಾಗಿಯೂ 'ಅವರ್' ಎಂಬುದು ಆದರ ಪರಿವರ್ತಿತ ವಿಭಕ್ತಿ ರೂಪವಾಗಿಯೂ ಬಳಸಲ್ಪಡುತ್ತವೆ. 'ಇದು' ಎಂಬುದು ಪ್ರಥಮ ಪುರುಷ ನಪುಂಸಕಲಿಂಗ ಏಕವಚನ ನಾಮರೂಪವಾಗಿಯೂ 'ಇವೈ' ಎಂಬುದು ಆದರ ಬಹುವಚನ ನಾಮರೂಪವಾಗಿಯೂ ಬಂದಿವೆ. 'ಉವನ್' ಎನ್ನುವ ಮಧ್ಯವರ್ತಿ ಸರ್ವನಾಮ ಶಾಸನದ ಭಾಷೆಯ ಒಂದು ವಿಶಿಷ್ಟ ಅಂಶವಾಗಿ ಕಂಡು ಬರುತ್ತದೆ.

ವಿಭಕ್ತಿ ಪ್ರತ್ಯಯಗಳು :

'ಅ' ಎಂಬುದು ಷಷ್ಠಿ ವಿಭಕ್ತಿ ಪ್ರತ್ಯಯವಾಗಿ ಬರುವುದು ಶಾಸನದ ಭಾಷೆಯ ಒಂದು ವಿಶಿಷ್ಟ ಗುಣ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಇರವಿಯು ಮಗಳ್ (ಇರವಿಯು ಮಕ್ಕಳ್)

'ಕು' ಮತ್ತು 'ಕೆ' ಎಂಬ ಪ್ರತ್ಯಯಗಳು ಶಾಸನದ ಭಾಷೆಯಲ್ಲಿ ಚತುರ್ಥಿ ವಿಭಕ್ತಿ ಪ್ರತ್ಯಯಗಳಾಗಿ ಬಂದಿವೆ.

ಉದಾ : " ಎನುಮಿನಾಡು ಕುಟುಮಾರ್ ಪಿಜಂದ ಕುವತಿ ಇದೆನ್ನು ಚಿರುಪಾವೀಲ್ ಇಳೈಯಾರ್ ಸೆಯ್ದ ಆದಿದಾನಂ ಮಾದವಿರ್ಕೆ "

ಕ್ರಿಯಾಪದಗಳು :

ಆಟು, ಆಗು, ಕುಯಿಲ್, ಕೊಡು, ಚೆಯ್, ತಾ ಮುಂತಾದ ಕ್ರಿಯಾಪದಗಳು ಶಾಸನದ ಭಾಷೆಯಲ್ಲಿ ಬರುತ್ತವೆ. ಪಿ, ವಿ ಸೇರಿದ ಕಾರಕವಾಚಕ ಕ್ರಿಯಾ ಪದಗಳು ಶಾಸನದ ಭಾಷೆಯಲ್ಲಿ ಹೆಚ್ಚಾಗಿ ಬಳಸಲ್ಪಟ್ಟಿವೆ.

ಉದಾ ; ಅರುಪಿತ । ಆರುವಿತ
ಪಣ್ವಿತ್ತಾನ್

ಅಪೂರ್ಣ ಕ್ರಿಯಾ ಪದಗಳಲ್ಲಿ ಸಂಬಂಧ ಸೂಚಕ ಕೃದಂತ ಹೆಚ್ಚಾಗಿ ಬಳಸಲ್ಪಟ್ಟಿದೆ.

ಉದಾ : ಅರುತ್ತ
ಆಗಿಯು

ಕಾಲಸೂಚಕ ಪ್ರತ್ಯಯಗಳಲ್ಲಿ ಭೂತಕಾಲ ಪ್ರತ್ಯಯಗಳು ಮಾತ್ರವೇ ಉಪಯೋಗವಾಗಿವೆ.

ಉದಾ : ಅರುತ್ತ
ಕೊಡಿಯೋರ್

'ಇ' ಕಾರ ಭೂತಕಾಲ ಪ್ರತ್ಯಯವಾಗಿ ಬರುತ್ತದೆ. ಈ ಪ್ರತ್ಯಯವನ್ನು ಸಂಘಕಾಲದ ತಮಿಳು ಭಾಷೆಯಲ್ಲೂ ನೋಡಬಹುದು.

ಉದಾ ; ಮುಯಲ್ > ಮುಯಲಿ

ಪೂರ್ವಕಾಲಿಕ ಕ್ರಿಯಾ ಸೂಚಕ ಕೃದಂತ ಈ ಭಾಷೆಯಲ್ಲಿ ಬಳಸಲ್ಪಟ್ಟಿದೆ.

ಉದಾ : ಚೆಯು
ಪಟಿಕ್ಕ
ಆಗ

ಪೂರ್ಣ ಕ್ರಿಯಾ ಪದಗಳಿಗೆ ಬದಲಾಗಿ ಕೃನ್ನಾಮ ಉಪಯೋಗವಾಗುತ್ತದೆ.

ಉದಾ : ಕೊಡುಪ್ಪಿತ್ತಾನ್ **'one who cause to be given'**

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ವಾಕ್ಯ ರಚನೆ :

ತಮಿಳು ಬ್ರಾಹ್ಮೀ ಶಾಸನಗಳಲ್ಲಿ ಒಂದು ವ್ಯಕ್ತಿಯು ಹೆಸರನ್ನು ಗುರುತಿಸುವಾಗ ವಿಶಿಷ್ಟತೆಯನ್ನು ಗುರುತಿಸುವ ಪದ ಮೊದಲೂ ರೂಢನಾಮ ಅನಂತರವೂ ಬಂದಿದೆ. ಇದು ತಮಿಳು ಭಾಷೆಗೆ ಅನುಗುಣವಾಗಿರುತ್ತದೆ.

ಉದಾ : ವೇಣ್ ಕೋಸಿಬನ್
ಕಣಿಯನ್ ಇಯಕ್ಕುವನ್
ಉಪಾಸನ್ ಪೋತ್ತಾನ್

ನಾಡು ಮತ್ತು ಊರಿನ ಹೆಸರಿನೊಂದಿಗೆ ವ್ಯಕ್ತಿಯು ಹೆಸರುಗಳು ಬರುತ್ತವೆ.

ಉದಾ : ಏರುಕ್ಕೊಟ್ಟೂರ್ ಈಟಿಕ್ಕುಡುಂಬಿಗನ್ ಪೋಲಾಯನ

ಗುಣ ವಿಶೇಷಗಳೊಂದಿಗೆ ರೂಢನಾಮಗಳು ಬರುತ್ತವೆ.

ಉದಾ : ನೆಡುಂಚಾತ್ತನ್
ಇಳಂಚಾರಿಕನ್

ಈಗಿನ ತಮಿಳು ಭಾಷೆಯು ಪ್ರಯೋಗದಲ್ಲಿ ಉಪಯೋಗವಾಗದೆ ಇರುವ ಕೆಲವು ಹಳೆಯ ಪದಗಳನ್ನು ಶಾಸನದ ಭಾಷೆಯಲ್ಲಿ ನೋಡಬಹುದು.

ಉದಾ : ಪಾಟಿ
ವೇಳ್
ಚಾತ್ತನ್
ಚೆಯ್ಯಿಯ

ತಮಿಳು ಬ್ರಾಹ್ಮೀ ಶಾಸಗಳನ ಭಾಷೆ :

ಒಂದು ನಾಡಿನ ಚರಿತ್ರೆಯನ್ನು ತಿಳಿದುಕೊಳ್ಳುವುದಕ್ಕೆ ಶಾಸನಗಳು ಉಪಯೋಗವಾಗುವಂತೆಯೇ ಒಂದು ಭಾಷೆಯು ಚರಿತ್ರೆಯನ್ನೂ ತಿಳಿದುಕೊಳ್ಳಲಿಕ್ಕೆ ಶಾಸನಗಳು ಉಪಯೋಗವಾಗುತ್ತವೆ. ಹಲವಾರು ಹಳೆಯ ಭಾಷೆಗಳು ಶಾಸನಗಳನ್ನೇ ಆಧಾರವಾಗಿಟ್ಟುಕೊಂಡಿವೆ. ಅವುಗಳಲ್ಲಿ ಗುರುತಿಸಬಹುದಾದವು ಈಜಿಪ್ಟ್, ಹಿಟ್ಟೈಟ್ ಮತ್ತು ಫಿನಿಸಿಯನ್ ಮುಂತಾದವು. ಈ ಭಾಷೆಗಳ ಶಾಸನಗಳು ಚರಿತ್ರೆಯನ್ನು ತಿಳಿಸುವುದರೊಂದಿಗೆ ಆಯಾಯ ಭಾಷೆಗಳ ಸ್ವರೂಪವನ್ನೂ ಗುರುತಿಸುತ್ತವೆ. ಹಲವಾರು ಶತಮಾನಗಳಲ್ಲಿ ಬರೆಯಲ್ಪಟ್ಟ ಈ ಶಾಸನಗಳು ಒಂದು ಭಾಷೆ ಬೆಳೆದು ಬಂದಿರುವ ರೀತಿ ಮತ್ತು ಆ ಭಾಷೆಯಲ್ಲಿ ಕಾಣುವ ಬದಲಾವಣೆ ಮುಂತಾದುವುಗಳನ್ನು ಶಿಳಿಯಾಗಿ ವ್ಯಕ್ತಪಡಿಸುತ್ತವೆ. ತಮಿಳು ಭಾಷೆಯಲ್ಲಿ ಸಾವಿರಾರು ಶಾಸನಗಳು ಇವೆ. ಇವು ಬಹು ಪುರಾತನ ಬ್ರಾಹ್ಮೀ ಶಾಸನಗಳು. ಇವುಗಳು ಕ್ರಿ. ಪೂ. 3 ನೆಯ ಶತಮಾನಕ್ಕೆ ಸೇರಿದವು. ಕಿಟ್‌ವಳ್ಳೈವು, ಮಾಙುಕಾಲ್‌ತಲೈ, ಆನೈಮಲೈ. ಅಟಿಗರ್ ಮಲೈ, ಮೇಟ್ಟುಪ್ಪಟ್ಟಿ, ಮುತ್ತುಪ್ಪಟ್ಟಿ, ಚಿತ್ತನ್ನವಾಸಲ್, ತಿರುಪಾಧವೂರ್. ವಿಕ್ಕಿರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂಗಳಂ, ತಿರುಪ್ಪರಂಗುನ್ಱಂ, ಮಾಂಗುಳಂ, ಕರುಗಾಲಕ್ಕುಡಿ, ಪುಗಟೂರ್, ಆರಸಲೂರ್, ಮಾಮಂಡೂರ ಮುಂತಾದ ಸ್ಥಳಗಳಿಂದ ಈ ಶಾಸನಗಳು ದೊರೆತಿವೆ.

ಕ್ರಿ. ಪೂ. 3 ನೆಯ ಶತಮಾನದಲ್ಲಿ ಆಶೋಕನ ಕಾಲದಲ್ಲಿ ದಕ್ಷಿಣ ಭಾರತದಲ್ಲೂ ಲಂಕೆಯಲ್ಲೂ ಬೌದ್ಧಮತ ಹರಡಿತ್ತು. ಜೈನ ಮತ್ತು ಬೌದ್ಧ ಮತಗಳು ಹರಡುವುದಕ್ಕೆ ಕಾರಣವಾಗಿದ್ದವರು ಆಯಾಯ ಮತಗಳನ್ನು ಸೇರಿದ ಮತಾವಲಂಬಿಗಳು. ಇವರು ಎಲ್ಲೆಲ್ಲಿ ಹೋದರೂ ಅಲ್ಲಲ್ಲಿ ಬಳಕೆಯಲ್ಲಿದ್ದ ಭಾಷೆಗಳನ್ನು ಕಲಿತು ಆ ಭಾಷೆಗಳ ಮೂಲಕ ತಮ್ಮ ತಮ್ಮ ಮತ ತತ್ತ್ವಗಳನ್ನು ಪ್ರಚಾರ ಮಾಡಿದರು. ಬೌದ್ಧ ಮತ್ತು ಜೈನ ಮತಗಳು ತಮಿಳು ನಾಡಿನಲ್ಲೂ ಹರಡಿದವು. ಅವರ ಮತಕೃತಿಗಳು ಪ್ರಾಕೃತ ಭಾಷೆಯಲ್ಲಿದ್ದರೂ ಬರೆಯುವುದಕ್ಕೆ ಬ್ರಾಹ್ಮೀಲಿಪಿಗಳನ್ನು ಬಳಸಿಕೊಂಡರು. ಆ ಕಾರಣದಿಂದ ಬ್ರಾಹ್ಮೀಲಿಪಿಗಳು ತಮಿಳು ನಾಡಿನಲ್ಲೂ ಬಳಸಲಾದವು. ತಮಿಳು ನಾಡಿನಲ್ಲಿ ಬೌದ್ಧ ಮತ್ತು ಜೈನ ಮತಾವಲಂಬಿಗಳು ವಾಸಮಾಡಿದ ಸ್ಥಳಗಳು ಮುಖ್ಯವಾಗಿ ಗುಹೆಗಳು. ಆದುದರಿಂದ ಗುಹೆಗಳಲ್ಲಿ ದೊರೆತಿರುವ ಶಾಸನಗಳು ಬ್ರಾಹ್ಮೀ ಅಕ್ಷರಗಳಿಂದ ಕೂಡಿವೆ. ಆದರೆ ಆದರ ಭಾಷೆ ತಮಿಳು ಭಾಷೆ. ಈ ಶಾಸನಗಳಲ್ಲಿ ಕೆಲವು, ಪದಗಳಿಂದ ಪದ ಪುಂಜಗಳಿಂದ ಆದವು. ಈ ಶಾಸನಗಳು ಗುಹೆಗಳಲ್ಲಿ ದೊರೆತ ಕಾರಣದಿಂದ ಗುಹೆ ಶಾಸನಗಳೆಂದು (ಗುಹಾಶಾಸನ) ಕರೆಯಬಹುದು. ಈ ಶಾಸನಗಳಲ್ಲಿ ತಮಿಳು ಭಾಷೆಯನ್ನು ಬ್ರಾಹ್ಮೀ ಅಕ್ಷರಗಳಿಂದ ಬರೆದಿರುವುದರಿಂದ ತಮಿಳು ಬ್ರಾಹ್ಮೀಶಾಸನಗಳೆಂದೂ ಕರೆಯುತ್ತಾರೆ.

ತಮಿಳುನಾಡಿನ ಬಹಳ ಪ್ರಾಚೀನವಾದ ಶಾಸನಗಳು ಬ್ರಾಹ್ಮೀ ಅಕ್ಷರದಲ್ಲಿವೆ. ೨೦ ನೇ ಶತಮಾನದಲ್ಲಿ ಪಾಂಡ್ಯನಾಡಿನಲ್ಲಿ ಹಲವು ಗುಹಾ ಶಾಸನಗಳನ್ನು ಕಂಡು ಹಿಡಿದರು. ಈ ಶಾಸನಗಳು ಶ್ರೀಲಂಕೆಯ ಶಾಸನಗಳಂತೆಯೇ ಇವೆ. ಈ ಎರಡು ನಾಡಿನಲ್ಲೂ ದೊರೆತಿರುವ ಶಾಸನಗಳು ಬ್ರಾಹ್ಮೀ ಲಿಪಿಯಲ್ಲೇ ಇವೆ. 1903 ರಲ್ಲಿ ವೆಂಗೋಬರಾವ್ ಎಂಬುವರು ಕೀಟ್ ವಳ್ಳಿವು ಎಂಬ ಊರಲ್ಲಿ ಬ್ರಾಹ್ಮೀ ಶಾಸನವನ್ನು ಕಂಡು ಹಿಡಿದರು. 1906ರಲ್ಲಿ ಕೆಮ್ಬೈಡ್ ಎನ್ನುವ ಆಂಗ್ಲರು ಮಜುಕಾಲ್‌ತಲೈ ಎಂಬ ಊರಲ್ಲಿ ಇದ್ದ ಶಾಸನವನ್ನು ಬೆಳಕಿಗೆ ತಂದರು. ಕೆ. ವಿ. ಸುಬ್ರಮಣ್ಯ ಅಯ್ಯರ್ ಎಂಬುವರು 12 ಸ್ಥಳಗಳಲ್ಲಿ ದೊರೆತ 30 ಶಾಸನಗಳನ್ನು ಅಧ್ಯಯನ ಮಾಡಿದರು. ಈಗ 21 ಸ್ಥಳಗಳಿಂದ 71 ಬ್ರಾಹ್ಮೀ ಶಾಸನಗಳು ದೊರೆತಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೭. ತೊಲ್ಕಾಪಿಯರ್ ಕಾಲದ ತಮಿಳು ಭಾಷೆ

ತೊಲ್ಕಾಪ್ಪಿಯರ್ ಕಾಲದ ತಮಿಳು ಭಾಷೆಯನ್ನು ತಿಳಿದುಕೊಳ್ಳುವುದಕ್ಕೆ ನೆರವಾಗುವುದು ಅವರ 'ತೊಲ್ಕಾಪ್ಪಿಯಂ' ಎಂಬ ಲಕ್ಷಣ ಗ್ರಂಥ. ಇದು ತಮಿಳಿನ ಪ್ರಾಚೀನವಾದ ಮೊಟ್ಟಮೊದಲ ಲಕ್ಷಣ ಗ್ರಂಥ. ಇದರ ಕಾಲ ಕ್ರಿ.ಪೂ. 3ನೇ ಶತಮಾನ.

ತೊಲ್ಕಾಪ್ಪಿಯಂನಲ್ಲಿ ಬರುವ ಸಾಮಾನ್ಯ ಅಂಶಗಳು :

I. ತೊಲ್ಕಾಪ್ಪಿಯರ್ ತಮ್ಮ ಗ್ರಂಥದಲ್ಲಿ ಸೂಚಿಸಿರುವ ಕೆಲವು ಪದಗಳು ಸಂಘ ಕಾಲದಲ್ಲಿ ಬಳಸಲಾಗಲಿಲ್ಲ.

1. 'ತೋನ್', 'ಪೇನ್' ಮುಂತಾದುವುಗಳನ್ನು ಅಂಕಿತ ನಾಮ ಅಥವಾ ವ್ಯಕ್ತಿವಾಚಕ ನಾಮಪದಗಳಾಗಿ ತೊಲ್ಕಾಪ್ಪಿಯರ್ ಗುರುತಿಸಿದ್ದಾರೆ. ಈ ಪದಗಳು ಸಂಘಕಾಲದ ಸಾಹಿತ್ಯಗಳಲ್ಲಿ ಕಾಣಿಸಿಕೊಳ್ಳಲಿಲ್ಲ.

2. 'ಅಟ್', 'ಪುಟಿನ್' ಮುಂತಾದ ಪದಗಳನ್ನು ತೊಲ್ಕಾಪ್ಪಿಯರ್‌ರವರು ತಮ್ಮ ಕೃತಿಯಲ್ಲಿ ಬಳಸಿದ್ದಾರೆ. ಆದರೆ ಇವುಗಳು ಸಂಘಕಾಲದ ಸಾಹಿತ್ಯಗಳಲ್ಲಿ ಕಂಡು ಬರಲಿಲ್ಲ.

3. 'ನಮ್' ಎನ್ನುವ ಆಗಮವನ್ನು 'ಎಲ್ಲಾರ್' ಎನ್ನುವ ನಾಮಪದದೊಂದಿಗೆ ತೊಲ್ಕಾಪ್ಪಿಯರ್‌ರವರು ತಮ್ಮ ಗ್ರಂಥದಲ್ಲಿ ಬಳಸಿದ್ದಾರೆ. ಆದರೆ ಈ ಆಗಮ ಸಂಘಕಾಲದ ಭಾಷೆಯಲ್ಲಿ 'ಎಲ್ಲಾರ್' ಎಂಬುದರೊಂದಿಗೆ ಬಳಸಲಾಗಲಿಲ್ಲ.

4. ತೊಲ್ಕಾಪ್ಪಿಯರ್ ಗುರುತಿಸುವ 'ಲ್ಕ್', 'ಣ್ಟ' ಮುಂತಾದ ವ್ಯಂಜನ ಯುಗ್ಮಗಳು ಸಂಘಕಾಲದ ಸಾಹಿತ್ಯಗಳಲ್ಲಿ ಬರಲಿಲ್ಲ.

II. ತೊಲ್ಕಾಪ್ಪಿಯರ್ ತಮ್ಮ ಗ್ರಂಥದಲ್ಲಿ ಸೂಚಿಸಿರುವ ಕೆಲವು ವಿಧಿಗಳು ಸಂಘ ಕಾಲದ ಭಾಷೆಗೆ ಅನ್ವಯವಾಗಲಿಲ್ಲ.

1. 'ತಾ', 'ವಾ' ಮುಂತಾದ ಕ್ರಿಯಾಪದಗಳು ಉತ್ತಮ ಪುರುಷ ಮತ್ತು ಮಧ್ಯಮ ಪುರುಷ ಸರ್ವನಾಮಗಳಿಗೆ ಬರಬೇಕು ಎಂಬುದು ತೊಲ್ಕಾಪ್ಪಿಯರ್‌ರವರ ನಿಯಮ. ಆದರೆ ಸಂಘಕಾಲದ ಸಾಹಿತ್ಯಗಳಲ್ಲಿ ಇವುಗಳು ಪ್ರಥಮ ಪುರುಷ ನಾಮ ಪದಗಳ ಜೊತೆಯಲ್ಲಿಯೂ ಬಂದಿವೆ.

ಉದಾ : 1. ತೂಡಿಲ್ ಪೇಟ್ಟುವನ್ ವಾಂಗ ವಾರಾದು
2. ಪೆರುವಿರಲ್ ಅಮರರುಕ್ಕು ವೆನ್ನಿತಂದ

ಮೇಲಿನ ಉದಾಹರಣೆಗಳಲ್ಲಿ 'ತಾ' ಮತ್ತು 'ವಾ' ಎಂಬ ಕ್ರಿಯಾಪದಗಳು 'ತೂಡಿಲ್ ಪೇಟ್ಟುವನ್,' 'ಪೆರುವಿರಲ್ ಅಮರರ್' ಎಂಬ ಪ್ರಥಮ ಪುರುಷ ನಾಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪದಗಳೊಂದಿಗೆ ಬಳಸಲಾಗಿರುವುದನ್ನು ನೋಡಬಹುದು.

2. ಇಚ್ಛಾರ್ಥಕ ಕ್ರಿಯಾಪದಗಳು ಪ್ರಥಮ ಪುರುಷಕ್ಕೆ ಮಾತ್ರ ಬರಬೇಕು ಎಂಬುದು ತೊಲ್ಕಾಪ್ಪಿಯರ್‌ರವರ ವಿಧಿ. ಆದರೆ ಸಂಘಕಾಲದ ಸಾಹಿತ್ಯಗಳಲ್ಲಿ ಮಧ್ಯಮ ಪುರುಷ ನಾಮ ಪದಗಳಿಗೂ ಬಂದಿರುವುದನ್ನು ನೋಡಬಹುದು.

ಉದಾ : ನೀಯೋ ನಡುಕಿನ್ಟಿ ನಲೀಯರೋ ಅತ್ತೈ

ಇಲ್ಲಿ, 'ನಲೀಯರೋ' ಎಂಬ ಇಚ್ಛಾರ್ಥಕ ಕ್ರಿಯಾಪದ 'ನೀಯೋ' ಎಂಬ ಮಧ್ಯಮ ಪುರುಷ ನಾಮಪದಕ್ಕೆ ಕ್ರಿಯೆಯಾಗಿ ಬಂದಿರುವುದನ್ನು ನೋಡಬಹುದು.

III. ತೊಲ್ಕಾಪ್ಪಿಯರ್ ಕಾಲದಲ್ಲಿ 'ಇನ್' ಎನ್ನುವ ಆಗಮ ಪಂಚಮಿ ವಿಭಕ್ತಿ ಪ್ರತ್ಯಯಕ್ಕೆ ಮೊದಲು ಬರುವುದಿಲ್ಲ. ಆದರೆ ಕೆಳಕಂಡ ಉದಾಹರಣೆಗಳಲ್ಲಿ ಈ ಆಗಮ ಪಂಚಮಿ ವಿಭಕ್ತಿ ಪ್ರತ್ಯಯಕ್ಕೆ ಮೊದಲು ಬಳಸಲಾಗಿದೆ.

ಉದಾ : 1. ಅಳವಿನಿಲ್ ತಿರಿಯಾದು
2. ಅಜಿತ್ತಿನಿಲ್ ಕಂಡು
3. ಅನ್ಬಿನಿಲ್

IV. ತೊಲ್ಕಾಪ್ಪಿಯರ್‌ರವರ ವಿಧಿಗೆ ವಿರುದ್ಧವಾಗಿ 'ತನ್', 'ತಮ್' ಎಂಬ ಆಗಮಗಳು ಪ್ರಥಮ ಪುರುಷ ನಾಮಪದದೊಂದಿಗೆ ಬಂದಿವೆ.

ಉದಾ ; 1. ಕಾದಲರ್ ತಮಕ್ಕೇ
2, ಕಾದಲನ್ ತನ್ನೈಯೋ
3. ಮಾಧವಿ ತನ್ನೊಡು

V. ತೊಲ್ಕಾಪ್ಪಿಯರ್ ತಮ್ಮ ವ್ಯಾಕರಣದಲ್ಲಿ ಗುರುತಿಸಿರುವ ಕೆಲವು ಪದಗಳು ಸಂಘಕಾಲದ ಸಾಹಿತ್ಯಗಳಲ್ಲಿ ಕಾಣಿಸಿಕೊಳ್ಳದೆ ಮಧ್ಯಕಾಲದ ಸಾಹಿತ್ಯಗಳಲ್ಲಿ ಬಳಸಲ್ಪಟ್ಟಿರುವುದನ್ನು ಕಾಣಬಹುದು. ತೊಲ್ಕಾಪ್ಪಿಯರ್‌ರವರ ನಿಯಮದ ಪ್ರಕಾರ ಪಲ್ಲವೈ, ಪಲ್ಲವಜ್ಜೈ, ಅವ್ವೈಯುಜ್ಜಿ ಮುಂತಾದ ಪದಗಳನ್ನು ಬಳಸಬಹುದು. ಆದರೆ ಇವುಗಳಲ್ಲಿ ಯಾವ ಪದವೂ ಸಂಘಕಾಲದ ಸಾಹಿತ್ಯಗಳಲ್ಲಿ ಬಳಸಲಾಗದೆ ಹೋದರೂ ಅನಂತರ ರಚಿತವಾದ 'ತೇವಾರಂ' ನಲ್ಲಿ 'ಅವ್ವೈಯುಜ್ಜೈ' ಎನ್ನುವ ಪದ ಮಾತ್ರ ಬಳಸಲಾಗಿದೆ.

VI. 'ಮೂನ್ರು' ಎನ್ನುವ ಸಂಖ್ಯಾವಾಚಕದ ವಿಶೇಷಣ ರೂಪಗಳು 'ಮು' ಮತ್ತು 'ಮೂ' ಎಂಬುವು. 'ಮು' ಎನ್ನುವುದು ವ್ಯಂಜನವನ್ನು ಆದಿಯಾಗಿರುವ ಪದದ ಹಿಂದೆಯೂ 'ಮೂ' ಎನ್ನುವುದು ಸ್ವರವನ್ನು ಆದಿಯಾಗಿ ಉಳ್ಳ ಪದದ ಹಿಂದೆಯೂ ಬರಬೇಕು ಎಂಬುದು ತೊಲ್ಕಾಪ್ಪಿಯರ್‌ರವರ ವಿಧಿ. ಆದರೆ ತೊಲ್ಕಾಪ್ಪಿಯರ್‌ರವರೇ ತಮ್ಮ ಗ್ರಂಥದಲ್ಲಿ 'ಮು' ಎಂಬುದನ್ನು ಸ್ವರದ ಹಿಂದೆ ಬಳಸಿದ್ದಾರೆ.

ತೊಲ್ಕಾಪ್ಪಿಯರ್ ಕಾಲದ ಭಾಷೆಗೂ ಸಂಘಕಾಲದ ಭಾಷೆಗೂ ಇಷ್ಟೊಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯತ್ಯಾಸಗಳಿದ್ದರೂ ತೊಲ್ಕಾಪ್ಪಿಯರ್‌ರವರ ಕಾಲವನ್ನು ಕ್ರಿ. ಪೂ. 3ನೇ ಶತಮಾನ ವೆಂದು ಊಹಿಸಬಹುದು.

ತೊಲ್ಕಾಪ್ಪಿಯರ್ ಕಾಲದ ತಮಿಳು ಭಾಷೆಯಲ್ಲಿ ಧ್ವನಿಮಾಗಳು :

ಸ್ವರ ಧ್ವನಿಮಾಗಳು

ಓಷ್ಠ್ಯ	ಅಗೋಳ				ಗೋಳ	
ನಾಲಿಗೆ	ಅಗ್ರಸ್ವರ		ಮಧ್ಯಸ್ವರ		ಪಶ್ಚಸ್ವರ	
ಕಾಲಮಾನ	ಹ್ರಸ್ವ	ದೀರ್ಘ	ಹ್ರಸ್ವ	ದೀರ್ಘ	ಹ್ರಸ್ವ	ದೀರ್ಘ
ಸಂವೃತ ಸ್ವರಗಳು	ಇ	ಈ			ಉ	ಊ
	ಎ	ಏ			ಒ	ಓ
ವಿವೃತ ಸ್ವರಗಳು			ಅ	ಆ		

ವ್ಯಂಜನ ಧ್ವನಿಮಾನಗಳು :

	ದ್ವಿಓಷ್ಠ್ಯ	ದಂತ್ಯೋಷ್ಠ್ಯ	ದಂತ್ಯ	ವರ್ತ್ಸ್ಯದಲ್ಲಿ ಮೂರ್ಧನ್ಯ	ಮೂರ್ಧನ್ಯವಿಲ್ಲದ ವರ್ತ್ಸ್ಯ	ತಾಲವ್ಯ	ಕಂಠ್ಯ
ಸ್ಪರ್ಶ	ಪ		ತ	ಟ	ಱ	ಚ	ಕ
ಅನುನಾಸಿಕ	ಮ		ನ(n)	ಣ	ನ(n̲)	ಞ	ಙ
ಅರ್ಧಸ್ವರ		ವ				ಯ	
ಅಧಿಕಸ್ಪರ್ಶದ ಪಾರ್ಶ್ವಿಕ				ಲ			
ಅಲ್ಪ ಸ್ಪರ್ಶದ ಪಾರ್ಶ್ವಿಕ				ಳ			
ಸಂಘರ್ಷ ಅಥವಾ ತಾಡಿತ					ರ ಱ		

ಸ್ವರ ಧ್ವನಿಮಾಗಳು :

ತೊಲ್ಕಾಪ್ಪಿಯರ್ ಕಾಲದ ತಮಿಳು ಭಾಷೆಯಲ್ಲಿ ಹತ್ತು ಧ್ವನಿಮಾಗಳಿವೆ. 'ಐ' 'ಔ' ಎಂಬ ಧ್ವನಿಗಳನ್ನು ತೊಲ್ಕಾಪ್ಪಿಯರ್ ಸಂಧ್ಯಕ್ಷರಗಳಾಗಿ ಪರಿಗಣಿಸಿದ್ದಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯಂಜ್ಯನ ಧ್ವನಿಮಾಗಳು :

ತೊಲ್ಕಾಪ್ಪಿಯರ್ ಕಾಲದ ತಮಿಳು ಭಾಷೆಯು ವ್ಯಂಜನಗಳಲ್ಲಿ 'ನ' (n) ಕಾರವನ್ನು ಹೊರತುಪಡಿಸಿ ಉಳಿದ ಹದಿನೇಳು ಧ್ವನಿಗಳೂ ಧ್ವನಿಮಾಗಳಾಗಿವೆ. ವ್ಯವಸ್ಥೆಯ ನೀಟುಗಾರಿಕೆಯ ಪ್ರಕಾರ ಈ 'ನ' ಕಾರವನ್ನೂ ಧ್ವನಿಮಾ ಎನ್ನಬಹುದು ಅಂದರೆ ತಮಿಳಿನಲ್ಲಿ ಆರು ಸ್ಪರ್ಶ ಧ್ವನಿಗಳು ಇರುವುದರಿಂದ ಅವುಗಳಿಗೆ ಅನುಗುಣವಾಗಿ ಆರು ಅನುನಾಸಿಕ ಧ್ವನಿಗಳು ಇರಬೇಕು ಎಂದರ್ಥ. ಹಾಗೆ ನೋಡಿದರೆ 'ನ' ಕಾರವೂ ಧ್ವನಿಮಾವಾಗುತ್ತದೆ. ಆದರೆ ಈ 'ನ' ಕಾರದ ಇತಿಹಾಸವನ್ನು ನೋಡಿದರೆ ಇದನ್ನು 'ಮ' ಕಾರದ ಉಪಧ್ವನಿ ಎಂದು ಹೇಳಬಹುದು.

ತೊಲ್ಕಾಪ್ಪಿಯರ್ ಕಾಲದ ಧ್ವನಿಮಾಗಳನ್ನು ಕುರಿತು ಕೆಲವು ವಿವರಣೆಗಳು :

ಟ' ಮತ್ತು 'ಣ' ಕಾರಗಳು ;

ಈ ಧ್ವನಿಗಳು ಜಿಹ್ವೆಯ ಅಗ್ರ ಭಾಗವನ್ನು ಕಠಿಣ ತಾಲುವಿನ ಆರಂಭ ಭಾಗದತ್ತ ಚಾಚಿದಾಗ ಅವು ಪರಸ್ಪರ ಕೂಡಿ ಉತ್ಪಾದಿತವಾಗುತ್ತವೆ. ಈ ದ್ವನಿಗಳ ಉಚ್ಚಾರದಲ್ಲಿ ನಾಲಿಗೆಯ ಅಗ್ರ ಭಾಗದ ಫಲಕ ಉಚ್ಚಾರಣಾಕರಣವಾಗಿಯೂ ಕಠಿಣ ತಾಲುವಿನ ಆರಂಭ ಭಾಗವಾದ ವರ್ತ್ಸ್ಯ ಉಚ್ಚಾರಣಾ ಸ್ಥಾನವಾಗಿಯೂ ಕಾಣಿಸಿಕೊಳ್ಳುತ್ತವೆ. ಹೀಗೆ ವರ್ತ್ಸ್ಯ ಭಾಗದಲ್ಲಿ ಈ ಧ್ವನಿಗಳು ಉತ್ಪಾದನೆಯಾಗುವುದರಿಂದ ಇವುಗಳನ್ನು ವರ್ತ್ಸ್ಯ ಧ್ವನಿಗಳು ಎನ್ನಬಹುದು.

ಈಗಿನ ಭಾಷಾ ವಿಜ್ಞಾನಿಗಳು ಮೇಲೆ ಹೇಳಿದ ಎರಡು ಧ್ವನಿಗಳನ್ನೂ ಮೂರ್ಧನ್ಯ ಧ್ವನಿಗಳೆನ್ನುತ್ತಾರೆ. ಆದರೆ ಇವುಗಳನ್ನು ಮೂರ್ಧನ್ಯ ಧ್ವನಿಗಳೆಂಬುದಕ್ಕೆ ತೊಲ್ಕಾಪ್ಪಿಯಂನಲ್ಲಿ ಯಾವ ಆಧಾರವೂ ಇಲ್ಲ.

ಇವುಗಳನ್ನು ವರ್ತ್ಸ್ಯ ಧ್ವನಿಗಳೆಂದು ಪರಿಗಣಿಸಿದರೆ 'ಱ' ಕಾರಕ್ಕೂ 'ಟ'ಕಾರಕ್ಕೂ ಏನು ವ್ಯತ್ಯಾಸ ಎಂಬ ಪ್ರಶ್ನೆ ಉದ್ಭವಿಸುತ್ತದೆ. 'ಱ' ಕಾರವನ್ನು ಜಿಹ್ವೆಯ ತುದಿಯ ಧ್ವನಿ ಎಂದೂ 'ಟ' ಕಾರವನ್ನು ಜಿಹ್ವಾ ಫಲಕ ಧ್ವನಿ ಎಂದೂ ಹೇಳಬಹುದು.

'ಱ' ಮತ್ತು 'ನ' ಕಾರಗಳು :

ತೊಲ್ಕಾಪ್ಪಿಯರ್ ಈ ಧ್ವನಿಗಳ ಉತ್ಪಾದನೆಯನ್ನು ವಿವರಿಸುವಾಗ 'ಅಣರಿ' ಎಂಬ ಪದವನ್ನು ಬಳಸಿದ್ದಾರೆ. ಈ ಪದಕ್ಕೆ ವಿವರಣೆ ನೀಡುವ ವ್ಯಾಖ್ಯಾನಕಾರರು 'ಜಿಹ್ವೆಯ ಅಗ್ರ ಭಾಗ ಮೇಲಕ್ಕೆ ಹೋಗಿ ತಾಲುವನ್ನು ಸ್ಪರ್ಶಿಸುವುದು' ಎಂದು ವಿವರಣೆ ನೀಡುತ್ತಾರೆ. ಈ ವಿವರಣೆಯ ಪ್ರಕಾರ ನೋಡಿದರೆ ಇವುಗಳು ಮೂರ್ಧನ್ಯ ಧ್ವನಿಗಳಾಗುತ್ತವೆ. ಈ ವಿವರಣೆ, 'ಱ' ಕಾರ 'ನ' ಕಾರಗಳು ವರ್ತ್ಸ್ಯ ಕಂಪನ ಧ್ವನಿ ಎಂದು ಹೇಳುವ ಇಂದಿನ ಭಾಷಾ ವಿಜ್ಞಾನಿಗಳ ಅಭಿಪ್ರಾಯಕ್ಕೆ ವಿರುದ್ಧವಾಗುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಂದಿನ ಭಾಷಾ ವಿಜ್ಞಾನಿಗಳ ಅಭಿಪ್ರಾಯ ಹೇಗಿದ್ದರೂ 'ಜ' ಕಾರ ತೊಲ್ಕಾಪ್ಪಿಯರ್ ಕಾಲದಲ್ಲಿ ಸ್ಪರ್ಶಧ್ವನಿಯಾಗಿ ಪರಿಗಣಿಸಲ್ಪಟ್ಟಿದೆ ಎಂಬುದು ಅರ್ಥವಾಗುತ್ತದೆ. ಕ್ರಿ.ಪೂ. 3ನೇ ಶತಮಾನದ ಬ್ರಾಹ್ಮೀಶಾಸನದಲ್ಲಿ 'ಚ' ಕಾರವನ್ನು ಸ್ಪರ್ಶಧ್ವನಿಯಾಗಿ ಬಳಸಿರುವುದು ತೊಲ್ಕಾಪ್ಪಿಯರ್‌ರವರ ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ.

'ರ' ಮತ್ತು 'ಟ' ಕಾರಗಳು :

ಈ ಧ್ವನಿಗಳನ್ನು ವಿವರಿಸುವಾಗಲೂ ತೊಲ್ಕಾಪ್ಪಿಯರ್ 'ಅಣರಿ' ಎಂಬ ಪದವನ್ನು ಬಳಸಿರುವುದರಿಂದ ಇವುಗಳನ್ನೂ ಮೂರ್ಧನ್ಯ ಧ್ವನಿಗಳು ಎಂದು ವ್ಯಾಖ್ಯಾನಕಾರರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಇಂದು, ಜಿಹ್ವೆಯ ತುದಿ ತಾಲುವನ್ನು ಬಿಟ್ಟು ಬಿಟ್ಟು ಸ್ಪರ್ಶಿಸುವಾಗ ಈ ಧ್ವನಿಗಳು ಉತ್ಪತ್ತಿಯಾಗುತ್ತವೆ ಎಂದು ಭಾಷಾ ವಿಜ್ಞಾನಿಗಳು ವಿವರಣೆ ನೀಡಿ ಇವುಗಳನ್ನು ತಾಡಿತ ಧ್ವನಿಗಳು ಅಥವಾ ಊಷ್ಮಧ್ವನಿಗಳು ಎಂದು ಕರೆಯುತ್ತಾರೆ.

'ಲ' ಮತ್ತು 'ಳ' ಕಾರಗಳು :

ತೊಲ್ಕಾಪ್ಪಿಯರ್ ಈ ಧ್ವನಿಗಳ ಉತ್ಪಾದನೆಯನ್ನು ವಿವರಿಸುವಾಗ 'ಹಲ್ಲಿನ ಒಸಡು ಭಾಗವನ್ನು ನಾಲಿಗೆಯ ತುದಿ ಸ್ಪರ್ಶಿಸುವಾಗ ಉತ್ಪತ್ತಿಯಾಗುತ್ತವೆ' ಎಂದು ವಿವರಿಸಿದ್ದಾರೆ. ಇವುಗಳಲ್ಲಿ 'ಲ'ಕಾರ ತೀವ್ರ ಸ್ಪರ್ಶದಿಂದಲೂ 'ಳ'ಕಾರ ಅಂತರಾಯುಕ ಸ್ಪರ್ಶದಿಂದಲೂ ಉತ್ಪತ್ತಿಯಾಗುತ್ತವೆ; 'ಳ' ಕಾರಕಿಂತ 'ಲ' ಕಾರ ದಂತದ ಪಕ್ಕದಲ್ಲೇ ಉಚ್ಚಾರಣೆಯಾಗುತ್ತದೆ; ಹಾಗೂ ನಾಲಿಗೆಯ ಪಲಕದಲ್ಲಿ ಬಿಗುವ್ರಿ ಇರುತ್ತದೆ. ಆದರೆ ಇಂದಿನ ಭಾಷಾ ವಿಜ್ಞಾನಿಗಳು ಈ ಎರಡು ಧ್ವನಿಗಳ ಉತ್ಪತ್ತಿಗೆ ಬೇರೆ ಬೇರೆ ಉಚ್ಚಾರಣಾ ಸ್ಥಾನವನ್ನು ಗುರುತಿಸುತ್ತಾರೆ.

ಧ್ವನಿಮಾಗಳ ವಿತರಣೆ ;

ಧ್ವನಿಮಾಗಳ ವಿತರಣೆಯನ್ನು ವಿವರಿಸುವ ಮೊಟ್ಟಮೊದಲ ಪ್ರಾಚೀನ ಗ್ರಂಥ 'ತೊಲ್ಕಾಪ್ಪಿಯಂ' ಎಂಬ ಲಕ್ಷಣ ಗ್ರಂಥವೇ. ಇದು ಪದದ ಆದಿ, ಮಧ್ಯ, ಅಂತ್ಯ ಮುಂತಾದ ಸ್ಥಾನಗಳಲ್ಲಿ ಬರುವ ಧ್ವನಿಮಾಗಳನ್ನೂ ಸಂಯುಕ್ತ ಅಕ್ಷರಗಳ ಸ್ವರೂಪವನ್ನೂ ವಿವರಿಸುತ್ತದೆ.

ಆದಿಯಲ್ಲಿ ಬರುವ ಧ್ವನಿಮಾಗಳು :

ಸ್ವರಗಳಲ್ಲಿ ಎಲ್ಲಾ ಸ್ವರಗಳೂ ಪದದ ಆದಿಯಲ್ಲಿ ಬರುತ್ತವೆ.

ಉದಾ : ಅಟ್ಟೈ, ಆಟ್ಟೈ, ಇಲೈ, ಈಯಂ, ಉಳೈ, ಊರ್, ಎಟು, ಏಣಿ, ಒಳಿ, ಓಟಂ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ವ್ಯಂಜನಗಳು ಸ್ವರಗಳೊಂದಿಗೆ ಸೇರಿ ಪದದ ಆದಿಯಲ್ಲಿ ಬರುತ್ತವೆಯೇ ಹೊರತು ಅವುಗಳು ಮಾತ್ರವೇ ಪದದ ಆದಿಯಲ್ಲಿ ಬರುವುದಿಲ್ಲ. ಹೀಗೆ ವ್ಯಂಜನಗಳು ಸ್ವರಗಳೊಂದಿಗೆ ಸೇರಿ ಗುಣಿತಾಕ್ಷರಗಳಾಗಿ ಪದದ ಆರಂಭದಲ್ಲಿ ಬರುವುದಕ್ಕೆ ಕೆಲವು ನಿಯಮಗಳಿವೆ. ಎಲ್ಲಾ ವ್ಯಂಜನಗಳೂ ಎಲ್ಲಾ ಸ್ವರಗಳೊಂದಿಗೆಯೂ ಆದಿಯಲ್ಲಿ ಬರುವುದಿಲ್ಲ. ಕೆಲವು ಸ್ವರಗಳೊಂದಿಗೆ ಕೆಲವು ವ್ಯಂಜನಗಳು ಆದಿಯಲ್ಲಿ ಬರುತ್ತವೆ; ಕೆಲವು ಸ್ವರಗಳೊಂದಿಗೆ ಬರುವುದಿಲ್ಲ. ಆದ್ದರಿಂದ ತೊಲ್ಕಾಪ್ಪಿಯರು ಯಾವ ಯಾವ ವ್ಯಂಜನಗಳು ಯಾವ ಯಾವ ಸ್ವರಗಳೊಂದಿಗೆ ಆದಿಯಲ್ಲಿ ಬರುತ್ತವೆ ಎಂಬುದನ್ನು ತಮ್ಮ ಲಕ್ಷಣ ಗ್ರಂಥದಲ್ಲಿ ಸ್ಪಷ್ಟವಾಗಿ ವಿವರಿಸಿದ್ದಾರೆ. ತೊಲ್ಕಾಪ್ಪಿಯರು ವ್ಯಂಜನಗಳಲ್ಲಿ ಕ್, ತ್, ನ್(n), ಪ್, ಮ್ ಎಂಬ ಐದು ಮಾತ್ರವೇ ಎಲ್ಲಾ ಸ್ವರಗಳೊಂದಿಗೆಯೂ ಪದದ ಆದಿಯಲ್ಲಿ ಬರಬಹುದು ಎಂದಿದ್ದಾರೆ.

ಉದಾ ;	ಕ್	ತ್	ನ್(n)	ಪ್	ಮ್
	ಕಲೈ	ತಂತೈ	ನಂತು	ಪಟ್ಟೈ	ಮಟಿ
	ಕಾರ್	ತಾತಿ	ನಾರೈ	ಪಾರಂ	ಮಾಲೈ
	ಕಿಳಿ	ತಿತ್ತಿ	ನಿಲಂ	ಪಿಟಿ	ಮಿಟಱು
	ಕೀರಿ	ತೀಮ್ಪೈ	ನೀಲಂ	ಪೀಟು	ಮೀಳಿ
	ಕುಟಿ	ತುಣಿ	ನುಕಂ	ಪುಕಟ್	ಮುಕಂ
	ಕೂಟಿ	ತೂಣಿ	ನೂಲ್	ಪೂವು	ಮೂಪ್ಪು
	ಕೆಂಟ್ಟೈ	ತೆಜ್ಜಿ	ನೆಯ್ದಲ್	ಪೆಟ್ಟೈ	ಮೆಲಿವು
	ಕೇಟಿಲ್	ತೇನ್	ನೇಮಿ	ಪೇಟ್ಟೈ	ಮೇನಿ
	ಕೈತ್ತೈ	ತೈಯಲ್	ನೈವಳಂ	ಪೈತಲ್	ಮೈಯಲ್
	ಕೊಂಟಲ್	ತೊಂಟ್ಟೈ	ನೊಚ್ಚಿ	ಪೊನ್	ಮೊಱಿ
	ಕೋಟ್ಟೈ	ತೋಟು	ನೋಕ್ಕಂ	ಪೋತು	ಮೋತ್ತೈ
	ಕೌವೈ	ತೌವೈ	ನೌವಿ	ಪೌವಂ	ಮೌವಲ್

'ಚ' ಕಾರ ಅ, ಐ, ಓ ಎಂಬ ಮೂರು ಸ್ವರಗಳನ್ನು ಬಿಟ್ಟು ಉಳಿದ ಎಲ್ಲಾ ಸ್ವರಗಳೊಂದಿಗೆಯೂ ಪದದ ಆದಿಯಲ್ಲಿ ಬರಬಹುದು ಎಂಬುದು ತೊಲ್ಕಾಪ್ಪಿಯರ್ ರವರ ನಿಯಮ.

ಉದಾ :			
	ಚಾನ್ರು	ಚುರೈ	ಚೇವಲ್
	ಚಿಜ್ಜಿಲ್	ಚೂರಲ್	ಚೊಲ್
	ಚೀರೈ	ಚೆಕ್ಕು	ಚೋಱು

ತೊಲ್ಕಾಪ್ಪಿಯರು 'ಯ' ಕಾರ 'ಆ' ಕಾರದೊಂದಿಗೆ ಮಾತ್ರವೇ ಪದದ ಆದಿಯಲ್ಲಿ ಬರುವುದಾಗಿ ಹೇಳಿದ್ದಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಯಾನೈ
ಯಾಟು
ಯಾವಂ

'ಞ' ಕಾರ ಆ, ಎ, ಒ ಎಂಬ ಮೂರು ಸ್ವರಗಳೊಂದಿಗೆ ಪದದ ಆದಿಯಲ್ಲಿ ಬರುವುದಾಗಿ ತೊಲ್ಕಾಪ್ಪಿಯರ್ ತಮ್ಮ ಲಕ್ಷಣ ಗ್ರಂಥದಲ್ಲಿ ಗುರುತಿಸಿದ್ದಾರೆ.

ಉದಾ : ಞಾಲಂ
ಞೆಂಟು
ಞೊಳ್ಕಿಟ್ಟು

'ವ' ಕಾರ ಎಂಟು ಸ್ವರಗಳೊಂದಿಗೆ ಪದದ ಆದಿಯಲ್ಲಿ ಬರುವುದನ್ನು ತೊಲ್ಕಾಪ್ಪಿಯರ್ ಎತ್ತಿತೋರಿಸಿದ್ದಾರೆ.

ಉದಾ : ವಳ್ಳೈ ವೀಟು ವೈಯಂ
ವಾಳಿ ವೆಳ್ಳಿ ವೌವುದಲ್
ವಿನ್ನೈ ವೇಟ್ಕೈ

ವ್ಯಂಜನಗಳಲ್ಲಿ ಣ, ರ, ಲ, ಳ, ನ($\underline{n}$), ಱ, ಟ ಮುಂತಾದವು ಪದದ ಆದಿಯಲ್ಲಿ ಬರುವುದಿಲ್ಲ ಎಂದು ತೊಲ್ಕಾಪ್ಪಿಯರ್ ತಮ್ಮ ಗ್ರಂಥದಲ್ಲಿ ಹೇಳಿದ್ದಾರೆ.

ಮಧ್ಯದಲ್ಲಿ ಬರುವ ಧ್ವನಿಮಾಗಳು :

ಪದದ ಮಧ್ಯದಲ್ಲಿ ಎಲ್ಲಾ ಧ್ವನಿಮಾಗಳೂ ಬಳಸಲಾಗಿದೆ.

ಅಂತ್ಯದಲ್ಲಿ ಬರುವ ಧ್ವನಿಮಾಗಳು :

'ಸ್ವರಗಳಲ್ಲಿ ಅ, ಆ, ಇ, ಈ, ಉ, ಊ ಎ, ಏ, ಐ, ಒ, ಓ, ಔ ಮುಂತಾದವು ಪದದ ಅಂತ್ಯದಲ್ಲಿ ಬರುತ್ತವೆ.

ಉದಾ : ವಿಳ	ಪುಟು	ತೈ
ಕಾ	ಪೂ	ನೊ
ಕಿಳಿ	ಚೇಎ	ಪೋ
ತೀ	ತೇ	ಕೌ

ವ್ಯಂಜನಗಳಲ್ಲಿ ಕ್, ಚ್, ಟ್, ತ್, ಪ್, ಱ್, ಙ್ ಮುಂತಾದವು ಪದದ ಅಂತ್ಯದಲ್ಲಿ ಬರುವುದಿಲ್ಲ. ಞ್, ಣ್, ನ್($\underline{n}$), ಮ್, ನ್($\underline{n}$) ಎಂಬ ಐದು ಅನುನಾಸಿಕ ಧ್ವನಿಮಾಗಳೂ ಯ್, ರ್, ಲ್, ವ್, ೞ್, ಳ್ ಎಂಬ ಆರು ವ್ಯಂಜನಗಳೂ ಪದದ ಅಂತ್ಯದಲ್ಲಿ ಬರುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಉರಿಞ್ ಪೊನ್(ṉ) ತೆವ್
ಮಞ್ ವೇಯ್ ವೀಟ್
ಪೊರುನ್(n) ವೇರ್ ವೇಳ್
ತಿರುಮ್ ವೇಲ್

ಸಂಯುಕ್ತಾಕ್ಷರಗಳು : ಸಂಯುಕ್ತ ಸ್ವರಗಳು :

ಸಾಮಾನ್ಯವಾಗಿ ಪದದಲ್ಲಿ ಎರಡು ಸ್ವರಗಳು ಒಟ್ಟಿಗೆ ಬರುವುದಿಲ್ಲ. ಆದರೆ ತೊಲ್ಕಾಪ್ಪಿಯರ ಕಾಲದಲ್ಲಿ ಪದಗಳಲ್ಲಿ ಎರಡು ಸ್ವರಗಳು ಒಟ್ಟಿಗೆ ಬಳಸಲಾಗಿವೆ. ಹೀಗೆ ಎರಡು ಸ್ವರಗಳು ಪದದಲ್ಲಿ ಒಟ್ಟಿಗೆ ಬರುವುದನ್ನು ಸಂಯುಕ್ತ ಸ್ವರಗಳು ಎನ್ನುತ್ತಾರೆ. ತೊಲ್ಕಾಪ್ಪಿಯರ್ ಈ ಸಂಯುಕ್ತ ಸ್ವರಗಳನ್ನು ಕುರಿತು ಹೇಳುವಾಗ ಅವು ಪದ್ಯದಲ್ಲಿ ಮಾತ್ರವೇ ಬರುತ್ತವೆ ಎಂದು ಹೇಳಿದ್ದಾರೆ. ತಮಿಳು ಭಾಷೆಯಲ್ಲಿ ಮೂರು ಮಾತ್ರೆಗಳನ್ನು ಒಂದು ಸ್ವರ ಗುರುತಿಸುವುದಿಲ್ಲ. ಪದ್ಯದಲ್ಲಿ ಕೆಲವುಕಡೆ ರಾಗವನ್ನು ಕಾಪಾಡಲು ಕೆಲವು ಸ್ವರಗಳನ್ನು ಮೂರು ಮಾತ್ರೆ ಉಳ್ಳವುಗಳಾಗಿ ಉಚ್ಚರಿಸಬೇಕಾಗುತ್ತದೆ. ಅಂಥ ಸಮಯದಲ್ಲಿ ಪದದಲ್ಲಿ ಬರುವ ದೀರ್ಘ ಸ್ವರದೊಂದಿಗೆ ಅದರ ಹ್ರಸ್ವ ಸ್ವರವನ್ನು ಬರೆದು ಮೂರು ಮಾತ್ರೆಯುಳ್ಳ ಸ್ವರವಾಗಿ ಮಾಡುತ್ತಾರೆ. ಹೀಗೆ ಎರಡು ಮಾತ್ರೆಯ ಸ್ವರವನ್ನು ಮೂರು ಮಾತ್ರೆಯ ಸ್ವರವಾಗಿ ಬದಲಾಯಿಸುವಾಗ ಸಂಯುಕ್ತಸ್ವರಗಳು ಬರುತ್ತವೆ.

ಉದಾ : ತರೀಇ
ಮರೂಉ

ಇಂದಿನ ಭಾಷೆಯಲ್ಲಿ ಸಂಯುಕ್ತ ಸ್ವರಗಳ ನಡುವೆ 'ಯ'ಕಾರ ಅಥವಾ 'ವ'ಕಾರ ಆಗಮವಾಗಿ ಬರುತ್ತವೆ.

ಸಂಯುಕ್ತ ವ್ಯಂಜನಗಳು :

ಪದದ ಮಧ್ಯದಲ್ಲಿ ವ್ಯಂಜನಗಳು ಸೇರಿ ಬರುವ ರೀತಿಯನ್ನು ಸಂಯುಕ್ತ ವ್ಯಂಜನಗಳು ಎನ್ನುತ್ತಾರೆ.

ವ್ಯಂಜನಗಳಲ್ಲಿ ಕ, ಚ, ತ, ಪ ಎಂಬ ನಾಲ್ಕು ವ್ಯಂಜನಗಳು ಸಜಾತಿಯ ವ್ಯಂಜನಗಳೊಂದಿಗೆ ಮಾತ್ರವೇ ಪದದ ಮಧ್ಯದಲ್ಲಿ ಬರುತ್ತವೆ.

ಉದಾ : ಪಾಕ್ಕು ಪೂತ್ತು
ಪೂಚ್ಚು ಮೂಪ್ಪು

ರ, ಟ ಎಂಬ ವ್ಯಂಜನಗಳು ವಿಜಾತೀಯ ವ್ಯಂಜನಗಳೊಂದಿಗೆ ಮಾತ್ರವೇ ಬರುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಪಾರ್ಪ್ಪು
ವಾಟ್ಕು

ಟ, ಱ, ಜ, ಞ, ಣ, ನ(n), ಮ, ನ(ṉ), ಯ, ಲ, ವ, ಳ ಮುಂತಾದ ಹನ್ನೆರಡು ವ್ಯಂಜನಗಳು ಸಜಾತೀಯ ಮತ್ತು ವಿಜಾತೀಯ ವ್ಯಂಜನಗಳೊಂದಿಗೆ ಬರುತ್ತವೆ.

'ಟ' ಕಾರ ಮತ್ತು 'ಱ' ಕಾರಗಳು ಸಜಾತೀಯ ವ್ಯಂಜನಗಳೊಂದಿಗೆ ಕ, ಚ, ಪ, ಮುಂತಾದ ವ್ಯಂಜನಗಳೊಂದಿಗೆಯೂ 'ಲ' ಕಾರ 'ಳ' ಕಾರಗಳು ಸಜಾತೀಯ ವ್ಯಂಜನಗಳೊಂದಿಗೆ ಕ, ಚ, ಪ, ಯ, ವ ಎಂಬ ವ್ಯಂಜನಗಳೊಂದಿಗೆಯೂ ಸೇರಿ ಯುಗ್ಮಗಳಾಗಿ ಬರುತ್ತವೆ.

ಉದಾ : ಟ	ಱ	ಲ	ಳ
ಕಟ್ಕ	ಕಱ್ಕ	ಚೆಲ್ಕ	ಕೊಳ್ಕ
ಕಟ್ಚಿ	ಮುಯಱ್ಚಿ	ವಲ್ಚಿ	ನೀಳ್ಚಿ
ಕಟ್ಪು	ಕಱ್ಪು	ಚೆಲ್ಪು	ಕೊಳ್ಪು
ಪಟ್ಪೈ	ಕೊಱ್ಱಿ	ಕೊಲ್ಯಾನೈ	ವೆಳ್ಯಾಱು
		ಚೆಲ್ವಂ	ಕಳ್ವನ್
		ಎಲ್ಲಿ	ಕಳ್ಳಿ

ಜ, ಣ, ನ(ṉ) ಮುಂತಾದವುಗಳ ಮುಂದೆ ಕ್ರಮವಾಗಿ ಅವುಗಳ ಸಜಾತೀಯ ವ್ಯಂಜನಗಳು ಬರುತ್ತವೆ. ಇವುಗಳಲ್ಲದೆ 'ಜ' ಕಾರದ ಮುಂದೆ 'ಕ' ಕಾರವೂ 'ಣ' ಕಾರ 'ನ' ಕಾರಗಳ ಮುಂದೆ ಅವುಗಳ ಸಮಸ್ಪರ್ಶಿಗಳಲ್ಲದೆ ಕ, ಚ, ಞ, ಪ, ಮ, ಯ, ವ ಮುಂತಾದ ವ್ಯಂಜನಗಳೂ ಸೇರಿ ಯುಗ್ಮಗಳಾಗಿ ಬರುತ್ತವೆ.

ಉದಾ : ಜ	ಣ	
ಕಜ್ಗನ್	ಕಣ್ಟನ್	ಪಣ್ಪು
ಎಜ್ಜಣಂ	ಎಣ್ಕು	ವಣ್ಮೈ
	ವೆಣ್ಚಾಂತು	ಮಣ್ಯಾತು
	ವೆಣ್ಞಾಣ್	ಎಣ್ವಟ್ಟು
		ಮಣ್ಣೈ

ನ(ṉ)		
ಮನ್ಱಂ	ಮೆನ್ಞಾಣ್	ಇನ್ಯಾಟ್
ಪುನ್ಕು	ಅನ್ಬು	ಪುನ್ವರಕು
ಪುನ್ಚೆಯ್	ವನ್ಮೈ	ಕನ್ನಿ

ಞ, ನ(n), ಪ ಎಂಬುವುಗಳ ಮುಂದೆ ಅವುಗಳ ಸಜಾತೀಯ ವ್ಯಂಜನಗಳು ಕ್ರಮವಾಗಿ ಬಂದು ಸೇರುವುದಲ್ಲದೆ 'ಯ' ಕಾರವೂ ಬರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಞ	ನ(n)	ವ
ಕಞ್ಞನ್	ಕನ್ನನ್	ತೆವ್ವಾತು
ಉರಿಞ್ಯಾತು	ಪೊರುನ್ಯಾತು	ಎವ್ವಿ
ಮಞ್ಞಿ	ವನ್ನಿಯಲ್	

'ಮ' ಕಾರದ ಮುಂದೆ ಅದರ ಸಜಾತೀಯ ವ್ಯಂಜನಗಳಲ್ಲದೆ ಪ, ಯ, ವ ಮುಂತಾದ ವ್ಯಂಜನಗಳೂ ಬರುತ್ತವೆ.

ಉದಾ : ಮ

ಕಮ್ಬನ್

ತಿರುಮ್ಯಾತು

ಯ, ರ, ೞ ಮುಂತಾದವುಗಳ ಮುಂದೆ ಕ, ಚ, ತ, ನ, ಪ, ಮ, ವ, ಯ, ಞ ಙ ಮುಂತಾದ ವ್ಯಂಜನಗಳು ಬರುತ್ತವೆ.

ಉದಾ : ಯ,	ರ,	ೞ,
ಆಯ್ಕ	ಆರ್ಕ	ಆೞ್ಕ
ಎಯ್ಚಿಲೈ	ವಾರ್ಚಿಲೈ	ವಾೞ್ಚ್ಚೇರಿ
ಆಯ್ತಲ್	ಆರ್ತಲ್	ಆೞ್ತಲ್
ಆಯ್ನರ್	ಆರ್ನರ್	ಆೞ್ನನ್
ಆಯ್ಪವೈ	ಆರ್ಪವೈ	ಆೞ್ಪವೈ
ಪಾಯ್ಮೞ	ನೇರ್ಮೞ	ಕಿೞ್ಮೞ
ತೆಯ್ವಂ	ಚೇರ್ವತು	ವಾೞ್ವತು
ವೆಯ್ಯರ್	ನೇರ್ಙ್ಕಿೞ್	ವೀೞ್ಯಾನೈ
ಪಾಯ್ಙ್ಕಿೞ	ಪೋರ್ಯಾನೈ	ವಾೞ್ಙಣ್ಣ್

ಆಕೃತಿಮಾ

ನಾಮ ಆಕೃತಿಮಾ :

ಈ ಅಧ್ಯಾಯದಲ್ಲಿ ತಮಿಳು ಭಾಷೆಯ ಹಲವಾರು ಬಗೆಯ ಪದಗಳು ಮತ್ತು ಪ್ರತ್ಯಯಗಳು ಚರ್ಚಿಸಲಾಗುತ್ತವೆ. ತೊಲ್ಕಾಪ್ಪಿಯರು ಪದಗಳನ್ನು ನಾಮಪದಗಳೆಂದೂ ಕ್ರಿಯಾಪದಗಳೆಂದೂ ಎರಡು ಬಗೆಯಾಗಿ ವರ್ಗೀಕರಿಸಿದ್ದಾರೆ.

ನಾಮಪದಗಳು :

ನಾಮಪದಗಳು ಕಾಲಸೂಚಕ ಪ್ರತ್ಯಯಗಳನ್ನು ಹೊಂದದೆ ವಿಭಕ್ತಿ ಪ್ರತ್ಯಯಗಳಿಂದ ಕೂಡಿಬರುವ ಗುಣವುಳ್ಳವು. ಇದರೊಂದಿಗೆ ಅವು ಪುರುಷ, ಲಿಂಗ, ವಚನ ಮುಂತಾದವುಗಳನ್ನೂ ಸೂಚಿಸುತ್ತವೆ. ನಾಮಪದಗಳು ಮಾನವ ನಾಮಪದ ಮತ್ತು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಮಾನವ ನಾಮಪದವೆಂದೂ ಮತ್ತೆ ಇವುಗಳು ಏಕವಚನ ಮತ್ತು ಬಹುವಚನವೆಂದೂ ವಿಭಾಗಿಸಲ್ಪಡುತ್ತವೆ. ಮಾನವ ಏಕವಚನ ನಾಮಪದಗಳು ಪುಲ್ಲಿಂಗವನ್ನೂ ಸ್ತ್ರೀಲಿಂಗವನ್ನೂ ಸೂಚಿಸುತ್ತವೆ. ಆದರೆ ಮಾನವ ಬಹುವಚನ, ಅಮಾನವ ಏಕವಚನ ಮತ್ತು ಬಹುವಚನ ಮುಂತಾದವುಗಳಲ್ಲಿ ಈ ಬಗೆಯ ವಿಂಗಡನೆ ಇಲ್ಲ. ಹೀಗೆ ನಾಮಪದಗಳು ಏಕವಚನ, ಬಹುವಚನ ಎಂಬ ಎರಡು ವಚನಗಳನ್ನೂ ಪುಲ್ಲಿಂಗ, ಸ್ತ್ರೀಲಿಂಗ, ಪುಂಸ್ತ್ರೀಲಿಂಗ, ನಪುಂಸಕಲಿಂಗ ಏಕವಚನ ಮತ್ತು ಬಹುವಚನ ಎಂಬ ಐದು ವಿಧವಾದ ಲಿಂಗ ಭೇದಗಳನ್ನೂ ವ್ಯಕ್ತಪಡಿಸುತ್ತವೆ. ಇವುಗಳನ್ನು ಕೆಳಕಂಡ ವೃಕ್ಷ ಚಿತ್ರದ ಮೂಲಕ ತೋರಿಸಬಹುದು.



ಲಿಂಗಭೇದಗಳನ್ನು ಸೂಚಿಸಲಿಕ್ಕೆ ನಾ ಮ ಪ ದ ಗ ಳು ಲಿಂಗಪ್ರತ್ಯಯಗಳನ್ನು ಹೊಂದಿಬರುತ್ತವೆ.

ಲಿಂಗಪ್ರತ್ಯಯಗಳು :

ಮೇಲೆ ಹೇಳಿದಂತೆ ತಮಿಳಿನ ನಾಮಪದಗಳು ಐದು ವಿಧವಾದ ಲಿಂಗ ಭೇದಗಳನ್ನು ಸೂಚಿಸುತ್ತವೆ.

ಪುಲ್ಲಿಂಗ :

–ಅನ್, –ವನ್, –ಆನ್ ಮುಂತಾದ ಪ್ರತ್ಯಯಗಳು ನಾಮಪದಗಳಲ್ಲಿ ಪುಲ್ಲಿಂಗವನ್ನು ಸೂಚಿಸುವುದಕ್ಕೆ ಬರುತ್ತವೆ.

ಉದಾ : –ಅನ್ : ಅವನ್
ಮಗನ್
–ವನ್ : ತಲೈವನ್
–ಆನ್ : ತಟ್ಟಾನ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ತ್ರೀಲಿಂಗ :

ಸ್ತ್ರೀಲಿಂಗ ಪ್ರತ್ಯಯಗಳಾಗಿ –ತ್ತಿ –ಅಳ್, –ಇ, –ಇ ಮುಂತಾದವು ನಾಮ ಪದಗಳಲ್ಲಿ ಬಳಸಲಾಗಿವೆ.

ಉದಾ : –ತ್ತಿ : ಒರುತ್ತಿ
–ಅಳ್ : ಮಗಳ್
–ಇ : ತಲೈವಿ
–ಇ : ತೋೞಿ

ಪುಂಸ್ತ್ರೀಲಿಂಗ ಬಹುವಚನ :

ನಾಮಪದಗಳಲ್ಲಿ –ಅರ್, –ವರ್, –ಇರ್ ಎಂಬುವು ಪುಂಸ್ತ್ರೀಲಿಂಗ ಬಹುವಚನ ಪ್ರತ್ಯಯಗಳಾಗಿ ಬಳಸಲ್ಪಟ್ಟಿವೆ.

ಉದಾ : –ಅರ್ : ತೋೞರ್
–ವರ್ : ತಲೈವರ್
–ಇರ್ ; ಪೆಂಡಿರ್
ಕೇಳಿರ್

ಈ ಪ್ರತ್ಯಯಗಳಲ್ಲಿ –ಅರ್, –ಇರ್ ಎಂಬುವು ಸ್ತ್ರೀಲಿಂಗ ಪ್ರತ್ಯಯಗಳೊಂದಿಗೆ ಬರುತ್ತವೆ; ಆದರೆ ಪುಲ್ಲಿಂಗ ಪ್ರತ್ಯಯಗಳೊಂದಿಗೆ ಬರುವುದಿಲ್ಲ.

ಉದಾ : ಮಗಳ್–ಇರ್
ತೋೞಿ –ಅರ್

ನಪುಂಸಕಲಿಂಗ ಏಕವಚನ :

–ತು ಎಂಬುದು ನಪುಂಸಕಲಿಂಗ ಏಕವಚನ ಪ್ರತ್ಯಯವಾಗಿ ಸೂಚಿಸಲಾಗಿದೆ.

ಉದಾ : –ತು : ಅತು
ಅ:ತು

ನಪುಂಸಕಲಿಂಗ ಬಹುವಚನ :

–ವೈ ಎಂಬುದು ತೊಲ್ಕಾಪ್ಪಿಯರ್‌ರವರ ಕಾಲದ ನಪುಂಸಕಲಿಂಗ ಬಹುವಚನ ಪ್ರತ್ಯಯ. ಇದರೊಂದಿಗೆ –ಕಳ್ ಎಂಬ ಪ್ರತ್ಯಯವೂ ಬಳಸಲಾಗಿದೆ.

ಉದಾ ; –ವೈ : ಅವೈ
ಇವೈ
–ಕಳ್ : ಮರಂಕಳ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರ್ವನಾಮಗಳು :

ಸರ್ವನಾಮಗಳಲ್ಲಿ ಎರಡುವಿಧವಾದ ಸರ್ವನಾಮಗಳಿವೆ. ಅವು ಸರಳ ಸರ್ವನಾಮ ಅಥವಾ ಪುರುಷಾರ್ಥಕ ಸರ್ವನಾಮ ಮತ್ತು ಸಾಧಿತ ಸರ್ವನಾಮ ಎಂಬುವು.

ಪುರುಷಾರ್ಥಕ ಸರ್ವನಾಮಗಳು :

ಪುರುಷಾರ್ಥಕ ಸರ್ವನಾಮಗಳು ಉತ್ತಮ ಪುರುಷ, ಮಧ್ಯಮಪುರುಷ ಮತ್ತು ಪ್ರಥಮ ಪುರುಷ ಎಂದು ಮೂರು ವಿಧವಾಗಿ ವರ್ಗೀಕರಿಸಲ್ಪಡುತ್ತವೆ.

ಉತ್ತಮ ಪುರುಷ ಸರ್ವನಾಮಗಳು :

ತೊಲ್ಕಾಪ್ಪಿಯಂನಲ್ಲಿ ಯಾನ್ ಎಂಬುದು ಉತ್ತಮಪುರುಷ ಏಕವಚನ ಸರ್ವನಾಮವಾಗಿಯೂ ಯಾಂ, ನಾಂ ಎಂಬುವು ಉತ್ತಮಪುರುಷ ಬಹುವಚನ ಸರ್ವನಾಮವಾಗಿಯೂ ಸೂಚಿಸಲ್ಪಡುತ್ತವೆ. ಇವುಗಳಲ್ಲಿ ಯಾಂ ಎಂಬುದು ಉತ್ತಮಪುರುಷ ಬಹುವಚನ ಅಸಮಾವೇಶಕ ಸರ್ವನಾಮ, ನಾಂ ಎಂಬುದು ಉತ್ತಮಪುರುಷ ಬಹುವಚನ ಸಮಾವೇಶಕ ಸರ್ವನಾಮ. ಇವುಗಳಿಗೆ ಕ್ರಮವಾಗಿ ಎನ್, ಎಂ, ನಂ ಎಂಬುವು ಪರಿವರ್ತಿತ ವಿಭಕ್ತಿರೂಪಗಳಾಗಿ ಬರುತ್ತವೆ.

ಮಧ್ಯಮ ಪುರುಷ ಸರ್ವನಾಮಗಳು :

ನೀ, ನೀಯಿರ್, ನೀವಿರ್ ಎಂಬುವು ಮಧ್ಯಮ ಪುರುಷ ಸರ್ವನಾಮಗಳು. ಇವುಗಳಲ್ಲಿ ನೀ ಎಂಬುದು ಏಕವಚನವನ್ನೂ ನೀಯಿರ್, ನೀವಿರ್ ಎಂಬುವು ಬಹುವಚನವನ್ನೂ ಸೂಚಿಸುತ್ತವೆ. ನಿನ್, ನುಂ ಎಂಬುವು ಕ್ರಮವಾಗಿ ಏಕವಚನ ಮತ್ತು ಬಹುವಚನ ಪರಿವರ್ತಿತ ವಿಭಕ್ತಿರೂಪಗಳಾಗುತ್ತವೆ.

ಪ್ರಥಮ ಪುರುಷ ಸರ್ವನಾಮಗಳು :

ಪ್ರಥಮಪುರುಷ ಏಕವಚನ ಸರ್ವನಾಮ 'ತಾನ್' ಎಂಬುದು; ಬಹುವಚನ ಸರ್ವನಾಮ 'ತಾಂ' ಎಂಬುದು. ಇವುಗಳ ಪರಿವರ್ತಿತ ವಿಭಕ್ತಿರೂಪಗಳು 'ತನ್' ಮತ್ತು 'ತಂ' ಎಂಬುವು.

ಸಾಧಿತ ಸರ್ವನಾಮಗಳು ;

ಒಂದುಮೂಲದಿಂದ ಸಾಧಿಸಲ್ಪಡುವ ಸರ್ವನಾಮಗಳು ಸಾಧಿತ ಸರ್ವನಾಮಗಳು. ಇವು ನಿರ್ದೇಶಕ ಸರ್ವನಾಮ, ಪ್ರಶ್ನಾರ್ಥಕ ಸರ್ವನಾಮ ಎಂದು ಎರಡು ವಿಧವಾಗುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿರ್ದೇಶಕ ಸರ್ವನಾಮಗಳು :

ರೂಢಿ ನಾಮಪದಗಳಂತೆಯೇ ನಿರ್ದೇಶಕ ಸರ್ವನಾಮಗಳೂ ಮಾನವ ನಿರ್ದೇಶಕ ಸರ್ವನಾಮ, ಅಮಾನವ ನಿರ್ದೇಶಕ ಸರ್ವನಾಮ ಎಂದು ಎರಡು ವಿಧವಾಗುತ್ತವೆ. ಇವು ಮತ್ತೆ ಏಕವಚನ ಹಾಗೂ ಬಹುವಚನ ಎಂದು ವಿಭಾಗಿಸಲ್ಪಡುತ್ತವೆ. ಮಾನವನಿರ್ದೇಶಕ ಏಕವಚನ ಸರ್ವನಾಮಗಳಲ್ಲಿ ಪುಲ್ಲಿಂಗ, ಸ್ತ್ರೀಲಿಂಗ ಎಂಬ ಎರಡು ಬಗೆಯಾದ ನಿರ್ದೇಶಕ ಸರ್ವನಾಮಗಳು ಕಂಡುಬರುತ್ತವೆ. ಆದರೆ ಮಾನವ ನಿರ್ದೇಶಕ ಬಹುವಚನ, ನಪುಂಸಕಲಿಂಗ ಏಕವಚನ ಮತ್ತು ಬಹುವಚನಗಳಲ್ಲಿ ಈ ಬಗೆಯ ವಿಂಗಡನೆ ಇಲ್ಲ. ನಿರ್ದೇಶಕ ಸರ್ವನಾಮಗಳು ಅ–, ಇ–, ಉ– ಎಂಬ ಮೂಲಗಳಿಂದ ರಚಿತವಾಗುತ್ತವೆ. 'ಅ–' ಕಾರದಿಂದ ಸಾಧಿಸಲ್ಪಡುವ ಸರ್ವನಾಮಗಳನ್ನು ದೂರವರ್ತಿ ಸರ್ವನಾಮಗಳೆಂದೂ ಇ–' ಕಾರದಿಂದ ರಚಿತವಾಗುವ ಸರ್ವನಾಮಗಳನ್ನು ಸಮೀಪವರ್ತಿ 'ಸರ್ವನಾಮಗಳೆಂದೂ 'ಉ–' ಕಾರದಿಂದ ಸಾಧಿಸಲಾಗುವ ಸರ್ವನಾಮಗಳನ್ನು ಮಧ್ಯವರ್ತಿ ಸರ್ವನಾಮಗಳೆಂದೂ ಕರೆಯುತ್ತಾರೆ. ಇವುಗಳ ಬೆಳವಣಿಗೆಯನ್ನು ಕೆಳಕಂಡ ವೃಕ್ಷನಕ್ಷೆ ವ್ಯಕ್ತಪಡಿಸುತ್ತದೆ.



ಪ್ರಶ್ನಾರ್ಥಕ ಸರ್ವನಾಮಗಳು :

ಪ್ರಶ್ನಾರ್ಥಕ ಸರ್ವನಾಮಗಳು ಎ–ಎಂಬ ಮೂಲದಿಂದ ವಿಕಾಸಗೊಂಡಿವೆ. ಇದೂ ಸಹ ರೂಢಿನಾಮ ಪದಗಳಂತೆಯೇ ವರ್ಗೀಕರಿಸಲ್ಪಡುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಶ್ನಾರ್ಥಕ ಸರ್ವನಾಮಗಳು

- ಮಾನವ
  - ಏಕವಚನ
    - ಪುಲ್ಲಿಂಗ — ಎವನ್
    - ಸ್ತ್ರೀಲಿಂಗ — ಎವಳ್
  - ಬಹುವಚನ
    - ಪುಂಸ್ತ್ರೀ ಲಿಂಗ — ಎವರ್
- ಅಮಾನವ
  - ಏಕವಚನ
    - ನಪುಂಸಕಲಿಂಗ ಏಕವಚನ — ಎದು
  - ಬಹುವಚನ
    - ನಪುಂಸಕಲಿಂಗ ಬಹುವಚನ — ಎವೈ

ಸಂಖ್ಯಾ ವಾಚಕಗಳು :

ಸಾಮಾನ್ಯವಾಗಿ ಸಂಖ್ಯಾವಾಚಕಗಳನ್ನು ವೈಯ್ಯಾಕರಣಿಗಳು ನಾಮ ಪ್ರಕರಣದಲ್ಲೇ ವಿವರಿಸುತ್ತಾರೆ. ತೊಲ್ಕಾಪಿಯರೂ ಸಂಖ್ಯಾ ವಾಚಕಗಳನ್ನು ನಾಮಪದದ ಒಂದು ಬಗೆಯಾಗಿ ಪರಿಗಣಿಸಿ ನಾಮಪ್ರಕರಣದಲ್ಲಿ ವಿವರಿಸಿದ್ದಾರೆ. ಸಂಖ್ಯಾವಾಚಕಗಳಿಗೆ ನಾಮರೂಪ ಮತ್ತು ಸಂಖ್ಯಾವಾಚಕ ವಿಶೇಷಣರೂಪ ಎಂಬ ಎರಡು ರೂಪಗಳಿವೆ.

ಒಂದು :

ತಮಿಳಿನಲ್ಲಿ ಇದನ್ನು ಒನ್ಱು ಎನ್ನುವರು. ಇದರ ವಿಶೇಷಣ ರೂಪಗಳು ಓರ್ ಮತ್ತು ಒರು. ಇವುಗಳಲ್ಲಿ ಓರ್ ಎಂಬುದು ಸ್ವರಗಳಿಂದ ಆರಂಭವಾಗುವ ಪದಗಳಿಗೆ ಮೊದಲೂ ಒರು ಎಂಬುದು ವ್ಯಂಜನಗಳಿಂದ ಆರಂಭವಾಗುವ ಪದಗಳಿಗೆ ಮೊದಲೂ ಬಳಸಲ್ಪಡುತ್ತವೆ.

ಉದಾ : ಓರ್–ಅಳವು
ಓರ್–ಎಟುತ್ತು
ಓರ್–ಪೆಯರ್
ಓರ್–ವಿನೈ

ಎರಡು :

ಇರಂಡು ಎನ್ನಲ್ಪಡುವ ಈ ಸಂಖ್ಯಾವಾಚಕದ ವಿಶೇಷಣ ರೂಪಗಳು ಇರು, ಇರ್, ಈರ್ ಎಂಬುವು. ಇವುಗಳಲ್ಲಿ ಇರು ಎಂಬುದು ವ್ಯಂಜನಾದಿ ಪದಗಳ ಮೊದಲೂ ಇರ್ ಎಂಬುದು 'ಆಯಿರಂ' ಎನ್ನುವ ಪದಕ್ಕೆ ಮೊದಲೂ ಈರ್ ಎಂಬುದು ಸ್ವರಾದಿ ಪದಗಳಿಗೆ ಮೊದಲೂ ಬರುತ್ತವೆ.

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಉದಾ : ಇರು–ಪೆಯರ್
ಇರು–ಪದು
ಇರ್–ಆಯಿರಂ
ಈರ್–ಎಣ್

ಮೂರು :

'ಮು'. 'ಮೂ' ಮುಂತಾದವು ಮೂನ್ರು ಎಂಬ ಸಂಖ್ಯಾವಾಚಕದ ವಿಶೇಷಣಗಳು. ಇವುಗಳಲ್ಲಿ 'ಮು' ಎಂಬುದು ವ್ಯಂಜನಾದಿ ಪದಗಳಿಗೆ ಮೊದಲೂ 'ಮೂ' ಎಂಬುದು ಸ್ವರಾದಿ ಪದಗಳಿಗೆ ಮೊದಲೂ ಬರುತ್ತವೆ.

ಉದಾ : ಮು–ಪದು
ಮು–ಪೆಯರ್
ಮೂ–ಎಟುತ್ತು
ಮೂ–ಉಯಿರ್

ನಾಲ್ಕು :

ಇದನ್ನು ತಮಿಳಿನಲ್ಲಿ 'ನಾನ್ಕು' ಎನ್ನುತಾರೆ. ಇದರ ವಿಶೇಷಣ ರೂಪ ನಾಲ್ ಎಂಬುದು.

ಉದಾ : ನಾಲ್–ಚೊಲ್
ನಾಲ್–ಮೊೞಿ
ನಾಲ್–ಇರಂಡು

ಐದು :

ಇದರ ತಮಿಳು ರೂಪ ಐಂದು ಇದಕ್ಕೆ ಐ, ಐನ್, ಐಂ ಮುಂತಾದ ವಿಶೇಷಣ ರೂಪಗಳು ಬರುತ್ತವೆ. ಇವುಗಳಲ್ಲಿ 'ಐ' ಎಂಬುದು ಸ್ವರ ಮತ್ತು ಅರ್ಧ ಸ್ವರವನ್ನು ಆದಿಯಾಗಿ ಉಳ್ಳ ಪದಗಳ ಮೊದಲೂ ಐನ್ ಎಂಬುದು ನ–ಕಾರ ಮತ್ತು ತ–ಕಾರವನ್ನು ಆದಿಯಾಗಿ ಹೊಂದಿದ ಪದಗಳ ಮೊದಲೂ ಐಂ ಎಂಬುದು ಇದರ ವ್ಯಂಜನಗಳನ್ನು ಆದಿಯಾಗಿ ಉಳ್ಳ ಪದಗಳಿಗೆ ಮೊದಲೂ ಬರುತ್ತವೆ.

ಉದಾ : ಐ–ವಗೈ
ಐನ್–ನೂಱು
ಐನ್–ತೂಟಿಲ್
ಐಂ–ಪದು
ಐಂ–ಪಾಲ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆರು :

ಆಱು ಎಂಬ ಈ ಸಂಖ್ಯಾವಾಚಕಕ್ಕೆ ಅಱು ಎಂಬುದು ವಿಶೇಷಣ ರೂಪವಾಗಿದೆ

ಉದಾ : ಅಱು-ಮೂನ್ಱು

ಏಳು :

ತಮಿಳಿನಲ್ಲಿ ಇದು ಏೞು ಎಂದು ಬರುತ್ತದೆ. ಇದರ ವಿಶೇಷಣ ರೂಪ ಎೞು ಮತ್ತು ಏೞ್ ಎಂಬುವು. ಇವುಗಳಲ್ಲಿ ಎೞು ಎಂಬುದು ವ್ಯಂಜನಾದಿ ಪದಗಳಿಗೆ ಮೊದಲೂ ಏೞ್ ಎಂಬುದು ಸ್ವರಾದಿ ಪದಗಳಿಗೆ ಮೊದಲೂ ಬರುತ್ತವೆ.

ಉದಾ : ಎೞು-ನೀಲಂ

ಎೞು-ಪದು

ಏೞ್-ಆಯಿರಂ

ಎಂಟು :

ಎಟ್ಟು ಎಂಬ ಈ ಸಂಖ್ಯಾವಾಚಕದ ವಿಶೇಷಣ ರೂಪ ಎಣ್ ಎಂಬುದು.

ಉದಾ : ಎಣ್-ಚೇರ್

ಎಣ್-ವಗೈ

ಒಂಬತ್ತು :

ಇದನ್ನು ಒಂಬದು, ಒನ್ಬಾನ್, ಒನ್ಬಃದು, ತೊಂಡು ಎಂಬ ಹಲವಾರು ಪದಗಳಿಂದ—ತೊಲ್ಕಾಪ್ಪಿಯರ್ ಗುರುತಿಸಿದ್ದಾರೆ. ಇದರ ವಿಶೇಷಣ ರೂಪ ಒನ್ಪದಿಱ್ಱು ಎಂಬುದು.

ಉದಾ : ಒನ್ಪದಿಱ್ಱು-ಎೞುತ್ತು

ಹತ್ತು :

ಪತ್ತು, ಪಃದು ಎಂಬುವು ತಮಿಳು ರೂಪಗಳು. ಪದಿನ್, ಪನ್ ಎಂಬುವು ಇದರ ವಿಶೇಷಣ ರೂಪಗಳು. ಇವುಗಳಲ್ಲಿ ಪನ್ ಎಂಬುದು ಇರಂಡು ಎಂಬ ಸಂಖ್ಯಾವಾಚಕಕ್ಕೆ ಮೊದಲೂ ಪದಿನ್ ಎಂಬುದು ಇತರ ಸಂಖ್ಯಾವಾಚಕಗಳಿಗೆ ಮೊದಲೂ ಬಳಸಲಾಗಿವೆ.

ಉದಾ : ಪನ್-ಇರಂಡು

ಪದಿನ್-ಒನ್ಱು

ನೂರು :

ನೂಱು ಎಂಬ ತಮಿಳು ಸಂಖ್ಯಾವಾಚಕದ ವಿಶೇಷಣ ರೂಪ ನೂಱ್ಱು ಎಂಬುದು.

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಉದಾ : ನೂಱ್ಱು–ಇರುಬದು

ಇವುಗಳಲ್ಲದೆ ಆಯಿರಂ, ಆಂಬಲ್, ತಾಮರೈ, ವೆಳ್ಳಂ ಮುಂತಾದ ಸಂಖ್ಯಾ ವಾಚಕಗಳನ್ನೂ ತೊಲ್ಕಾಪ್ಪಿಯಂನಲ್ಲಿ ಕಾಣಬಹುದು.

ವಿಭಕ್ತಿಗಳು :

ವಾಕ್ಯದಲ್ಲಿರುವ ನಾಮಪದಗಳು ಮತ್ತು ಕ್ರಿಯಾಪದಗಳ ನಡುವಿನ ಸಂಬಂಧ ವನ್ನು ವಿಭಕ್ತಿ ಎನ್ನುತ್ತಾರೆ. ಈ ಸಂಬಂಧವನ್ನು ಸೂಚಿಸುವ ಪ್ರತ್ಯಯಗಳು ವಿಭಕ್ತಿ ಪ್ರತ್ಯಯಗಳು. ನಾಮಪದ ಮತ್ತು ಕ್ರಿಯಾಪದದ ನಡುವಿನ ಹಲವಾರು ಬಗೆಯಾದ ಸಂಬಂಧಗಳನ್ನು ಬೇರ್ಪಡಿಸಿ ತೋರಿಸುವುದು ವಿಭಕ್ತಿ ಪ್ರತ್ಯಯಗಳ ಮುಖ್ಯ ಗುಣ.

ತಮಿಳು ಭಾಷೆಯಲ್ಲಿ ಒಟ್ಟು ಎಂಟು ವಿಭಕ್ತಿಗಳಿವೆ. ಅವು ಪ್ರಥಮ ವಿಭಕ್ತಿ, ದ್ವಿತೀಯ ವಿಭಕ್ತಿ, ತೃತೀಯ ವಿಭಕ್ತಿ, ಚತುರ್ಥಿ ವಿಭಕ್ತಿ, ಪಂಚಮಿ ವಿಭಕ್ತಿ, ಷಷ್ಠಿ ವಿಭಕ್ತಿ, ಸಪ್ತಮಿ ವಿಭಕ್ತಿ, ಮತ್ತು ಸಂಬೋದನ ವಿಭಕ್ತಿ. ವಿಭಕ್ತಿಯನ್ನು ತಮಿಳಿನಲ್ಲಿ 'ವೇಱ್ಱುಮೈ' ಎನ್ನುತ್ತಾರೆ.

ಪ್ರಥಮ ವಿಭಕ್ತಿ (ಮುದಲಾಂ ವೇಱ್ಱುಮೈ ಅಥವಾ ಎಲುವಾಯ್ ವೇಱ್ಱುಮೈ) :

ಪ್ರಥಮ ವಿಭಕ್ತಿಗೆ ಪ್ರತ್ಯೇಕವಾಗಿ ಪ್ರತ್ಯಯ ಇಲ್ಲವೆಂದೂ ಒಂದು ವಾಕ್ಯದಲ್ಲಿ ಬರುವ ಕರ್ತೃವೇ ಪ್ರಥಮ ವಿಭಕ್ತಿಯಾಗಿ ಪರಿಗಣಿಸಲ್ಪಡುತ್ತದೆ ಎಂದೂ ತೊಲ್ಕಾಪ್ಪಿಯರು ವಿವರಿಸಿರುತ್ತಾರೆ.

ದ್ವಿತೀಯ ವಿಭಕ್ತಿ (ಇರಂಡಾಂವೇಱ್ಱುಮೈ ಅಥವಾ ಸೆಯಪ್ಪಡುಪೊರುಳ್ ವೇಱ್ಱುಮೈ):

'–ಐ' ಎಂಬುದು ದ್ವಿತೀಯಾ ವಿಭಕ್ತಿಪ್ರತ್ಯಯ. ಇದು ಕರ್ಮವನ್ನು ಸೂಚಿ ಸುವ ಅರ್ಥದಲ್ಲಿ ಬಳಸಲಾಗಿದೆ. ಈ ಪ್ರತ್ಯಯ ಮಾ ನ ವ ನಾಮಪದದೊಂದಿಗೆ ಪರೋಕ್ಷವಾಗಿಯೂ ಅಮಾನವ ನಾಮಪದದೊಂದಿಗೆ ವಿಕಲ್ಪವಾಗಿಯೂ ಬರುತ್ತದೆ.

ಉದಾ : ರಾಮನ್ ಕಣ್ಣನೈಕ್ ಕೊನ್ಱಾನ್

ರಾಮನ್ { ಮರಂ / ಮರತ್ತೈ } ವೆಟ್ಟಿನಾನ್

ತೃತೀಯಾ ವಿಭಕ್ತಿ (ಮೂನ್ಱಾಂ ವೇಱ್ಱುಮೈ) :

–ಒಡು, –ಆನ್ ಎಂಬುವು ತೃತೀಯಾ ವಿಭಕ್ತಿ ಪ್ರತ್ಯಯಗಳು. ಇವು ಸಹ ವರ್ತಿ ಮತ್ತು ಸಾಧನ ಅರ್ಥಗಳಲ್ಲಿ ಬರುತ್ತವೆ. ಕೆಳಕಂಡ ಉದಾಹರಣೆಗಳನ್ನು ಗಮನಿಸಿ :

1. ಮೆಯ್ಯಿನ್ ಇಯಱ್ಕೈ ಪುಳ್ಳಿಯೊಡು ನಿಲೈಯಲ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

2. ನಾವಾಯ್ ಕಾಲೊಡು ಕರ್ರೈ ಸೇರ
3. ಕಳಿಱು ತೂಂಗು ಕೈಯಾನ್ ಓಂಗು ನಡೈಯ
4. ಮರುಪ್ಪಿನಾನ್ ಕುತ್ತಿ

ಮೇಲಿನ ಉದಾಹರಣೆಗಳಲ್ಲಿ 1 ಮತ್ತು 2ನೆಯ ಉದಾಹರಣೆಗಳಲ್ಲಿ–ಒಡು ಎಂಬುದು ಸಹವರ್ತಿ ಮತ್ತು ಸಾಧನ ಅರ್ಥಗಳಲ್ಲೂ 3 ಮತ್ತು 4ನೆಯ ಉದಾಹರಣೆಗಳಲ್ಲಿ–ಆನ್ ಎಂಬುದು ಸಹವರ್ತಿ ಮತ್ತು ಸಾಧನ ಅರ್ಥದಲ್ಲೂ ಬಳಸಲಾಗಿರುವುದನ್ನು ತಿಳಿಯಬಹುದು.

ಈ ಅರ್ಥಗಳೊಂದಿಗೆ–ಒಡು ಎಂಬುದು ಹೋಲಿಕೆಯ ಅರ್ಥದಲ್ಲೂ–ಆನ್ ಎಂಬುದು ಸಪ್ತಮಿ ವಿಭಕ್ತಿ ಅರ್ಥದಲ್ಲೂ ತೊಲ್ಕಾಪ್ಪಿಯಂನಲ್ಲಿ ಬಳಸಲಾಗಿವೆ.

ಉದಾ ; 1. ಉಪ್ಪಕಾರಮೊಡು ಇಕಾರೈಯುಂ ಅಱ್ಱೇ
2, ಔಕಾರ ಇಱುದಿ ಪೆಯರ್‌ನಿಲೈ ಮುನ್ನರ್
ಅಲ್ವಳಿಯಾನುಂ ವೇಱ್ಱುಮೈ ಕೊಳ್ಳುಂ

ಇವುಗಳಲ್ಲಿ ಮೊದಲನೆಯ ಉದಾಹರಣೆಯಲ್ಲಿ–ಒಡು ಎಂಬುದು ಹೋಲಿಕೆಯ ಅರ್ಥದಲ್ಲೂ ಎರಡನೆಯ ಉದಾಹರಣೆಯಲ್ಲಿ–ಆನ್ ಎಂಬುದು ಸಪ್ತಮೀವಿಭಕ್ತಿ ಅರ್ಥದಲ್ಲೂ ಬಳಸಲಾಗಿವೆ.

ಚತುರ್ಥಿ ವಿಭಕ್ತಿ (ನಾನ್ಕಾಂ ವೇಱ್ಱುಮೈ) :

ತೊಲ್ಕಾಪ್ಪಿಯಂನಲ್ಲಿ ಬರುವ ಚತುರ್ಥಿ ವಿಭಕ್ತಿ ಪ್ರತ್ಯಯವಾದ -ಕು ಎಂಬುದು ದೆಸೆಯನ್ನು ಸೂಚಿಸುವ ಅರ್ಥದೊಂದಿಗೆ ಕೆಳಕಂಡ ಅರ್ಥಗಳಲ್ಲೂ ಬಳಸಲಾಗಿದೆ,

ಅ) ಸಪ್ತಮಿ ವಿಭಕ್ತಿ ಅರ್ಥದಲ್ಲಿ :
ಉದಾ : ಅಡಿಕ್ಕು ಕೊಂಡಾನ್

ಆ) ಸಂಬಂಧ ಸೂಚಕ ಅರ್ಥದಲ್ಲಿ :
ಉದಾ : ನಿನಕ್ಕು ಮಗನ್

ಇ) ಉದ್ದೇಶವಾಚಕ ಅರ್ಥದಲ್ಲಿ :
ಉದಾ : ಉರೈಯಸ್ಸೈ ಕಿಳವಿಕ್ಕು ವರುಂ

ಪಂಚಮೀ ವಿಭಕ್ತಿ (ಐಂದಾಂ ವೇಱ್ಱುಮೈ) :

ಇದರ ಪ್ರತ್ಯಯ –ಇನ್ ಎಂಬುದು. ಇದು ಇಂದ ಎಂಬ ಅರ್ಥಕ್ಕಿಂತ ಹೋಲಿಕೆಯ ಅರ್ಥದಲ್ಲಿ ಸಂಘಕಾಲದಲ್ಲಿ ಹೆಚ್ಚಾಗಿ ಬಳಸಲ್ಪಟ್ಟಿದೆ. ಈ ಅರ್ಥಗಳೊಂದಿಗೆ ಚಲನ ಮತ್ತು ಕಾರಣ ಅರ್ಥಗಳಲ್ಲೂ ಬಳಸಲಾಗಿದೆ.

'ಇಂದ' ಎಂಬ ಅರ್ಥದಲ್ಲಿ :
ಉದಾ : ವೇಂದನಿನ್ ಒಱೀಇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೋಲಿಕೆಯ ಅರ್ಥದಲ್ಲಿ :

ಉದಾ : ಎಟುತ್ತಿನ್ ಇಯಲಾ

ಚಲನದ ಅರ್ಥದಲ್ಲಿ :

ಉದಾ : ಇರಟ್ಟೈಕ್ಕಿಳವಿ ಇರಟ್ಟಿನ್ ಪಿರಿಂದು ಇಸೈಯಾ

ಕಾರಣ ಅರ್ಥದಲ್ಲಿ :

ಉದಾ : ಅಳವಿಲ್ ಕೋಡಲಿನ್ ಇಯಲಾ

ಷಷ್ಠಿ ವಿಭಕ್ತಿ (ಆರಾಂ ವೇಱ್ಱುಮೈ) :

-ಅದು ಎಂಬುದು ಷಷ್ಠಿ ವಿಭಕ್ತಿ ಪ್ರತ್ಯಯ. ಇದು ಸಂಬಂಧಸೂಚಕ ಅರ್ಥದಲ್ಲಿ ಬರುತ್ತದೆ.

ಉದಾ : ಸಾತ್ತನದು ಮಗನ್

ಸಪ್ತಮಿ ವಿಭಕ್ತಿ (ಏಟಾಂ ವೇಱ್ಱುಮೈ ಅಥವಾ ಇಡವೇಱ್ಱುಮೈ) :

ಸಪ್ತಮಿ ವಿಭಕ್ತಿಯ ಮುಖ್ಯವಾದ ಪ್ರತ್ಯಯ -ಕಣ್. ಇದರ ಜೊತೆಗೆ ಕಾಲ್ ಪುಱಂ, ಅಗಂ, ಉಳ್, ಉಟ್ಟೈ, ಕೀಟ್, ಮೇಲ್, ಪಿನ್, ಸಾರ್, ಅಯಲ್, ಪುಡೈ, ತೇ, ವಗೈ, ಮುನ್, ಇಡೈ, ಕಡೈ, ತಲೈ, ವಲಂ, ಇಡಂ ಮುಂತಾದವುಗಳನ್ನೂ ಪ್ರತ್ಯಯಗಳಾಗಿ ಗುರುತಿಸಿದ್ದಾರೆ. ಈ ಪ್ರತ್ಯಯಗಳೆಲ್ಲವನ್ನೂ ಪದಪ್ರತ್ಯಯಗಳೆಂದು ಹೇಳಬಹುದು.

ಉದಾ : ಮರತ್ತಿನ್‌ಕಣ್

ಸಂಬೋಧನಾ ವಿಭಕ್ತಿ (ವಿಳಿ ವೇಱ್ಱುಮೈ ಅಥವಾ ಎಟ್ಟಾಂ ವೇಱ್ಱುಮೈ) :

ಒಬ್ಬನನ್ನು ಕರೆಯುವಾಗ ಆ ನಾಮಪದದಲ್ಲಿ ಉಂಟಾಗುವ ಬದಲಾವಣೆಗಳನ್ನೇ ಸಂಬೋದನಾ ವಿಭಕ್ತಿ ಎನ್ನುತ್ತಾರೆ. ಕೆಲವೊಮ್ಮೆ -ಆ, -ಏ, -ಓ ಮುಂತಾದವು ಪ್ರತ್ಯಯಗಳಾಗಿ ಬರುತ್ತವೆ.

ಉದಾ : ರಾಮಾ
ಮಗನೇ
ಅಣ್ಣಾವೋ

ಆಗಮಗಳು :

ತೊಲ್ಕಾಪ್ಪಿಯರು ತಮ್ಮ ಗ್ರಂಥದ ಮೊದಲನೇ ಭಾಗವಾದ ಎಟುತ್ತದಿಗಾರಂನಲ್ಲಿ ಒಂಬತ್ತು ಆಗಮಗಳನ್ನು ಗುರುತಿಸಿದ್ದಾರೆ. ಅವು -ಇನ್-, -ವಱ್ಱು-, -ಅತ್ತು-, -ಅಂ-, -ಒನ್-, -ಆನ್-, -ಅಕ್ಕು-, -ಇಕ್ಕು-, -ಅನ್- ಮುಂತಾದವು. ಇವು

CC-0. In Public Domain. Gurukul Kangri Collection, Haridwar

ಗಳೊಂದಿಗೆ –ತಂ–, –ನಂ–, –ನುಂ–, –ಉಂ_, –ಕೆಟು–, –ಏ–, –ಐ– ಮುಂತಾದವುಗಳನ್ನೂ ಅವರೇ ತಮ್ಮ ಗ್ರಂಥದಲ್ಲಿ ಆಗಮಗಳಾಗಿ ಬಳಸಿದ್ದಾರೆ. ಇವು ಗಳಲ್ಲಿ –ಇನ್–, –ವಱ್ಱು–, –ಅತ್ತು–, –ಒನ್–, –ಅನ್– ಮುಂತಾದ ಆಗಮಗಳು ವಿಭಕ್ತಿ ಪ್ರತ್ಯಯಗಳ ಹಿಂದೆ ಬಳಸಲ್ಪಡುತ್ತವೆ. ಇತರ ಆಗಮಗಳು ನಾಮಪದಗಳ ಮುಂದೆ ಬರುತ್ತದೆ.

ಉದಾ : ಮರಂ-ಅತ್ತು-ಐ

–ಇನ್– ಎನ್ನುವ ಆಗಮ ಅ, ಆ, ಉ, ಊ,ಎ, ಔ, ಯ, ಮ, ಕಿರಿಯ 'ಉ', ವ ಮುಂತಾದ ಧ್ವನಿಗಳನ್ನು ಅಂತ್ಯವಾಗಿ ಉಳ್ಳ ನಾಮಪದಗಳ ಮುಂದೆಯೂ ಞ, ಣ ಮುಂತಾದ ಧ್ವನಿಗಳಲ್ಲಿ ಅಂತ್ಯವಾಗುವ ಕೃನ್ನಾಮಗಳ ಮುಂದೆಯೂ ಬರುತ್ತದೆ. ಇವುಗಳೊಂದಿಗೆ ಅಟಿನ್, ಕುಯಿನ್ ಮುಂತಾದ ಪದಗಳ ಮುಂದೆಯೂ ಬಳಸಲ್ಪ ಡುತ್ತದೆ.

–ವಱ್ಱು– ಎನ್ನುವ ಆಗಮ ಪಲ, ಯಶಾ, ಅಪ್ಪೈ, ಇಪ್ಪೈ, ಯಾಪ್ಪೈ, ಅವ್, ಇವ್, ಉವ್, ಎಲ್ಲಾಂ ಮುಂತಾದ ಪದಗಳ ಮುಂದೆ ಬಳಸಲಾಗಿದೆ.

–ಅತ್ತು–ಎಂಬುದು 'ಅ'ಕಾರ 'ಆ'ಕಾರಗಳಲ್ಲಿ ಅಂತ್ಯವಾಗುವ ಮರವನ್ನು ಸೂಚಿಸುವ ನಾಮಪದಗಳ ಮುಂದೆಯೂ '-ಕಣ್' ಎನ್ನುವ ಸಪ್ತಮಿ ವಿಭಕ್ತಿ ಪ್ರತ್ಯಯದ ಹಿಂದೆಯೂ 'ಯ'ಕಾರ 'ಮ'ಕಾರಗಳಲ್ಲಿ ಅಂತ್ಯವಾಗುವ ನಾಮಪದಗಳ ಮುಂದೆಯೂ ಬರುತ್ತದೆ. ಇದು ಸಹ 'ಅಟಿನ್,' 'ಕುಯಿನ್' ಮುಂತಾದ ಪದಗಳೊಂದಿಗೆ ಬರುತ್ತದೆ.

–ಒನ್– ಎಂಬುದು 'ಓ'ಕಾರದಲ್ಲಿ ಅಂತ್ಯವಾಗುವ ನಾಮಪದಗಳ ಮುಂದೆ ಬಳಸಲಾಗಿದೆ.

–ಅನ್– ಎನ್ನುವ ಆಗಮ ಅದು, ಇದು, ಯಾದು, ಅಃದು. ಇಃದು, ಉಃದು ಮತ್ತು ಸಂಖ್ಯಾವಾಚಕಗಳ ಮುಂದೆ ಬರುತ್ತದೆ.

ಕ್ರಿಯಾ ಆಕೃತಿಮಾ :—

ವಿಭಕ್ತಿ ಪ್ರತ್ಯಯಗಳನ್ನು ಪಡೆಯದೆ ಕಾಲಸೂಚಕ ಪ್ರತ್ಯಯಗಳಿಂದ ಕೂಡಿ ಬರುವ ಪದಗಳು ಕ್ರಿಯಾಪದಗಳು ಎಂಬುದು ತೊಲ್ಕಾಪ್ಪಿಯರ ಅಭಿಪ್ರಾಯ.

ತೊಲ್ಕಾಪಿಯರು ಕಾಲವಾಚಕ ಮೂರು ಎಂದು ಹೇಳಿದರೂ ಅವುಗಳನ್ನು ಸೂಚಿಸಲು ಬರುವ ಕಾಲಪ್ರತ್ಯಯಗಳನ್ನು ಕುರಿತು ಏನೂ ಹೇಳಲಿಲ್ಲ. ತೊಲ್ಕಾಪ್ಪಿಯರ ಕಾಲದಲ್ಲೂ ಸಂಘಸಾಹಿತ್ಯಗಳ ಕಾಲದಲ್ಲೂ ಭೂತ, ಅಭೂತ ಎಂಬ ಎರಡು ಕಾಲ ವಾಚಕಗಳು ಮಾತ್ರವೇ ಸ್ಪಷ್ಟವಾಗಿ ಬಳಸಲಾಗಿವೆ. ಆದರೂ ತೊಳಾಪ್ಪಿಯರು 'ಚೆಯ್ಯುಂ' ಎನ್ನುವ ಅನುರೂಪದಲ್ಲಿ ಬರುವ ಪೂರ್ಣ ಕ್ರಿಯಾಪದಗಳು ವರ್ತಮಾನ ಕಾಲವನ್ನು ಸೂಚಿಸಬಲ್ಲವು ಎಂದಿದ್ದಾರೆ.

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಕ್ರಿಯಾಪದಗಳ ವಿಧಗಳು :—

ಕ್ರಿಯಾಪದಗಳು ಕಾಲಸೂಚಕ ಕ್ರಿಯಾಪದಗಳೆಂದೂ ಲಕ್ಷಿತ ಕ್ರಿಯಾಪದಗಳೆಂದೂ ಎರಡು ವಿಧಗಳಾಗುತ್ತವೆ.

ಕಾಲಸೂಚಕ ಕ್ರಿಯಾಪದ :—

ಕಾಲವನ್ನು ಪ್ರತ್ಯಕ್ಷವಾಗಿ ಸೂಚಿಸುವ ಕ್ರಿಯಾಪದ ಕಾಲಸೂಚಕ ಕ್ರಿಯಾಪದ.

ಉದಾ : ಪಡಿ-ತ್ತ್-ಅನ್

ಇದರಲ್ಲಿ-ತ್ತ್-ಎನ್ನುವ ಭೂತಕಾಲ ಸೂಚಕ ಪ್ರತ್ಯಯು ಪ್ರತ್ಯಕ್ಷವಾಗಿ ಬರುವುದನ್ನು ನೋಡಬಹುದು.

ಲಕ್ಷಿತ ಕ್ರಿಯಾಪದ :

ಕಾಲವನ್ನು ಪರೋಕ್ಷವಾಗಿ ಸೂಚಿಸುವ ಕ್ರಿಯಾಪದ ಲಕ್ಷಿತ ಕ್ರಿಯಾಪದ.

ಉದಾ : ಕರಿ-ಅನ್

ಇದರಲ್ಲಿ ಕಾಲಸೂಚಕ ಪ್ರತ್ಯಯು ಪ್ರತ್ಯಕ್ಷವಾಗಿ ಕಾಣಿಸಿಕೊಳ್ಳದೆ ಹೋದರೂ ಇದು ಕಾಲವನ್ನು ಪರೋಕ್ಷವಾಗಿ ತಿಳಿಸುತ್ತದೆ.

ಕಾಲಸೂಚಕ ಕ್ರಿಯಾಪಗಳ ಬಗೆಗಳು :

ಕಾಲಸೂಚಕ ಕ್ರಿಯಾಪದಗಳು ಪೂರ್ಣ ಮತ್ತು ಅಪೂರ್ಣ ಕ್ರಿಯಾಪದಗಳೆಂದು ಎರಡು ವಿಧ.

ಪೂರ್ಣ ಕ್ರಿಯಾಪದ :

ಅರ್ಥವನ್ನು ಪೂರ್ಣಗೊಳಿಸುವ ಕ್ರಿಯಾಪದ ಪೂರ್ಣ ಕ್ರಿಯಾಪದ.

ಉದಾ : ವ-ನ್ತ್-ಅನ್

ಇದು ಅರ್ಥವನ್ನು ಪೂರ್ಣಗೊಳಿಸುವ ಕಾರಣದಿಂದ ಪೂರ್ಣ ಕ್ರಿಯಾಪದವಾಗುತ್ತದೆ.

ಅಪೂರ್ಣ ಕ್ರಿಯಾಪದ :

ಅರ್ಥವನ್ನು ಪೂರ್ಣಗೊಳಿಸದ ಕ್ರಿಯಾಪದ ಅಪೂರ್ಣ ಕ್ರಿಯಾಪದ. ಇಂಥ ಕ್ರಿಯಾಪದಗಳ ಅರ್ಥ ಪೂರ್ಣವಾಗಬೇಕಾದರೆ ಅವುಗಳ ಮುಂದೆ ನಾಮಪದ ಅಥವಾ ಪೂರ್ಣ ಕ್ರಿಯಾಪದ ಬರಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ವ-ನ್ತ್-ಅ
ವ-ನ್ತ್-ಉ

ಇವುಗಳು ಅರ್ಥವನ್ನು ಪೂರ್ಣಗೊಳಿಸುವುದಿಲ್ಲ ; ಅರ್ಥ ಪೂರ್ಣವಾಗ ಬೇಕಾದರೆ ಇವುಗಳ ಮುಂದೆ ನಾಮಪದ ಅಥವಾ ಕ್ರಿಯಾಪದ ಬರಬೇಕು. ಆದ್ದರಿಂದ ಇವು ಅಪೂರ್ಣ ಕ್ರಿಯಾಪದಗಳಾಗುತ್ತವೆ.

ಪೂರ್ಣ ಕ್ರಿಯಾಪದದ ಅಂಶಗಳು :

ಪೂರ್ಣ ಕ್ರಿಯಾಪದಗಳಲ್ಲಿ ಕ್ರಿಯಾಧಾತು, ಕಾಲಸೂಚಕ ಪ್ರತ್ಯಯ, ಲಿಂಗ ಪ್ರತ್ಯಯ ಎಂಬ ಮೂರು ಮುಖ್ಯ ಅಂಶಗಳು ಇರಬೇಕು. ಅದರಲ್ಲೂ ಮೂರನೇ ಅಂಶವಾದ ಲಿಂಗಪ್ರತ್ಯಯ ಕಡ್ಡಾಯವಾಗಿ ಬರಬೇಕು. ಈ ಅಂಶವನ್ನು ಪಡೆಯದೆ ಒಂದು ಕ್ರಿಯಾಪದ ಬಂದರೆ ಅದು ಪೂರ್ಣ ಕ್ರಿಯಾಪದವಾಗುವುದಿಲ್ಲ. ಇದರ ರಚನೆ ಯನ್ನು ಕೆಳಕಂಡಂತೆ ಗುರುತಿಸಬಹುದು.

ಕ್ರಿಯಾಧಾತು-ಕಾಲಸೂಚಕ ಪ್ರತ್ಯಯ-ಲಿಂಗಪ್ರತ್ಯಯ = ಪೂರ್ಣ ಕ್ರಿಯಾಪದ

ಕ್ರಿಯಾಧಾತು :

ಕ್ರಿಯಾಧಾತುಗಳಲ್ಲಿ ಎರಡು ಬಗೆಯ ಧಾತುಗಳಿವೆ. ಅವು ತನ್‌ವಿನೈ ಮತ್ತು ಪಿಱವಿನೈ ಧಾತುಗಳು.

ತನ್‌ವಿನೈ ಧಾತು :

ಕರ್ತೃವೇ ಮಾಡುವ ಕ್ರಿಯೆಯನ್ನು ಸೂಚಿಸುವ ಕ್ರಿಯಾಧಾತುವಿಗೆ ತನ್‌ವಿನೈ ಧಾತು ಎಂದು ಹೆಸರು.

ಪಿಱವಿನೈ ಧಾತು :

ಬೇರೆಯವರಿಂದ ಕ್ರಿಯೆಯನ್ನು ಮಾಡಿಸುವುದನ್ನು ಸೂಚಿಸುವ ಧಾತುಗಳು ಪಿಱವಿನೈ ಧಾತುಗಳು.

ಎಲ್ಲಾ ಕ್ರಿಯಾಧಾತುಗಳೂ 'ತನ್‌ವಿನೈ' ಧಾತುಗಳೇ. ಆದರೆ ಅವುಗಳೊಂದಿಗೆ ಕೆಲವು ಪಿಱವಿನೈ ಪ್ರತ್ಯಯಗಳನ್ನು ಸೇರಿಸಿ ಪಿಱವಿನೈ ಧಾತುಗಳನ್ನು ರಚಿಸಬಹುದು

ಪಿಱವಿನೈ ಧಾತುಗಳನ್ನು ರಚಿಸುವ ವಿಧಾನಗಳು :

ತನ್‌ವಿನೈ ಧಾತುಗಳಿಂದ ಪಿಱವಿನೈ ಧಾತುಗಳನ್ನು ನಾಲ್ಕು ವಿಧಗಳಲ್ಲಿ ರಚಿಸ ಬಹುದು.

ಅ) —ತ್ತು ಎಂಬ ಪಿಱವಿನೈ ಪ್ರತ್ಯಯವನ್ನು ತನ್‌ವಿನೈ ಧಾತುಗಳೊಂದಿಗೆ ಸೇರಿಸಿ ಪಿಱವಿನೈ ಧಾತುಗಳನ್ನು ರಚಿಸಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ನಡ—ತ್ತು > ನಡತ್ತು

ಮಲರ್—ತ್ತು > ಮಲರ್‌ತ್ತು

ಆ) ಕೆಲವು ತನ್‌ವಿನೈ ಧಾತುಗಳ ಅಂತ್ಯದಲ್ಲಿ ಬರುವ ಸ್ಪರ್ಶಧ್ವನಿಯನ್ನು ಸಜಾತಿಯ ಸಂಯುಕ್ತ ವ್ಯಂಜನಗಳಾಗಿ ಬದಲಾಯಿಸಿದರೆ ಆವು ಪಿಱವಿನೈ ಧಾತುಗಳಾಗುತ್ತವೆ.

ಉದಾ : ಪಟಕು > ಪಟಕ್ಕು

ಕರುಕು > ಕರುಕ್ಕು

ಇ) ಕೆಲವು ಪಿಱವಿನೈ ಧಾತುಗಳು, ತನ್‌ವಿನೈ ಧಾತುಗಳ ಅಂತ್ಯದಲ್ಲಿ ಬರುವ ಅನುನಾಸಿಕ ಮತ್ತು ಸ್ಪರ್ಶಧ್ವನಿಗಳನ್ನು ಸಜಾತಿಯ ಸಂಯುಕ್ತ ಸ್ಪರ್ಶಧ್ವನಿಗಳಾಗಿ ಬದಲಾಯಿಸಿದರೆ ಆವು ಪಿಱವಿನೈ ಧಾತುಗಳಾಗುತ್ತವೆ.

ಉದಾ : ತಿರುಂಪು > ತಿರುಪ್ಪು

ಅಡಂಕು > ಅಡಕ್ಕು

ಈ) ಈ ಬಗೆಯ ಕ್ರಿಯಾಧಾತುಗಳು ತನ್‌ವಿನೈ, ಪಿಱವಿನೈ ಎರಡಕ್ಕೂ ಸಮಾನ ರೂಪವನ್ನು ಹೊಂದಿಬರುತ್ತವೆ.

ಉದಾ : ಆಟು > ಆಟು

ಆದರೆ ತನ್‌ವಿನೈ ಮತ್ತು ಪಿರವಿನೈ ಧಾತುಗಳು ಪೂರ್ವಕಾಲಿಕ ಅಂತ್ಯಪ್ರತ್ಯಯವಾದ '—ಅ'ಕಾರದೊಂದಿಗೆ ಸೇರುವಾಗ ವ್ಯತ್ಯಾಸವನ್ನು ಹೊಂದುತ್ತವೆ.

ಆಟು—ಅ > ಆಟಿಯ (ತನ ವಿನೈ)

ಆಟು—ಅ > ಆಟಿಕ್ಕ (ಪಿಱವಿನೈ)

ಕಾರಣಾರ್ಥಕ ಧಾತುಗಳು :

ಇವೆರಡು ಧಾತುಗಳಲ್ಲದೆ ಕಾರಣಾರ್ಥಕ ಧಾತುವನ್ನೂ ತೊಲ್ಕಾಪ್ಪಿಯರು ಎತ್ತಿಹೇಳಿದ್ದಾರೆ. ಕಾರಣಾರ್ಥಕ ಪ್ರತ್ಯಯಗಳಾದ 'ಪ್ಪಿ', 'ಪಿ', 'ವಿ' ಎಂಬುವು ತನ್‌ವಿನೈ ಧಾತು ಮತ್ತು ಪಿಱವಿನೈ ಧಾತುಗಳೊಂದಿಗೆ ಸೇರುವಾಗ ಕಾರಣಾರ್ಥಕ ಧಾತುಗಳು ರಚನೆಯಾಗುತ್ತವೆ.

ಉದಾ : ನಟ—ಪ್ಪಿ

ನಟ—ತ್ತು—ವಿ

ಕಾಲಸೂಚಕ ಪ್ರತ್ಯಯಗಳು :

ತೊಲ್ಕಾಪ್ಪಿಯರ್ ತಮ್ಮ ಲಕ್ಷಣ ಗ್ರಂಥದಲ್ಲಿ ಕಾಲಸೂಚಕ ಪ್ರತ್ಯಯಗಳನ್ನು ಸ್ಪಷ್ಟವಾಗಿ ಎತ್ತಿ ಹೇಳಲಿಲ್ಲ. ಆದರೂ ಅವರು ತಮ್ಮ ಗ್ರಂಥದಲ್ಲಿ ಕೆಲವು ಪ್ರತ್ಯಯಗಳನ್ನು ಕಾಲಸೂಚಕ ಪ್ರತ್ಯಯಗಳಾಗಿ ಬಳಸಿರುವುದನ್ನು ನೋಡಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭೂತಕಾಲ ಸೂಚಕ ಪ್ರತ್ಯಯಂಗಳು ;

1. 'ಯ' ಕಾರದಲ್ಲಿ ಅಂತ್ಯವಾಗುವ ಒಂದು ಅಂಶದ ಪದಗಳಲ್ಲಿ ಭೂತ ಕಾಲಸೂಚಕ ಪ್ರತ್ಯಯವಾಗಿ 'ತ' ಕಾರ ಬರುತ್ತದೆ. ಅದರಲ್ಲಿ 'ಯ' ಕಾರಕ್ಕೆ ಹಿಂದೆ ಬರುವ ಸ್ವರ ಹ್ರಸ್ವಸ್ವರವಾಗಿಯೂ ಇರಬೇಕು.

ಉದಾ ; ಚೆಯ್— ತ್—ಅದು

2. 'ಣ' ಕಾರದಲ್ಲಿ ಅಂತ್ಯವಾಗುವ ಧಾತುಗಳಿಗೆ ಮುಂದೆ 'ಟ' ಕಾರ ಕಾಲಸೂಚಕ ಪ್ರತ್ಯಯವಾಗಿ ಬರುತ್ತದೆ.

ಉದಾ : ಕಣ್—ಟ್—ಉ

ಉಣ್—ಟ್—ಅನ

3. 'ಱ' ಕಾರ ನ, ಲ, ಱ ಮುಂತಾದವುಗಳ ಮುಂದೆ ಬರುತ್ತದೆ.

ಉದಾ : ಎನ್—ಱ್—ಉ

ಚೆಲ್—ಱ್—ಉ

ಪೆಱ್—ಱ್—ಉ

4. ಕೆಲವು ಕ್ರಿಯಾ ಧಾತುಗಳಲ್ಲಿ ಕೊನೆಯಲ್ಲಿ ಬರುವ ಸ್ಪರ್ಶ ಧ್ವನಿಗಳು ಸಜಾತಿಯ ಸಂಯುಕ್ತ ಸ್ಪರ್ಶ ಧ್ವನಿಗಳಾದರೆ ಆ ಧಾತುಗಳು ಭೂತ ಕಾಲವನ್ನು ಸೂಚಿಸುತ್ತವೆ.

ಉದಾ ; ಪುಕು > ಪುಕ್ಕು

ನಟು > ನಟ್ಟು

5. —ನ್ತ್—ಎಂಬುದು 'ಅ', 'ಆ', 'ಇ', 'ಉ', 'ಐ', 'ಯ'. 'ರ', 'ೞ' ಮುಂತಾದವುಗಳಿಗೆ ಅನಂತರ ಭೂತಕಾಲ ಪ್ರತ್ಯಯವಾಗಿ ಬರುತ್ತದೆ,

ಉದಾ : ಇಱ—ನ್ತ್—ಉ

ಅಂಕಾ—ನ್ತ್—ಉ

ಆೞ್—ನ್ತ್—ಉ

ಎಟು—ನ್ತ್—ಉ

ಇಯೈ—ನ್ತ್—ಉ

ಆಯ್—ನ್ತ್—ಉ

ಊರ್—ನ್ತ್—ಉ

ವೀೞ್—ನ್ತ್—ಉ

6. —ತ್ತ್— ಎಂಬುದು ಆ, ಇ, ಈ, ಉ, ಐ, ಒ, ಯ, ರ ಮುಂತಾದ ಧ್ವನಿಗಳ ಮುಂದೆ ಬರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಯಾ—ತ್ತ್—ಉ
ಕುಜು—ತ್ತ್—ಉ
ನೀ—ತ್ತ್—ಅ
ಎಡು—ತ್ತ್—ಅ
ಉಡೈ—ತ್ತ್—ಅ
ಒ—ತ್ತ್—ಅ
ಉಯರ್—ತ್ತ್—ಅ
ಉಣರ್—ತ್ತ್—ಅ

7. ಇ/ಇನ್ ಎನ್ನುವ ಭೂತಕಾಲ ಸೂಚಕ ಪ್ರತ್ಯಯ ಉ, ಐ, ಣ, ರ, ಲ, ಳ ಮುಂತಾದ ಧ್ವನಿಗಳ ಮುಂದೆ ಬರುತ್ತವೆ. ಇವುಗಳಲ್ಲಿ ' ಇ ' ಕ್ರಿಯಾಸೂಚಕ ಕೃದಂತದಲ್ಲಿಯೂ ' ಇನ್ ' ಪೂರ್ಣ ಕ್ರಿಯಾಪದಗಳಲ್ಲಿಯೂ ಬಳಸಲಾಗಿವೆ.

ಉದಾ : ನಾಡು—ಇ
ನಿಲೈ—ಇ
ಶಿವಣ್—ಇ—ಅ
ಪೆಯುರ್—ಇ—ಅ
ಸೊಲ್—ಇ—ಅ
ಅರುಳ್—ಇ—ಅ
ಓಡು—ಇನ್—ಆನ್
ಪಾಡು—ಇನ್—ಆನ್

ಭವಿಷ್ಯತ್ ಕಾಲಸೂಚಕ ಪ್ರತ್ಯಯಗಳು :

1. —ಪ—ಎನ್ನುವ ಭವಿಷ್ಯತ್ ಕಾಲಸೂಚಕ ಪ್ರತ್ಯಯ ಇ, ಉ, ರ್, ಳ್, ನ್ ಮುಂತಾದ ಧ್ವನಿಗಳಿಗೆ ಅನಂತರ ಬರುತ್ತದೆ.

(ಅ) ಪೂರ್ಣ ಕ್ರಿಯಾಪದಗಳಲ್ಲಿ :

ಉದಾ : ವೊಟು—ಪ್—ಅ
ಆಗು—ಪ್—ಅ
ಉಣರ್—ಪ್—ಅ
ಕೊಳ್—ಪ್—ಅ
ಎನ್—ಪ್—ಅ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Ptd. by CIIL Mysore-6

(ಆ) ಕೃದಂತ ಪರಕ ನಾಮಂಗಳಲ್ಲಿ :

ಉದಾ : ಇಯ್ಯೈ-ಪ್-ಅವೈ
ಕೇಳ್-ಪ್-ಓರ್
ನಿಗಟ್-ಪ್-ಅವೈ
ನಿಜ್-ಪ್-ಅವೈ

2. -ಪ್ಪ್- ಎನ್ನುವ ಪ್ರತ್ಯಯು ಅ, ಇ, ಉ, ಐ, ಒ, ಮುಂತಾದ ಧ್ವನಿಗಳಲ್ಲಿ ಅಂತ್ಯವಾಗುವ ಧಾತುಗಳ ಅನಂತರ ಬರುತ್ತದೆ.

ಉದಾ : ಕಿಳ-ಪ್ಪ್-ಅ
ಮುಡಿ-ಪ್ಪ್-ಅದು
ಕೊಡು-ಪ್ಪ್-ಓರ್
ಉರೈ-ಪ್ಪ್-ಅದು
ಒ-ಪ್ಪ್-ಅದು

3. -ವ್- ಎನ್ನುವ ಪ್ರತ್ಯಯು ತೊಲ್ಕಾಪ್ಪಿಯಂನಲ್ಲಿ ಕೃದಂತ ಪರಕ ನಾಮಪದಗಳಲ್ಲಿ ಮಾತ್ರವೇ ಬಳಸಲಾಗಿದೆ.

ಉದಾ : ಆಗು-ವ್-ಅದು
ಚೆಯ್-ವ್-ಅದು
ಅರಿ-ವ್-ಅದು
ಉಣರ್-ವ್-ಅದು
ಕೊಳ್-ವ್-ಅದು

ತೊಲ್ಕಾಪ್ಪಿಯಂನಲ್ಲಿ ಚೆಯ್ಯುಂ ಎನ್ನುವ ಅನುರೂಪದಲ್ಲಿ ಬರುವ ಕ್ರಿಯಾಪದಗಳು ಲಿಂಗ ಪ್ರತ್ಯಯಗಳನ್ನು ಹೊಂದಿಬರುತ್ತವೆ.

ಉದಾ : ಎಳ್-ಉಮ್-ಆರ್
ಇಸೈಕ್-ಉಮ್-ಅನ
ಚೆಯ್-ಉಮ್-ತು

ಮೇಲಿನ ಉದಾಹರಣೆಗಳಲ್ಲಿ ಬರುವ ಉಮ್ ಎಂಬುದು ಭವಿಷ್ಯತ್‌ಕಾಲವನ್ನು ಸೂಚಿಸುವುದಾಗಿ ವ್ಯಾಖ್ಯಾನಕಾರರೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಉಮ್ ಎಂಬುದು ಯಾವ ಕಾಲವನ್ನು ಸೂಚಿಸಬಲ್ಲದ್ದು ಎಂಬುದನ್ನು ಕುರಿತು ತೋಲ್ಕಾಪ್ಪಿಯರ್ ಏನೂ ಹೇಳಲಿಲ್ಲ. ಹಾಗಿದ್ದರೂ ಇದರ ಪ್ರಯೋಗವನ್ನು ನೋಡಿದರೆ ಇದು ವರ್ತಮಾನಕಾಲವನ್ನು ಸೂಚಿಸುವುದಾಗಿ ತಿಳಿಯಬಹುದು.

ಲಿಂಗ ಪ್ರತ್ಯಯಗಳು :

ಪೂರ್ಣ ಕ್ರಿಯಾಪದಗಳಲ್ಲಿ ಬರುವ ಲಿಂಗ ಪ್ರತ್ಯಯಗಳು ಉತ್ತಮ ಪುರುಷ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಧ್ಯಮ ಪುರುಷ ಮತ್ತು ಪ್ರಥಮ ಪುರುಷ ಲಿಂಗ ಪ್ರತ್ಯಯಗಳೆಂದು ವರ್ಗೀಕರಿಸಲ್ಪಡುತ್ತವೆ.

ಉತ್ತಮ ಪುರುಷ ಏಕವಚನ ಲಿಂಗಪ್ರತ್ಯಯಗಳು :

-ಕು,-ಟು,-ತು,-ಱು,-ಎನ್,-ಏನ್,-ಅಲ್ ಎಂಬುವು ಉತ್ತಮ ಪುರುಷ ಏಕವಚನವನ್ನು ಸೂಚಿಸುವ ಲಿಂಗಪ್ರತ್ಯಯಗಳು.

-ಎನ್ ಎಂಬುದು ಆಗಮಗಳೊಂದಿಗೆಯೂ ನಿಷೇಧಾರ್ಥಕ ಪ್ರತ್ಯಯಗಳ ಮುಂದೆಯೂ ಹೆಚ್ಚಾಗಿ ಬಳಸಲ್ಪಟ್ಟಿದೆ.

ಉದಾ : ವ-ನ್ತ್-ಅನ್-ಎನ್
ವಾರ್-ಅಲ್-ಎನ್

-ಏನ್ ಎಂಬ ಪ್ರತ್ಯಯು ಕೆಲವು ಕ್ರಿಯಾಪದಗಳಲ್ಲಿ ಮಾತ್ರವೇ ಬರುತ್ತದೆ. ಅವುಗಳಲ್ಲೂ ಭವಿಷ್ಯತ್‌ಕಾಲ ಸೂಚಕ ಪ್ರತ್ಯಯಕ್ಕೆ ಮುಂದೆ ಹೆಚ್ಚಾಗಿ ಬಳಸಲಾಗಿದೆ.

ಉದಾ : ನಿಱು-ಪ್ಪ್-ಏನ್
ವರು-ವ್-ಏನ್
ಉಣ್-ಪ್-ಏನ್

-ಅಲ್ ಎಂಬ ಪ್ರತ್ಯಯವೂ ಭವಿಷತ್‌ಕಾಲ ಪ್ರತ್ಯಯದ ಮುಂದೆ ಬಳಕೆಯಾಗಿದೆ.

ಉದಾ : ವರು-ವ್-ಅಲ್
ಉಣ್-ಪ್-ಅಲ್

-ಕು,-ಟು,-ತು,-ಱು ಮುಂತಾದುವುಗಳಿಗೆ ವ್ಯಾಖ್ಯಾನಕಾರರೇ ಉದಾಹರಣೆಗಳನ್ನು ನೀಡುತ್ತಾರೆಯೋ ಹೊರತು ತೊಲ್ಕಾಪ್ಪಿಯರ್ ಇವುಗಳನ್ನು ತಮ್ಮ ಗ್ರಂಥದಲ್ಲಿ ಬಳಸಲಿಲ್ಲ. ಆದರೆ ಸಂಘಕಾಲದಲ್ಲಿ ಈ ನಾಲ್ಕು ಪ್ರತ್ಯಯಗಳಲ್ಲಿ -ಕು ಎಂಬುದು ಮಾತ್ರ ಬಳಕೆಯಾಗಿದೆ.

ಉದಾ : ಕಾಣ್ಕು ವಂದಿಸಿನ್ ಯಾನೇ

ಉತ್ತಮ ಪುರುಷ ಬಹುವಚನ ಲಿಂಗ ಪ್ರತ್ಯಯಗಳು :

-ಎಂ,-ಏಂ,-ಅಂ,-ಆಂ,-ಕುಂ,-ಟುಂ,-ತುಂ,-ಱುಂ ಮುಂತಾದವು ಉತ್ತಮ ಪುರುಷ ಬಹುವಚನ ಲಿಂಗ ಪ್ರತ್ಯಯಗಳು. ಇವುಗಳಲ್ಲಿ-ಅಂ,-ಆಂ ಎಂಬುವು ಸಮಾವೇಶಕ ಬಹುವಚನ ಲಿಂಗ ಪ್ರತ್ಯಯಗಳಾಗಿಯೂ-ಎಂ,-ಏಂ ಎಂಬುವು ಅಸಮಾವೇಶಕ ಬಹುವಚನ ಲಿಂಗ ಪ್ರತ್ಯಯಗಳಾಗಿಯೂ ಬಳಕೆಗೊಂಡಿವೆ.

ಉದಾ : ಉಂಡನಂ ವಂದನೆಂ
ಉಂಡಾಂ ವಂದೇಂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಧ್ಯಮ ಪುರುಷ ಏಕವಚನ ಲಿಂಗ ಪ್ರತ್ಯಯಗಳು :

-ಇ,-ಈ,-ಏ,-ಐ,-ಆಯ್,-ಓಯ್ ಮುಂತಾದ ಪ್ರತ್ಯಯಗಳು ಮಧ್ಯಮ ಪುರುಷ ಏಕವಚನ ಲಿಂಗಪ್ರತ್ಯಯಗಳು.

ಉದಾ : ಚೆಯ್-ತ್-ಇ
ಅಋ-ತ್-ಈ
ಚೆಯ್-ವ್-ಏ
ಚೆಯ್-ತ್-ಆಯ್
ವರು-ಪ್-ಓಯ್

ಮಧ್ಯಮಪುರುಷ ಬಹುವಚನ ಲಿಂಗಪ್ರತ್ಯಯಗಳು :

-ಇರ್,-ಈರ್,-ಮಿನ್ ಮುಂತಾದವುಗಳು ಬಹುವಚನ ಲಿಂಗಪ್ರತ್ಯಯಗಳಾಗಿ ತೊಲ್ಕಾಪ್ಪಿಯಂನಲ್ಲಿ ಗುರುತಿಸಲಾಗಿವೆ. ಇವುಗಳಲ್ಲಿ-ಇರ್,-ಈರ್ ಎಂಬ ಪ್ರತ್ಯಯಗಳು ಆಜ್ಞಾರ್ಥಕ ಕ್ರಿಯಾಪದಗಳಲ್ಲೂ-ಮಿನ್ ಎಂಬ ಪ್ರತ್ಯಯ ನಿದರ್ಶಿತ ಕ್ರಿಯಾಪದಗಳಲ್ಲೂ ಬರುತ್ತವೆ.

ಉದಾ : ಉಣ್-ಟ್-ಅನ್-ಇರ್
ಉಣ್-ಟ್-ಈರ್
ಉಣ್-ಮಿನ್

ಪ್ರಥಮಪುರುಷ ಲಿಂಗ ಪ್ರತ್ಯಯಗಳು :

ತೊಲ್ಕಾಪ್ಪಿಯಂನಲ್ಲಿ-ಅನ್,-ಆನ್ ಎಂಬ ಪ್ರತ್ಯಯಗಳು ಪುಲ್ಲಿಂಗ ಏಕವಚನ ಪ್ರತ್ಯಯಗಳಾಗಿಯೂ-ಅಳ್,-ಆಳ್ ಎಂಬ ಪ್ರತ್ಯಯಗಳು ಸ್ತ್ರೀಲಿಂಗ ಏಕವಚನ ಪ್ರತ್ಯಯಗಳಾಗಿಯೂ-ಅರ್,-ಆರ್,-ಪ,-ಮಾರ್ ಎಂಬ ಪ್ರತ್ಯಯಗಳು ಪುಂಸ್ತ್ರೀ ಲಿಂಗ ಬಹುವಚನ ಪ್ರತ್ಯಯಗಳಾಗಿಯೂ ಗುರುತಿಸಲಾಗಿವೆ. ಇವುಗಳಲ್ಲಿ-ಅನ್, -ಅಳ್,-ಅರ್ ಎಂಬುವು ಆಗಮಕ್ಕೆ ಮುಂದೆಯೂ-ಆನ್, - ಆಳ್,-ಆರ್ ಎಂಬುವು ಕಾಲಸೂಚಕ ಪ್ರತ್ಯಯಕ್ಕೆ ಮುಂದೆಯೂ ಬರುತ್ತವೆ.

ಉದಾ : ಉಣ್-ಟ್-ಅನ್-ಅನ್
ಉಣ್-ಟ್-ಆನ್
ಉಣ್-ಟ್-ಅನ್-ಅಳ್
ಉಣ್-ಟ್-ಆಳ್
ಉಣ್-ಟ್-ಅನ್-ಅರ್
ಉಣ್-ಟ್-ಆರ್
ಉಣ್-ಪ
ಉಣ್-ಮಾರ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಘ ಸಾಹಿತ್ಯಗಳಲ್ಲಿ-ವರ್ಾ ಎಂಬ ಪ್ರತ್ಯಯ ಸಂಬಂಧ ಸೂಚಕ ಕೃದಂತದಲ್ಲಿ ಮಾತ್ರ ಬಳಸಲಾಗಿರುವುದನ್ನು ನೋಡಬಹುದು.

ಉದಾ : ಪಾಡಣ್ಮಾರ್ ಎವರೇ

–ತು, –ಟು, –ಱು ಎಂಬುವು ನಪುಂಸಕಲಿಂಗ ಏಕವಚನ ಪ್ರತ್ಯಯಗಳಾಗಿ ತೊಲ್ಕಾಪ್ಪಿಯದಲ್ಲಿ ಸೂಚಿಸಲ್ಪಟ್ಟಿವೆ. ಇವುಗಳಲ್ಲಿ –ಟು ಎಂಬ ಪ್ರತ್ಯಯ ತೊಲ್ಕಾಪ್ಪಿಯರ ಗ್ರಂಥದಲ್ಲೂ ಸಂಘಕಾಲದ ಸಾಹಿತ್ಯಗಳಲ್ಲೂ ಬಳಸಲಾಗಿಲ್ಲ. ಆದರೆ ವ್ಯಾಖ್ಯಾನಕಾರರು ಮಾತ್ರ ಇದರ ಪ್ರಯೋಗಕ್ಕೆ ಉದಾಹರಣೆಗಳನ್ನು ನೀಡಿರುತ್ತಾರೆ.

ಉದಾ : ಓಡ್–ಇನ್–ತು

ಆಗು–ಇನ್–ಱು

–ಅ, –ವ, –ಆ ಎಂಬುವು ನಪುಂಸಕಲಿಂಗ ಬಹುವಚನ ಪ್ರತ್ಯಯಗಳಾಗಿ ಗುರುತಿಸಲ್ಪಟ್ಟಿವೆ.

ಉದಾ : ಚೆಯ್–ತ್–ಅನ್–ಅ

ಮೊಟಿ–ವ

ಕೊಳ್–ಆ

ಇವುಗಳಲ್ಲಿ –ಅ ಮತ್ತು –ವ ನಿಶ್ಚಯಾರ್ಥಕ ಕ್ರಿಯಾಪದದಲ್ಲೂ –ಆ ಎಂಬ ಪ್ರತ್ಯಯ ನಿಷೇಧಾರ್ಥಕ ಕ್ರಿಯಾಪದಲ್ಲೂ ಬರುವುದನ್ನು ನೋಡಬಹುದು.

ಅಪೂರ್ಣ ಅಥವಾ ಕೃದಂತ ಕ್ರಿಯಾಪದಗಳು :

ಕೃದಂತ ಕ್ರಿಯಾಪದಗಳು ಕ್ರಿಯಾಸೂಚಕ ಕೃದಂತ, ಸಂಬಂಧ ಸೂಚಕ ಕೃದಂತ ಎಂದು ಎರಡು ಬಗೆಗಳಾಗುತ್ತವೆ.

ಕ್ರಿಯಾಸೂಚಕ ಕೃದಂತಗಳು :

ತೊಲ್ಕಾಪ್ಪಿಯರ್ ಕ್ರಿಯಾಸೂಚಕ ಕೃದಂತಗಳನ್ನು ಅವುಗಳ ಅನುರೂಪಕ್ಕೆ ಅನುಗುಣವಾಗಿ ಚೆಯ್ದು, ಚೆಯ್ಯಾ, ಚೆಯ್ಪು, ಚೆಯ್ದೆನ, ಚೆಯ್ಯಿಯರ್, ಚೆಯ್ಯಿಯ, ಚೆಯಿನ್, ಚೆಯ, ಚೆಯಬ್ಬು ಎಂಬ ಒಂಬತ್ತು ತೆರನಾಗಿ ವಿಂಗಡಿಸಿದ್ದಾರೆ.

ಉದಾ : ಉಂಡು ವನ್ದಾನ್

ಉಣ್ಣಾ ವನ್ದಾನ್

ಉಣ್ಕು ವನ್ದಾನ್

ಮಟ್ಟಿ ಪೆಯ್ದೆನ ಪುಗಳ್ ಪೆಚ್ಚಿದು

ವಟ್ಟಿ ಪೆಯ್ಯಿಯರ್ ಪಲಿಕೊಡುತ್ತಾರ್

ಮಟ್ಟಿ ಪೆಯ್ಯಿಯ ಮುಟಿಂಗುಂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಟಿಶ್ಶಿ ಪೆಯಿನ್ ಪುಗಟ್‌ವರಂ
ಮಟಿಶ್ಶಿ ಪೆಯ್ದ್ರುಜ್ಕ್ಯು ಮುಟುಗುಂ

ಇವುಗಳಲ್ಲಿ ಮೊದಲನೆಯ ಮೂರು ಕೃದಂತಗಳು ಕರ್ತೃವಿನ ಕ್ರಿಯೆಗಳಿಂದಲೂ ಇತರ ಕೃದಂತಗಳು ಎಲ್ಲಾ ಬಗೆಯ ಕ್ರಿಯೆಗಳಿಂದಲೂ ಮುಕ್ತಾಯವಾಗುತ್ತವೆ . ಇವು ಗಳಲ್ಲದೆ ತೊಲ್ಕಾಪ್ಪಿಯರ್ ಪಿನ್, ಮುನ್, ಕಾಲ್, ಕಡೈ, ವಳಿ, ಇಡತ್ತು ಎನ್ನುವ ಪದಗಳನ್ನೂ ಸಂಬಂಧ ಸೂಚಕ ಕೃದಂತದಜೊತೆ ಸೇರಿಸಿದರೆ ಕ್ರಿಯಾಸೂಚಕ ಕೃದಂತ ರಚನೆಯಾಗುತ್ತದೆ ಎನ್ನುತ್ತಾರೆ. ಇವುಗಳಲ್ಲಿ ಪಿನ್ ಕಡೈ ಎಂಬುವು ಭೂತಕಾಲವನ್ನೂ ಕಾಲ್, ವಳಿ, ಇಡತ್ತು ಎಂಬುವು ಮೂರು ಕಾಲವನ್ನೂ ಸೂಚಿಸುತ್ತವೆ. ಚೆಯ್ಯಾದು ಎನ್ನುವ ಅನುರೂಪದಲ್ಲಿ ಬರುವ ಕ್ರಿಯಾಸೂಚಕ ಕೃದಂತಗಳು ನಿಷೇಧಾರ್ಥಕ ಅರ್ಥ ದಲ್ಲಿ ಬರುತ್ತವೆ.

ಸಂಬಂಧಸೂಚಕ ಕೃದಂತಗಳು :

ಚೆಯ್ಯುಂ, ಚೆಯ್ದು, ಚೆಯ್ಯಾ ಎಂಬ ಅನುರೂಪದಲ್ಲಿ ಬರುವ ಅಪೂರ್ಣ ಕ್ರಿಯಾಪದಗಳು ಸಂಬಂಧ ಸೂಚಕ ಕೃದಂತಗಳು. ಇವುಗಳಲ್ಲಿ ಚೆಯ್ಯುಂ, ಚೆಯ್ದು ಎಂಬುವು ನಿಶ್ಚಯಾರ್ಥಕ ಕೃದಂತಗಳಾಗಿಯೂ ಚೆಯ್ಯಾ ಎಂಬುದು ನಿಷೇಧಾರ್ಥಕ ವಾಗಿಯೂ ಬರುತ್ತವೆ.

ಆಜ್ಞಾಸೂಚಕ ಕ್ರಿಯಾಪದ :

ತೊಲ್ಕಾಪ್ಪಿಯರ್ ಆಜ್ಞೆಯನ್ನು ಸೂಚಿಸುವ ' ಏವಲ್ ' ಎಂಬ ಪದವನ್ನು ಬಳಸಿದರೂ ಆಜ್ಞಾಸೂಚಕ ಕ್ರಿಯಾಪದವನ್ನು ಸೂಚಿಸುವ ' ಏವಲ್ ವಿನೈ ' ಎಂಬ ಪದವನ್ನು ಬಳಸಲಿಲ್ಲ. ಅವರು ಆಜ್ಞಾಸೂಚಕ ಕ್ರಿಯಾಪದವನ್ನೂ ನಿರ್ದಿಶಿತ ಕ್ರಿಯಾಪದವನ್ನೂ ಬೇರೆ ಬೇರೆ ವ್ಯಾಕರಣ ಅಂಶಗಳಾಗಿ ಭಾವಿಸದೆ ಎರಡನ್ನೂ ಒಂದೇಯಾಗಿ ಪರಿಗಣಿಸಿದರು ಎಂಬುದು ಇದರಿಂದ ಗೊತ್ತಾಗುತ್ತದೆ.

ಇಚ್ಛಾರ್ಥಕ ಕ್ರಿಯಾಪದ :

ತೊಲ್ಕಾಪ್ಪಿಯರವರ ಕಾಲದಲ್ಲಿ ಈ ಕ್ರಿಯಾಪದಗಳು ಪ್ರಥಮ ಪುರುಷಕ್ಕೆ ಮಾತ್ರ ಬಳಸಲಾದವು. ಇಚ್ಛಾರ್ಥಕವನ್ನು ಸೂಚಿಸುವ ಪ್ರತ್ಯಯವನ್ನು ತೊಲ್ಕಾಪ್ಪಿ ಯರು ಪ್ರತ್ಯೇಕವಾಗಿ ಎತ್ತಿ ಹೇಳಲಿಲ್ಲ. ಆದರೂ ಅವರೇ ತಮ್ಮ ಕೃತಿಯಲ್ಲಿ ಕೆಳಕಂಡ ಪ್ರತ್ಯಯಗಳನ್ನು ಇಚ್ಛಾರ್ಥಕ ಪ್ರತ್ಯಯಗಳಾಗಿ ಬಳಸಿರುವುದನ್ನು ನೋಡಬಹುದು.

ಉದಾ : ಕ : ವಾಟ್-ಕ
ಅಲ್ : ಓಂಬು-ಅಲ್
ಇಯರ್ : ಅಗಂ-ಇಯರ್
ಆಅಲ್ : ಅಜು-ಆಅಲ್

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಇವುಗಳಲ್ಲಿ ' ಆಅಲ್ ' ಎಂಬುದು ನಿಷೇಧಾರ್ಥಕದಲ್ಲೂ ಉಳಿದವು ನಿಶ್ಚಯಾರ್ಥಕದಲ್ಲೂ ಬಳಸಲಾಗಿವೆ.

ಲಕ್ಷಿತ ಕ್ರಿಯಾಪದಗಳು :

ಲಕ್ಷಿತ ಕ್ರಿಯಾಪದಗಳು ಕಾಲವನ್ನು ಪರೋಕ್ಷವಾಗಿ ಸೂಚಿಸುತ್ತವೆ. ಈ ಬಗೆಯ ಕ್ರಿಯಾಪದಗಳು ಒಂದು ಕಾಲಕ್ಕೆ ಮಾತ್ರ ಸೀಮಿತವಾಗದೆ ಮೂರು ಕಾಲಕ್ಕೂ ಸೀಮಿತವಾಗುತ್ತವೆ. ಲಕ್ಷಿತ ಕ್ರಿಯಾಪದಗಳು ಗುಣಸೂಚಕ ಧಾತುಗಳಿಂದ ರಚನೆಯಾಗುತ್ತವೆ. ಇದರಲ್ಲೂ ಪೂರ್ಣ ಕ್ರಿಯಾಪದ, ಅಪೂರ್ಣ ಕ್ರಿಯಾಪದ ಎಂಬ ಎರಡು ಬಗೆಯನ್ನೂ ನೋಡಬಹುದು.

ಪೂರ್ಣ ಲಕ್ಷಿತ ಕ್ರಿಯಾಪದಗಳು :

ಈ ಬಗೆಯ ಕ್ರಿಯಾಪದಗಳು ಅರ್ಥವನ್ನು ಪೂರ್ಣಗೊಳಿಸುತ್ತವೆ.

ಉದಾ : ಕರಿಯನ್
ಇನಿಯನ್

ಈ ಎರಡು ಕ್ರಿಯಾಪದಗಳೂ ಕರಿ. ಇನಿ ಎಂಬ ಗುಣವಾಚಕ ಧಾತುಗಳಿಂದ ರಚನೆಯಾಗಿವೆ. ಅಲ್ಲದೆ ಇವು ಮೂರು ಕಾಲಕ್ಕೂ ಸೀಮಿತವಾಗಿ ಬರುತ್ತವೆ. ಅಂದರೆ ಕರಿಯನ್ ಎಂಬುದನ್ನು ನಿನ್ನೆ ಕರಿಯನ್, ಇಂದು ಕರಿಯನ್, ನಾಳೆ ಕರಿಯನ್ ಎಂದು ಮೂರು ಕಾಲಕ್ಕೂ ಸೀಮಿತವಾಗುವಂತೆ ವಾಕ್ಯದಲ್ಲಿ ಹೇಳಬಹುದು ಎಂದರ್ಥ. ಇದರಂತೆಯೇ ಇನಿಯನ್ ಎಂಬುದನ್ನೂ ಮೂರು ಕಾಲಕ್ಕೂ ಸೀಮಿತವಾಗುವಂತೆ ವಾಕ್ಯದಲ್ಲಿ ಹೇಳಬಹುದು.

ಲಕ್ಷಿತ ಕೃದಂತಗಳು :

ಇದರಲ್ಲೂ ಲಕ್ಷಿತ ಸಂಬಂಧಸೂಚಕ ಕೃದಂತ, ಲಕ್ಷಿತ ಕ್ರಿಯಾಸೂಚಕ ಕೃದಂತ ಎಂಬ ಎರಡು ಬಗೆಯಾದ ಕೃದಂತಗಳನ್ನು ಕಾಣಬಹುದು.

ಲಕ್ಷಿತ ಸಂಬಂಧ ಸೂಚಕ ಕೃದಂತ :

ಇದು ಕಾಲ, ಕ್ರಿಯೆ, ಲಿಂಗ ಮುಂತಾದವುಗಳಲ್ಲಿ ಯಾವುದನ್ನೂ ತೋರಿಸದೆ ನಾಮಪದದಿಂದ ಮುಕ್ತಾಯವಾಗುತ್ತದೆ.

ಉದಾ : ಪೆರಿಯ ಕುದಿರೈ
ಪುದಿಯ ವೀಡು
ಇನಿಯ ಮೊಟ್ಟೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲಕ್ಷಿತ ಕ್ರಿಯಾಸೂಚಕ ಕೃದಂತ :

ಇದು ಸಹ ಕಾಲ, ಕ್ರಿಯೆ, ಲಿಂಗ ಮುಂತಾದವುಗಳಲ್ಲಿ ಯಾವುದನ್ನೂ ತೋರಿಸದೆ ಬರುತ್ತದೆ, ಆದರೆ ಇದು ಮುಕ್ತಾಯವಾಗುವುದಕ್ಕೆ ಕ್ರಿಯಾಪದಗಳು ಬೇಕಾಗುತ್ತದೆ.

ಉದಾ : ಇನ್ನಿ ಕೆಡುಂ
ಅಱನಿನ್ನಿ ಕೊನ್ರಾನ್

ಮೇಲಿನ ವಿವರಣೆಗಳಿಂದ ತೊಲ್ಕಾಪ್ಪಿಯರ್ ರವರ ಕಾಲದ ತಮಿಳು ಭಾಷೆಯ ಸ್ವರೂಪವನ್ನು ಸ್ಪಷ್ಟವಾಗಿ ಅರಿಯಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೮. ಸಂಘ ಕಾಲದ ತಮಿಳು ಭಾಷೆ

ಕ್ರಿ.ಪೂ. ಎರಡನೆಯ ಶತಮಾನದಿಂದ ಕ್ರಿ.ಶ. ಮೂರನೆಯ ಶತಮಾನದವರೆಗಿನ ಕಾಲವನ್ನು ಸಂಘಕಾಲ ಎಂದು ಸೂಚಿಸಲಾಗುತ್ತದೆ. ಈ ಕಾಲದಲ್ಲಿ ರಚಿತವಾದ ಎಟ್ಟುತ್ತೊಗೈ. ಪತ್ತುಪ್ಪಾಟ್ಟು, ತಿರುಕ್ಕುಱಳ್, ಶಿಲಪ್ಪದಿಗಾರಂ, ಮಣಿಮೇಖಲೈ ಮುಂತಾದ ಸಾಹಿತ್ಯ ಕೃತಿಗಳು ಸಂಘಕಾಲದ ಭಾಷೆಯ ಅಧ್ಯಯನಕ್ಕೆ ಆಧಾರಗಳಾಗುತ್ತವೆ. ಎಟ್ಟುತ್ತೊಗೈ ಎಂಬುದರಲ್ಲಿ ಐಂಗುಱುನೂಱು, ಪದಿಱ್ಱುಪ್ಪತ್ತು, ಪರಿಪಾಡಲ್, ನಱ್ಱಿಣೈ, ಕುಱುಂದೊಗೈ, ಕಲಿತ್ತೊಗೈ. ಅಗನಾನೂಱು, ಪುಱನಾನೂಱು ಮುಂತಾದ ಸಂಕಲನಗಳು ಬರುತ್ತವೆ. ಪತ್ತುಪ್ಪಾಟ್ಟು ಎಂಬುದರಲ್ಲಿ ಚಿಱುಬಾಣಾಱ್ಱುಪ್ಪಡೈ, ಪೆರುಂಬಾಣಾಱ್ಱುಪ್ಪಡೈ. ಕೂತ್ತರಾಱ್ಱುಪಡೈ ಅಥವಾ ಮಲೈಪಡುಕಡಾಂ, ಪೊರುನರಾಱ್ಱುಪ್ಪಡೈ, ತಿರುಮುರುಗಾಱ್ಱುಪ್ಪಡೈ, ಮುಲ್ಲೈಪ್ಪಾಟ್ಟು, ಮಧುರೈಕ್ಕಾಂಜಿ, ನೆಡುನಲ್‌ವಾಡೈ, ಕುಱಿಂಜಿಪ್ಪಾಟ್ಟು. ಪಟ್ಟಿಣಪ್ಪಾಲೈ ಮುಂತಾದ ಕೃತಿಗಳು ಸೇರಿವೆ.

ಧ್ವನಿಮಾ

ಧ್ವನಿಮಾಗಳು :

ತೊಲ್ಕಾಪ್ಪಿಯರ್‌ರವರ ಕಾಲಕ್ಕೂ ಸಂಘ ಕಾಲಕ್ಕೂ ಧ್ವನಿಮಾಗಳ ಸಂಖ್ಯೆಯಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಅಂದರೆ ತೊಲ್ಕಾಪ್ಪಿಯರ ಕಾಲದಲ್ಲಿ ಧ್ವನಿಮಾಗಳಾಗಿದ್ದ ಹತ್ತು ಸ್ವರಗಳು ಮತ್ತು ಹದಿನೇಳು ವ್ಯಂಜನಗಳು ಹಾಗೆಯೆ ಧ್ವನಿಮಾಗಳಾಗಿ ಉಳಿದು ಬಂದಿವೆ.

ಧ್ವನಿಮಾಗಳ ವಿತರಣೆ

ಸ್ವರ ಧ್ವನಿಮಾಗಳ ವಿತರಣೆ :

ಸಂಘಕಾಲದ ಭಾಷೆಯಲ್ಲಿ ಸ್ವರ ಧ್ವನಿಮಾಗಳ ವಿತರಣೆಯಲ್ಲಿ ಯಾವ ಬದಲಾವಣೆಯೂ ಕಾಣಿಸಿಕೊಳ್ಳಲಿಲ್ಲ.

ವ್ಯಂಜನ ಧ್ವನಿಮಾಗಳ ವಿತರಣೆ :

ವ್ಯಂಜನ ಧ್ವನಿಮಾಗಳ ವಿತರಣೆಯಲ್ಲಿ ತೊಲ್ಕಾಪ್ಪಿಯರ ಕಾಲಕ್ಕೂ ಸಂಘ ಕಾಲಕ್ಕೂ ಕೆಲವು ವ್ಯತ್ಯಾಸಗಳಿವೆ. ಈ ವ್ಯತ್ಯಾಸಗಳನ್ನು ಕೆಳಕಂಡಂತೆ ಗುರುತಿಸಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೊಲ್ಕಾಪ್ಪಿಯರ ಕಾಲ	ಸಂಘಕಾಲ
—	ಚ, ಚೈ
—	ಞ, ಞಿ
—	ಯ, ಯೂ, ಯೋ

ಧ್ವನಿಮಾ ವಿತರಣೆಯಲ್ಲಿ ಬರುವ ಮೇಲಿನ ವ್ಯತ್ಯಾಸಗಳಿಗೆ ಕಾರಣ ಹೆಚ್ಚುಕಡಿಮೆ ಸ್ವೀಕರಣ ಪದಗಳೇ. ಚ, ಚೈ, ಯ, ಯೂ, ಯೋ ಮುಂತಾದುವು ಸ್ವೀಕರಣ ಪದಗಳಲ್ಲೂ ಞ, ಞಿ ಮುಂತಾದುವು ತಮಿಳು ಪದಗಳಲ್ಲೂ ಕಂಡುಬರುತ್ತವೆ.

ಉದಾ : ಚಮಂ ಞಮಲಿ ಯವಣರ್
ಚೈಯಂ ಞಿಮಿಱು ಯೂಭಂ
ಯೋಗಂ

ಸಂಘಕಾಲದಲ್ಲಿ 'ಚ'ಕಾರವನ್ನು ಆರಂಭವಾಗಿ ಉಳ್ಳ ಪದಗಳು ಹೆಚ್ಚುಕಡಿಮೆ 163ಕ್ಕೂ ಹೆಚ್ಚಿವೆ. ಇವು ಸ್ವೀಕರಣಪದಗಳಾಗದೇ ಹೋದರೂ ತೊಲ್ಕಾಪ್ಪಿಯರ್‌ನಿಂದ ಅಂಗೀಕರಿಸಲಾಗಲಿಲ್ಲ. ಇದಕ್ಕೆ ಕಾರಣ ಇವುಗಳೆಲ್ಲವೂ ಆಡುಭಾಷೆಯಲ್ಲಿ ಮಾತ್ರ ಉಪಯೋಗವಾಗಿರುವುದೇ.

'ರ'ಕಾರ 'ಟ'ಕಾರಗಳು ಹ್ರಸ್ವಸ್ವರಗಳಿಗೆ ಮುಂದೆಬರುವುದಿಲ್ಲ. ಆದರೆ ಸಂಘಕಾಲದಲ್ಲಿ ಇವೆರಡೂ ಹ್ರಸ್ವಸ್ವರದ ಮುಂದೆಬಂದಿವೆ.

ಉದಾ : ವರ್ತ್ತನ್ನೈ
ತೆಟ್ಟು

ತೊಲ್ಕಾಪ್ಪಿಯರ ಕಾಲದಲ್ಲಿ ಪದದ ಆಧಿಯಲ್ಲಿ ಬಾರದಿದ್ದ 'ಲ'ಕಾರ ಸಂಘಕಾಲದ ಭಾಷೆಯಲ್ಲಿ ಪದದ ಆರಂಭದಲ್ಲಿ ಬಳಸಲಾಗಿದೆ.

ಉದಾ : ಲೋಕು

ತೊಲ್ಕಾಪ್ಪಿಯಂ ಪದದ ಅಂತ್ಯದಲ್ಲಿ ಬರುವ ವ್ಯಂಜನಾನುಕ್ರಮಗಳನ್ನು ವಿವರಿಸುವಾಗ 'ಪೋನ್ಮ್' ಎನ್ನುವ ವ್ಯಂಜನಾನುಕ್ರಮ ಪದವನ್ನು ಮಾತ್ರ ಎತ್ತಿಹೇಳುತ್ತದೆ. ಆದರೆ ಸಂಘಕಾಲದಲ್ಲಿ ಇದರೊಂದಿಗೆ ಮರುಣ್ಮ್, ಕೇಣ್ಮ್, ಚೆಣ್ಮ್ ಮುಂತಾದ ವ್ಯಂಜನಾನುಕ್ರಮ ಪದಗಳೂ ಬಳಸಲಾಗಿವೆ.

ಧ್ವನಿಮಾ ಪರಿವರ್ತನೆ

ಸ್ವರಧ್ವನಿಮಾ ಪರಿವರ್ತನೆ .

1. ಪದದ ಮಧ್ಯದಲ್ಲಿ ಬರುವ 'ಅ'ಕಾರ 'ಐ'ಕಾರವಾಗುತ್ತದೆ.

— ಅ — > — ಐ —

ಉದಾ : ಅರಸು > ಅರೈಸು
ಮುರಸು > ಮುರೈಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

2. 'ಎ'ಕಾರ 'ಅ'ಕಾರವಾಗುತ್ತದೆ.

ಎ — > ಅ —

ಉದಾ: ಎನ್ > ಅನ್

ಎಂ > ಅಂ

3. 'ಊ'ಕಾರ 'ಆ'ಕಾರವಾಗುತ್ತದೆ.

— ಊ > — ಆ

ಉದಾ: ಚೆಯ್ಯೂ > ಚೆಯ್ಯಾ

ವ್ಯಂಜನ ಧ್ವನಿಮಾ ಪರಿವರ್ತನೆ:

1. ಪದದ ಆದಿಯಲ್ಲಿ ಬರುವ 'ಯ'ಕಾರ ಕೆಲವೊಮ್ಮೆ ಸಂಘಕಾಲದ ತಮಿಳು ಭಾಷೆಯಲ್ಲಿ ಲೋಪವಾಗುತ್ತದೆ.

ಯ್ — > ϕ —

ಉದಾ: ಯಾರ್ > ಆರ್

ಯಾನೈ > ಆನೈ

ಯಾಂಡು > ಆಂಡು

2. ಅ, ಆ, ಎ ಮುಂತಾದ ಸ್ವರಗಳೊಂದಿಗೆ ಪದದ ಆದಿಯಲ್ಲಿ ಬರುವ 'ಞ' ಕಾರ 'ನ' ಕಾರವಾಗುತ್ತದೆ.

ಞ— > ನ— | — {ಅ, ಆ, ಎ}

ಉದಾ: ಞರಲ್ > ನರಲ್

ಞಾನ್ > ನಾನ್

ಞೆಗಿೞ್ > ನೆಗಿೞ್

3. ಯ, ಇ, ಐ ಮುಂತಾದುವುಗಳ ಮುಂದೆ ಬರುವ ಸಜಾತಿಯ ಸಂಯುಕ್ತಾಕ್ಷರಗಳಾದ 'ನ್ಱ' ಎಂಬುವು 'ಞ್ಞ' ಎಂದು ಸಂಘ ಕಾಲದಲ್ಲಿ ಬರುತ್ತವೆ.

—ನ್ಱ— > —ಞ್ಞ— | {ಯ, ಇ, ಐ} —

ಉದಾ: ಐನ್ಱೂರು > ಐಞ್ಞೂಱು

ಪಿನ್ಱೈ > ಪಿಞ್ಞೈ

4. ಪದದ ಮಧ್ಯದಲ್ಲಿ ತಾಲವ್ಯ ಧ್ವನಿಗಳಿಗೆ ಮುಂದೆ ಬರುವ 'ತ್ತ' ಕಾರ 'ಚ್ಚ' ಕಾರವಾಗಿ ಪರಿವರ್ತನೆಯಾಗುತ್ತದೆ.

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

-ತ್ತ್- > -ಚ್ಚ- | ತಾಲವ್ಯ-

ಉದಾ : ಆಯ್ತ್ತ > ಆಯ್ಚ್ಚ

ನಗೈತ್ತಿ > ನಗೈಚ್ಚಿ

5. 'ಟ' ಕಾರದ ಮುಂದೆ 'ನ' ಕಾರ ಬರುವಾಗ 'ಟ' ಕಾರ 'ನ' ಕಾರ ಎರಡೂ ಸೇರಿ 'ಣ' ಕಾರವಾಗಿ ಬರುತ್ತದೆ,

-ಟ + ನ- > -ಣ-

ಉದಾ : ಚೋಟ + ನಾಡು > ಚೋಣಾಡು

6. ಪದದ ಅಂತ್ಯದಲ್ಲಿ ಬರುವ ಅನುನಾಸಿಕ ಧ್ವನಿಯಾದ 'ನ' ಕಾರ 'ಲ' ಕಾರವಾಗಿ ಬದಲಾವಣೆಯಾಗುತ್ತದೆ.

-ನ್ > -ಲ್

ಉದಾ : ಆನ್ > ಆಲ್

ಇನ್ > ಇಲ್

ವೇನ್ > ವೇಲ್

7. ಅನುನಾಸಿಕ ಧ್ವನಿಗಳ ಮುಂದೆ ಬರುವ ಸ್ಪರ್ಶ ಧ್ವನಿ ಸಜಾತಿಯ ಅನುನಾಸಿಕ ಧ್ವನಿಯಾಗಿ ಬದಲಾವಣೆಯಾಗುತ್ತದೆ,

ಸ್ಪರ್ಶ > ಅನುನಾಸಿಕ | ಅನುನಾಸಿಕ—

ಉದಾ : ಅಙ್ಗಣಂ > ಅಙ್ಙಣಂ

8. ಪದದ ಆದಿಯಲ್ಲಿ ಬರುವ 'ನ' ಕಾರ ಕೆಲವೊಮ್ಮೆ ಲೋಪವಾಗುತ್ತದೆ.

ನ್- > ø-

ಉದಾ : ನುಂ > ಉಂ

9. 'ಯಾ' ಕಾರ ಪದದ ಆದಿಯಲ್ಲಿ ಬರುವಾಗ ಅಪರೂಪವಾಗಿ 'ಎ' ಕಾರವಾಗುತ್ತದೆ.

ಯಾ- > ಎ-

ಉದಾ : ಯಾಂಗು > ಎಂಗು

ಆಕೃತಿಮಾ

1. ನಾಮ ಆಕೃತಿಮಾ :

ಸರ್ವನಾಮಗಳು :

ತೊಲ್ಕಾಪ್ಪಿಯರ ಕಾಲದಲ್ಲೂ ಸಂಘಕಾಲದಲ್ಲೂ ಬಳಸಲಾದ ಸರ್ವನಾಮಗಳನ್ನು ಕೆಳಕಂಡ ಪಟ್ಟಿಯಿಂದ ತಿಳಿದುಕೊಳ್ಳಬಹುದು.

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

	ತೊಲ್ಕಾಪ್ಪಿಯರ ಕಾಲ	ಸಂಘ ಕಾಲ
ಉತ್ತಮ ಪುರುಷ ಸರ್ವನಾಮ ಏಕವಚನ	ಯಾನ್	ನಾನ್
ಉತ್ತಮ ಪುರುಷ ಸರ್ವನಾಮ ಬಹುವಚನ	ಯಾಂ ಎಂ	ಯಶಾಂಗಳ್ ಎಂಗಳ್
ಮಧ್ಯಮ ಪುರುಷ ಸರ್ವನಾಮ ಏಕವಚನ	ನೀನ್ ಉನ್	ನೀ ನೀರ್ ಉನ್ ನಿನ್
ಮಧ್ಯಮ ಪುರುಷ ಸರ್ವನಾಮ ಬಹುವಚನ	ನೀವಿರ್ ನೀಯಿರ್ ನುಂ	ನೀರ್ ಉಂ
ಪ್ರಥಮ ಪುರುಷ ಸರ್ವನಾಮ ಏಕವಚನ	ತಾನ್	ತಾನ್ ತನ್
ಪ್ರಥಮ ಪುರುಷ ಸರ್ವನಾಮ ಬಹುವಚನ	ತಾಂ	ತಾಂ ತಂ

ಸಂಖ್ಯಾವಾಚಕಗಳು :

ನಾಲ್ಕು, ಕೋಟಿ, ಮುಕ್ಕಾಲ್, ಅರೈ, ಕಾಲ್ ಮುಂತಾದ ಸಂಖ್ಯಾವಾಚಕಗಳು ಸಂಘಕಾಲದ ಸಾಹಿತ್ಯಗಳಲ್ಲಿ ಬಳಸಲಾಗಿವೆ. ಇವುಗಳಲ್ಲಿ ನಾಲ್ಕು ಎಂಬುದು ಅಗ ನಾನೂಱು ಎಂಬ ಸಂಕಲನದಲ್ಲೂ ಕೋಟಿ ಎಂಬುದು ಪುಱನಾನೂಱು ಎಂಬ ಸಂಕಲನ ದಲ್ಲೂ ಮುಕ್ಕಾಲ್, ಅರೈ, ಕಾಲ್ ಎಂಬುವು ಮಣಿಮೇಖಲೈ ಎಂಬ ಕಾವ್ಯದಲ್ಲೂ ಬಳಸಲಾಗಿವೆ. ಈ ಸಾಹಿತ್ಯಗಳಲ್ಲಿ ಸಂಖ್ಯಾವಾಚಕ ನಾಮಪದ 'ಆಮ್' ಎನ್ನುವ ಪ್ರತ್ಯಯವನ್ನು ಹೊಂದಿ ಕ್ರಮಸೂಚಕ ಸಂಖ್ಯಾವಾಚಕವಾಗಿ ಬರುತ್ತದೆ.

ಉದಾ ; ಇರಂಡಾಂ ಕಾಂಡಂ

ಇರಂಡಾಂ ಸಂಧಿ

ಆಗಮಗಳು :

–ಇನ್–ಎನ್ನುವ ಆಗಮ ಇನ್ ಎಂಬ ವಿಭಕ್ತಿ ಪ್ರತ್ಯಯದ ಹಿಂದೆ ಬಳಸ ಲಾಗಿರುವುದನ್ನು ಸಂಘ ಕಾಲದ ತಮಿಳು ಭಾಷೆಯಲ್ಲಿ ಕಾಣಬಹುದು.

ಉದಾ : ಅನ್ಬು–ಇನ್–ಇನ್

ಇಯಲ್ಬು–ಇನ್–ಇನ್

ಎಲ್ಲಾರ್ ಎನ್ನುವ ಪದದ ಮುಂದೆ–ಕ್ಕ್–ಎಂಬುದು ಆಗಮವಾಗಿ ಬರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಎಲ್ಲಾರ್-ಕ್ಕ್-ಉಂ

ಪುಂಸ್ತ್ರೀಲಿಂಗ ಬಹುವಚನ ನಾಮಪದಗಳೊಂದಿಗೆ-ತವರ್-ಎನ್ನುವ ಆಗಮ ಬರುತ್ತದೆ.

ಉದಾ : ಕಾದಲ್ ತಮಕ್ಕೇ
ತಾಯರ್ ತಮ್ಮೊಡು

-ತನ್-ಎನ್ನುವ ಆಗಮ ಏಕವಚನ ನಾಮಪದದೊಂದಿಗೆ ಬರುತ್ತದೆ.

ಉದಾ : ಕೋವಲರ್ ತನಕ್ಕು
ಕಣ್ಣಗಿ ತನಕ್ಕು
ಅದು ತನಕ್ಕು

ವಚನ ಪ್ರತ್ಯಯಗಳು :

-ಮಾರ್ ಎನ್ನುವ ಬಹುವಚನ ಪ್ರತ್ಯಯ ಕ್ರಿಯಾ ಪದಗಳಲ್ಲಿ ಮಾತ್ರವಲ್ಲದೆ ನಾಮಪದಗಳೊಂದಿಗೆಯೂ ಬಳಸಲಾಗಿದೆ.

ಉದಾ : ತೋಟಿ-ಮಾರ್
ಅಯ್ಯನ್-ಮಾರ್
ಪಾವೈ-ಮಾರ್

ನಪುಂಸಕಲಿಂಗ ಬಹುವಚನ ಪ್ರತ್ಯಯವಾದ-ಕಳ್ ಎಂಬುದು ಮಾನವ ನಾಮಪದಗಳೊಂದಿಗೆ ಕಾಣಸಿಕೊಳ್ಳುತ್ತದೆ.

ಉದಾ : ಅರಸರ್-ಕಳ್
ಪೂರಿಯರ್-ಕಳ್

ಲಿಂಗ ಪ್ರತ್ಯಯಗಳು :

-ಆಳನ್,-ಆಟ್ಟಿ,-ಆಳರ್ ಎಂಬ ಪ್ರತ್ಯಯಗಳು ಕ್ರಮವಾಗಿ ಪುಲ್ಲಿಂಗ, ಸ್ತ್ರೀಲಿಂಗ, ಪುಂಸ್ತ್ರೀಲಿಂಗ ಪ್ರತ್ಯಯಗಳಾಗಿ ಸಂಘಕಾಲದ ತಮಿಳಿನಲ್ಲಿ ಬಳಸಲಾಗಿವೆ.

ಉದಾ : ಉರುವಿಲ್-ಆಳನ್
ಮೇರಜಿವು-ಆಳನ್
ಏನೈ-ಆಟ್ಟಿ
ಪಟಿಮೊಳಿ-ಆಟ್ಟಿ
ಕಾಪ್ಪು-ಆಳರ್
ಕಾವಲ್-ಆಳರ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿರ್ದೇಶಕ ವಿಶೇಷಣಗಳು :

ಆಂದ, ಇಂದ ಎಂಬ ನಿರ್ದೇಶಕ ವಿಶೇಷಣಗಳು ಶಿಲಪ್ಪದಿಗಾರಂ ಮತ್ತು ಮಣಿಮೇಖಲೈನಲ್ಲಿ ಬರುತ್ತವೆ. ಅ, ಇ ಎಂಬ ನಿರ್ದೇಶಕ ಧಾತುಗಳೇ ಹಿಂದಿನ ಕಾಲದಲ್ಲಿ ನಿರ್ದೇಶಕ ವಿಶೇಷಣಗಳಾಗಿ ಬಂದಿವೆ.

ಉದಾ : ಇಂದ ಕಾರಿಗೈ
ಆಂದ ಉದವಿಕ್ಕು

ವಿಭಕ್ತಿ ಪ್ರತ್ಯಯಗಳು :

ಕೊಂಡು ಎಂಬ ಪದಪ್ರತ್ಯಯು ಸಾಧನ ವಿಭಕ್ತಿ ಪ್ರತ್ಯಯುವಾಗಿ ಬಳಕೆಯಹಾಗಿದೆ,

ಉದಾ : ಕೈ—ಕೊಂಡು

–ಆದು ಎಂಬುದು ಷಷ್ಠಿವಿಭಕ್ತಿ ಪ್ರತ್ಯಯುವಾಗಿಯೂ ಪೊರುಟ್ಟು, ಪೊರುಟ್ಟಾಲ್ ಎಂಬ ಪದ ಪ್ರತ್ಯಯಗಳು ಚತುರ್ಥಿ ವಿಭಕ್ತಿ ಪ್ರತ್ಯಯಗಳಾಗಿಯೂ ಬಳಸಲಾಗಿವೆ.

ಉದಾ : ತನ್–ಆದು
ಕಾರಿಗೈ–ಪೊರುಟ್ಟು
ಕಾರಿಗೈ–ಪೊರುಟ್ಟಾಲ್

ಹೊಸ ಪದಗಳು :

ಅಪ್ಪಡಿ, ಇಪ್ಪಡಿ, ಇಪ್ಪೋದು ಎಂಬ ಪದಗಳು ಮಣಿಮೇಖಲೈ ಎಂಬ ಕಾವ್ಯದಲ್ಲಿ ಮೊಟ್ಟಮೊದಲನೆಯದಾಗಿ ಕಾಣಿಸಿಕೊಂಡಿವೆ.

ಕ್ರಿಯಾ ಆಕೃತಿಮಾ

ಕಾಲಪ್ರತ್ಯಯಗಳು : ವರ್ತಮಾನಕಾಲ ಪ್ರತ್ಯಯಗಳು :

–ಕಿಱು–, –ಕಿನ್ಱು– ಮುಂತಾದವು ವರ್ತಮಾನಕಾಲ ಪ್ರತ್ಯಯಗಳಾಗಿ ಬರುತ್ತವೆ.

ಉದಾ : ಚಾಶಿ–ಕಿಱ್–ಅ
ಚೇರ್–ಕಿನ್ಱ್–ಅ

ಭವಿಷ್ಯತ್ ಕಾಲ ಪ್ರತ್ಯಯಗಳು :

ಭವಿಷ್ಯತ್‌ಕಾಲ ಪ್ರತ್ಯಯುವಾಗಿ –ಕ್– ಬರುತ್ತದೆ.

ಉದಾ : ಆಱ್ಱು–ಕ್–ಏನ್
ಕಳೈ–ಕ್–ಏನ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭೂತಕಾಲ ಪ್ರತ್ಯಯಗಳು :

ಭೂತಕಾಲ ಪ್ರತ್ಯಯುಪಾದ -ಇನ್- ಎಂಬುದರಲ್ಲಿ 'ಇ' ಕಾರ ಲೋಪವಾಗಿ 'ನ್' ಮಾತ್ರ ಸಂಘ ಕಾಲದಲ್ಲಿ ಬಳಸಲಾಗಿದೆ.

ಉದಾ ; ಪೋ-ನ್-ಅದು
ಆ-ನ್-ಅ

ನಿಷೇಧಾರ್ಥಕಗಳು :

ನಿಷೇಧಾರ್ಥಕ ಲಕ್ಷಿತ ಕ್ರಿಯಾಪದವಾದ 'ಇಲ್' ಎಂಬುದು ಭೂತಕಾಲ ಕ್ರಿಯಾ ಸೂಚಕ ಕೃದಂತದೊಂದಿಗೆ ಬಂದು ನಿಷೇಧಾರ್ಥಕವನ್ನು ಸೂಚಿಸುತ್ತದೆ.

ಉದಾ : ಅಱಿಂದು-ಇಲೇನ್
ಕಂಡು-ಇಲೇನ್

ಲಿಂಗ ಪ್ರತ್ಯಯ :

-ಅನ್ ಎಂಬುದು ಉತ್ತಮ ಪುರುಷ ಏಕವಚನ ಲಿಂಗ ಪ್ರತ್ಯಯವಾಗಿಯೂ -ಓಂ ಎಂಬುದು ಉತ್ತಮ ಪುರುಷ ಬಹುವಚನ ಲಿಂಗ ಪ್ರತ್ಯಯವಾಗಿಯೂ ಸಂಘ ಕಾಲದ ಸಾಹಿತ್ಯಗಳಲ್ಲಿ ಬಳಸಲಾಗಿವೆ.

ಉದಾ : ಕೈವಿಡುಕಲ್ - ಅನ್
ಉಱ್ಱೆಂದನ್-ಅನ್
ಕೂಱು-ವ್-ಅನ್
ಆಡಿನ್-ಓಂ
ಆರುಮಿಲ್-ಓಂ

ನಿಷೇಧಾರ್ಥಕ ಆಜ್ಞಾಸೂಚಕ ಪ್ರತ್ಯಯ :

ನಿಷೇಧಾರ್ಥಕ ಆಜ್ಞಾಸೂಚಕ ಪ್ರತ್ಯಯವಾಗಿ 'ಏಲ್' ಎಂಬುದು ಸಂಘಕಾಲ ತಮಿಳಿನಲ್ಲಿ ಕಾಣಸಿಕೊಂಡಿದೆ.

ಉದಾ : ಅಳ್-ಏಲ್
ಕೂಱ್-ಏಲ್
ಮಱ-ಏಲ್

ಇಚ್ಛಾರ್ಥಕ ಪ್ರತ್ಯಯ ಆಜ್ಞಾಸೂಚಕ ಪ್ರತ್ಯಯವಾಗಿ ಬರುವುದು :

ಇಚ್ಛಾರ್ಥಕ ಪ್ರತ್ಯಯಗಳು ಆಜ್ಞಾಸೂಚಕ ಪ್ರತ್ಯಯಗಳಾಗಿ ಬಳಸಲಾಗಿವೆ. ಇವು ಮೂರು ಪುರುಷಾರ್ಥಕ ಕ್ರಿಯಾ ಪದಗಳಲ್ಲೂ ಬಳಕೆಯಾಗಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಅವನ್ ಅಟ್-ಕ
ನೀ ವಾಟ್-ಇಯರ್
ಯಾನ್ ವಾಟ್-ಇಯರ್

ಇವುಗಳಲ್ಲದೆ ಉಂ | ಮ್ ಎಂಬ ಪ್ರತ್ಯಯವೂ ಮಧ್ಯಮ ಪುರುಷ ಆಜ್ಞಾ ಸೂಚಕ ಪ್ರತ್ಯಯವಾಗಿ ಸೂಚಿಸಲಾಗಿದೆ.

ಉದಾ : ಚೆನ್-ಮ್
ಕೊಣ್-ಮ್
ವರ್-ಉಂ

ಕ್ರಿಯಾಸೂಚಕ ಕೃದಂತ :

ಚೆಯ್ತಾಲ್ ಎನ್ನುವ ಅನುರೂಪದ ಕ್ರಿಯಾಪದಗಳು ನಿಯತ ಕ್ರಿಯಾಸೂಚಕ ಕೃದಂತವಾಗಿ ಬಳಸಲಾಗಿವೆ.

ಉದಾ : ಪೋನಾಲ್
ಕಂಡಾಲ್

ಚೆಯ್ಯಾಮಲ್ ಎನ್ನುವ ಅನುರೂಪದ ಕ್ರಿಯಾಪದಗಳು ನಿಷೇಧಾರ್ಥಕ ಕ್ರಿಯಾಸೂಚಕ ಕೃದಂತವಾಗಿ ಬರುತ್ತವೆ.

ಉದಾ : ಕಾಣಾಮಲ್ ಕಾಣಾಂ
ಚೆಯ್ಯಾಮಲ್ ಚೆಯ್ತು
ನೆಗಿಟಾಮಲ್

ಸಂಘ ಸಾಹಿತ್ಯಗಳಲ್ಲಿ ಚೆಯ್ವಾನ್, ಚೆಯ್ವಾರ್‌ಕ್ಕು ಎಂಬ ಅನುರೂಪದಲ್ಲಿ ಬರುವ ಕ್ರಿಯಾಪದಗಳು ಕ್ರಿಯಾಸೂಚಕ ಕೃದಂತಗಳಾಗಿ ಬಂದಿವೆ.

ಉದಾ : ಕಾಣ್ಬಾನ್ ತಂಗಿನೇನ್
ಎಲ್ಲೈ ವರುವಾನ್
ಪಡುಪಾಕ್ಕುಱಿಂದು
ಪುರಿವಾನ್

ಸಂಬಂಧ ಸೂಚಕ ಕೃದಂತ :

ಸಂಘ ಸಾಹಿತ್ಯಗಳಲ್ಲಿ ನಿಷೇಧಾರ್ಥಕ ಸಂಬಂಧ ಸೂಚಕ ಕೃದಂತ ಚೆಯ್ಯಾತ ಎಂಬ ಅನುರೂಪದಲ್ಲಿ ಕಾಣಸಿಕೊಳ್ಳುತ್ತದೆ.

ಉದಾ : ಕೆಡಾತ
ತಾವಾತ

ಮೇಲಿನ ವಿವರಣೆಗಳಿಂದ ಸಂಘ ಕಾಲದ ತಮಿಳು ಭಾಷೆಯಲ್ಲಿ ಕೆಲವು ಹೊಸ ಅಂಶಗಳು ಕಾಣಸಿಕೊಳ್ಳುವುದನ್ನೂ ಕೆಲವು ಅಂಶಗಳು ಬಳಕೆಯಿಂದ ಮಾಯವಾಗಿರುವುದನ್ನೂ ಕೆಲವು ಅಂಶಗಳು ಬದಲಾವಣೆಯಾಗಿರುವುದನ್ನೂ ತಿಳಿಯಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೯. ಪಲ್ಲವರ್ ಕಾಲದ ತಮಿಳು ಭಾಷೆ

ಪಲ್ಲವರ್ ಕಾಲದ ತಮಿಳು ಭಾಷೆಯ ಅಧ್ಯಯನಕ್ಕೆ ನೆರವಾಗುವ ಆಧಾರಗಳು ಆಳ್ವಾರರ ಮತ್ತು ನಾಯನ್ಮಾರರ ಕೃತಿಗಳು ಹಾಗೂ ಆ ಕಾಲದ ಶಾಸನಗಳು.

ಧ್ವನಿಮಾಗಳು :

ಪಲ್ಲವರ್ ಕಾಲದ ತಮಿಳು ಭಾಷೆಯಲ್ಲಿ ಕೆಳಕಂಡ ಧ್ವನಿಮಾಗಳು ಕಂಡು ಬರುತ್ತವೆ.

ಸ್ವರಧ್ವನಿಮಾಗಳು :

ಇ	ಈ			ಉ	ಊ
ಎ	ಏ			ಒ	ಓ
		ಅ	ಆ		

ವ್ಯಂಜನ ಧ್ವನಿಮಾಗಳು

ಪ್		ತ್	ಱ್	ಟ್	ಚ್	ಕ್
ಮ್			ನ್	ಣ್	ಞ್	
			ಲ್	ಳ್		
				ೞ್		
	ವ್				ಯ್	
			ರ್			

ನ (n) ಕಾರಕ್ಕೆ ನ (n) ಕಾರವೂ 'ಮ' ಕಾರಕ್ಕೆ 'ಜ' ಕಾರವೂ ಉಪಧ್ವನಿಮಾಗಳಾಗಿ ಈ ಕಾಲದಲ್ಲಿ ಬಂದಿವೆ.

ಧ್ವನಿಮಾಗಳ ವಿತರಣೆ :

ಸ್ವರಧ್ವನಿಮಾಗಳಲ್ಲಿ 'ಎ' ಕಾರ 'ಒ' ಕಾರವನ್ನು ಬಿಟ್ಟು ಇತರ ಎಲ್ಲಾ ಧ್ವನಿಮಾಗಳೂ ಪದದ ಎಲ್ಲಾ ಸ್ಥಾನದಲ್ಲೂ ಬರುತ್ತವೆ. ಇವು ಎರಡೂ ಪದದ ಅಂತ್ಯದಲ್ಲಿ ಬರುವುದಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧ್ವನಿಮಾ ಪರಿವರ್ತನೆಗಳು

ಸ್ವರ ಧ್ವನಿಮಾಗಳ ಪರಿವರ್ತನೆ :

ಅ) ಸಂಯುಕ್ತ ವ್ಯಂಜನಗಳ ಹಿಂದೆ ಬರುವ ದೀರ್ಘಸ್ವರ ಹ್ರಸ್ವಸ್ವರವಾಗುತ್ತದೆ.

ದೀರ್ಘ > ಹ್ರಸ್ವ | – ಸಂಯುಕ್ತವ್ಯಂಜನ

ಉದಾ : ನೀಕ್ಕಿ > ನಿಕ್ಕಿ

ಆಟ್ಟಿಕ್ಕು > ಅಟಿಕ್ಕು

ತೀನ್ತುವಿಟ್ > ತಿನ್ತುವಿಟ್

ಮೂನ್ಱು > ಮುನ್ಱು

ಆ) ಕೆಲವು ಪದಗಳಲ್ಲಿ ಬರುವ 'ಅ'ಕಾರ 'ಇ'ಕಾರವಾಗುವುದನ್ನು ಪಲ್ಲವರ್ ಕಾಲದ ಭಾಷೆಯಲ್ಲಿ ನೋಡಬಹುದು.

– ಅ – > – ಇ –

ಉದಾ : ಮಂಗಲಂ > ಮಂಗಿಲಂ

ಮೇಲನ > ಮೇಲಿನ

ಕಡಾ > ಕಿಡಾ

ಇ) 'ಇ'ಕಾರ 'ಉ'ಕಾರವಾಗುತ್ತದೆ.

ಇ > ಉ

ಉದಾ : ವಿಟಿಱಿಞಂ > ವುಟಿಱಿಞಂ

ಈ) 'ಐ'ಕಾರ 'ಅ'ಕಾರವಾಗುತ್ತದೆ.

ಐ > ಅ

ಉದಾ : ಐಂದು > ಅಂಚು

ತಲೈ > ತಲ

ಉ) 'ಐ'ಕಾರ 'ಎ'ಕಾರವೂ ಆಗುತ್ತದೆ.

ಐ > ಎ

ಉದಾ : ಅರೈಸರ್ > ಅರೆಸರ್

ತಲೈ > ತಲೆ

ಚಿನೈ > ಚಿನೆ

ಎಲ್ಲೈ > ಎಲ್ಲೆ

ವ್ಯಂಜನ ಧ್ವನಿಮಾಗಳ ಪರಿವರ್ತನೆ :

ಅ) –ಕ್ತ್– ಎಂಬ ವಿಜಾತೀಯ ಸಂಯುಕ್ತಾಕ್ಷರಗಳು –ತ್ತ್– ಎಂಬ ಸಜಾತೀಯ ಸಂಯುಕ್ತಾಕ್ಷರಗಳಾಗಿ ಬದಲಾವಣೆಯಾಗಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

-ಕ್ತ್- > - ತ್ತ್ - | - ಇ

ಉದಾ : ಪಕ್ತಿ > ಪತ್ತಿ

ಮುಕ್ತಿ > ಮುತ್ತಿ

ಆ) - ಜ್ಟ್ - ಎಂಬುವುಗಳೂ-ತ್ತ್- ಎಂದು ಪರಿವರ್ತನೆಹೊಂದುತ್ತವೆ. ಈ ಬದಲಾವಣೆ ಕ್ರಿ.ಶ. 8ನೇ ಶತಮಾನಕ್ಕೆ ಸೇರಿದ ಶಾಸನಗಳಲ್ಲಿಯೂ ಕಾಣಿಸಿಕೊಳ್ಳುತ್ತದೆ.

- ಜ್ಟ್ - > - ತ್ತ್ -

ಉದಾ : ಆಜ್ಟುಕ್ಕಾಲ್ > ಆತ್ತುಕ್ಕಾಲ್

ಪಜ್ಟೇದುಂ > ಪತ್ತೇದುಂ

ಚೆಜ್ಟುನಿಲಂ > ಚೇತ್ತುನಿಲಂ

ಇ) 'ನ'ಕಾರ 'ಞ'ಕಾರವಾಗುವುದನ್ನು 7ನೇ ಶತಮಾನಕ್ಕೆ ಸೇರಿದ ಅಪ್ಪರ್‌ರವರ ತೇವಾರಂನಲ್ಲೂ ಇತರ ಸಾಹಿತ್ಯಗಳಲ್ಲೂ ಕಾಣಬಹುದು:

ನ > ಞ

ಉದಾ : ಕೈನ್ನಿನ್ನು > ಕೈಞ್ಞಿನ್ನು

ನೆಗಿಟ್ತ್ತದು > ಞಿಗಿಟ್ತ್ತದು

ನಗರ್ > ಞಗರ್

ಈ) ತಿರುವಾಚಕಂನಲ್ಲಿ 'ತ'ಕಾರ ಸಂಯುಕ್ತಾಕ್ಷರಗಳು 'ಚ'ಕಾರ ಸಂಯುಕ್ತಾಕ್ಷರಗಳಾಗಿ ಬದಲಾವಣೆಯಾಗಿವೆ.

-ತ್ತ್- > - ಚ್ಚ್ - | - ಅಗ್ರಸ್ವರ

ಉದಾ : ವಿತ್ತೈ > ವಿಚ್ಚೈ

ಪಿತ್ತೇಟ್ಟಿ > ಪಿಚ್ಚೇಟ್ಟಿ

ಪಿತ್ತನ್ > ಪಿಚ್ಚನ್

ಉ) ಪಲ್ಲವರ ಕಾಲದಲ್ಲಿ 'ಳ'ಕಾರ 'ಟ'ಕಾರದಲ್ಲಿ ಐಕ್ಯವಾಗುವುದಕ್ಕೆ ತೊಡಗಿತು. 'ನಾಟ್ಪಾಟ್‌ಚ್ಚಿ' ಎಂಬ ಪದದಲ್ಲಿ 'ಆಳ್' ಎಂಬುದು 'ಆಟ್' ಎಂದು ಬದಲಾವಣೆಯಾಗಿದೆ. 8ನೇ ಶತಮಾನದಲ್ಲಿ 'ಟ'ಕಾರ 'ಳ'ಕಾರವಾಗಿ ಪರಿವರ್ತನೆಯಾಗಿದೆ.

ಟ > ಳ

ಉದಾ : ಕಿಟಿವೈ > ಕಿಳವೈ

ಕಿಟಿಕ್ಕು > ಕಿಳಕ್ಕು

ಪುಗಟ್ > ಪುಗಳ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಕೃತಿಮಾ

ನಾಮ ಆಕೃತಿಮಾ

ಲಿಂಗ ಪ್ರತ್ಯಯಗಳು :

ಪಲ್ಲವರ ಕಾಲದಲ್ಲಿ ಲಿಂಗಪ್ರತ್ಯಯಗಳಲ್ಲಿ ಅಷ್ಟೊಂದು ಬದಲಾವಣೆಗಳನ್ನು ನೋಡಲಿಕ್ಕೆ ಆಗಲಿಲ್ಲ. ಆದರೆ-ಕಳ್'-ಮಾರ್ ಮುಂತಾದ ಪ್ರತ್ಯಯಗಳು ನಾಮ ಪದದೊಂದಿಗೆ ಹೆಚ್ಚಾಗಿ ಬಳಕೆಯಾಗಿವೆ. ಇವುಗಳಲ್ಲಿ-ಕಳ್ ಎಂಬ ಪ್ರತ್ಯಯ ಸರ್ವ ನಾಮಗಳೊಂದಿಗೆಯೂ ಬರುವುದನ್ನು ನೋಡಬಹುದು.

ಉದಾ : ನೀಂ—ಕಳ್
ಉಂ—ಕಳ್
ನಂ—ಕಳ್

ಪುಂಸ್ತ್ರೀಲಿಂಗ ಬಹುವಚನ ಪ್ರತ್ಯಯವಾದ-ಆರ್ ಎಂಬುದು ಅಮಾನವ ನಾಮಪದಗಳೊಂದಿಗೆ ಅಪ್ಪರ್ ತೇವಾರಂನಲ್ಲಿ ಬಂದಿದೆ.

ಉದಾ : ಉಡಲ್—ಆರ್
ಉಯಿರ್—ಆರ್
ಪಿಣ್ಣೈ—ಆರ್
ತೆನ್ಟಲ್—ಆರ್

ಆಗಮಗಳು :

-ಉ-ಎನ್ನುವ ಆಗಮ ಮೂರ್ಧನ್ಯ ಧ್ವನಿಗೆ ಮುಂದೆ ಪಲ್ಲವರ್ ಕಾಲದ ಭಾಷೆಯಲ್ಲಿ ಬಂದಿದೆ. -ಇನ್-ಎಂಬುದು ಸಂಖ್ಯಾವಾಚಕಗಳಿಗೆ ಮುಂದೆ ಬಳಸ ಲಾಗಿದೆ. -ಇರು-ಎನ್ನುವ ಆಗಮ ಹೊಸ ಪ್ರತ್ಯಯವಾಗಿ ಕಾಣಿಸಿಕೊಂಡಿದೆ.

ವಿಭಕ್ತಿಗಳು :

ತೊಲ್ಕಾಪ್ಪಿಯರ್ ಕಾಲದ ದ್ವಿತೀಯ ವಿಭಕ್ತಿ ಪ್ರತ್ಯಯವಾದ—ಆ ಎಂಬುದು ಪಲ್ಲವರ ಕಾಲದಲ್ಲಿ-ಏ ಆಗಿ ಬದಲಾವಣೆಯಾಗಿದೆ.

ತೃತೀಯ ವಿಭಕ್ತಿ ಪ್ರತ್ಯಯವಾದ-ಆನ್ ಎಂಬುದನ್ನು-ಆಲ್ ಎಂದೂ ಬಳಸಲಾಗಿದೆ.

-ಕು ಎಂಬ ಚತುರ್ಥಿ ವಿಭಕ್ತಿ ಪ್ರತ್ಯಯಕ್ಕೆ-ಕು,-ಕ್ಕು,-ಉಕ್ಕು ಮುಂತಾದವು ವಿಕೃತರೂಪಗಳಾಗಿ ಪಲ್ಲವರ್ ಕಾಲದ ತಮಿಳುಭಾಷೆಯಲ್ಲಿ ಬಂದಿವೆ.

-ಇನ್ ಎಂಬ ಪಂಚಮೀ ವಿಭಕ್ತಿ ಪ್ರತ್ಯಯ ಕೆಲವೊಮ್ಮೆ-ನಿನ್ನು ಎಂದು ಬದಲಾಗಿದೆ.

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ತೊಲ್ಕಾಪ್ಪಿಯರ್‌ರವರ ಕಾಲದಲ್ಲಿ ಹೆಚ್ಚಾಗಿ ಸಪ್ತಮೀ ವಿಭಕ್ತಿ ಪ್ರತ್ಯಯವಾಗಿ ಬಳಸಲಾದ-ಕಣ್ ಎಂಬುದರೊಂದಿಗೆ ಪಲ್ಲವರ ಕಾಲದಲ್ಲಿ—ಇಲ್ ಎಂಬುದೂ ಸಹಜವಾಗಿ ಬಂದಿದೆ.

ಕ್ರಿಯಾ ಆಕೃತಿಮಾ

ಲಿಂಗಪ್ರತ್ಯಯಗಳು :

ಉತ್ತಮ ಪುರುಷ ಏಕವಚನ ಲಿಂಗಪ್ರತ್ಯಯಗಳಾದ-ಎನ್,-ಏನ್ ಎಂಬುವುಗಳಲ್ಲಿ-ಏನ್ ಎಂಬುದು ಹೆಚ್ಚಾಗಿ ಬಳಸಲಾಗಿದೆ. ಅಂತೆಯೆ ಪಲ್ಲವರ್ ಕಾಲದ ತಮಿಳು ಭಾಷೆಯಲ್ಲಿ--ಎಂ.–ಏಂ ಎಂಬುವು ಸಹಜವಾಗಿ ಬಳಸಲಾಗಿರುವುದನ್ನು ನೋಡಬಹುದು.

ಪ್ರಥಮ ಪುರುಷ ಪುಲ್ಲಿಂಗ ಪ್ರತ್ಯಯಗಳಾದ-ಅನ್,-ಆನ್ ಎಂಬುವುಗಳಲ್ಲಿ ಪಲ್ಲವರ್ ಕಾಲದಲ್ಲಿ-ಆನ್ ಎಂಬುದು ಸ್ಥಿರವಾದ ಸ್ಥಾನವನ್ನು ಪಡೆದಿದೆ.

ಪುಂಸ್ತ್ರೀಲಿಂಗ ಪ್ರತ್ಯಯವಾಗಿ-ಆರ್ ಎಂಬುದೂ ನಪುಂಸಕಲಿಂಗ ಏಕವಚನ ಪ್ರತ್ಯಯಗಳಾಗಿ--ತು ಮತ್ತು-ಅತು ಎಂಬುವೂ ಬಂದಿವೆ.

ಕಾಲ ಸೂಚಕ ಪ್ರತ್ಯಯಗಳು :

ತಿರುವಾಚಕಂನಲ್ಲಿ-ಕ-ಕಾರ ವರ್ತಮಾನಕಾಲವನ್ನು ಸೂಚಿಸುವ ಪ್ರತ್ಯಯವಾಗಿ ಬಂದಿದೆ.

ಉದಾ : ಚೊಲ್ಲು-ಕ್-ಏನ್

ಅಪ್ಪರ್‌ರವರ ತೇವಾರಂನಲ್ಲಿ-ಕಿಱು-,-ಕಿನ್ಱು-ಎಂಬ ಪ್ರತ್ಯಯಗಳೊಂದಿಗೆ-ಆನಿನ್ಱು-ಎನ್ನುವ ಪ್ರತ್ಯಯವೂ ವರ್ತಮಾನಕಾಲವನ್ನು ಸೂಚಿಸುವ ಪ್ರತ್ಯಯವಾಗಿ ಬಂದಿದೆ.

ಉದಾ : ಚೆಯ್‌-ಆನಿನ್ಱು-ಆನ್

ನಿಷೇಧಾರ್ಥಕ ಪ್ರತ್ಯಯ :

-ಕಿಲ್-ಎನ್ನುವ ನಿಷೇಧಾರ್ಥಕ ಪ್ರತ್ಯಯ ಪಲ್ಲವರ್ ಕಾಲದ ತಮಿಳು ಭಾಷೆಯಲ್ಲಿ ಬಳಸಲಾಗಿದೆ.

ಉದಾ : ಉಣ್ಣ-ಕಿಲ್-ಏನ್

ನಿರ್ಬಂಧಿತ ಕೃದಂತ ಪ್ರತ್ಯಯ :

ನಿರ್ಬಂಧಿತ ಕೃದಂತ ಪ್ರತ್ಯಯಗಳಾಗಿ-ಆಲ್,-ಇಲ್,-ಏಲ್ ಮುಂತಾದವು ಪಲ್ಲವರ ಕಾಲದಲ್ಲಿ ಹೆಚ್ಚಾಗಿ ಬಳಸಲಾಗಿವೆ.

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಉದಾ : ಉಱಂಗುವಿತ್ತು – ಆಲ್
ವಿಡು – ಇಲ್
ಎಣ್ಣುದಿ – ಏಲ್

ಆಜ್ಞಾಸೂಚಕ ಕ್ರಿಯಾಪದ :

ಭವಿಷ್ಯತ್‌ಕಾಲ ಕ್ರಿಯಾಧಾತುವಿನೊಂದಿಗೆ - ಆಯ್ ಎಂಬ ಪ್ರತ್ಯಯವನ್ನು ಸೇರಿಸಿ ಆಜ್ಞಾಸೂಚಕ ಕ್ರಿಯಾಪದವನ್ನು ರಚಿಸಲಾಗುತ್ತದೆ.

ಉದಾ : ತರುವ್-ಆಯ್

ನಿಷೇಧಾರ್ಥಕ ಕ್ರಿಯಾಪದ :

ತಿರುವಾಚಕಂನಲ್ಲಿ ನಿಷೇಧಾರ್ಥಕ ಕ್ರಿಯಾಪದಗಳು ಕ್ರಿಯಾದಾತುಗಳೊಂದಿಗೆ ಇಜ್ಬಿಲೇನ್ ಎನ್ನುವ ನಿಷೇಧಾರ್ಥಕ ಪೂರ್ಣ ಕ್ರಿಯಾಪದವನ್ನು ಸೇರಿಸುವುದರ ಮೂಲಕ ರಚಿತವಾಗುತ್ತದೆ.

ಉದಾ : ಪಾಡಿ-ಇಜ್ಬಿಲೇನ್
ತೇಡಿ-ಇಜ್ಬಿಲೇನ್
ಓಡಿ-ಇಜ್ಬಿಲೇನ್

ಅನುಮತಿಸೂಚಕ ಕ್ರಿಯಾಪದ :

ಅಪ್ಪರ್‌ತೇವಾರಂನಲ್ಲಿ ಪೂರ್ವಕಾಲಿಕ ಕೃದಂತದೊಂದಿಗೆ –ಲಾಂ ಎಂಬ ಪ್ರತ್ಯಯವನ್ನು ಸೇರಿಸಿ ಅನುಮತಿ ಸೂಚಕ ಕ್ರಿಯಾಪದವನ್ನು ರಚಿಸುವ ವಿಧಾನ ಕಂಡು ಬರುತ್ತದೆ.

ಉದಾ : ಆಳ-ಲಾಂ
ಉಯ್ಯ-ಲಾಂ
ಚೆಯ್ಯ-ಲಾಂ

ದ್ವಿಬಹುವಚನ ಪ್ರತ್ಯಯಗಳು

ನಾಮಪದಗಳಲ್ಲಿ ಬರುವಂತೆಯೆ ಕ್ರಿಯಾಪದಗಳಲ್ಲೂ ದ್ವಿಬಹುವಚನ ಪ್ರತ್ಯಯಗಳು ಬಳಸಲಾಗಿವೆ.

ಉದಾ : ಕಟ್ಟಿಕ್ಕಿನ್ಡ–ಈರ್‌ಕಳ್
ಆಜಿಂದ್-ಆರ್‌ಕಳ್

ಪ್ರತ್ಯಯಗಳ ಪರಿವರ್ತನೆ :

ಪಲ್ಲವರ್ ಕಾಲದ ತಮಿಳಿನಲ್ಲಿ ಕೆಳಕಂಡ ಪರಿವರ್ತನೆಗಳನ್ನು ಪ್ರತ್ಯಯಗಳಲ್ಲಿ ನೋಡಬಹುದು.

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಉದಾ : ಆಮಲ್ > ಆಮೋ : ಪಿಜಿವಾಮಲ್ > ಪಿಜಿವಾಮೋ
ಆಗ > ಆ : ಕೋವಣಮಾಗ > ಕೋವಣಮಾ
ಆಜು > ಆ : ಕೊಂಡವಾಜು > ಕೊಂಡವಾ

ಸಹಾಯಕ ಕ್ರಿಯಾಪದಗಳು :

ಅಪ್ಪರ್‌ರವರ ಕಾಲದಲ್ಲಿ ಅರುಳ್, ಇರು, ಒಟಿ, ಪೆಜು, ಇಡು, ಪೋ, ತಾ, ಚೆಯ್, ಪುರಿ, ವೈ, ವಿಡು, ಉಣ್, ಕೊಳ್, ಪಡು, ಕಿಲ್ ಮುಂತಾದವು ಸಹಾಯಕ ಕ್ರಿಯಾಪದಗಳಾಗಿ ಬಳಸಲಾಗಿವೆ.

ಉದಾ : ಎಟುಂದು - ಅರುಳಿ
ನಿನ್ನೈಂದು - ಇರುಂದೇನ್
ಅಡ್ಡೈಯು - ಪೆಜುಪ್ಪೋಂ
ಕಂಡು - ಕೊಂಡೇನ್
ಆಟುಂದಿ - ಪೋನೇನ್
ಎಯ್ದು - ಒಟಿದೇನ್
ಎಟುದಿ - ವೈ
ಕೇಟ್ಕ - ಕಡವಂ
ಉರುಗಿ - ನಿನ್ರು
ವಿಡ - ಕಿಲೇನ್
ಅಟಿತ್ತು - ಇಟ್ಟಾರ್

ಪುಂಸ್ತ್ರೀ ಲಿಂಗ ಪ್ರತ್ಯಯ ಲೋಪವಾಗುವುದು :

ಪುಂಸ್ತ್ರೀಲಿಂಗ ಬಹುವಚನ ಪ್ರತ್ಯಯವಾದ -ವ ಎಂಬುದು ಬಳಕೆಯಿಂದ ಪಲ್ಲವರ್ ಕಾಲದ ಭಾಷೆಯಲ್ಲಿ ಲೋಪವಾಗಿದೆ.

ನಿಷೇದಾರ್ಥಕ ಆಜ್ಞಾಸೂಚಕ ಮತ್ತು ಕಾರಣಾತ್ಮಕ ಪ್ರತ್ಯಯಗಳು :

ನಿಷೇದಾರ್ಥಕ ಆಜ್ಞಾಸೂಚಕ ಪ್ರತ್ಯಯವಾಗಿ-ಎಲ್ ಎಂಬುದೂ ಕಾರಣಾತ್ಮಕ ಪ್ರತ್ಯಯಗಳಾಗಿ-ವಿ,-ಪಿ ಎಂಬುವುಗಳೂ ಪಲ್ಲವರ್ ಕಾಲದ ತಮಿಳಿನಲ್ಲಿ ಬಳಸಲಾಗಿವೆ.

ಉದಾ : ವಾಟ್-ಎಲ್
ಅಟ್ಟು-ವಿ
ಕಾಣ್-ಪಿ

CC-0. In Public Domain. Gurukul Kangri Collection, Haridwar

ಕೃದಂತ ಪ್ರತ್ಯಯ :

-ಆಗಿಲ್ ಎನ್ನುವ ಪ್ರತ್ಯಯ ನಿಯತ ಕ್ರಿಯಾಸೂಚಕ ಕೃದಂತ ಪ್ರತ್ಯಯವಾಗಿ ಬಳಸಲಾಗಿದೆ.

ಉದಾ : ವರುವಾನ್-ಆಗಿಲ್

ಉದ್ದೇಶ ವಾಚಕ ಪ್ರತ್ಯಯ :

-ಕು ಎಂಬುದು ಉದ್ದೇಶ ವಾಚಕ ಪ್ರತ್ಯಯವಾಗಿ ಪಲ್ಲವರ್ ಕಾಲದ ಭಾಷೆಯಲ್ಲಿ ಬಳಕೆಯಾಗಿದೆ.

ಉದಾ : ಕಾಣ್‌ಬದಜ್-ಕು

ಸಂಸ್ಕೃತ ಪದಗಳ ಬದಲಾವಣೆ :

ಪಲ್ಲವರ್ ಕಾಲದ ಭಕ್ತಿ ಸಾಹಿತ್ಯಗಳಲ್ಲಿ ಸಂಸ್ಕೃತದ ಪ್ರಭಾವವನ್ನು ಹೆಚ್ಚಾಗಿ ಕಾಣಬಹುದು. ಅಪ್ಪರ್ ತೇವಾರಂನಲ್ಲಿ ಸಂಸ್ಕೃತ ಪದಗಳು ತಮಿಳು ಭಾಷೆಯ ಜಾಯಮಾನಕ್ಕೆ ತಕ್ಕಂತೆ ಬದಲಾವಣೆಯಾಗಿವೆ.

ಉದಾ : ಹಸ್ತ > ಅತ್ತಂ
ಹಸ್ತಿನ್ > ಅತ್ತಿ
ಮುಕ್ತಿ > ಮುತ್ತಿ
ವ್ರತ > ವಿರತಂ

ಮೇಲಿನ ವಿವರಣೆಗಳಿಂದ ಸಂಘಕಾಲದ ತಮಿಳು ಭಾಷೆಯಿಂದ ಪಲ್ಲವರ್ ಕಾಲದ ತಮಿಳು ಭಾಷೆ ಕೆಲವು ವಿಧಗಳಲ್ಲಿ ವ್ಯತ್ಯಾಸ ಹೊಂದಿರುವುದನ್ನು ಕಾಣಬಹುದು. ಸಂಘಕಾಲದ ಭಾಷೆಯ ಕೆಲವು ಅಂಶಗಳು ಲೋಪವಾಗಿರುವುದನ್ನೂ ಕೆಲವು ಅಂಶಗಳು ಹೊಸದಾಗಿ ಬಂದು ಸೇರಿರುವುದನ್ನೂ ಪಲ್ಲವರ್ ಕಾಲದ ತಮಿಳು ಭಾಷೆ ಪ್ರತಿಫಲಿಸುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೧೦. ಚೋಳರ್ ಕಾಲದ ತಮಿಳು ಭಾಷೆ

ಸಂಘ ಕಾಲದ ತಮಿಳು ಭಾಷೆಗೂ ಚೋಳರ್ ಕಾಲದ ತಮಿಳು ಭಾಷೆಗೂ ನಡುವೆ ಹಲವಾರು ವ್ಯತ್ಯಾಸಗಳಿವೆ. ಸಂಘಕಾಲದಲ್ಲಿ ಕಾಣಿಸಿಕೊಂಡ ಕೆಲವು ಹೊಸ ಅಂಶಗಳು ಚೋಳರ ಕಾಲದಲ್ಲಿ ಸ್ಥಿರವಾದ ಸ್ಥಾನವನ್ನು ಪಡೆದಿವೆ; ಕೆಲವು ಅಂಶಗಳು ಲೋಪವಾಗಿವೆ; ಕೆಲವು ಅಂಶಗಳು ಹೊಸದಾಗಿ ಕಾಣಿಸಿಕೊಂಡಿವೆ. ಪ್ರಸಿದ್ಧ ಕಾವ್ಯಗಳಾದ ಕಂಬರಾಮಾಯಣಂ, ಜೀವಕಚಿನ್ತಾಮಣಿ ಮುಂತಾದವುಗಳೊಂದಿಗೆ ಹಲವಾರು ಬಗೆಯ ಕಿರು ಸಾಹಿತ್ಯಗಳೂ ಚೋಳರ ಕಾಲದಲ್ಲಿ ರಚನೆಯಾಗಿವೆ. ಈ ಸಾಹಿತ್ಯಗಳಲ್ಲದೆ ವೀರಚೋೞಿಯಂ, ನೇಮಿನಾಥಂ, ನನ್ನೂಲ್ ಮುಂತಾದ ವ್ಯಾಕರಣ ಗ್ರಂಥಗಳೂ ಇದೇ ಕಾಲದಲ್ಲಿ ರಚಿತವಾದವು. ಈ ಕಾಲದಲ್ಲಿ ಶಾಸನಗಳೂ ಹೆಚ್ಚಾಗಿ ದೊರೆತಿವೆ. ಮೇಲೆ ಹೇಳಿದ ಸಾಹಿತ್ಯಗಳು, ವ್ಯಾಕರಣಗಳು, ಶಾಸನಗಳು ಮುಂತಾದವು ಚೋಳರ್ ಕಾಲದ ತಮಿಳು ಭಾಷೆಯನ್ನು ತಿಳಿದುಕೊಳ್ಳಲು ದೃಢ ಆಧಾರಗಳಾಗುತ್ತವೆ.

ಧ್ವನಿಮಾಗಳು

100824

ಸ್ವರಧ್ವನಿಮಾಗಳು :

ಪಲ್ಲವರ ಕಾಲದಲ್ಲಿ ಕಾಣಿಸಿಕೊಂಡ 10 ಸ್ವರ ಧ್ವನಿಮಾಗಳೇ ಚೋಳರ್ ಕಾಲದ ತಮಿಳು ಭಾಷೆಯಲ್ಲೂ ಕಾಣಿಸಿಕೊಳ್ಳುತ್ತವೆ.

ಇ	ಈ		ಉ	ಊ
ಎ	ಏ		ಒ	ಓ
		ಅ ಆ		

ವ್ಯಂಜನ ಧ್ವನಿಮಾಗಳು :

ಚೋಳರ್ ಕಾಲದ ತಮಿಳು ಭಾಷೆಯಲ್ಲಿ ಕೆಳಕಂಡ ವ್ಯಂಜನ ಧ್ವನಿಮಾಗಳು ಕಂಡು ಬರುತ್ತವೆ.

ಪ್	ತ್	ಱ್	ಟ್	ಚ್	ಕ್
ಮ್		ನ್	ಣ್		
	ವ್			ಯ್	
		ರ್			
		ಲ್	ಳ್		
			ೞ್		

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಧ್ವನಿಮಾ ವಿತರಣೆ ;

ತೊಲ್ಕಾಪ್ಪಿಯಂ ಎಂಬ ವ್ಯಾಕರಣದೊಂದಿಗೆ ಚೋಳರ್ ಕಾಲದ ವ್ಯಾಕರಣಗಳಾದ ನನ್ನೂಲ್, ವೀರಚೋಟಿಯಂ ಮುಂತಾದವುಗಳನ್ನು ಹೋಲಿಸಿ ಅಧ್ಯಯನ ಮಾಡಿದರೆ ಧ್ವನಿಮಾ ವಿತರಣೆಯಲ್ಲಿ ಉಂಟಾದ ಬದಲಾವಣೆಗಳನ್ನು ಸ್ಪಷ್ಟವಾಗಿ ತಿಳಿಯಬಹುದು.

ತೊಲ್ಕಾಪ್ಪಿಯಂ 'ಞ' ಕಾರ ಅ, ಎ, ಒ ಮುಂತಾದ ಸ್ವರಗಳೊಂದಿಗೆ ಮಾತ್ರವೇ ಪದದ ಆದಿಯಲ್ಲಿ ಬರಬಹುದು ಎಂದು ಹೇಳಿದೆ. ಆದರೆ ನನ್ನೂಲ್, ವೀರ ಚೋಟಿಯಂ ಎಂಬ ವ್ಯಾಕರಣಗಳು 'ಞ' ಕಾರ 'ಆ' ಕಾರದೊಂದಿಗೆ ಬರುವುದನ್ನೂ ಎತ್ತಿ ತೋರಿಸಿವೆ.

ಅಂತೆಯೆ 'ಯ' ಕಾರ 'ಆ' ಕಾರವನ್ನು ಹೊರತು ಅ, ಉ, ಊ. ಒ, ಔ ಮುಂತಾದ ಸ್ವರಗಳೊಂದಿಗೆಯೂ ಆದಿಯಲ್ಲಿ ಬರುವುದನ್ನು ಈ ವ್ಯಾಕರಣಗಳು ಸ್ಪಷ್ಟ ಪಡಿಸಿವೆ.

ಎಲ್ಲಾ ಸ್ವರಗಳೂ ಪದದ ಅಂತ್ಯದಲ್ಲಿ ಬರುತ್ತವೆ ಎಂದು ತೊಲ್ಕಾಪ್ಪಿಯಂ ನನ್ನೂಲ್ ಮುಂತಾದ ವ್ಯಾಕರಣಗಳು ಹೇಳುವಾಗ ವೀರಚೋಟಿಯಂ 'ಎ' ಮತ್ತು 'ಒ' ಎರಡು ಸ್ವರಗಳೂ ಅಂತ್ಯದಲ್ಲಿ ಬರುವುದಿಲ್ಲ ಎಂದು ಹೇಳಿದೆ.

ತೊಲ್ಕಾಪ್ಪಿಯಂ ಮತ್ತು ನನ್ನೂಲ್ ಎರಡೂ ಮ್, ಞ್, ಣ್, ನ್ (n), ನ್ (ṉ), ಯ್, ರ್, ಲ್, ವ್, ಳ್, ೞ್ ಮುಂತಾದ ವ್ಯಂಜನಗಳು ಅಂತ್ಯದಲ್ಲಿ ಬರುತ್ತವೆ ಎಂದು ಹೇಳುವಾಗ ವೀರಚೋಟಿಯಂ ಞ್, ನ್ (n), ವ್ ಮುಂತಾದ ವ್ಯಂಜನಗಳು ಬರುವುದಿಲ್ಲ ಎಂದಿದೆ.

ಧ್ವನಿಮಾ ಪರಿವರ್ತನೆಗಳು :

ಸ್ವರ ಧ್ವನಿಮಾ ಪರಿವರ್ತನೆ :

ಚೋಳರ್ ಕಾಲದ ತಮಿಳು ಭಾಷೆಯಲ್ಲಿ ಕೆಳಕಂಡ ಸ್ವರ ಧ್ವನಿಮಾಗಳ ಪರಿವರ್ತನೆಗಳನ್ನು ನೋಡಬಹುದು.

1. 'ಅ' ಕಾರ 'ಇ'ಕಾರವಾಗುವುದು :

   –ಅ– > –ಇ–

   ಉದಾ : ಅದನುಕ್ಕು > ಅದಿನುಕ್ಕು
   ಸುಲಭಂ > ಸುಲಿಭಂ
   ಮೇಲನ > ಮೇಲಿನ

2. 'ಅ' ಕಾರ 'ಉ'ಕಾರವಾಗುವುದು :

   –ಅ– > –ಉ–

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಕೊಂಡದು > ಕೊಂಡುದು
ಪುಗುನ್ತದು > ಪುಗುನ್ತುದು

3. 'ಉ' ಕಾರ 'ಇ'ಕಾರವಾಗುವುದು :

-ಉ- > -ಇ-

ಉದಾ : ಅಮುಂದು > ಅಮಿಂದು
ಅರುಳಿನ > ಅರಿಳಿನ
ಚೆಲುತ್ತಿ > ಚೆಲಿತ್ತಿ

4. 'ಎ' ಕಾರ 'ಇ' ಕಾರವಾಗುವುದು :

ಎ > ಇ

ಉದಾ : ಪೆಯರ್ > ಪಿಯರ್
ಚೆಲವು > ಚಿಲವು
ಎನಕ್ಕು > ಇನಕ್ಕು
ಎಡುತ್ತು > ಇಡುತ್ತು

5. ಸಂಸ್ಕೃತ ಪದಗಳಲ್ಲಿ 'ಇ'ಕಾರ 'ಎ' ಕಾರವಾಗಿಯೂ 'ಉ'ಕಾರ 'ಒ' ಕಾರವಾಗಿಯೂ ಪರಿವರ್ತನೆಯಾಗಿವೆ.

{ ಇ / ಉ } > { ಎ / ಒ }

ಉದಾ : ನಿಧಿ > ನೆಧಿ
ಪುತ್ತಕಂ > ಪೊತ್ತಕಂ
ಉಲಗಂ > ಒಲಗಂ

6. ಅಂತೆಯೇ ತಮಿಳು ಪದಗಳಲ್ಲೂ ಮೇಲಿನ ಪರಿವರ್ತನೆಗಳು ಕಂಡು ಬರುತ್ತವೆ.

ಉದಾ : ಪಿಱವುಂ > ಪೆಱವುಂ
ಕುಲ್ಯೈತರ > ಕೊಲ್ಯೈತರ
ಉಪಾದಿ > ಒಪಾದಿ

7. 'ಇ' ಕಾರ 'ಅ' ಕಾರವಾಗುವುದು :

-ಇ- > -ಅ-

ಉದಾ ; ಅದಿಯಮಾನ್ > ಅದಯಮಾನ್
ಞಾಯಿಱು > ಞಾಯಱು
ವಯಿಱು > ವಯಱು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

8. ಪದದ ಅಂತ್ಯದಲ್ಲಿ ಬರುವ 'ಉ' ಕಾರ, ಸ್ಪರ್ಶ ಧ್ವನಿಯಾದ 'ಚ' ಕಾರಕ್ಕೆ ಮುಂದೆ ಬರುವಾಗ 'ಇ' ಕಾರವಾಗಿ ತಾಲವ್ಯೀಕರಣವಾಗುತ್ತದೆ.

-ಉ > -ಇ / ಚ-

ಉದಾ : ಕಟಿಂಚು > ಕಟಿಂಚಿ

9. ಸಂಘಕಾಲದ ಭಾಷೆಯಲ್ಲಿ ಕಂಡುಬರುವ ಅ > ಐ ಬದಲಾವಣೆ ಚೋಳರ್ ಕಾಲದ ತಮಿಳು ಭಾಷೆಯಲ್ಲೂ ಕಂಡುಬರುತ್ತದೆ.

ಅ > ಐ /-ತಾಲವ್ಯಧ್ವನಿಗಳು

ಉದಾ : ಸಮಯಂ > ಸಮೈಯಂ
ತಚ್ಚನ್ > ತೈಚ್ಚನ್

'ಅ' ಕಾರದ ಹಿಂದೆ, ಮುಂದೆ ತಾಲವ್ಯಧ್ವನಿಗಳು ಬಾರದೆಹೋದರೂ ಕೆಲವೊಮ್ಮೆ ಈ ಸ್ವರ ಬದಲಾವಣೆ ನಡೆಯುತ್ತದೆ.

ಉದಾ : ಅತ್ತೈ > ಐತ್ತೈ
ಅತ್ತಾನ್ > ಐತ್ತಾನ್

10. 'ಐ' ಕಾರ 'ಎ' ಕಾರವಾಗುತ್ತದೆ :

ಐ < ಎ

ಉದಾ : ಅರಸರ್ > ಅರೈಸರ್ > ಅರೆಸರ್
ಚಿನ್ನೈ > ಚಿನೆ
ತಲೈ > ತಲೆ
ಎಲ್ಲೈ > ಎಲ್ಲೆ

11. ಓಷ್ಠ್ಯ ಧ್ವನಿಗೆ ಹಿಂದೆ ಬಂದರೂ ಮುಂದೆ ಬಂದರೂ 'ಅ' ಕಾರ 'ಒ' ಕಾರವಾಗುತ್ತದೆ :

-ಅ- > -ಒ- | { -ಓಷ್ಠ್ಯ / ಓಷ್ಠ್ಯ- }

ಉದಾ : ವಾಣಕಪ್ಪಾಡಿ > ವಾಣಕೊಪ್ಪಾಡಿ
ಅನುಭವಿತ್ತು > ಅನುಭೊವಿತ್ತು
ಪುಜಿವರಿ > ಪುಜಿೊವರಿ
ಕಾಡುಗಳ್ > ಕಾಡುಗೊಳ್
ಕಮ್ಬಂ > ಕಂಬೊಂ

ಇವುಗಳಲ್ಲದೆ ಬೇರೆ ಕೆಲವು ಪದಗಳಲ್ಲಿಯೂ ಈ ಬದಲಾವಣೆಯನ್ನು ನೋಡ ಬಹುದು.

ಉದಾ : ಉಂಗಳ್ > ಉಂಗೊಳ್
ಕೇಟ್ಪೀರ್‌ಗಳ್ > ಕೇಟ್ಪೀರ್‌ಗೊಳ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

12. 'ಇ' ಕಾರ 'ಉ' ಕಾರವಾಗುತ್ತದೆ ;

-ಇ- > ಉ | { -ಓಷ್ಠ್ಯ / ಓಷ್ಠ್ಯ- }

ಉದಾ : ಕಳಿಚು > ಕಳುಚು
ತಮಿಳ್ > ತಮುಳ್
ಮುಪ್ಪಿಜು > ಮುಪ್ಪುಜು

13. ಓಷ್ಠ್ಯ, ಮೂರ್ಧನ್ಯ, ವರ್ತ್ಸ್ಯ ಮುಂತಾದ ಧ್ವನಿಗಳು 'ಎ' ಕಾರಕ್ಕೆ ಹಿಂದೆಯೂ ಮುಂದೆಯೂ ಬಂದರೆ 'ಎ' ಕಾರ 'ಒ' ಕಾರವಾಗುತ್ತದೆ.

-ಎ- > -ಒ- | | - | ಓಷ್ಠ್ಯ / ಮೂರ್ಧನ್ಯ / ವರ್ತ್ಸ್ಯ | |
| | ಓಷ್ಠ್ಯ / ಮೂರ್ಧನ್ಯ / ವರ್ತ್ಸ್ಯ | - |

ಉದಾ : ತೆನ್ಬಿಸೈ > ತೊನ್ಬಿಸೈ
ಸೆಂಬಾದಿ > ಸೊಂಬಾದಿ
ನೆಳಿಚ್ಚು > ನೊಳಿಚ್ಚು
ಸೆವಿದು > ಸೊವಿದು

ವ್ಯಂಜನ ಧ್ವನಿಮಾ ಪರಿವರ್ತನೆ :

1. ಇ, ಯ್, ಐ ಮುಂತಾದ ಧ್ವನಿಗಳ ಮುಂದೆ ಬರುವ 'ನ್ತ್' ಎಂಬುವು 'ಞ್ಚ್' ಎಂದು ಬದಲಾವಣೆಯಾಗುತ್ತವೆ.

-ನ್ತ್ > -ಞ್ಚ್ | { ಇ / ಯ್ / ಐ } —

ಉದಾ : ಐನ್ತು > ಐಞ್ಚು > ಅಞ್ಚು
ವಿಳೈನ್ತು > ವಿಳೈಞ್ಚು

2. ಸಂಯುಕ್ತ ಅಕ್ಷರಗಳಾದ 'ನ್ನ್' ಎಂಬುವು 'ಞ್ಞ್' ಎಂದಾಗುತ್ತವೆ.

-ನ್ನ್ > -ಞ್ಞ್ | ಅಗ್ರಸ್ವರ-

ಉದಾ : ಐನ್ನೂರು > ಐಞ್ಞೂರು
ಇನ್ನಿಲಂ > ಇಞ್ಞಿಲಂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

3. 'ತ್ತ್' ಎಂಬುವು ತಾಲವ್ಯ ಅಥವಾ ಅಗ್ರಸ್ವರದ ಮುಂದೆ ಬಂದರೆ 'ಚ್ಚ' ಎಂತಾಗುತ್ತವೆ.

-ತ್ತ್ > -ಚ್ಚ | {ತಾಲವ್ಯ / ಅಗ್ರಸ್ವರ} –

4, ತಾಲವ್ಯ ಧ್ವನಿಗಳು ದಂತ್ಯ ಧ್ವನಿಗಳಾಗುವುದನ್ನು ಚೋಳರ್ ಕಾಲದ ತಮಿಳು ಭಾಷೆಯಲ್ಲಿ ನೋಡಬಹುದು.

-ತಾಲವ್ಯ > -ದಂತ್ಯ

ಉದಾ : ಞಾಯಿಱು > ನಾಯಿಱು

ಚೆಱುಮನ್ಸೈ > ತಿಱುಮನ್ಸೈ

5. 'ಟ' ಕಾರ 'ಳ' ಕಾರವಾಗುವುದು.

– ಟ – > -ಳ- | -ಅಗ್ರ ಸ್ವರಗಳು

ಉದಾ : ನಾಟಿ > ನಾಳಿ

ವಾಟ್ಟೈ > ವಾಳ್ಳೈ

6. 'ಳ' ಕಾರ 'ಟ' ಕಾರವಾಗುವುದು.

-ಳ- > -ಟ-

ಉದಾ : ವಿಳಕ್ಕು > ವಿಟಕ್ಕು

ಪಳಿಂಗು > ಪಟಿಂಗು

ಇಳವ್ವೈ > ಇಟವ್ವೈ

7. ಸ್ವರಗಳ ಮಧ್ಯದಲ್ಲಿ ಬರುವ 'ಱ್ಱ್' ಕಾರಗಳು 'ತ್ತ್' ಕಾರಗಳಾಗಿ ಬದಲಾವಣೆಯಾಗುತ್ತವೆ.

-ಱ್ಱ್- > -ತ್ತ್- | ಸ್ವರ–ಸ್ವರ

ಉದಾ : ಆಱ್ಱುಕ್ಕಾಲ್ > ಆತ್ತುಕ್ಕಾಲ್

ಚೇಱ್ಱುನಿಲಂ > ಚೇತ್ತುನಿಲಂ

8. ಪದದ ಮಧ್ಯದಲ್ಲಿ ಬರುವ 'ರ' ಕಾರ, ಸಜಾತೀಯ ಸ್ಪರ್ಶ ಸಂಯುಕ್ತಾಕ್ಷರಗಳ ಹಿಂದೆ ಬರುವಾಗ ಲೋಪವಾಗುತ್ತದೆ.

-ರ- > -ϕ- | -ಸಜಾತೀಯ ಸಂಯುಕ್ತ ಸ್ಪರ್ಶ ಧ್ವನಿಗಳು

ಉದಾ ; ಪಾರ್ಕ್ಕ > ಪಾಕ್ಕ

ಚೇರ್ಕ್ಕ > ಚೇಕ್ಕ

9. ಸ್ವರಗಳ ಮಧ್ಯದಲ್ಲಿ ಬರುವ 'ಟ' ಕಾರ 'ಯ' ಕಾರವಾಗುತ್ತದೆ.

-ಟ-> -ಯ- | ಸ್ವರ–ಸ್ವರ

ಉದಾ : ವಾಟ್ಟೈ > ವಾಯ್ಯೈ

ಕೋಟಿ> ಕೋಯಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

10. ಸ್ವರಗಳ ನಡುವೆ ಬರುವ ' ಯ ' ಕಾರ ' ಚ ' ಕಾರವಾಗುತ್ತದೆ.

-ಯ- > -ಚ- | ಸ್ವರ-ಸ್ವರ

ಉದಾ : ಉಯಿರ್ > ಉಚಿರ್

ಮಯಿರ್ > ಮಚಿರ್

11. ' ಜ ' ಕಾರ ಸಂಯುಕ್ತಾಕ್ಷರಗಳು ಸ್ವರಗಳ ನಡುವೆ ಬರುವಾಗ 'ಚ' ಕಾರ ಸಂಯುಕ್ತಾಕ್ಷರಗಳಾಗುತ್ತವೆ.

-ಜ್ಟ- > -ಚ್ಟ- | ಸ್ವರ-ಸ್ವರ

ಉದಾ : ಪೆಜ್ಟಿಲ್ಲೈ > ಪೆಚ್ಚಿಲ್ಲೈ

ಮುಜ್ಟಂ > ಮುಚ್ಚಂ

ಕಜ್ಟಿಲ > ಕಚ್ಚಿಲ

12. ಕೆಲವು ವೇಳೆ ' ಚ ' ಕಾರ ಸಂಯುಕ್ತಾಕ್ಷರಗಳು ' ಜ ' ಕಾರ ಸಂಯುಕ್ತಾಕ್ಷರಗಳಾಗಿ ಬದಲಾವಣೆಯಾಗುವುದನ್ನೂ ನೋಡಬಹುದು.

-ಚ್ಟ- > - ಜ್ಟ - | ಸ್ವರ-ಸ್ವರ

ಉದಾ : ಉಚ್ಚಿಯಂ ಪೋದು > ಉಜ್ಜಿಯಂಪೋದಂ

ಪಿಚ್ಚಿಲ > ಪಿಜ್ಜಿಲ

13. ಕ್ರಿ.ಶ. 11 ಮತ್ತು 12ನೇ ಶತಮಾನದ ತಮಿಳು ಭಾಷೆಯಲ್ಲಿ ಕೆಲವೊಮ್ಮೆ ' ಯ' ಕಾರ ಲೋಪವಾಗಿದೆ.

-ಯ- > - ϕ -

ಉದಾ : ವಾಯ್‌ಕ್ಕಾಲ್ > ವಾಕ್ಕಾ

ನೆಯ್ದು > ನೇದ

ಮೇಯ್‌ನ್ದ > ಮೇನ್ದ

14. ' ಯ ' ಕಾರದಂತೆಯೆ ' ರ ' ಕಾರವೂ ಸಂಯುಕ್ತಾಕ್ಷರಗಳ ಹಿಂದೆ ಬರುವಾಗ ಲೋಪವಾಗಿದೆ.

-ರ- > -ϕ- | -ಸಂಯುಕ್ತಾಕ್ಷರಗಳು

ಉದಾ : ಕೀರ್ತ್ತಿಯೈ > ಕೀತ್ತಿಯೈ

ಕಾರ್ತ್ತಿಗೈ > ಕಾತ್ತಿಗೈ

ತಳರ್‌ನ್ದು > ತಳನ್ದು

ವಾರ್ತ್ತು > ವಾತ್ತು

15. ಸ್ವರಗಳ ನಡುವೆ ಬರುವ ' ಕ ' ಕಾರ ಕೆಲವೊಮ್ಮೆ ' ಯ ' ಕಾರ ವಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

-ಕ-> -ಯ- | ಸ್ವರ-ಸ್ವರ

ಉದಾ : ವೈಕಾಸಿ > ವೈಯಾಸಿ

ಇಕಲ್ > ಇಯಲ್

ಧ್ವನಿವೈಕ್ಯ :

ನ(ṉ)ಕಾರ ನ (n) ಕಾರಗಳ ಐಕ್ಯತೆ :

ದಂತ್ಯ ಅನುನಾಸಿಕ ಧ್ವನಿಯಾದ ನ (n) ಕಾರ ವರ್ತ್ಸ್ಯ ದಂತ್ಯ ಅನುನಾಸಿಕ ಧ್ವನಿಯಾದ ನ (ṉ) ಕಾರದೊಂದಿಗೆ ಐಕ್ಯವಾಗಿದೆ. ಪಲ್ಲವರ ಕಾಲದಲ್ಲಿ ಆರಂಭವಾದ ಈ ಐಕ್ಯತೆ ಚೋಳರ ಕಾಲದಲ್ಲಿ ಪೂರ್ತಿಯಾಗಿದೆ.

''ಱ'' ಕಾರ ''ರ'' ಕಾರಗಳ ಐಕ್ಯತೆ :

ಸ್ವರಗಳ ನಡುವೆ ಬರುವ 'ರ' ಕಾರ 'ಱ' ಕಾರದೊಂದಿಗೆಯೂ 'ಟ' ಕಾರ 'ರ' ಕಾರದೊಂದಿಗೆಯೂ ಐಕ್ಯವಾಗುವುದನ್ನು ನೋಡಬಹುದು. ಇದು ಹನ್ನೊಂದನೇ ಶತಮಾನದ ಭಾಷೆಯಲ್ಲಿ ಕಂಡುಬರುತ್ತದೆ,

ಉದಾ : ಮೋಱ್ಕ > ಮೋರ್‌ಕ್ಕ

ನಿಱುತ್ತು > ನಿರುತ್ತು

ಕಾರ್‌ಕ್ಕಳಿಱು > ಕಾಱ್ಕಳಿಱು

ತರೈ > ತಱೈ

'ಳ' ಕಾರ 'ಟ' ಕಾರಗಳ ಐಕ್ಯತೆ :

ಕೆಲವು ಪದಗಳಲ್ಲಿ 'ಳ' ಕಾರ 'ಟ' ಕಾರದಲ್ಲಿ ಐಕ್ಯವಾಗಿರುವುದನ್ನು ನೋಡಬಹುದು.

ಉದಾ : ಕಳಂ > ಕಟಂ

ವಳಂ > ವಟಂ

ಆಕೃತಿಮಾ :

ನಾಮ ಆಕೃತಿಮಾ :

ಲಿಂಗ ಪ್ರತ್ಯಯಗಳು :

'ವೀರ ಚೋಟಿಯಂ' ಎಂಬ ಲಕ್ಷಣ ಗ್ರಂಥ -ಕ್ಕನ್, -ಮನ್ ಮುಂತಾದ ಪ್ರತ್ಯಯಗಳನ್ನು ಪುಲ್ಲಿಂಗ ಪ್ರತ್ಯಯಗಳಾಗಿ ಸೂಚಿಸಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಚಿಱು – ಕ್ಕನ್
ಕರು – ಮನ್

–ಮಿ, –ಚ್ಚಿ, –ಆಟ್ಟಿ,–ಆತ್ತಿ ಮುಂತಾದವುಗಳನ್ನು ಸ್ತ್ರೀಲಿಂಗ ಪ್ರತ್ಯಯಗಳಾಗಿ ಎತ್ತಿ ಹೇಳಿದೆ.

ಉದಾ : ಚಿಱು – ಮಿ
ಆಯ್ – ಚ್ಚಿ
ವೇಳ್ – ಆಟ್ಟಿ
ವಣ್ – ಆತ್ತಿ

ಇವುಗಳಲ್ಲಿ –ಆಟ್ಟಿ, –ಆತ್ತಿ ಎಂಬ ಪ್ರತ್ಯಯಂಗಳು ಈ ಕಾಲದಲ್ಲಿ ಮಾತ್ರವೇ ಬಳಸಲಾದ ಪ್ರತ್ಯಯಗಳು.

ಸರ್ವನಾಮಗಳು :

ಈ ಕಾಲದಲ್ಲಿ 'ನೀಂ' ಮತ್ತು 'ನೀಂಗಳ್' ಎಂಬ ಸರ್ವನಾಮಗಳು ಬಳಕೆಯಾಗಿರುವುದರೊಂದಿಗೆ ಸ್ಥಿರವಾದ ಸ್ಥಾನವನ್ನೂ ಗಳಿಸಿಕೊಂಡವು.

ಇವುಗಳೊಂದಿಗೆ ಯಾಂಗಳ್, ನಾಂಗಳ್, ಎಂಗಳ್, ನಂಗಲ್ ಮುಂತಾದ ಉತ್ತಮ ಪುರುಷ ಬಹುವಚನ ಸರ್ವನಾಮಗಳೂ ತಂಗಳ್, ತಾಂಗಳ್, ಅವರ್‌ಗಳ್, ಇವರ್‌ಗಳ್, ಯಾವರ್‌ಗಳ್ ಮುಂತಾದ ಪ್ರಥಮ ಪುರುಷ ಬಹುವಚನ ಸರ್ವನಾಮಗಳೂ ಈ ಕಾಲದ ಭಾಷೆಯಲ್ಲಿ ಕಂಡುಬಂದಿವೆ.

ವಿಭಕ್ತಿಗಳು :

–ಆಲ್, –ಆನ್, –ಒಡು, –ಓಡು ಎಂಬುವುಗಳನ್ನು ತೃತೀಯಾ ವಿಭಕ್ತಿ ಪ್ರತ್ಯಯಗಳಾಗಿಯೂ –ಇನ್, –ಇಲ್ ಎಂಬುವುಗಳನ್ನು ಪಂಚಮೀ ವಿಭಕ್ತಿ ಪ್ರತ್ಯಯಗಳಾಗಿಯೂ –ಅದು, –ಆದು, –ಅ ಎಂಬುವುಗಳನ್ನು ಷಷ್ಠಿ ವಿಭಕ್ತಿ ಪ್ರತ್ಯಯಗಳಾಗಿಯೂ ಹೆಚ್ಚು ಕಡಿಮೆ 28 ಪ್ರತ್ಯಯಂಗಳನ್ನು ಸಪ್ತಮಿ ವಿಭಕ್ತಿ ಪ್ರತ್ಯಯಗಳಾಗಿಯೂ ನನ್ನೂಲ್ ಎಂಬ ವ್ಯಾಕರಣ ಗ್ರಂಥ ಎತ್ತಿ ಹೇಳಿದೆ.

ಕ್ರಿಯಾ ಆಕೃತಿಮಾ :

ಕಾರಣಾತ್ಮಕ ಕ್ರಿಯಾಪದ :

ಕಾರಣಾತ್ಮಕ ಕ್ರಿಯೆಯ ಪ್ರತ್ಯಯಗಳಾದ –ಪಿ– ಮತ್ತು –ವಿ– ಎಂಬುವು ಸಂಘ ಕಾಲದಲ್ಲೇ ಬಂದರೂ ಚೋಳರ್ ಕಾಲದ ತಮಿಳು ಭಾಷೆಯಲ್ಲಿ ಅವು ಹೆಚ್ಚಾಗಿ ಬಳಸಲಾಗಿವೆ. ಸಂಘ ಕಾಲದಲ್ಲಿ ಬಳಕೆಯಲ್ಲಿದ್ದ 'ಇ' ಎಂಬ ಪ್ರತ್ಯಯ ಲೋಪವಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚೆಯ್, ಪ್ಪೈ, ಪಣ್ಣು ಮುಂತಾದ ಸಹಾಯಕ ಕ್ರಿಯಾಪದಗಳೂ ಕಾರಣಾತ್ಮಕ ಕ್ರಿಯಾ ಪದಗಳ ರಚನೆಗೆ ನೆರವಾಗುತ್ತವೆ.

ಉದಾ : ವಾಟಿ-ಚೆಯ್ಯಾನ್
ಚೆಲ್ಲ - ಪ್ಪೈತ್ತಾಯ್
ಒಲವಿಡ - ಎನ್ನೈ -ಪಣ್ಣೆ

ಇವುಗಳಲ್ಲದೆ ಚೋಳರ ಕಾಲದಲ್ಲಿ 'ಕಾಣ್', 'ಕೊಳ್' ಮುಂತಾದವುಗಳೂ ಕಾರಣಾತ್ಮಕ ಕ್ರಿಯಾಪದವನ್ನು ರಚಿಸಲಿಕ್ಕೆ ನೆರವಾಗಿವೆ. ಇವು ಇಂದಿನ ತಮಿಳು ಭಾಷೆಯಲ್ಲಿ ಇಲ್ಲ.

ಉದಾ : ಉಣ್ಣ – ಕಂಡಾನ್
ಉಯ್ಯ – ಕೊಂಡಾನ್

ಕಾಲಸೂಚಕ ಪ್ರತ್ಯಯಗಳು :

ಕ್ರಿ. ಶ. 13ನೇ ಶತಮಾನಕ್ಕೆ ಸೇರಿದ ನನ್ನೂಲ್ –ತ್–, –ಟ್–, –ಱ್–, –ಇನ್– ಮುಂತಾದವುಗಳನ್ನು ಭೂತಕಾಲ ಸೂಚಕ ಪ್ರತ್ಯಯಗಳಾಗಿಯೂ –ಕಿಱು–, –ಕಿನ್ಱು–, –ಆನಿನ್ಱು– ಮುಂತಾದವುಗಳನ್ನು ವರ್ತಮಾನ ಕಾಲ ಸೂಚಕ ಪ್ರತ್ಯಯಗಳಾಗಿಯೂ ಸೂಚಿಸುತ್ತದೆ.

–ತ– ಕಾರ ಕಂಬರಾಮಾಯಣದಲ್ಲೂ ಪೆರಿಯ ಪುರಾಣದಲ್ಲೂ ಭವಿಷ್ಯತ್ ಕಾಲ ಸೂಚಕ ಪ್ರತ್ಯಯವಾಗಿ ಬಂದಿದೆ.

ಉದಾ : ವುಗು–ತ್_ಇರ್
ಅಂಜು – ತ್ –ಉಂ
ಅಱು – ತ್–ಉಂ

ಆಜ್ಞಾಸೂಚಕ ಕ್ರಿಯಾಪದಗಳು :

ಭವಿಷ್ಯತ್‌ಕಾಲ ಸೂಚಕ ಕ್ರಿಯಾಧಾತುವಿನೊಂದಿಗೆ –ಆಯ್ ಎನ್ನುವ ಪ್ರತ್ಯಯವನ್ನು ಸೇರಿಸಿ ಆಜ್ಞಾಸೂಚಕ ಕ್ರಿಯಾಪದವನ್ನೂ ಕ್ರಿಯಾಧಾತುವಿನೊಂದಿಗೆ –ಆಯ್ ಎಂಬುದನ್ನು ಸೇರಿಸಿ ನಿಷೇಧಾರ್ಥಕ ಆಜ್ಞಾಸೂಚಕ ಕ್ರಿಯಾಪದವನ್ನೂ ರಚಿಸಬಹುದು.

ಉದಾ : ವರುವ್ - ಆಯ್
ವಾರ್ - ಆಯ್

–ಆಯ್ ಎಂಬ ಪ್ರತ್ಯಯದಂತೆಯೇ –ಈರ್ ಎಂಬ ಪ್ರತ್ಯಯವೂ ಆಜ್ಞಾ ಸೂಚಕ ಪ್ರತ್ಯಯವಾಗಿ ಈ ಕಾಲದಲ್ಲಿ ಕಂಡುಬರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಪೇಸುತ್ – ಈರ್
ಇರುಪ್ಪ್ – ಈರ್

–ಈರ್‌ಗಳ್ ಮತ್ತು –ಮಿನ್ಗಳ್ ಎಂಬ ದ್ವಿಬಹುವಚನ ಪ್ರತ್ಯಯಗಳೂ ಆಜ್ಞಾಸೂಚಕ ಪ್ರತ್ಯಯಗಳಾಗಿ ಬಳಸಲಾಗಿವೆ.

ಉದಾ : ಉರೈ – ಈರ್‌ಗಳ್
ಕಾಣ್ – ಮಿನ್ಗಳ್
ತೊಗು – ಮಿನ್ಗಳ್

ಕೃದಂತಗಳು :

–ವಾನ್, –ಪಾನ್, –ಪಾಕ್ಕು ಮುಂತಾದವುಗಳನ್ನು ನನ್ನೂಲ್ ಎಂಬ ವ್ಯಾಕರಣ ಕೃದಂತ ಪ್ರತ್ಯಯಗಳಾಗಿ ಗುರುತಿಸಿದೆ.

ಚೆಯ್ಯಾ, ಚೆಯ್ಯು ಎಂಬ ಅನುರೂಪದ ಕ್ರಿಯಾಸೂಚಕ ಕೃದಂತಗಳು ಪೆರಿಯ ಪುರಾಣಂನಲ್ಲಿ ಬರಲಿಲ್ಲ. ಚೆಯ ಎನ್ನುವ ಅನುರೂಪದ ಕ್ರಿಯಾಸೂಚಕ ಕೃದಂತದ ಪ್ರತ್ಯಯಗಳಾದ –ಮಾರ್, –ಇಯ, –ಇಯರ್ ಮುಂತಾದವು ಪೆರಿಯ ಪುರಾಣಂ, ಕಂಬ ರಾಮಾಯಣಂ ಮುಂತಾದವುಗಳಲ್ಲಿ ಬಳಕೆಯಾಗಿಲ್ಲ.

ನಿಷೇಧಾರ್ಥಕ ಕ್ರಿಯಾಸೂಚಕ ಕೃದಂತದ ಪ್ರತ್ಯಯಗಳಾದ –ಮಲ್, –ಮೈ, –ಮೇ ಮುಂತಾದವು ಚೋಳರ್ ಕಾಲದ ಭಾಷೆಯಲ್ಲಿ ಹೆಚ್ಚಾಗಿ ಬಳಸಲಾಗಿವೆ.

ಉದಾ : ಒಟಿಯಾ –ಮಲ್
ಅಡ್ಯಯಾ – ಮಲ್
ಕಿಡ್ಯೆಯಾ – ಮೈ
ಕಾಣಾ – ಮೇ
ಅಜಿಯಾ – ಮೇ

ನಿಯತ ಕಾಲಸೂಚಕ ಕೃದಂತದ ಪ್ರತ್ಯಯಗಳಾಗಿ –ಆಲ್, –ಎಲ್, –ಇಲ್ ಎಂಬುವು ಪಲ್ಲವರ್ ಮತ್ತು ಚೋಳರ ಕಾಲಗಳಲ್ಲಿ ಸಹಜವಾಗಿ ಬಳಕೆಯಾಗಿವೆ.

ಉದಾ : ತೊಟುದು – ಆಲ್
ಅಜುದಿ – ಎಲ್
ಉಟಂಗಾ– ವಿಡು — ಇಲ್

ತೊಲ್ಕಾಪ್ಪಿಯರ್ ಹೇಳಿದ ಚೆಯ್ದು, ಚೆಯ್ಯುಂ ಎಂಬ ಅನುರೂಪದ ಸಂಬಂಧ ಸೂಚಕ ಕೃದಂತದೊಂದಿಗೆ ಚೆಯ್ಗಿನ್ಟ ಎನ್ನುವ ಅನುರೂಪದ ಕೃದಂತವನ್ನೂ ನನ್ನೂಲಾರ್ ಎತ್ತಿಹೇಳಿದ್ದಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಷೇಧಾರ್ಥಕ ಪ್ರತ್ಯಯಗಳು :

-ಆತ್-, -ಆ- ಎಂಬ ನಿಷೇಧಾರ್ಥಕ ಪ್ರತ್ಯಯಗಳು ಸಂಘ ಕಾಲದಲ್ಲಿ ಅಪರೂಪವಾಗಿಯೂ ಚೋಳರ ಕಾಲದಲ್ಲಿ ಸಹಜವಾಗಿಯೂ ಬಳಕೆಯಾಗಿವೆ. -ಆಪ್- ಎಂಬ ನಿಷೇಧಾರ್ಥಕ ಪ್ರತ್ಯಯ ನಾಲಾಯಿರತಿವ್ಯ ಪ್ರಬಂಧಂನಲ್ಲಿ ಬಳಸಲಾಗಿದೆ. ಇದು ಚೋಳರ್ ಕಾಲದ ತಮಿಳಿನ ವಿಶೇಷ ಅಂಶವೆಂದು ಹೇಳಬಹುದು.

ಉದಾ : ಅಯುರ್- ಆಪ್ - ಆಯ್
ನಿಲ್-ಆಪ್-ಆಯ್

ಲಿಂಗ ಪ್ರತ್ಯಯಗಳು :

ಲಿಂಗ ಪ್ರತ್ಯಯಗಳಲ್ಲಿ -ಓಂ ಎಂಬುದು ಸಂಘ ಕಾಲದಲ್ಲಿ ಅಪರೂಪವಾಗಿಯೂ ಚೋಳರ್ ಕಾಲದ ತಮಿಳು ಭಾಷೆಯಲ್ಲಿ ಸಹಜವಾಗಿಯೂ ಕಂಡು ಬರುತ್ತದೆ

ಉದಾ : ಕಾಣ್ - ಕಿನ್ಱ್ - ಓಂ
ಇರು - ಕಿನ್ಱ್ - ಓಂ
ಅಱ - ನ್ತ್ - ಓಂ

-ಅನ್, -ಅಂ, -ಎಂ ಎಂಬ ಹ್ರಸ್ವ ಸ್ವರದೊಂದಿಗೆ ಕೂಡಿದ ಪ್ರತ್ಯಯಗಳು ಸಂಘ ಕಾಲದಲ್ಲೂ -ಆನ್, -ಆಂ, -ಏಂ ಎಂಬ ದೀರ್ಘ ಸ್ವರದೊಂದಿಗೆ ಕೂಡಿದ ಪ್ರತ್ಯಯಗಳು ಚೋಳರ ಕಾಲದಲ್ಲೂ ಹೆಚ್ಚಾಗಿ ಬಳಸಲಾಗಿವೆ. -ಆಯ್ ಎಂಬ ಪ್ರತ್ಯಯವೂ ಈ ಕಾಲದಲ್ಲಿ ಸಹಜವಾಗಿ ಬಂದಿದೆ.

ಉದಾ : ಇಯಂಬು - ಕಿನ್ಱ್ - ಆಯ್
ಇರು - ಕ್ಕಿನ್ಱ್ - ಆಯ್

ಹೀಗೆ ಚೋಳರ್ ಕಾಲದ ತಮಿಳು ಭಾಷೆಯಲ್ಲಿ ಸಂಘ ಕಾಲದ ಅಂಶಗಳು ಕೆಲವು ಲೋಪವಾಗಿರುವುದನ್ನೂ ಕೆಲವು ಅಂಶಗಳು ಹೊಸದಾಗಿ ಸೇರಿರುವುದನ್ನೂ ಕೆಲವು ಅಂಶಗಳು ಸ್ಥಿರವಾದ ಸ್ಥಾನವನ್ನು ಪಡೆದಿರುವುದನ್ನೂ ಕಾಣಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೧೧. ನಾಯಕ್ಕರ್ ಕಾಲದ ತಮಿಳು ಭಾಷೆ

ಚೋಳರ ಕಾಲವನ್ನು ತಮಿಳು ಸಾಹಿತ್ಯದ ಸುವರ್ಣಯುಗ ಎಂದು ಕರೆಯುತ್ತಾರೆ. ಆ ಕಾಲದಲ್ಲಿ ಜೀವಕ ಚಿನ್ತಾಮಣಿ, ಕಂಬರಾಮಾಯಣಂ ಮುಂತಾದ ಶ್ರೇಷ್ಠ ಕಾವ್ಯಗಳೂ ನೇಮಿನಾಥಂ, ವೀರ ಚೋಟಿಯಂ, ನನ್ನೂಲ್ ಮುಂತಾದ ಲಕ್ಷಣ ಗ್ರಂಥಗಳೂ ರಚಿತವಾದದ್ದೇ ಇದಕ್ಕೆ ಕಾರಣ ಅನಂತರ ಬಂದ ನಾಯಕ್ಕರ್ ಕಾಲದಲ್ಲಿ ಬಹಳ ಉತ್ತಮವಾದ ಸಾಹಿತ್ಯಗಳು ರಚಿತವಾಗದೆ ಹೋದರೂ ವಿಲ್ಲಿಭಾರತಂ, ಮೀನಾಟ್ಚಿಯಮ್ಮೈಪ್ಪಿಳ್ಳೈತ್ತಮಿಟ್ ಮುಂತಾದ ಸಾಹಿತ್ಯಗಳೂ ಮಹಾ ಪುರಾಣ ಅಮ್ಮಾನೈ, ರಾಮಪ್ಪಯ್ಯನ್ ಅಮ್ಮಾನೈ ಮುಂತಾದ ಜನಪದ ಸಾಹಿತ್ಯಗಳೂ 'ಬೆಸ್ಕೀ ಎನ್ನುವ ವೀರಮಾಮುನಿವರ್ ರವರ 'A Grammar of the Common dailect of the Tamil Language' ಎನ್ನುವ ವ್ಯಾಕರಣ ಗ್ರಂಥವೂ ರಚಿತವಾದವು. ನಾಯಕ್ಕರ್ ಕಾಲದ ತಮಿಳು ಭಾಷೆಯ ಸ್ವರೂಪವನ್ನು ನಿರ್ಧರಿಸಲಿಕ್ಕೆ ಈ ಗ್ರಂಥಗಳೇ ಆಧಾರಗಳಾಗುತ್ತವೆ.

ಪಲ್ಲವರ್ ಮತ್ತು ಚೋಳರ ಕಾಲಗಳಲ್ಲಿ ಬಳಕೆಯಲ್ಲಿದ್ದ ಧ್ವನಿಮಾಗಳೇ ನಾಯಕ್ಕರ್ ಕಾಲದಲ್ಲೂ ಧ್ವನಿಮಾಗಳಾಗಿ ಕಂಡುಬರುತ್ತವೆ.

ಸ್ವರಗಳು :

ಇ	ಈ	ಉ	ಊ
ಎ	ಏ	ಒ	ಓ
	ಅ	ಆ	

ವ್ಯಂಜನಗಳು :

ಪ್	ತ್	ಱ್	ಟ್	ಚ್	ಕ್
ಮ್		ನ್	ಣ್	ಞ್	
ವ್				ಯ್	
		ಲ್	ಳ್		
			ೞ್		
		ರ್			

ನಾಯಕ್ಕರ್ ಕಾಲದ ತಮಿಳು ಭಾಷೆಯಲ್ಲಿ 'ಚ' ಕಾರ 'ಶ' ಕಾರದೊಂದಿಗೆ ಪದದ ಆದಿಯಲ್ಲಿ ಹೆಚ್ಚಾಗಿ ಬರುವುದನ್ನು ನೋಡಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಚೌಬಾಲ

ಚೌಬಾಲರ್

ಚೌಬಾಲನ್

ವೀರಮಾಮುನಿವರ್‌ರವರು ತಮ್ಮ ವ್ಯಾಕರಣ ಗ್ರಂಥದಲ್ಲಿ ಆಡು ಭಾಷೆಯಲ್ಲಿ 'ಐ' ಕಾರ ಇಲ್ಲ ಎಂದು ಸೂಚಿಸಿದ್ದಾರೆ. ಇಂದಿನ ಕೆಲವು ತಮಿಳು ಉಪಭಾಷೆಯಲ್ಲೂ 'ಐ' ಕಾರ ಇಲ್ಲದಿರುವುದು ಗುರುತಿಸತಕ್ಕದ್ದು.

ವಿಲ್ಲಿಭಾರತದ ಭಾಷೆ ತಮಿಳೂ ಸಂಸ್ಕೃತವೂ ಸೇರಿ ಆದ ಮಿಶ್ರಭಾಷೆ. ಆದ್ದರಿಂದ ಕೆಲವು ವಿಶಿಷ್ಟವಾದ ಸಂಯುಕ್ತ ವ್ಯಂಜನಗಳು ಕಾಣಿಸಿಕೊಳ್ಳುತ್ತವೆ. ಅವು ಮ್‌ಚ್, ಲ್‌ಚ್, ತ್‌ಣ್, ತ್‌ವ್, ಕ್‌ವ್, ತ್‌ಯ್, ಪ್‌ರ್; ತ್‌ರ್, ಚ್‌ರ್ ಮುಂತಾದವು. ಸ, ಶ, ಷ ವ್ಯಂಜನಗಳು ತಮಿಳು ಭಾಷೆಯಲ್ಲಿ ಬೆರತ ಕಾರಣದಿಂದ ಸ್‌ತ್, ಸ್‌ನ್, ಸ್‌ಮ್, ಸ್‌ಪ್, ಸ್‌ಕ್, ಶ್‌ಟ್, ಕ್ಷ ಮುಂತಾದ ಸಂಯುಕ್ತಾಕ್ಷರಗಳು ತಮಿಳಿನಲ್ಲಿ ಕಾಣಿಸಿಕೊಳ್ಳುವುದಾಗಿ ವೀರಮಾಮುನಿವರ್‌ರವರು ಗುರುತಿಸಿದ್ದಾರೆ.

ಧ್ವನಿಮಾ ಪರಿವರ್ತನೆ :

ಸ್ವರಧ್ವನಿಮಾ ಪರಿವರ್ತನೆ :

ಅ) ಎರಡು ವ್ಯಂಜನಗಳ ಹಿಂದೆ ಬರುವ ದೀರ್ಘ ಸ್ವರ ಹೃಸ್ವಸ್ವರವಾಗುತ್ತದೆ.

ದೀರ್ಘ > ಹೃಸ್ವ | – ದ್ವಿತ್ವವ್ಯಂಜನಗಳು

ಉದಾ : ವಣಂಗುವಾರ್‌ಕ್ಕು > ವಣಂಗುವರ್‌ಕ್ಕು

ಆ) 'ಇ' ಕಾರ 'ಉ' ಕಾರವಾಗುವುದು.

ಇ > ಉ

ಉದಾ : ತಮಿಟ್ > ತಮುಟು

ಮದಿಲ್ > ಮದುಲು

ಇ) 'ಅ' ಕಾರ 'ಇ' ಕಾರವಾಗುವುದು.

ಅ > ಇ

ಉದಾ : ಅದನಾಲ್ > ಅಡಿನಾಲ್

ವಂಜನೈ > ವಂಜಿನೈ

ಈ) 'ಅ' ಕಾರ 'ಉ' ಕಾರವಾಗುವುದು.

ಅ > ಉ

ಉದಾ : ವಂದದು > ವಂದುದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉ) 'ಉ' ಕಾರ 'ಇ' ಕಾರವಾಗುವುದು :

ಉ > ಇ

ಉದಾ : ಇರುಬದು > ಇರುಬದಿ

ಊ) 'ಐ' ಕಾರ 'ಅ' ಕಾರವಾಗುವುದು :

ಐ > ಅ

ಉದಾ : ತಲೈ > ತಲ

ಯಾನೈ > ಯಾನ

ಎ) 'ಎ' ಮತ್ತು 'ಏ' ಕಾರಗಳು ಕ್ರಮವಾಗಿ 'ಅ' ಮತ್ತು 'ಆ' ಕಾರಗಳಾಗಿ ಬದಲಾವಣೆಯಾಗುತ್ತವೆ.

| ಎ | > | ಅ |
| ಏ | > | ಆ |

ಉದಾ : ಎಲ್ಲಾಂ > ಆಲ್ಲಾಂ

ವೇಂಡಾಂ > ವಾಂಡಾಂ

ವ್ಯಂಜನ ಧ್ವನಿಮಾ ಪರಿವರ್ತನೆ :

ಅ) 'ಯ' ಕಾರ 'ಎ' ಕಾರವಾಗುವುದು :

'ಯ' > 'ಎ'

ಉದಾ : ಯಮನ್ > ಎಮನ್

ಆ) ಪಲ್ಲವರ್ ಕಾಲದಲ್ಲಿ ಪದದ ಆದಿಯಲ್ಲಿ ಬರುವ 'ಯ' ಕಾರ ಲೋಪವಾದಂತೆಯೇ ನಾಯಕ್ಕರ ಕಾಲದಲ್ಲೂ ಲೋಪವಾಗುತ್ತದೆ.

ಯ್ > ϕ

ಉದಾ : ಯಮುನೈ > ಅಮುನೈ

ಇ) 'ನ್ಜ' ಎಂಬುದು 'ಣ್ಣ' ಆಗುವುದನ್ನು ವೀರಮಾಮುನಿವರ್ ಅವರು ಗುರುತಿಸಿದ್ದಾರೆ.

ನ್ಜ > ಣ್ಣ

ಉದಾ : ಕನ್ಜು > ಕಣ್ಣು

ಒನ್ಜು > ಒಣ್ಣು

ಈ) ವಿಜಾತೀಯ ಸಂಯುಕ್ತ ಸ್ಪರ್ಶ ಧ್ವನಿಗಳು ಸಜಾತೀಯ ಸ್ಪರ್ಶ ಧ್ವನಿಗಳಾಗಿ ಬದಲಾವಣೆಯಾಗಿವೆ.

ಟ್ಚ > ಚ್ಚ

ಉದಾ : ಮಾಟ್ಚಿ > ಮಾಚ್ಚಿ

ಕಾಟ್ಚಿ > ಕಾಚ್ಚಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉ) 'ಕ' ಕಾರದ ಮುಂದೆ ಅಥವಾ ಹಿಂದ 'ಇ' ಕಾರ ಬಂದರೆ ಆ 'ಕ' ಕಾರ 'ಯ' ಕಾರವಾಗುತ್ತದೆ.

-ಕ- > -ಯ- | {-ಇ / ಇ-}

ಉದಾ : ಕನ್ನಿಕಳ್ > ಕನ್ನಿಯಳ್

ಊ) ಕೆಲವೊಮ್ಮೆ 'ಯ' ಕಾರ 'ಕ' ಕಾರವಾಗುವುದೂ ಉಂಟು

-ಯ- > -ಕ-

ಉದಾ : ಇಡೈಯಊಟು > ಇಡೈಕಊಟು

ಎ) ದೀರ್ಘ ಸ್ವರಕ್ಕೂ ಅನುನಾಸಿಕ ಧ್ವನಿಗಳಿಗೂ ನಡುವೆ ಬರುವ 'ನ' ಕಾರ ಲೋಪವಾಗುತ್ತದೆ.

-ನ- > -φ- | ದೀರ್ಘ ಸ್ವರ - ಅನುನಾಸಿಕ

ಉದಾ : ನಾನ್ಮುಗನ್ > ನಾಮುಗನ್

ಏ) ಅಂತೆಯೆ ಪದದ ಅಂತ್ಯದಲ್ಲಿ ಬರುವ 'ರ' ಕಾರ 'ಲ' ಕಾರಗಳೂ ಲೋಪವಾಗುತ್ತವೆ.

- {ರ / ಲ} > - φ

ಉದಾ : ತಣ್ಣೀರ್ > ತಣ್ಣಿ

ತೂಂಡಿಲ್ > ತೂಂಡಿ

ಸಂಸ್ಕೃತ ಪದಗಳನ್ನು ತಮಿಳು ಭಾಷೆಯ ಜಾಯಮಾನಕ್ಕೆ ತಕ್ಕಂತೆ ಹಲವಾರು ರೀತಿಯಲ್ಲಿ ಬದಲಾಯಿಸಿ ಬಳಸಿರುವುದನ್ನು ಈ ಕಾಲದ ಸಾಹಿತ್ಯಗಳಲ್ಲಿ ಕಾಣಬಹುದು. ಅವುಗಳಲ್ಲಿ ಕೆಲವು ಬಗೆಗಳು ಕೆಳಗೆ ಕೊಡಲಾಗಿವೆ.

ಅ). ಸಂಸ್ಕೃತದ ಮೂರ್ಧನ್ಯ ಧ್ವನಿಯಾದ 'ಷ' ಕಾರ ತಮಿಳಿನಲ್ಲಿ ತಾಲವ್ಯ ಧ್ವನಿಯಾಗಿ ಬದಲಾಗಿದೆ.

ಉದಾ : ಋಷಿ > ರಿಚಿ

ತೋಷಾ > ತೋಚಂ

ಆ). 'ಕ್ಷ' ಎಂಬುದೂ 'ಚ' ಕಾರವಾಗುತ್ತದೆ.

ಉದಾ : ಕ್ಷಣಂ > ಚಣಂ

ಇ) 'ಷ್ಟ' ಎಂಬುದು 'ಸ್ತ' ವಾಗುತ್ತದೆ ;

ಉದಾ : ಕಷ್ಟಂ > ಕಸ್ತಿ

ಈ). 'ಆ' ಎಂಬುದು 'ಐ' ಎಂದೂ 'ಅಲ್' ಎಂದೂ ಆಗುತ್ತದೆ.

ಉದಾ : ಮಾದಂ > ಮಾತ್ತೈ

ಕಾರ್ತ್ತಿಗ > ಕಾರ್ತ್ತಿಗೈ > ಕಾತ್ತಿಯಲ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉ). 'ಹ್ಯ' ಎಂಬುದು 'ಜ್ಗ' ವಾಗುತ್ತದೆ :

ಉದಾ : ಅಸಹ್ಯ > ಅಸಕ್ಕಿಯಂ> ಅಸಿಂಗಿಯಂ> ಅಸಿಂಗಂ

ಊ). 'ರ' ಕಾರ 'ಟ' ಕಾರವಾಗುತ್ತದೆ :

ಉದಾ : ಅಮೃತಂ > ಅಮಿರ್ದಂ > ಅಮಿಟ್ಟಂ

ವಿಲ್ಲಿಭಾರತದಲ್ಲಿ ಈ ಕೆಳಕಂಡ ಧ್ವನಿಗಳು ಸ್ವಚ್ಛಂತ ಪರಿವರ್ತನೆಯಲ್ಲಿ ಬರುವುದನ್ನು ನೋಡಬಹುದು.

ಉದಾ :	ಅ ≈ ಆ :	ಕಡವಿ ≈ ಕಡಾವಿ
	ಅ ≈ ಎ :	ಪಲಂ ≈ ಪೆಲಂ
	ಉ ≈ ಐ :	ಕಚ್ಚು ≈ ಕಚ್ಚೈ
	ಊ ≈ ಔ :	ಮೂಲಿ ≈ ಮೌಲಿ
	ಕ ≈ ಚ :	ಕೀರ್ತ್ತಿ ≈ ಚೀರ್ತ್ತಿ
	ಚ ≈ ಟ :	ಮನುಚನ್ ≈ ಮನುಟನ್
	ಚ ≈ ಯ :	ನೇಚಂ ≈ ನೇಯಂ
	ನ(n) ≈ ನ(n̲) :	ಅನೇಕರ್ ≈ ಅನೇಕರ್
	ಣ ≈ ಟ :	ನಣ್ಬು ≈ ನಟ್ಬು
	ಣ ≈ ಮ :	ಚಣ್ಬಗಂ ≈ ಚಮ್ಬಗಂ
	ಯ ≈ ಲ :	ಚೈಯಂ ≈ ಚೈಲಂ
	ರ ≈ ಱ :	ಮುರಿಂದದು ≈ ಮುಱಿಂದದು
	ರ ≈ ಲ :	ಪಂದರ್ ≈ ಪಂದಲ್
	ನ(n̲) ≈ ಞ :	ಪೂನ್ನೈ ≈ ಪೂಞ್ಞೈ
	ನ(n̲) ≈ ಣ :	ನುನಿ ≈ ನುಣಿ

ವೀರಮಾಮುನಿವರ್‌ರವರು ತಮಿಳು ಅಕ್ಷರಗಳ ರೂಪದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿದರು. ತೊಲ್ಕಾಪ್ಪಿಯರ್, ನನ್ನೂಲಾರ್ ಕಾಲಗಳಲ್ಲಿ 'ಎ' ಕಾರ 'ಒ' ಕಾರಗಳು ಅವುಗಳ ದೀರ್ಘ ಸ್ವರಗಳ ಮೇಲೆ ಬಿಂದು ಇಟ್ಟು ಸೂಚಿಸಲ್ಪಟ್ಟವು. ಆದರೆ ವೀರಮಾಮುನಿವರು ತೊಲ್ಕಾಪ್ಪಿಯರ್ ಮತ್ತು ನನ್ನೂಲಾರ್‌ರವರ ಕಾಲಗಳಲ್ಲಿ ದೀರ್ಘಸ್ವರಗಳಾಗಿ ಇದ್ದವನ್ನು ಹ್ರಸ್ವ ಸ್ವರಗಳಿಗೆ ಒಳಸಿ ದೀರ್ಘ ಸ್ವರಗಳಿಗೆ ಬೇರೆ ಅಕ್ಷರಗಳನ್ನು ಸೃಷ್ಟಿಸಿದರು. ಅಂತೆಯೇ ದೀರ್ಘವನ್ನು ಗುರುತಿಸಲಿಕ್ಕೆ ಬರುವ ಚಿಹ್ನೆಗೂ 'ರ' ಕಾರವನ್ನು ಗುರುತಿಸಲು ಬರುವ ಅಕ್ಷರಕ್ಕೂ ವ್ಯತ್ಯಾಸವಿರಲಿಲ್ಲ. ಇವುಗಳ ರೂಪದಲ್ಲಿ ಸ್ವಲ್ಪ ಬದಲಾವಣೆ ಮಾಡಿ ಎರಡನ್ನೂ ಬೇರ್ಪಡಿಸಿದರು. ಗುಣಿತಾಕ್ಷರಗಳಲ್ಲಿ ಎ, ಏ, ಒ, ಓ, ಮುಂತಾದವುಗಳನ್ನು ಗುರುತಿಸಲಿಕ್ಕೆ ಬೇರೆ ಬೇರೆ ಚಿಹ್ನೆಗಳನ್ನು ಬಳಸಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಕೃತಿಮಾ :

ನಾಮ ಆಕೃತಿಮಾ : ಲಿಂಗ ಪ್ರತ್ಯಯಗಳು :

–ಕಳ್ ಎಂಬ ಬಹುವಚನ ಪ್ರತ್ಯಯ ಸಂಘಕಾಲದ ತಮಿಳು ಭಾಷೆಯಲ್ಲಿ ಅಮಾನವ ನಾಮಪದದೊಂದಿಗೆ ಮಾತ್ರ ಬಂದಿದೆ. ಸಂಘ ಕಾಲಕ್ಕೆ ಅನಂತರದ ಭಾಷೆಯಲ್ಲಿ ಈ ಪ್ರತ್ಯಯ ಮಾನವ ನಾಮಪದದೊಂದಿಗೆಯೂ ಬಳಕೆಯಾಗಿದೆ. ಕೆಲವು ಪದಗಳಲ್ಲಿ ದ್ವಿಬಹುವಚನ ಪ್ರತ್ಯಯವಾಗಿಯೂ ಇದನ್ನು ಬಳಸಲಾಗಿದೆ. ಮಧ್ಯಕಾಲದ ಭಾಷೆಯಲ್ಲಿ ಇದು ಹೆಚ್ಚಾಗಿ ಬಳಸಲಾಗಿದ್ದು ನಾಯಕ್ಕರ್ ಕಾಲದ ತಮಿಳು ಭಾಷೆಯಲ್ಲಿ -ಕಳ್ ಎಂಬುದು ಸ್ಥಿರವಾದ ಸ್ಥಾನವನ್ನು ಪಡೆದಿದೆ. ಇವುಗಳಲ್ಲದೆ ಇದು ಸರ್ವನಾಮಗಳೊಂದಿಗೆಯೂ ಬಳಸಲಾಗಿದೆ.

ಉದಾ :	ಯಾಂ-ಕಳ್	ನಾಂ-ಕಳ್	ಎಂ-ಕಳ್
	ನೀಂ-ಕಳ್	ನೀರ್-ಕಳ್	ನುಂ-ಕಳ್
	ಉಂ-ಕಳ್	ತಂ-ಕಳ್	ತಾಂ-ಕಳ್
	ಅವರ್-ಕಳ್	ಇವರ್-ಕಳ್	

ಬಹುವಚನವನ್ನು ಸೂಚಿಸುವುದಕ್ಕೆ ಮಾನವ ನಾಮಪದದೊಂದಿಗೆ –ಮಾರ್ ಎಂಬ ಪ್ರತ್ಯಯವೂ ಚಾಲ್ತಿಗೆ ಬಂತು ಎಂದು ವೀರಮಾಮುನಿವರ್ ಗುರುತಿಸಿದ್ದಾರೆ.

ಉದಾ : ತಕಪ್ಪನ್-ಮಾರ್
ಅಣ್ಣನ್-ಮಾರ್

ಸರ್ವನಾಮಗಳು :

ನೀವಿರ್, ನೀಯಿರ್ ಎಂಬ ಮಧ್ಯಮ ಪುರುಷ ಬಹುವಚನ ಸರ್ವನಾಮಗಳಿಗೆ ಬದಲಾಗಿ ನೀರ್ ಎಂಬುದು ಹೆಚ್ಚಾಗಿ ಕಾಣಿಸಿಕೊಂಡಿದೆ. ಉನ್, ಉಂ ಎಂಬುವು ಮಧ್ಯಮ ಪುರುಷ ಸರ್ವನಾಮಗಳ ಪರಿವರ್ತಿತ ವಿಭಕ್ತಿರೂಪಗಳಾಗಿ ಬರುತ್ತವೆ. ಪ್ರಥಮ ಪುರುಷ ಸರ್ವನಾಮಗಳಾದ ತಾನ್, ತಾಂ ಎಂಬುವುಗಳಿಗೆ ಬದಲಾಗಿ ಅವನ್, ಅವಳ್, ಅವರ್ ಮುಂತಾದವು ಬಳಸಲಾಗಿವೆ. ತಾನ್, ತಾಂ ಎಂಬುವು ಆತ್ಮಾರ್ಥಕ ಸರ್ವನಾಮಗಳಾಗಿಯೂ ಆಗಮಗಳಾಗಿಯೂ ಬಳಕೆಯಾಗಿವೆ.

ಪ್ರಶ್ನಾರ್ಥಕ ಸರ್ವನಾಮಗಳಾದ ಯಾವನ್, ಯಾರ್, ಯಾವದು, ಯಾವೈ, ಎವನ್, ಎವರ್, ಎದು ಮುಂತಾದವು ವಿಲ್ಲಿಭಾರತದಲ್ಲಿ ಬಂದಿವೆ.

ವಿಭಕ್ತಿಗಳು :

ನಾಯಕ್ಕರ್ ಕಾಲದ ತಮಿಳು ಭಾಷೆಯಲ್ಲಿ ಸಾಧನ ವಿಭಕ್ತಿಗೆ –ಆಲ್ ಎಂಬುದೂ ಸಹವರ್ತಿ ವಿಭಕ್ತಿಗೆ –ಒಡು,–ಓಡು,- ಉಡನ್ ಮುಂತಾದವುಗಳೂ ಪ್ರತ್ಯಯಗಳಾಗಿ ಬಳಕೆಯಾಗಿವೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ತೂದು-ಆಲ್
ಮಗಿಟ್-ಆಲ್
ಅನ್ಬು-ಒಡು
ಉರಿಮೈ-ಓಡು
ಇಸೈ-ಉಡನ್

ತೃತೀಯಾ ವಿಭಕ್ತಿ ಪ್ರತ್ಯಯವಾದ - ಆನ್ ಎಂಬುದು -ಆಲ್ ಆಗಿಯೂ ಪಂಚಮೀ ವಿಭಕ್ತಿ ಪ್ರತ್ಯಯವಾದ -ಇನ್ ಎಂಬುದು -ಇಲ್ ಆಗಿಯೂ ಪರಿವರ್ತನೆಯಾಗಿವೆ. - ಕೊಂಡು ಎನ್ನುವ ಪದಪ್ರತ್ಯಯ ಸಾಧನ ವಿಭಕ್ತಿ ಪ್ರತ್ಯಯವಾಗಿ ಬಂದಿದೆ.

ಉದಾ : ವಾಳ್-ಕೊಂಡು

-ಪೊರುಟ್ಟು,-ಆಗ ಎಂಬ ಪದಪ್ರತ್ಯಯಗಳು ಚತುರ್ಥಿ ವಿಭಕ್ತಿ ಅರ್ಥದಲ್ಲಿ ಬಳಸಲಾಗಿವೆ. ಇದರಲ್ಲಿ -ಆಗ ಎನ್ನುವ ಪದಪ್ರತ್ಯಯ -ಉಕ್ಕು ಎನ್ನುವ ಪ್ರತ್ಯಯದೊಂದಿಗೆ ಬರುತ್ತದೆ.

ಉದಾ : ಅವನ್-ಪೊರುಟ್ಟು
ಅವನ್-ಉಕ್ಕು-ಆಗ

-ಇರುಂದು,-ನಿನ್ರು ಮುಂತಾದ ಪದಪ್ರತ್ಯಯಗಳು ಪಂಚಮೀ ವಿಭಕ್ತಿ ಪ್ರತ್ಯಯಗಳಾಗಿ ಬಳಕೆಯಾಗಿವೆ.

ಉದಾ : ವೀಟ್ಟಿಲ್-ಇರುಂದು
ಊರಿಲ್-ನಿನ್ರು

-ಉಡೈಯ ಎಂಬುದು ಷಷ್ಠಿ ವಿಭಕ್ತಿ ಪದಪ್ರತ್ಯಯವಾಗಿ ನಾಯುಕ್ಕರ್ ಕಾಲದ ತಮಿಳು ಭಾಷೆಯಲ್ಲಿ ಕಂಡುಬರುತ್ತದೆ.

ಉದಾ : ಅವನ್-ಉಡೈಯ

ಸಪ್ತಮಿ ವಿಭಕ್ತಿಗೆ -ಇಲ್,-ಇನ್,-ಉಳ್,-ಕಡೈ,-ಪಾಲ್-ಕಣ್,-ವಾಯ್, -ತಲೈ,-ಇಡೈ,-ವಟಿ ಮುಂತಾದವು ಪ್ರತ್ಯಯಗಳಾಗಿ ಬರುತ್ತವೆ.

ಉದಾ : ಪಳ್ಳಿ-ಇಲ್	ಅಡವಿ-ಪಾಲ್
ವಿಟಿ-ಕಡೈ	ಎಟಿಪ-ನಾ-ತಲೈ
ಮಡೈ-ವಾಯ್	ಪತ್ಮ-ತ್ತ್-ಉಳ್
ಮರಬಿನ್- ವಟಿ	ನಿಟಿಲ್-ಕಣ್
ಕಾ-ಇನ್	ಕಡಲ್-ಇಡೈ

ಸಂಖ್ಯಾವಾಚಕಗಳು :

ನಾನ್ಕು ಎನ್ನುವ ಸಂಖ್ಯಾವಾಚಕಕ್ಕೆ ಬದಲಾಗಿ ನಾಲ್ ಎಂಬುದೂ ಐಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಂಬುದನ್ನು ಗುರುತಿಸಲು ಅಂಜು ಎಂಬುದೂ ಸೂಱು ಎಂಬುದನ್ನು ಗುರುತಿಸಲು ಞೂಱು ಎಂಬುದೂ ಬಳಸಲಾಗಿವೆ.

ಉದಾ : ನಾಲು-ತಾನ್ನೈ
ಅಂಜು-ಅಂಬು
ಅ-ಞೂಱು

ಇವುಗಳಲ್ಲದೆ ಕೋಟಿ, ವೆಳ್ಳಂ ಮುಂತಾದ ಸಂಖ್ಯಾವಾಚಕಗಳೂ ಬಂದಿವೆ.

ಉದಾ : ಕೋಟಿ-ಮುನ್ನರ್
ಎಟುಬದು-ವೆಳ್ಳಂ

ಹೊಸ ಪ್ರತ್ಯಯಗಳು :

–ಕಾರನ್,–ಶಾಲಿ,–ಅರವು ಎಂಬ ಪ್ರತ್ಯಯಗಳು ನಾಯಕ್ಕರ್ ಕಾಲದ ಭಾಷೆಯಲ್ಲಿ ಹೊಸ ಪ್ರತ್ಯಯಗಳಾಗಿ ಬಳಕೆಯಾಗಿವೆ. ಇದಕ್ಕೆ ಕಾರಣ ಸಂಸ್ಕೃತ ಭಾಷೆಯ ಪ್ರಭಾವ ಎಂದರೆ ಅದು ತಪ್ಪಾಗಲಾರದು.

ಕ್ರಿಯಾ ಆಕೃತಿಮಾ :

ಕಾಲಸೂಚಕ ಪ್ರತ್ಯಯಗಳು :

ವರ್ತಮಾನ ಕಾಲವನ್ನು ಸೂಚಿಸುವ –ಕಿಱು–ಎನ್ನುವ ಪ್ರತ್ಯಯ ಎಲ್ಲಿಭಾರತದಲ್ಲಿ ಕಾಣಿಸಿಕೊಂಡಿಲ್ಲ. ಆದರೆ ವೀರಮಾಮುನಿವರ್ ತಮ್ಮ ವ್ಯಾಕರಣ ಗ್ರಂಥದಲ್ಲಿ ಆಡುಭಾಷೆಯಲ್ಲಿ –ಕಿಱು–ಮಾತ್ರವೇ ಬಳಸ್ಪಡುವುದಾಗಿ ಗುರುತಿಸಿದ್ದಾರೆ.

–ತ್–,–ತ್ತ್–,–ಚ್ಚ್–,–ನ್ತ್–,–ಇನ್–,–ಇ–,–ನ್–ಮುಂತಾದ ಪ್ರತ್ಯಯಗಳು ಭೂತಕಾಲ ಸೂಚಕ ಪ್ರತ್ಯಯಗಳಾಗಿ ಬಂದಿವೆ.

ಉದಾ : ಉಟು-ತು
ಆಡಿ-ತ್ತ್-ಆನ್
ಅಡೈ-ನ್ತ್-ಆನ್
ಪಾಯ್-ನ್ತ್-ಆನ್
ಆಡು-ಇನ್-ಅನ
ಆಕ್ಕು-ಇ-ಅ
ಚೊನ್-ನ್-ಅಲ್

ಕೆಲವು ಕ್ರಿಯಾಪದಗಳಲ್ಲಿ –ನ್ತ್–ಎನ್ನುವ ಪ್ರತ್ಯಯ ತಾಲವ್ಯೀಕರಣವಾಗಿದೆ.

ಉದಾ : ಇಡಿ-ನ್ತ್-ಉ> ಇಡಿ-ಞ್ಚ್-ಉ
ತೆರಿ-ನ್ತ್-ಉ> ತೆರಿ-ಞ್ಚ್-ಉ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

-ಕ್-ಎಂಬ ಅಭೂತಕಾಲ ಸೂಚಕ ಪ್ರತ್ಯಯ ಸಂಘಕಾಲದಲ್ಲಿ ಉತ್ತಮ ಪುರುಷ ಬಹುವಚನ ಪ್ರತ್ಯಯವಾದ -ಅಂ ಎಂಬುದರೊಂದಿಗೆ ಬಳಸಲಾಗಿತ್ತು. ಆದರೆ ಇದು ವಿಲ್ಲಿಭಾರತದಲ್ಲಿ ಉತ್ತಮ ಪುರುಷ ಏಕವಚನ ಪ್ರತ್ಯಯವಾದ-ಏನ್ ಎಂಬುದ ರೊಂದಿಗೆ ಬಂದಿದೆ.

ಉದಾ : ಕೂಱು-ಕ್-ಏನ್

ಆಜ್ಞಾಸೂಚಕ ಕ್ರಿಯಾಪದ :

-ಉಂ ಎಂಬ ಪ್ರತ್ಯಯ ಕ್ರಿಯಾಧಾತುವಿನ ಜೊತೆ ಸೇರಿ ಆಜ್ಞಾಸೂಚಕ ಕ್ರಿಯಾ ಪದವಾಗಿ ಬರುತ್ತದೆ.

ಉದಾ : ಅರುಂದು-ಉಂ

ವೀರಮಾಮುನಿವರೂ --ಉಂ ಸೇರಿ ಬರುವ ಕ್ರಿಯಾಪದವನ್ನು ಆಜ್ಞಾಸೂಚಕ ಕ್ರಿಯಾ ಪದವಾಗಿ ಪರಿಗಣಿಸಿದ್ದಾರೆ.

ಉದಾ : ಚೊಲ್-ಉಂ

ಇದರಂತೆಯೆ -ಮ್,-ರುಂ ಮುಂತಾದವುಗಳೂ ಧಾತುವಿನೊಂದಿಗೆ ಸೇರಿ ಆಜ್ಞಾ ಸೂಚಕ ಕ್ರಿಯಾಪದವಾಗಿ ಬರುತ್ತವೆ ಎಂದು ಹೇಳಿದ್ದಾರೆ.

ಉದಾ : ಪೋ-ಮ್
ವಾ-ರುಂ
ತಾ-ರುಂ

-ಮಿನ್ಗಳ್ ಎನ್ನುವ ದ್ವಿತ್ವ ಬಹುವಚನ ಪ್ರತ್ಯಯ ಈ ಕಾಲದಲ್ಲಿ ಆಜ್ಞಾ ಸೂಚಕ ಪ್ರತ್ಯಯವಾಗಿ ಸಹಜವಾಗಿ ಬಳಕೆಯಾಗಿದೆ.

ಉದಾ : ವ-ಮಿನ್ಗಳ್

ಚೆಯ್ಯೇಲ್, ಚೆಯ್ಯಾದೀರ್ ಎನ್ನುವ ಅನುರೂಪದಲ್ಲಿ ಬರುವ ನಿಷೇಧಾರ್ಥಕ ಆಜ್ಞಾಸೂಚಕ ಕ್ರಿಯಾಪದವನ್ನು ವಿಲ್ಲಿಭಾರತದಲ್ಲಿ ನೋಡಬಹುದು.

ಉದಾ : ಅಂಜೇಲ್
ಕಟಱೌದೀರ್

ಕೃದಂತಗಳು :

-ಮಲ್ ಪ್ರತ್ಯಯದೊಂದಿಗೆ ಬರುವ ನಿಷೇಧಾರ್ಥಕ ಕೃದಂತ ನಾಯಕ್ಕರ್ ಕಾಲದ ತಮಿಳು ಭಾಷೆಯಲ್ಲಿ ಹೆಚ್ಚಾಗಿ ಬಳಕೆಗೆ ಬಂದಿದೆ.

ಉದಾ : ಆಡಾ-ಮಲ್

ಸಂಘ ಕಾಲದಲ್ಲಿ ಅಪರೂಪವಾಗಿ ಬಂದ ಚೆಯ್ಯಾದ ಎನ್ನುವ ಅನುರೂಪದ ಕೃದಂತ ನಾಯಕ್ಕರ್ ಕಾಲದ ಭಾಷೆಯಲ್ಲಿ ಸ್ಥಿರವಾದ ಸ್ಥಾನವನ್ನು ಪಡೆದಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಉಣರಾದ

–ಆಲ್ ಎನ್ನುವ ನಿಯಂತಸೂಚಕ ಪ್ರತ್ಯಯ ಭೂತಕಾಲ ಮತ್ತು ಭವಿಷ್ಯತ್ ಕಾಲ ಸೂಚಕ ಪ್ರತ್ಯಯಗಳೊಂದಿಗೆ ಸೇರಿ ಬರುವಂತೆಯೆ –ಕಿನ್ಱು–ಎನ್ನುವ ವರ್ತಮಾನ ಕಾಲ ಸೂಚಕ ಪ್ರತ್ಯಯದೊಡನೆಯೂ ಬರುತ್ತದೆ.

ಉದಾ : ಚೆಯ್-ಕಿನ್ಱ್-ಆಲ್

ಲಿಂಗ ಪ್ರತ್ಯಯಗಳು :

ಉತ್ತಮ ಪುರುಷ ಏಕವಚನ ಪ್ರತ್ಯಯವಾದ –ಎನ್ ಎಂಬುದು ವಿಲ್ಲಿಭಾರತದಲ್ಲಿ ಕೆಲವೆಡೆ ಮಾತ್ರ ಬರುತ್ತದೆ.

ಉದಾ : ವ-ನ್ತ್-ಅನ್-ಎನ್
ತಣಿ-ನ್ತ್-ಅನ್-ಎನ್

–ಅನ್ ಎಂಬ ಪ್ರತ್ಯಯ ಅಭೂತಕಾಲ ಕ್ರಿಯಾಪದಗಳಲ್ಲಿ ಸಂಘ ಕಾಲದ ತಮಿಳು ಭಾಷೆಯಲ್ಲಿ ಅಪರೂಪವಾಗಿಯೂ ಮಧ್ಯಕಾಲದ ತಮಿಳು ಭಾಷೆಯಲ್ಲಿ ಸಹಜವಾಗಿಯೂ ಬಳಸಲಾಗಿದೆ.

ಉದಾ : ಅರಱ್ಱ-ವ್-ಅನ್
ಇಸೈ-ಪಿ-ಪ್ಪ್-ಅನ್
ಆಳ್-ವ್-ಅನ್
ಅಗಱ್ಱ-ವ್-ಅನ್

ಉತ್ತಮ ಪುರುಷ ಏಕವಚನ ಪ್ರತ್ಯಯವಾದ –ಅಲ್ ಎಂಬುದು ವಿಲ್ಲಿಭಾರತದಲ್ಲಿ ಬಳಕೆಯಾಗಿದೆ.

ಉದಾ : ಕವರ್ನ್ದಿಡು-ಅಲ್
ಕಾಪ್ಪ್-ಅಲ್

ಸಂಘ ಕಾಲದ ತಮಿಳು ಭಾಷೆಯಲ್ಲಿ ಕಾಣಿಸಿಕೊಳ್ಳುವುದಕ್ಕಿಂತ ಮಧ್ಯಕಾಲದ ತಮಿಳು ಭಾಷೆಯಲ್ಲಿ–ಓಂ ಎಂಬುದು ಸಹಜವಾಗಿ ಕಾಣಿಸಿಕೊಂಡಿದೆ.

ಉದಾ : ಇಟ-ನ್ತ್-ಓಂ

ಕೆಲವು ಕ್ರಿಯಾಪದಗಳಲ್ಲಿ ದ್ವಿತ್ವ ಬಹುವಚನ ಪ್ರತ್ಯಯಗಳು ಬರುತ್ತವೆ.

ಉದಾ : ಪಾಡು-ಇನ್-ಆರ್‌ಗಳ್
ವೆಱು-ಟ್-ಆರ್‌ಗಳ್

ಸಹಾಯಕ ಕ್ರಿಯಾಪದಗಳು :

ಹದಿನೆಂಟನೇ ಶತಮಾನದಲ್ಲಿ ಇರು, ಪೋಡು, ಕೊಳ್, ಅರುಳ್ ಮುಂತಾದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಹಾಯಕ ಕ್ರಿಯಾಪದಗಳು ಮುಖ್ಯ ಕ್ರಿಯಾಪದಗಳೊಡನೆ ಸೇರಿ ಒಂದೇ ಪದವಾಗಿ ಬರುವುದನ್ನು ಕಾಣಬಹುದು.

ಉದಾ : ಅಡಿತ್ತಿರುಕ್ಕಿರೇನ್
ಎಟುದಿಪೋಟ್ಟೇನ್
ಎಟುಂದರುಳಿನಾರ್

ರಾಮಪ್ಪಯ್ಯನ್ ಅಮ್ಮಾನೈ ಎಂಬ ಜನಪದ ಸಾಹಿತ್ಯದಿಂದ 17ನೇ ಶತಮಾನದ ಆಡುಭಾಷೆಯನ್ನು ತಿಳಿದುಕೊಳ್ಳಲು ಸಾಧ್ಯ.

ಉದಾ : ಪದನಮಾಯ್	ಪ್ಪೈಯ
ಇಯಶಾತಾತ್ತು	ಕಲನೈ
ಪರಂಬೈಕ್ಕುಡಿ	ಆವುದಾ
ತೆನ್‌ಕೂಡಲ್	ಎಕ್ಕಡಾ
ಚಂಬಾರಂ	ಅಕ್ಕಡಾ
ವಿದನಂ	ವೆಳ್ಳೈ
ಮನ್ನಾಪ್ಪು	ಪೊಮ್ಮಣನ್

ಮೇಲಿನ ವಿವರಣೆಗಳಿಂದ ನಾಯಕ್ಕರ್ ಕಾಲದ ತಮಿಳು ಭಾಷೆಯಲ್ಲಿ ಕೆಲವು ಅಂಶಗಳು ಸ್ಥಿರವಾದ ಸ್ಥಾನವನ್ನು ಗಳಿಸಿರುವುದನ್ನೂ ಆಡುಭಾಷೆಗೆ ಉನ್ನತ ಸ್ಥಾನ ದೊರೆತಿರುವುದನ್ನೂ ತಿಳಿಯಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೧೨. ಆಧುನಿಕ ಕಾಲದ ತಮಿಳು ಭಾಷೆ

ಆಧುನಿಕ ಕಾಲದ ತಮಿಳು ಭಾಷೆ ಹಲವಾರು ಹೊಸ ಅಂಶಗಳನ್ನು ಹೊಂದಿದೆ. ಈ ಕಾಲದ ಭಾಷೆಯನ್ನು ನಿರ್ಧರಿಸಲಿಕ್ಕೆ ಈ ಕಾಲದ ಸಾಹಿತ್ಯಗಳಲ್ಲದೆ, ಬಾನುಲಿ, ಚಲನಚಿತ್ರ, ಪತ್ರಿಕೆಗಳು ಮುಂತಾದುವುಗಳೂ ಆಧಾರಗಳಾಗುತ್ತವೆ. ಇವುಗಳಲ್ಲದೆ ಆಡುಭಾಷೆಯ ಅಧ್ಯಯನಗಳೂ ಇಂದಿನ ತಮಿಳು ಭಾಷೆಯ ಸ್ವರೂಪವನ್ನು ಎತ್ತಿ ತೋರಿಸುವಂತವುಗಳಾಗಿವೆ. ಇವುಗಳ ಆಧಾರದ ಮೇಲೆ ಆಧುನಿಕ ಕಾಲದ ತಮಿಳು ಭಾಷೆಯನ್ನು ನಿಖರವಾಗಿ ವಿವರಿಸಬಹುದು.

(1) ಧ್ವನಿಮಾಗಳು : ಸ್ವರ :

i	i:	u	u:
e	e:	o	o:
ɛ	ɛ:		

a a:

(2) ಅನುನಾಸೀಕೃತ ಸ್ವರ :

ã, ã:, ũ:, õ:, ẽ, ẽ:

20ನೆಯ ಶತಮಾನದ ತಮಿಳು ಭಾಷೆಯ ವಿಶಿಷ್ಟತೆಗಳಲ್ಲಿ ಅನುನಾಸೀಕೃತ ಸ್ವರ ಧ್ವನಿಮಾಗಳು ಒಂದು. ಪದದ ಅಂತ್ಯದಲ್ಲಿರುವ ಅನುನಾಸಿಕ ಧ್ವನಿ ಲೋಪವಾಗುವಾಗ ಅದರ ಗುಣ ಹಿಂದೆ ಇರುವ ಸ್ವರದಲ್ಲಿ ಸೇರಿ ಆ ಸ್ವರ ಅನುನಾಸೀಕೃತ ಸ್ವರವಾಗುತ್ತದೆ.

ಉದಾ : Maram > Marã
avan > avẽ
nān > nã :

(3) ವ್ಯಂಜನಗಳು :

p		t	ṯ	ṭ	c	k	
b		d		ḍ	j	g	
	f		s	ṣ			h
	v		z		y		
m			n	ṇ	ñ	ṅ	
			l	ḷ			
			r	ḻ			

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಘೋಷ ಮತ್ತು ಘೋಷ ಧ್ವನಿಮಾಗಳು :

ಘೋಷ ಧ್ವನಿಗಳು ಧ್ವನಿಮಾಗಳಾಗಿ ಬೆಳವಣಿಗೆಯಾಗಿರುವುದು ಆಧುನಿಕ ಭಾಷೆಯ ಮತ್ತೊಂದು ವೈಶಿಷ್ಟ್ಯತೆ. ಸ್ವೀಕರಣ ಪದಗಳ ಬಳಕೆ ಆಧುನಿಕ ಕಾಲದಲ್ಲಿ ಹೆಚ್ಚಾದುದೇ ಇದಕ್ಕೆ ಕಾರಣ.

ಉದಾ :	ಕುರು	' pimple '
	ಗುರು	' teacher '
	ಪಾವಂ	' sin '
	ಬಾವಂ	inner idea (or) action

ಸ್ಪರ್ಶ ಧ್ವನಿ ಸಂಘರ್ಷ ಧ್ವನಿಮಾವಾಗುವುದು :

ಎರಡು ಸ್ವರಗಳ ಮಧ್ಯದಲ್ಲಿ ಬರುವ ಸ್ಪರ್ಶ ಧ್ವನಿಮಾಗಳು ಸಂಘರ್ಷ ಧ್ವನಿಮಾಗಳಾಗಿ ಉಚ್ಚಾರಣೆಯಾಗುತ್ತವೆ.

-ಸ್ಪರ್ಶ- > -ಸಂಘರ್ಷ- | ಸ್ವರ-ಸ್ವರ

ಉದಾ : Mātam > Māəam

paṭam > pāəam

ವಿತರಣೆ :

ಆಧುನಿಕ ತಮಿಳು ಭಾಷೆಯಲ್ಲಿ ಎಲ್ಲಾ ಸ್ವರಗಳೂ ಪದದ ಆರಂಭದಲ್ಲಿ ಬರುತ್ತವೆ. ತೊಲ್ಕಾಪ್ಪಿಯರ್ ಪದದ ಆರಂಭದಲ್ಲಿ ಬರಬಾರದು ಎಂದು ಹೇಳಿದ ಧ್ವನಿಮಾಗಳಲ್ಲಿ ಕೆಲವು ಆಧುನಿಕ ಕಾಲದ ಭಾಷೆಯಲ್ಲಿ ಪದದ ಆರಂಭದಲ್ಲಿ ಬಂದಿವೆ.

ಉದಾ :	। ಟ ।	ಟವಲ್, ಟಾನಿಕ್, ಟೆಲಿಕಿರಾಂ
	। ಡ ।	ಡಪ್ಪಾ, ಡಾಕ್ಟರ್, ಡೀಸಲ್
	। ಲ ।	ಲಟ್ಚಂ. ಲಾಗಿರಿ, ಲೀಲೈ, ಲಿನನ್
	। ರ ।	ರಬ್ಬರ್, ರಾಮನ್, ರಿಜಿಸ್ಟ್ರಾರ್, ರಹಸಿಯಂ, ರಯಿಲ್
	। ಶ ।	ಶರ್ಬತ್, ಶಾಪ್
	। ಜ ।	ಜಂಬಂ. ಜಾಕ್ಕಿರತೈ, ಜೂನ್, ಜೋಡಿ
	। ಹ ।	ಹಾಲ್, ಹೋಟ್ಟಲ್
	। ಕ್ಷ ।	ಕ್ಷತ್ರಿಯರ್, ಕ್ಷವರಂ, ಕ್ಷೇಮಂ

ಸ್ವರಗಳಲ್ಲಿ ಎ, ಒ, ಔ ಮುಂತಾದುವು ಪದದ ಅಂತ್ಯದಲ್ಲಿ ಬರುವುದಿಲ್ಲ. ವ್ಯಂಜನಗಳಲ್ಲಿ ಕ್, ಚ್, ತ್, ಟ್, ಪ್, ಮ್, ನ್, ಣ್, ಯ್, ರ್. ಲ್, ವ್, ಟ್,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಳ್, ಶ್, ಚ್, ಸ್, ಮುಂತಾದುವು ಪದದ ಅಂತ್ಯದಲ್ಲಿ ಬರುತ್ತವೆ. ಆಧುನಿಕ ತಮಿಳಿನಲ್ಲಿ ಪದದ ಆರಂಭದಲ್ಲೂ ಅಂತ್ಯದಲ್ಲೂ ಸಂಯುಕ್ತ ವ್ಯಂಜನಗಳು ಬರುವುದಿಲ್ಲ. ಸಂಘ ಕಾಲದ ಭಾಷೆಯಲ್ಲಿ ಅಂತ್ಯದಲ್ಲಿ ಸಂಯುಕ್ತ ವ್ಯಂಜನಗಳನ್ನುಳ್ಳ ಪೋನ್ಕ್ ಮುಂತಾದ ಪದಗಳು ಆಧುನಿಕ ತಮಿಳಿನಲ್ಲಿ ಪೋಲುಂ ಎಂದು ಬರುತ್ತವೆ. ಪದದ ಮಧ್ಯದಲ್ಲಿ ಸಂಯುಕ್ತ ವ್ಯಂಜನಗಳು ಬರುತ್ತವೆ. ಇಂದಿನ ಭಾಷೆಯಲ್ಲಿ ಕೆಳಕಂಡ ಸಂಯುಕ್ತ ವ್ಯಂಜನಗಳನ್ನು ನೋಡಬಹುದು.

ಉದಾ :	। ಟ್ಚ್ ।	ಚಟ್ಚಿ	। ಸ್ಕ್ ।	ನಮಸ್ಕಾರಂ
	। ಟ್ಲ್ ।	ಇಟ್ಲಿ	। ಸ್ಟ್ ।	ಪೋಸ್ಟರ್
	। ಟ್ಜ್ ।	ಪೇಟ್ಜ್	। ಸ್ತ್ ।	ಆಸ್ತಿ
	! ನ್ಟ್ ।	ಇನ್ಶ್ಯೂರನ್ಸ್	। ಸ್ಪ್ ।	ಪರಸ್ಪರಂ
	। ನ್ಯ್ ।	ಶೂನ್ಯಂ	। ಸ್ರ್ ।	ಆಸ್ರಮಂ
	। ನ್ಜ್ ।	ಇನ್ಜಿನ್	। ಸ್ಲ್ ।	ಇಸ್ಲಾಂ
	। ನ್ಸ್ ।	ಪೆನ್ಸ್ಸಿಲ್	। ಸ್ವ್ ।	ಸರಸ್ವತಿ
	। ಷ್ಕ್ ।	ಪುಷ್ಕಿನ್	। ರ್ಣ್ !	ವರ್ಣಂ
	। ಷ್ಟ್ !	ಕುರುಷ್ಚೇವ್	। ರ್ನ್ ।	ಕವರ್ನರ್
	। ಷ್ಟ್ ।	ನಷ್ಟಂ	। ರ್ ರ್ ।	ವರ್ರಾನ್
	। ಷ್ಣ್ ।	ಉಷ್ಣಂ	। ರ್ಜ್ ।	ಕರ್ಜನೈ
	। ಷ್ಮ್ ।	ಭೀಷ್ಮರ್	। ಲ್ಷ್ ।	ಕಾಲ್ಷಿಯಂ
	। ಷ್ಯ್ ।	ರುಷ್ಯ		

ಇಂದಿನ ಆಡು ಭಾಷೆಯಲ್ಲಿ ಕಂಡು ಬರುವ ಕೆಲವು ಧ್ವನಿಮಾ ಬದಲಾವಣೆಗಳು :

'ಇ' ಕಾರ 'ಎ' ಕಾರ, 'ಉ' ಕಾರ 'ಒ' ಕಾರ ಪರಿವರ್ತನೆ.

{ (ಇ) / (ಎ) } → { (ಎ) / (ಒ) } | — { ಅ / ಐ }

ಉದಾ : ಇಲ್ಲೈ > ಎಲ್ಲೈ

ಇಡಂ > ಎಡಂ

ಉರಲ್ > ಒರಲ್

ಕುಡ್ಯೆ > ಕೊಡ್ಯೆ

ಮುದಲ್ > ಮೊದಲ್

'ಇ' ಕಾರ 'ಎ' ಕಾರಗಳು 'ಒ' ಕಾರವಾಗುವುದು :

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

{ ಇ, ಎ } > { ಒ }

ಉದಾ : ಪಿಱಪ್ಪು > ಪೊಱಪ್ಪು
ಪಿಣಂ > ಪೊಣಂ
ಪೆಟ್ಟಿ > ಪೊಟ್ಟಿ
ಪೆಣ್ > ಪೊಣ್ಣು

'ಇ' ಕಾರ 'ಉ' ಕಾರವಾಗುವುದು :

ಇ > ಉ / ಓಷ್ಠ್ಯ —

ಉದಾ : ಪಿಟ್ಟು > ಪುಟ್ಟು
ಪಿಳ್ಳೈ > ಪುಳ್ಳೈ

'ಉ' ಕಾರ 'ಇ' ಕಾರವಾಗುವುದು

ಉ > ಇ

ಉದಾ : ಪುಲ್ಲು > ಪಿಲ್ಲು
ಪುೞು > ಪಿೞು

'ಔ' ಕಾರ 'ಅವ್' ಎಂದು ಉಚ್ಚಾರವಾಗುವುದರೊಂದಿಗೆ ಹಾಗೆಯೇ ಬರೆಯಲ್ಪಡುತ್ತದೆ.

ಔ > ಅವ್

ಉದಾ : ಔವೈ > ಅವ್ವೈ

ಸಮೀಕರಣ :

ಒಂದು ಧ್ವನಿಮಾ ಹಿಂದೆ ಅಥವಾ ಮುಂದೆ ಬರುವ ಧ್ವನಿಮಾಗಳಿಗೆ ತಕ್ಕಂತೆ ಪರಿವರ್ತನೆಯಾಗುವುದನ್ನು ಸಮೀಕರಣ ಎನ್ನುತ್ತಾರೆ.

ಒಂದು ಧ್ವನಿಮಾ ತನಗೆ ಹಿಂದೆ ಬರುವ ಧ್ವನಿಮಾವಿಗೆ ತಕ್ಕಂತೆ ಬದಲಾವಣೆಯಾಗುವುದಕ್ಕೆ ಪೂರ್ವವರ್ತಿ ಸಮೀಕರಣ ಎಂದು ಹೆಸರು.

ಉ > ಇ/ ಇ—

ಉದಾ : ಕೇಳ್ವಿಕ್ಕು > ಕೇಳ್ವಿಕ್ಕಿ
ಕತ್ತಿಕ್ಕು > ಕತ್ತಿಕ್ಕಿ

ಒಂದು ಧ್ವನಿಮಾ ತನಗೆ ಮುಂದೆ ಬರುವ ಧ್ವನಿಮಾವಿಗೆ ತಕ್ಕಂತೆ ಬದಲಾವಣೆಯಾಗುವುದಕ್ಕೆ ಪಶ್ಚಗಾಮಿ ಸಮೀಕರಣ ಎಂದು ಹೆಸರು.

ಅನುನಾಸಿಕ > ಸಂವಾದಿ ಅನುನಾಸಿಕ /—ಸ್ಪರ್ಶ

nasals > corresponding nasals /—stop.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

{ (ಣ) / (ನ) } > { (ಮ) / (ಞ) } | — { (ಪ) / (ಚ) }

ಉದಾ : ಚೆಣ್ಬಗಂ > ಚೆಂಬಗಂ (ಚೆಮ್ಬಗಂ)
ವನ್ಚಿನಂ > ವಂಚಿನಂ (ವಞ್ಚಿನಂ)
ಎಣ್ಬದು > ಎಂಬದು (ಎಮ್ಬದು)
ನನ್‌ಚೆಯ್ > ನಂಚೆಯ್ (ನಞ್ಚೆಯ್)
ಪುನ್‌ಚೆಯ್ > ಪುಂಚೆಯ್ (ಪುಞ್ಚೆಯ್)

ತಾಲವ್ಯೀಕರಣ :

ಪದದ ಮಧ್ಯದಲ್ಲಿ ತಾಲವ್ಯ ಸ್ವರಗಳ ಮುಂದೆ ಬರುವ ವ್ಯಂಜನಗಳು ತಾಲವ್ಯ ವ್ಯಂಜನಗಳಾಗಿ ಬದಲಾವಣೆಯಾಗುತ್ತವೆ.

{ (ತ್ತ) / (ನ್ತ) } > { (ಚ್ಚ) / (ಞ್ಚ) } | ತಾಲವ್ಯ ಸ್ವರ —

ಉದಾ : ಅಡಿತ್ತಾನ್ > ಅಡಿಚ್ಚಾನ್
ಕಲೈತ್ತಾನ್ > ಕಲೈಚ್ಚಾನ್
ಎರಿಂದದು > ಎರಿಞ್ಚದು
ಉಡೈಂದದು > ಉಡೈಞ್ಚದು

ದಂತ್ಯ ಧ್ವನಿಮಾವಾಗುವುದು :

ವರ್ತ್ಸ್ಯಧ್ವನಿಯಾದ 'ಱ' ಕಾರ ಪದದ ಮಧ್ಯದಲ್ಲಿ ಒತ್ತಕ್ಷರಗಳಾಗಿ ಬರುವಾಗ ದಂತ್ಯ ಧ್ವನಿಗಳಾಗಿ ಬದಲಾವಣೆಯಾಗುತ್ತವೆ.

-ಱ್ಱ- > -tt-

ಉದಾ : ಕುಱ್ಱಂ > ಕುತ್ತಂ
ವಿಱ್ಱಾನ್ > ವಿತ್ತಾನ್
ಪಱ್ಱುವರವು > ಪತ್ತುವರವು

ನ (n) ಕಾರ ನ (ṉ) ಕಾರವಾಗುವುದು :

ದಂತ್ಯ ಅನುನಾಸಿಕ ಧ್ವನಿಯಾದ ನ (n) ಕಾರವು ವರ್ತ್ಸ್ಯ ಅನುನಾಸಿಕ (ṉ) ಧ್ವನಿಯಾಗಿ ಬದಲಾವಣೆ ಯಾಗುತ್ತದೆ.

–ನ್ನ (nn)– > –ನ್ನ (ṉṉ)–

ಉದಾ : ಇನ್ನಾಡು > ಇನ್ನಾಡು innātu > iṉṉātu
ಮುನ್ನೀರ್ > ಮುನ್ನೀರ್ munnir > muṉṉir

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಟಿ' ಕಾರ ಲೋಪವಾಗುವುದು :

ಆಡು ಭಾಷೆಯಲ್ಲಿ ಪದದ ಮಧ್ಯದಲ್ಲಿ ಬರುವ 'ಟಿ' ಕಾರವು ಕೆಲವೊಮ್ಮೆ ಲೋಪವಾಗುತ್ತದೆ.

–ಟಿ– > –ϕ–

ಉದಾ : ವಾಟ್ಟಿರಸಿ > ವಾವರಸಿ

ತಾಟ್ವಾರಂ > ತಾವಾರಂ

'ಯ' ಕಾರ 'ಚ' ಕಾರವಾಗುವುದು :

–ಯ– > –ಚ–

ಉದಾ : ಉಯಿರ್ > ಉಚಿರ್

ಮಯಿರ್ > ಮಚಿರ್

'ಯ' ಕಾರ 'ರ' ಕಾರಗಳು ಲೋಪವಾಗುವುದು :

$$—\left\{ \begin{matrix} \text{ಯ} \\ \text{ರ} \end{matrix} \right\} — \rightarrow — \{ \phi \} —$$

ಉದಾ : ಆರಾಯ್ಚ್ಚಿ > ಆರಾಚ್ಚಿ

ಕಾಯ್ಚ್ಚು > ಕಾಚ್ಚು

ಪಾರ್ತ್ತು > ಪಾತ್ತು

ಇಂದಿನ ತಮಿಳು ಭಾಷೆಯ ನಾಮಪದಗಳಲ್ಲಿ ಲಿಂಗ ಪ್ರತ್ಯಯಗಳು ಈ ಕೆಳಕಂಡಂತಿವೆ.

ಪುಲ್ಲಿಂಗ ಪ್ರತ್ಯಯಗಳು :

ಉದಾ : –ಅನ್ : ತಿರುಡನ್, ಚೆವಿಡನ್, ಅರಸನ್

–ಆನ್ : ಮಚ್ಚಾನ್, ಅತ್ತಾನ್

–ವನ್ : ಕುಯವನ್, ತಲೈವನ್

–ಕಾರನ್ : ವೇಲೈಕ್ಕಾರನ್. ವೀಟ್ಟುಕ್ಕಾರನ್

ಸ್ತ್ರೀಲಿಂಗ ಪ್ರತ್ಯಯಗಳು :

ಉದಾ : –ಅಳ್ : ಮಗಳ್

–ತ್ತಿ : ಕುಱತ್ತಿ, ಪಳ್ಳತ್ತಿ

–ಆತ್ತಿ : ಪಾಪ್ಪಾತ್ತಿ. ವಣ್ಣಾತ್ತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

–ಚ್ಚಿ : ಪಳ್ಳಚ್ಚಿ, ಚೆಟ್ಟಿಚ್ಚಿ
–ಕ್ಕಾರಿ : ವೇಲೈಕ್ಕಾರಿ, ವೀಟ್ಟುಕ್ಕಾರಿ
–ವಿ : ಪುದಲ್ವಿ, ತಲೈವಿ

ಪುಂಸ್ತ್ರೀಲಿಂಗ ಪ್ರತ್ಯಯಗಳು :

ಉದಾ : –ಅರ್ : ಅರಸರ್, ತಿರುಡರ್
–ಅರ್‌ಗಳ್ : ಅರಸರ್‌ಗಳ್, ತಿರುಡರ್‌ಗಳ್, ತಮಿಳರ್‌ಗಳ್
–ವರ್ : ಪುದಲ್ವರ್, ಸೆಲ್ವರ್
–ವರ್‌ಗಳ್ : ಪುದಲ್ವರ್‌ಗಳ್, ಸೆಲ್ವರ್‌ಗಳ್
–ಮಾರ್ : ಅಣ್ಣನ್ಮಾರ್ ತಂಬಿಮಾರ್, ಅರಸಿಮಾರ್
–ಮಾರ್‌ಗಳ್ : ಅಣ್ಣನ್‌ಮಾರ್‌ಗಳ್, ತಂಬಿಮಾರ್‌ಗಳ್, ಅರಸಿಮಾರ್‌ಗಳ್
–ಕಳ್ : ಅಣ್ಣಗಳ್, ಪೆಣ್ಣಗಳ್, ತಂಬಿಗಳ್

ನಪುಂಸಕಲಿಂಗ ಏಕವಚನ ಪ್ರತ್ಯಯಗಳು :

ತಮಿಳು ನಾಮಪದಗಳಲ್ಲಿ ಸರ್ವನಾಮವನ್ನು ಬಿಟ್ಟು ಬೇರೆ ಯಾವ ನಾಮ ಪದದಲ್ಲೂ ನಪುಂಸಕಲಿಂಗ ಏಕ ವಚನವನ್ನು ಗುರುತಿಸುವ ಲಿಂಗ ಪ್ರತ್ಯಯಗಳಿಲ್ಲ.

ನಪುಂಸಕಲಿಂಗ ಬಹುವಚನ ಪ್ರತ್ಯಯಗಳು :

–ಕ್ಕಳ್, –ಕಳ್ ಮುಂತಾದವು ನಪುಂಸಕಲಿಂಗ ಬಹುವಚನ ಪ್ರತ್ಯಯಗಳಾಗಿ ಬರುತ್ತವೆ.

ಉದಾ : –ಕ್ಕಳ್ : ಪೂಕ್ಕಳ್, ಈಕ್ಕಳ್
–ಕಳ್ : ಆಡುಕಳ್, ಮಾಡುಕಳ್, ಕಲ್ಕಳ್

ಗೌರವಾರ್ಥಕ ಏಕವಚನ ಪ್ರತ್ಯಯಗಳು :

–ಆರ್ ಎಂಬುದು ಗೌರವಾರ್ಥಕ ಏಕವಚನ ಪ್ರತ್ಯಯವಾಗಿ ನಾಮಪದ ದೊಂದಿಗೆ ಬರುತ್ತದೆ.

ಉದಾ : ಅಣ್ಣನಾರ್
ಅಣ್ಣಿಯಾರ್
ವರದರಾಜನಾರ್

'ಅವರ್‌ಗಳ್' ಎಂಬುದೂ ಹೆಸರಿಗೆ ಮುಂದೆ ಬಂದು ಗೌರವಾರ್ಥಕ ಏಕವಚನ ವನ್ನು ಸೂಚಿಸುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ತುಣ್ಶೈವೇಂದರ್ ಅವರ್‌ಗಳ್
ವರದರಾಜನಾರ್ ಅವರ್‌ಗಳ್

ಅದರಂತೆಯೆ ಅಡಿಗಳ್, ಅಮ್ಮೈಯಾರ್ ಎಂಬುವುಗಳೂ ನಾಮಪದದೊಂದಿಗೆ ಬಂದು ಗೌರವಾರ್ಥಕ ಏಕವಚನವನ್ನು ಸೂಚಿಸುತ್ತವೆ.

ಉದಾ : ಗಾಂಧಿ ಅಡಿಗಳ್
ರಾಮಲಿಂಗ ಅಡಿಗಳ್
ಕಾರೈಕ್ಕಾಲ್ ಅಮ್ಮೈಯಾರ್

ಇದರಲ್ಲಿ ಅಮ್ಮೈಯಾರ್ ಎಂಬುದು ಸ್ತ್ರೀಯನ್ನು ಸೂಚಿಸುವ ನಾಮಪದಕ್ಕೆ ಮಾತ್ರ ಬರುವ ಗೌರವಾರ್ಥಕ ಏಕವಚನ ಪದ.

ಅವರ್‌ಗಳ್ ಎಂಬುದು ಅಮ್ಮೈಯಾರ್ ಎಂಬುದಕ್ಕೆ ಮುಂದೆ ದ್ವಿಗೌರವಾರ್ಥಕ ಏಕವಚನ ಪದವಾಗಿಯೂ ಬರುತ್ತದೆ.

ಉದಾ : ಇಂದಿರಾಗಾಂಧಿ ಅಮ್ಮೈಯಾರ್ ಅವರ್‌ಗಳ್

ಸಾಧಿತ ನಾಮಪದಗಳು :

ಒಂದು ವ್ಯಾಕರಣ ಅಂಶದಿಂದ ಸಾಧಿಸಲ್ಪಡುವ ನಾಮಪದಕ್ಕೆ ಸಾಧಿತ ನಾಮಪದ ಎಂದು ಹೆಸರು. ಇಂದಿನ ತಮಿಳುಭಾಷೆಯಲ್ಲಿ ಕೆಳಕಂಡ ಪ್ರತ್ಯಯಗಳು ಸಾಧಿತನಾಮಪದಗಳನ್ನು ರಚಿಸುವುದಕ್ಕೆ ಉಪಯೋಗವಾಗುವ ಪ್ರತ್ಯಯಗಳಾಗಿ ಬಳಕೆಗೊಂಡಿವೆ.

ಉದಾ : —ತ್ತುವಂ :
ಮುದಲಾಳಿ-ತ್ತುವಂ > ಮುದಲಾಳಿತ್ತುವಂ
ಮುಕ್ಕಿಯಂ-ತ್ತುವಂ > ಮುಕ್ಕಿಯತ್ತುವಂ

—ಅಂ :
ತಿರುಪ್ಪು-ಅಂ > ತಿರುಪ್ಪಂ
ಓಟ್ಟು-ಅಂ > ಓಟ್ಟಂ
ನೆರುಕ್ಕು-ಅಂ > ನೆರುಕ್ಕಂ
ಅಡಕ್ಕು-ಅಂ > ಅಡಕ್ಕಂ

—ಪದು :
ಎಡು-ಪದು > ಎಡುಪ್ಪದು
ಕೊಡು-ಪದು > ಕೊಡುಪ್ಪದು
ಉಣ್-ಪದು > ಉಣ್‌ಪದು

—ಪ್ಪು :
ಚಿರಿ-ಪ್ಪು > ಚಿರಿಪ್ಪು
ವಿರಿ-ಪ್ಪು > ವಿರಿಪ್ಪು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

—ವು :

ವಾಟ್-ವು > ವಾಟ್ವು

ತೇಯ್-ವು > ತೇಯ್ವು

—ಆಳಿ :

ಪೇಚ್ಚು-ಆಳಿ > ಪೇಚ್ಚಾಳಿ

ನೋಯ್-ಆಳಿ > ನೋಯಾಳಿ

—ಮೈ :

ಪೆರು-ಮೈ > ಪೆರುಮೈ

—ವಂದನ್ :

ಸೆಲ್ವಂ-ವಂದನ್ > ಸೆಲ್ವಂದನ್

ತನಂ-ವಂದನ್ > ತನವಂದನ್

—ಮಾನ್ :

ನೀತಿ-ಮಾನ್ > ನೀತಿಮಾನ್

ಪುತ್ತಿ-ಮಾನ್ > ಪುತ್ತಿಮಾನ್

—ಐ :

ಕೊಲ್-ಐ > ಕೊಲ್ಲೈ

ವಿಲ್-ಐ > ವಿಲ್ಲೈ

ನಾಮಪದದೊಂದಿಗೆ ವಿರುದ್ಧಾರ್ಥಕ ಪ್ರತ್ಯಯಗಳು :

ಸಂಸ್ಕೃತ ಭಾಷೆಯಲ್ಲಿ ಬರುವಂತೆಯೆ ವಿರುದ್ಧಾರ್ಥಕ ಪ್ರತ್ಯಯಗಳು ನಾಮಪದದ ಹಿಂದೆ ಸೇರುವುದನ್ನು ಇಂದಿನ ತಮಿಳುಭಾಷೆಯಲ್ಲಿ ನೋಡಬಹುದು.

ಉದಾ : ನಾಗರಿಕಂ > ಅನಾಗರಿಕಂ

ಆವಶಿಯಂ > ಅನಾವಶಿಯಂ

ನಂಬಿಕ್ಕೈ > ಅವನಂಬಿಕ್ಕೈ

ಮಾನಂ > ಅವಮಾನಂ

ಸರ್ವನಾಮಗಳು :

ಆಧುನಿಕ ತಮಿಳುಭಾಷೆಯಲ್ಲಿ ಬಳಕೆಯಲ್ಲಿರುವ ಸರ್ವನಾಮಗಳು ಇಂತಿವೆ.

		ನಾಮರೂಪ	ಪರಿವರ್ತಿತ ವಿಭಕ್ತಿರೂಪ
ಉತ್ತಮಪುರುಷ	ಏ. ವ.	ನಾನ್	ಎನ್
	ಬ. ವ. ಸ.	ನಾಂಗಳ್	ಎಂಗಳ್
	ಬ. ವ. ಅ.	ನಾಂಗಳ್	ಎಂಗಳ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಧ್ಯಮಪುರುಷ	ಏ. ವ.	ನೀ	ಉನ್
	ಬ. ವ.	ನೀಂಗಳ್	ಉಂಗಳ್
ಪ್ರಥಮಪುರುಷ	ಪುಲ್ಲಿಂಗ	ಅವನ್	ಅವನ್
	ಸ್ತ್ರೀಲಿಂಗ	ಅವಳ್	ಅವಳ್
	ಗೌ. ಏ. ವ.	ಅವರ್	ಅವರ್
	ಪುಂಸ್ತ್ರೀಲಿಂಗ	ಅವರ್‌ಗಳ್	ಅವರ್‌ಗಳ್
ನಪುಂಸಕಲಿಂಗ	ಏ. ವ.	ಅದು	ಅದು
ನಪುಂಸಕಲಿಂಗ	ಬ. ವ.	ಅವೈ	ಅವೈ

ಹಿಂದಿನ ಕಾಲದಲ್ಲಿ ಪ್ರಥಮ ಪುರುಷ ಸರ್ವನಾಮಗಳಾಗಿದ್ದ ತಾನ್, ತಾಂ ಎಂಬುವು ಆತ್ಮಾರ್ಥಕ ಸರ್ವನಾಮಗಳಾದಮೇಲೆ ನಿರ್ದೇಶಕ ಸರ್ವನಾಮಗಳಾಗಿದ್ದ ಅವನ್, ಅವಳ್ ಮುಂತಾದುವು ಪ್ರಥಮ ಪುರುಷ ಸರ್ವನಾಮಗಳಾಗಿ ಆಧುನಿಕ ತಮಿಳು ಭಾಷೆಯಲ್ಲಿ ಬಳಸಲಾಗುತ್ತಿವೆ.

ಎವನ್, ಎವಳ್, ಎವರ್, ಎದು, ಎವೈ ಮುಂತಾದುವು ಪ್ರಶ್ನಾರ್ಥಕ ಸರ್ವನಾಮಗಳಾಗಿ ಬರುತ್ತವೆ.

ವಿಭಕ್ತಿ ;—

ಸಾಧನ ವಿಭಕ್ತಿಗೆ –ಆಲ್, –ಇಲ್,– ಐಕೊಂಡು,– ಐವೈತ್ತು ಮುಂತಾದುವು ಇಂದಿನ ತಮಿಳುಭಾಷೆಯಲ್ಲಿ ಪ್ರತ್ಯಯಗಳಾಗಿ ಬಳಸಲ್ಪಡುತ್ತಿವೆ.

ಉದಾ :

ಕತ್ತಿ + { ಆಲ್ / ಇಲ್ / ಐಕ್ / ಐಪ್ / ಐ } + { ವೈತ್ತು / ಕೊಂಡು / ಪಯನ್ ಪಡುತ್ತಿ / ಉಪಯೋಗಿತ್ತು }

ಸಹವರ್ತಿ ವಿಭಕ್ತಿ ಪ್ರತ್ಯಯವಾಗಿ-ಒಡು,-ಉಡನ್,-ಕೂಡ ಮುಂತಾದ ಪ್ರತ್ಯಯಗಳು ಬರುತ್ತವೆ.

ಉದಾ : ಶಂಕರೊಡು ಸುಂದರ್ ವನ್ದಾನ್
ರಾಮನುಡನ್ ಸುಂದರ್ ವನ್ದಾನ್
ರಾಮನ್ ಕೂಡ ಗೋಪಾಲ್ ವನ್ದಾನ್

ಪಂಚಮೀ ವಿಭಕ್ತಿ ಪ್ರತ್ಯಯಗಳಾಗಿ–ಇಲಿರುಂದು,–ಇಡಮಿರುಂದು ಮುಂತಾದುವು ಬರುತ್ತವೆ. ಆಡುಭಾಷೆಯಲ್ಲಿ–ಇಡಮಿರುಂದು ಎಂಬುದು ಕಿಟ್ಟೇಯಿರುಂದು ಎಂದು ಬರುತ್ತದೆ. ಇದು ಮಾನವ ನಾಮಪದದೊಂದಿಗೆ ಮಾತ್ರ ಬರುತ್ತದೆ. –ಇಲಿರುಂದು ಎಂಬುದು ಅಮಾನವ ನಾಮಪದದೊಂದಿಗೆಯೂ ಬರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಊರಿಲಿರುಂದು
ಮರತ್ತಿಲಿರುಂದು
ರಾಮನಿಡಮಿರುಂದು । ರಾಮನ್ ಕಿಟ್ಟೇಯಿರುಂದು

ಷಷ್ಠಿ ವಿಭಕ್ತಿಗೆ ಇಂದಿನ ತಮಿಳು ಭಾಷೆಯಲ್ಲಿ-ಅದು, -ಉಡೈಯ, -ø ಮುಂತಾದವು ಪ್ರತ್ಯಯಗಳಾಗಿ ಬರುತ್ತವೆ.

ಉದಾ : ಎನದು ವೀಡು
ಎನ್ನುಡೈಯ ವೀಡು
ಎನ್‌ವೀಡು

ಸಪ್ತಮೀ ವಿಭಕ್ತಿಗೆ ಬರಹ ಭಾಷೆಯಲ್ಲಿ-ಇಲ್,-ಇಡಂ ಎಂಬ ಪ್ರತ್ಯಯಗಳೂ ಆಡುಭಾಷೆಯಲ್ಲಿ-ಲೇ,-ಕಿಟ್ಟೇ ಎಂಬ ಪ್ರತ್ಯಯಗಳೂ ಬರುತ್ತವೆ.

ಉದಾ :	ಬರಹ ಭಾಷೆ	ಆಡುಭಾಷೆ
	ಮರತ್ತಿಲ್	ಮರತ್ತಿಲೇ
	ಅವನಿಡಂ	ಅವನ್‌ಕಿಟ್ಟೇ

ಸಂಖ್ಯಾವಾಚಕ :

-ಆವದು, -ಆಂ ಎಂಬ ಪ್ರತ್ಯಯಗಳನ್ನು ಸಂಖ್ಯಾವಾಚಕ ನಾಮಪದದೊಂದಿಗೆ ಸೇರಿಸಿದರೆ ಕ್ರಮಸೂಚಕ ಸಂಖ್ಯಾವಾಚಕ ನಾಮಪದ ರಚಿತವಾಗುತ್ತದೆ. ಇವುಗಳಲ್ಲಿ -ಆಂ ಎಂಬುದು ಪ್ರಾಚೀನ ಕಾಲದ ತಮಿಳುಭಾಷೆಯಲ್ಲೂ-ಆವದು ಎಂಬುದು ಇಂದಿನ ತಮಿಳುಭಾಷೆಯಲ್ಲೂ ಹೆಚ್ಚಾಗಿ ಬರುತ್ತವೆ.

ಉದಾ ; ಇರಂಡಾಂ / ಇಂರಡಾವದು
ಮೂನ್ರಾಂ / ಮೂನ್ರಾವದು

ಕ್ರಿಯಾಪದ ;

ಪ್ರಾಚೀನ ತಮಿಳು ವೈಯಾಕರಣರು ಕ್ರಿಯಾಪದಗಳನ್ನು ಕಾಲಸೂಚಕ ಕ್ರಿಯಾಪದಗಳೆಂದೂ ಲಕ್ಷಿತ ಕ್ರಿಯಾಪದಗಳೆಂದೂ ಎರಡು ಬಗೆಯಾಗಿ ವಿಂಗಡಿಸಿ ಮತ್ತೆ ಅವುಗಳನ್ನು ಮಾನವ ಕ್ರಿಯಾಪದ, ಅಮಾನವ ಕ್ರಿಯಾಪದ, ಸಮಾನಕ್ರಿಯಾಪದ ಎಂದು ಮೂರುವಿಭಾಗವಾಗಿ ವಿಂಗಡಿಸಿದ್ದಾರೆ. ಆದರೆ ಇಂದಿನ ಭಾಷಾ ವಿಜ್ಞಾನಿಗಳು ಕ್ರಿಯಾಪದಗಳನ್ನು ಅವುಗಳ ಕಾಲ ಪ್ರತ್ಯಯಗಳನ್ನು ಅವಲಂಬಿಸಿ ಸಬಲ ಕ್ರಿಯಾಪದ, ನಿಯಮಿತ ಕ್ರಿಯಾಪದ, ನಡುವರ್ಗ ಕ್ರಿಯಾಪದ ಎಂದು ಮೂರು ಬಗೆಯಾಗಿ ವಿಭಾಗಿಸಿದ್ದಾರೆ.

ಕಾಲ ಸೂಚಕ ಪ್ರತ್ಯಯಗಳ ಆಧಾರದ ಮೇಲೆ ಕ್ರಾಲ್ ಅವರು ಕ್ರಿಯಾಪದಗಳನ್ನು ಹನ್ನೆರಡು ಬಗೆಯಾಗಿಯೂ ಏಳು ಬಗೆಯಾಗಿಯೂ ವಿಂಗಡಿಸಿದ್ದಾರೆ. ಲಿಸ್ಕರ್ ಎಂಬುವರು ಮೂರು ಬಗೆಯಾಗಿಯೂ ಕುಮಾರಸ್ವಾಮಿರಾಜಾ ಆರು ಬಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಾಗಿಯೂ ಕೋದಂಡರಾಮನ್ ಐದು ಬಗೆಯಾಗಿಯೂ ಆಗಸ್ತ್ಯಲಿಂಗಂ ಮೂರು ವಿಧವಾಗಿಯೂ ತಮಿಳು ಭಾಷೆಯ ಕ್ರಿಯಾಪದಗಳನ್ನು ವರ್ಗೀಕರಿಸಿದ್ದಾರೆ. ಇವುಗಳಲ್ಲಿ ಕಾಲ್ಡ್‌ವೆಲ್‌ರವರ ಏಳು ಬಗೆಯನ್ನೇ ವಿದ್ವಾಂಸರು ಒಪ್ಪಿಕೊಂಡಿದ್ದಾರೆ.

ಆಜ್ಞಾಸೂಚಕ ಕ್ರಿಯಾಪದ :

ಅಸ್ತಿವಾಚಕ ಏಕವಚನ ಆಜ್ಞಾಸೂಚಕ ಕ್ರಿಯಾಪದ	: ಪೋ, ಚೆಯ್, ನಡ
,, ಬಹುವಚನ ,, ,,	: ಪೋಂಗಳ್ ಚೆಯ್ಯುಂಗಳ್ ನಡಂಗಳ್
ನಿಷೇಧಾರ್ಥಕ ಏಕವಚನ ,, ,,	: ಚೆಯಕ್ಕಾದೆ ನಡಕ್ಕಾದೇ
ಗೌರವಾರ್ಥಕ ,, ,, ,,	: ಚೆಯ್ಯುಂ ಆಡುಂ
,, ನಿಷೇಧಾರ್ಥಕ ,, ,,	: ಚೆಯ್ಯಾದೀರುಂ ಆಡಾದೀರುಂ
ವಿಶಿಷ್ಟ ಅಸ್ತಿವಾಚಕ ಏಕವಚನ ,, ,,	: ಚೆಯ್ಯುಂಗಳ್ ಆಡುಂಗಳ್ ಪಾಡುಂಗಳ್
,, ನಿಷೇಧಾರ್ಥಕ ,, ,, ,,	: ಚೆಯ್ಯಾದೀರ್‌ಗಳ್ ಆಡಾದೀರ್‌ಗಳ್
ಕೋರಿಕೆ ಆಜ್ಞಾಸೂಚಕ ಕ್ರಿಯಾಪದ	: ಚೆಯ್ಯೇನ್ ಚೆಯ್ಯುವೋನ್ ಚೆಯ್ಯುಂಗಳೇನ್
ಮಧ್ಯಮ ಪುರುಷ ಏಕವಚನ ಆಜ್ಞಾಸೂಚಕ ಕ್ರಿಯಾಪದ:	ವಾರಾಯ್
,, ,, ಬಹುವಚನ ,, ,,	ವರುವೀರ್ ತರುವೀರ್

ನಿಷೇಧಾರ್ಥಕ ಕ್ರಿಯಾಪದಗಳು ;

ಸಂಘ ಕಾಲದ ತಮಿಳು ಭಾಷೆಯಲ್ಲಿ ಕಾಲಸೂಚಕ ಪೂರ್ಣ ಕ್ರಿಯಾಪದಗಳೊಂದಿಗೆಯೂ ಕಾಲಸೂಚಕ ಕೃದಂತಗಳೊಂದಿಗೆಯೂ ಕ್ರಮವಾಗಿ ನಿಷೇಧಾರ್ಥಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರತ್ಯಯವೂ ನಿಷೇಧಾರ್ಥಕ ಪದಗಳೂ ಸೇರಿಬಂದು ನಿಷೇದಾರ್ಥಕವನ್ನೂ ಸೂಚಿಸಿದ್ದವು. ಇಂದು

ವರವಿಲ್ಲೈ
ವಂದದಿಲ್ಲೈ
ವರುವದಿಲ್ಲೈ
ವರಮಾಟ್ಟಾನ್

ಮುಂತಾದ ನಿಷೇಧಾರ್ಥಕ ಪೂರ್ಣ ಕ್ರಿಯಾಪದಗಳೂ

ವರಾದ
ವರಾಮಲ್

ಮುಂತಾದ ನಿಷೇಧಾರ್ಥಕ ಕೃದಂತ ಕ್ರಿಯಾಪದಗಳೂ ಆಧುನಿಕ ತಮಿಳು ಭಾಷೆಯಲ್ಲಿ ಕಂಡುಬರುತ್ತವೆ.

ನಿಶ್ಚಿತ ಕ್ರಿಯಾ ಸೂಚಕ ಕೃದಂತ :

ಸಂಘ ಕಾಲದಲ್ಲಿ ಚೆಯಿನ್ ಎನ್ನುವ ಅನುರೂಪದಲ್ಲಿ ಬರುವ ಕೃದಂತವೂ ಇಂದು ಚೆಯ್ದಾಲ್ ಎನ್ನುವ ಅನುರೂಪದಲ್ಲಿ ಬರುವ ಕೃದಂತವೂ ನಿಶ್ಚಿತ ಕ್ರಿಯಾ ಸೂಚಕ ಕೃದಂತವಾಗಿ ಹೆಚ್ಚಾಗಿ ಬಳಸಲ್ಪಟ್ಟಿವೆ. ಇಂದು ಚೆಯ್ದಾಲ್ ಎನ್ನುವ ಅನುರೂಪದೊಂದಿಗೆ ಚೆಯ್ವದಾನಾಲ್ ಎನ್ನುವ ಅನುರೂಪದ ಕ್ರಿಯಾಸೂಚಕ ಕೃದಂತವೂ ಬಳಕೆಯಲ್ಲಿ ಕಾಡುಬರುತ್ತದೆ.

ವೈಜ್ಞಾನಿಕ ತಮಿಳು ಭಾಷೆ ಮತ್ತು ಪತ್ರಿಕಾ ತಮಿಳು ಭಾಷೆ :

ತಮಿಳು ಭಾಷೆಯ ಬೆಳವಣಿಗೆಯಲ್ಲಿ ಬಹಳ ಮುಖ್ಯವಾದವು ವೈಜ್ಞಾನಿಕ ತಮಿಳು ಭಾಷೆ ಮತ್ತು ಪತ್ರಿಕಾ ತಮಿಳು ಭಾಷೆಗಳ ಬೆಳವಣಿಗೆ ಎಂದರೆ ಅದು ತಪ್ಪಲ್ಲ. ವೈಜ್ಞಾನಿಕ ತಮಿಳು ಭಾಷೆ ಎಂದು ಹೇಳುವಾಗ ಪಾರಿಭಾಷಿಕ ಪದಗಳ ರಚನೆಯೇ ನಮ್ಮ ಮುಂದೆ ನಿಲ್ಲುತ್ತದೆ. ಪಾರಿಭಾಷಿಕ ಪದಗಳನ್ನು ರಚಿಸುವಾಗ ಅಥವಾ ಅನುವಾದ ಮಾಡುವಾಗ ಅಥವಾ ಸ್ವೀಕರಿಸಿಕೊಳ್ಳುವಾಗ ಗ್ರಂಥ ಅಕ್ಷರಗಳಾದ ಜ, ಸ. ಶ. ಕ್ಷ, ಹ, ಮುಂತಾದವುಗಳನ್ನು ಹೆಚ್ಚಾಗಿ ಬಳಸುತ್ತಾರೆ

'Z' ಎನ್ನುವ ಧ್ವನಿಯನ್ನು 'ಸ' ಎನ್ನುವ ಧ್ವನಿಯಿಂದ ಗುರುತಿಸುತ್ತಾರೆ.

ಉದಾ ; Zigmandi – ಸಿಗ್ಮಂಡಿ
Boltzman – ಬೊಲ್‌ಟ್ಸ್‌ಮನ್

– nd – ಎನ್ನುವ ಸಂಯುಕ್ತ ವ್ಯಂಜನಗಳನ್ನು 'ಣ್ಟ' ಅಥವಾ 'ನ್ಟ' ಎಂದು ಬರೆಯುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : Vander walls – ವಾನ್ಡರ್ ವಾಲ್ಸ್
Andrews – ಆಣ್ಡ್ರೂಸ್

ಪದದ ಮಧ್ಯದಲ್ಲಿ ಬರುವ ಅಘೋಷ ಸ್ಪರ್ಶ ಧ್ವನಿಯುನ್ನು ಗುರುತಿಸಲಿಕ್ಕೆ ದ್ವಿಸ್ಪರ್ಶ ಧ್ವನಿಯುನ್ನು ಬಳಸುತ್ತಾರೆ.

ಉದಾ : Dalton – ಡಾಲ್ಟ್ಟನ್
Opera – ಆಪ್ಪೆರಾ

ಪದದ ಆರಂಭದಲ್ಲಿ ಬರುವ ಘೋಷ, ಅಘೋಷ ಧ್ವನಿಗಳನ್ನು ಒಂದೇ ರೀತಿಯಾಗಿ ತಮಿಳಿನಲ್ಲಿ ಬರೆಯುತ್ತಾರೆ. ಘೋಷ ಧ್ವನಿಗೆ ಪ್ರತ್ಯೇಕವಾದ ಅಕ್ಷರ ತಮಿಳು ವರ್ಣಮಾಲೆಯಲ್ಲಿ ಇಲ್ಲದೆ ಇರುವುದೇ ಇದಕ್ಕೆ ಕಾರಣ.

ಉದಾ : Proust – ಪ್ರೌಸ್ಟ್
Bronstead – ಪ್ರಾನ್ಸ್ಟೆಟ್

ದ್ವಿಘೋಷ ಸ್ಪರ್ಶ ಧ್ವನಿಗಳನ್ನು ಒಂದು ಸ್ಪರ್ಶ ಅಕ್ಷರದಿಂದ ಗುರುತಿಸುವರು.

ಉದಾ : Abbe – ಆಬೆ
Wagge – ವಾಗೆ

ಪತ್ರಿಕಾ ತಮಿಳಿನಲ್ಲಿ ಹಲವು ವಿಶಿಷ್ಟ ಅಂಶಗಳು ಕಂಡು ಬರುತ್ತವೆ.

ವಿಡುತಲೈ ಎಂಬ ಪತ್ರಿಕೆಯಲ್ಲಿ ' ಐ '. ' ಔ ' ಎಂಬುವು ಕ್ರಮವಾಗಿ 'ಅಯ್' ಎಂದೂ ' ಅವ್ ' ಎಂದೂ ಬಳಸಲ್ಪಡುತ್ತವೆ.

ಘೋಷ ಧ್ವನಿಗಳನ್ನು ಗುರುತಿಸಲಿಕ್ಕೆ ಕೆಲವು ಪತ್ರಿಕೆಗಳು ' o ' ಎಂಬುದನ್ನು ಸ್ಪರ್ಶ ಧ್ವನಿಗೆ ಹಿಂದೆ ಸೇರಿಸುತ್ತವೆ.

ಉದಾ : Gandhi – o ಕಾಂಧಿ

' F ' ಎಂಬ ಧ್ವನಿಯುನ್ನು ಗುರುತಿಸಲಿಕ್ಕೆ ' ಪ ' ಕಾರಕ್ಕೆ ಹಿಂದೆ '.·.' ಎಂಬ ಲಿಪಿಯುನ್ನು ಉಪಯೋಗಿಸುತ್ತಾರೆ.

ಉದಾ : Fernandas – .·. ಪೆರ್ನಾಂಡಸ್

ಕೆಲವು ಪತ್ರಿಕೆಗಳು ' F ' ಎನ್ನುವ ಅಕ್ಷರವನ್ನೇ ಬಳಸುತ್ತವೆ.

ಉದಾ : ' Ford ' –

' ರ. ಲ, ಟ ' ಮುಂತಾದ ಧ್ವನಿಮಾಗಳು ಪದದ ಆರಂಭದಲ್ಲಿ ಬರುತ್ತವೆ.

ಉದಾ : ರಿಕ್ಷಾ ಲಂಜಂ, ಟಿಕ್ಕೆಟ್.

ಪದದ ಆರಂಭದಲ್ಲೂ ಅಂತ್ಯದಲ್ಲೂ ಕೆಲವು ಸಂಯುಕ್ತ ವ್ಯಂಜನಗಳು ಬರುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಸ್ಟ್ರೈಕ್, ಸ್ಕೂಟ್ಟರ್, ಪೆಂಚ್. ಪಿಳಾಸ್ಕ್

ಕೆಲವು ಪದಗಳನ್ನು ಅನುವಾದ ಮಾಡುವಾಗ ಮೂಲ ಭಾಷೆಯಲ್ಲಿ ಆ ಪದ ಹೇಗಿರುತ್ತದೆಯೋ ಅದೇ ರೀತಿ ಲಕ್ಷ್ಯ ಭಾಷೆಯಲ್ಲೂ ಅನುವಾದಿಸುತ್ತಾರೆ,

ಉದಾ : Television – ತೊಲೈಕ್ಕಾಟ್ಚಿ
Round table – ವಟ್ಟ ಮೇಜೈ

ಕೆಲವು ಪದಗಳನ್ನು ಸ್ವೀಕರಿಸುವಾಗ ಅಂತ್ಯದಲ್ಲಿ 'ಉ' ಕಾರವನ್ನು ಸೇರಿಸುತ್ತಾರೆ.

ಉದಾ : ಕೋರ್ಟ್ > ಕೋರ್‌ಟು
ಕಿಳಾರ್ಕ್ > ಕಿಳಾರ್‌ಕ್ಕು

ಹೀಗೆ ಆಧುನಿಕ ಕಾಲದ ತಮಿಳು ಭಾಷೆಯಲ್ಲಿ ಕೆಲವು ಹೊಸ ಅಂಶಗಳು ಕಾಣಿಸಿಕೊಳ್ಳುತ್ತಿರುವುದು, ತಮಿಳಿನಲ್ಲಿ ಹೊಸ ಭಾಷೆ ಉಗಮವಾಗುತ್ತಿರುವುದನ್ನು ಸ್ಪಷ್ಟಪಡಿಸುತ್ತದೆ.

ಟಿಪ್ಪಣಿ : ಈ ಅಧ್ಯಾಯದಲ್ಲಿ ಅನುನಾಸಿಕೃತ ಸ್ವರ ಎಂಬ ಭಾಗದಲ್ಲಿ ಅಕ್ಷರಗಳ ಮೇಲೆ ಇರುವ '–' ಎಂಬ ಚಿನ್ಹೆ ಅನುನಾಸಿಕೃತವನ್ನು ಸೂಚಿಸುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೧೩. ತಮಿಳು ಭಾಷೆಯ ಬಾಹ್ಯ ಚರಿತ್ರೆ

ಒಂದು ಭಾಷೆಯ ಬಾಹ್ಯ ಚರಿತ್ರೆ ಆ ಭಾಷೆಯನ್ನಾಡುವ ಜನರು ವಾಸಿಸುವ ಸ್ಥಳ, ಅವರು ಬೇರೆ ಭಾಷೆಯನ್ನಾಡುವ ಜನರೊಂದಿಗೆ ಹೊಂದಿರುವ ಸಂಪರ್ಕ ಮುಂತಾದವುಗಳನ್ನು ಅನುಸರಿಸಿ ವಿವರಿಸಲ್ಪಡುತ್ತದೆ ಎಂದು ಹಿಂದೆಯೆ ತಿಳಿಸಲ್ಪಟ್ಟಿದೆ. ಅಂದರೆ ರಾಜಕೀಯ, ವಾಣಿಜ್ಯ ಮತ್ತು ಮತ ಪ್ರಚಾರ ಮುಂತಾದ ಕಾರಣಗಳಿಂದ ಒಂದು ಭಾಷೆಯಲ್ಲಿ ಬಂದು ಬೆರಕೆಯಾಗಿರುವ ಅಥವಾ ಸ್ವೀಕರಣವಾಗಿರುವ ಶಬ್ದಗಳಿಂದ ಭಾಷೆಯ ಬಾಹ್ಯ ಚರಿತ್ರೆಯನ್ನು ನಿರ್ಧರಿಸುವುದು ಎಂದರ್ಥ. ತಮಿಳು ಭಾಷೆಯ ಬಾಹ್ಯ ಚರಿತ್ರೆಯನ್ನು ಎರಡು ರೀತಿಯಲ್ಲಿ ಅಧ್ಯಯನ ಮಾಡಬಹುದು.

1) ತಮಿಳಿನಿಂದ ಬೇರೆ ಭಾಷೆಗಳಿಗೆ ಹೋದ ಶಬ್ದಗಳಿಂದ.
2) ತಮಿಳು ಭಾಷೆಯಲ್ಲಿ ಬೆರಕೆಯಾಗಿರುವ ಅಥವಾ ಸ್ವೀಕರಣವಾಗಿರುವ ಬೇರೆ ಭಾಷೆಯ ಶಬ್ದಗಳಿಂದ.

1 ತಮಿಳಿನಿಂದ ಇತರ ಭಾಷೆಗಳಿಗೆ :

ಪ್ರಾಚೀನ ಕಾಲದಿಂದಲೇ ತಮಿಳರು ಹಲವಾರು ದೇಶಗಳೊಂದಿಗೆ ವ್ಯಾಪಾರ ಮತ್ತು ರಾಜಕೀಯ ಸಂಪರ್ಕಗಳನ್ನು ಇಟ್ಟುಕೊಂಡಿದ್ದರೆಂಬುದಕ್ಕೆ ಸಂಘ ಕಾಲದ ಸಾಹಿತ್ಯಗಳಲ್ಲಿ ಅನೇಕ ಪುರಾವೆಗಳು ದೊರೆತಿವೆ. ಗ್ರೀಕ್, ರೋಮನ್, ಈಜಿಪ್ಟ್ ಸಿರಿಯಾ, ಬರ್ಮ, ಮಲೇಷಿಯಾ, ಸಿಲೋನ್, ಜಾವಾ, ಇಂಡೋನೇಷಿಯ ಮುಂತಾದ ದೇಶಗಳೊಂದಿಗೆ ತಮಿಳರು ವ್ಯಾಪಾರ ಸಂಪರ್ಕ ಹೊಂದಿದ್ದರು ಎಂಬುದು ತಿಳಿಯುತ್ತದೆ. ಈ ಸಂಪರ್ಕದಿಂದ ತಮಿಳು ಭಾಷೆಯ 'ಕೊಡುಕೊಳುಗೆ' ಬೆಳೆದಿದೆ. ಈ ಭಾಗದಲ್ಲಿ ತಮಿಳು ಭಾಷೆಯ ಪದಗಳು ಯಾವಯಾವ ಭಾಷೆಗಳಲ್ಲಿ ಕಾಣಿಸಿಕೊಳ್ಳುತ್ತದೆ ಎಂಬುದು ವಿವರಿಸಲ್ಪಡುತ್ತದೆ.

ಅ) ತಮಿಳಿನಿಂದ ಮುಂಡಾ ಭಾಷೆಗೆ :

ಮುಂಡಾ ಕುಟುಂಬಕ್ಕೆ ಸೇರಿದ ಭಾಷೆಗಳು ದ್ರಾವಿಡ ಭಾಷೆಗಳಿಗೆ ಬಹಳ ಹತ್ತಿರದ ಭಾಷೆಗಳಾಗಿವೆ. ಮಯೂರ ಎನ್ನುವ ಸಂಸ್ಕೃತ ಶಬ್ದವು ಮರಕ್ ಎನ್ನುವ ಮುಂಡಾ ಭಾಷೆಯ ಶಬ್ದದಿಂದ ವಿಕಾಸಗೊಂಡಿರಬಹುದು ಎಂಬುದು ವಿದ್ವಾಂಸರ ಅಭಿಪ್ರಾಯ. ಆದರೆ ಮುಂಡಾ ಭಾಷೆಯ ಈ ಪದ ದ್ರಾವಿಡ ಭಾಷೆಗಳ ಪದಕ್ಕೆ ಹತ್ತಿರವಾಗಿರುತ್ತದೆ. ಮುಂಡಾ ಭಾಷೆಯಲ್ಲಿ ರಕ್ ಎಂಬುದು ಅಂತ್ಯ ಪ್ರತ್ಯಯವಾಗಿ ಉಪಯೋಗವಾಗುತ್ತದೆ. ಈ ರಕ್ ಎಂಬುದನ್ನು ಪ್ರತ್ಯಯ ಎಂದು ಪರಿಗಣಿಸಿದರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಳಿದಿರುವ 'ಮ' ಎಂಬುದು ಆ ಪದದ ಧಾತುವಾಗುತ್ತದೆ. ಈ 'ಮ' ಎಂಬ ಧಾತು ದ್ರಾವಿಡ ಭಾಷೆಯ ಪದಗಳಾದ ಮುಳ್ಳು, ಮಯಿಲ್ ಮುಂತಾದ ಪದಗಳ ಧಾತುವಾದ 'ಮ' ಎಂಬುದರ ಹಾಗೇ ಕಂಡು ಬರುತ್ತದೆ. ಈ 'ಮ' ಎಂಬುದಕ್ಕೆ ಕಪ್ಪು ಅಥವಾ ನೀಲಿ ಎಂಬ ಅರ್ಥಗಳಿವೆ. ಆದ್ದರಿಂದ ಈ ಮರಕ್ ಎಂಬ ಪದ ದ್ರಾವಿಡ ಭಾಷೆಗಳಿಂದ ಮುಂಡಾ ಭಾಷೆಗೆ ಹೋದ ಪದ ಎಂಬುದು ತಿಳಿಯುತ್ತದೆ.

ಆ) ತಮಿಳಿನಿಂದ ಪೂರ್ವ ದೇಶದ ಭಾಷೆಗಳಿಗೆ

i) ತಮಿಳಿನಿಂದ ಚೀನಾ ಭಾಷೆಗೆ :

ಕ್ರಿ.ಪೂ.ದಲ್ಲಿ ದಕ್ಷಿಣ ಭಾರತಕ್ಕೂ ಚೀನಾ ದೇಶಕ್ಕೂ ಹಲವಾರು ರೀತಿಯಲ್ಲಿ ಸಂಪರ್ಕವಿತ್ತು. ಪಾಂ-ಕೌ(PAN-KOU) ಎನ್ನುವ ಚೀನಾದೇಶದ ಬರಹಗಾರರು ತನ್ನ ಬರಹದಲ್ಲಿ ಕಾಂಜಿ ಎನ್ನುವ ಸ್ಥಳದ ಹೆಸರನ್ನು ಗುರುತಿಸಿದ್ದಾರೆ. ಇದಲ್ಲದೆ ತಮಿಳುನಾಡಿನಿಂದ ಮುತ್ತು, ಅಪೂರ್ವವಾದ ಕಲ್ಲುಗಳು, ಹಲವಾರು ಬಗೆಯ ನವೀನ ವಸ್ತುಗಳು ಮುಂತಾದವುಗಳು ಚೀನಾದೇಶಕ್ಕೆ ಹೋದವು ಎಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಆದುದರಿಂದ ತಮಿಳು ಶಬ್ದಗಳು ಆ ಭಾಷೆಯಲ್ಲೂ ಬೆರಕೆಯಾಗಿರ ಬಹುದು ಎಂಬುದು ಸ್ಪಷ್ಟವಾಗುತ್ತದೆ.

ii) ಸಿಂಹಳ ಭಾಷೆಗೆ :

ಬಹು ಪ್ರಾಚೀನ ಕಾಲದಿಂದಲೇ ತಮಿಳುನಾಡಿಗೂ ಸಿಂಹಳ ದೇಶಕ್ಕೂ ಸಂಪರ್ಕ ವಿತ್ತು ಎಂಬುದಕ್ಕೆ ಹಲವಾರು ಆಧಾರಗಳಿವೆ. ಇವುಗಳಲ್ಲದೆ ಶ್ರೀಲಂಕಾವನ್ನು ತಮಿಳು ರಾಜರು ಆಳಿದ್ದಾರೆ. ಹಲವಾರು ಶತಮಾನಗಳಿಂದ ತಮಿಳರೂ ಸಿಂಹಳರೂ ಶ್ರೀಲಂಕಾದಲ್ಲಿ ಇರುವುದರಿಂದ ಸಿಂಹಳ ಭಾಷೆಯಲ್ಲಿ ತಮಿಳು ಪದಗಳೂ ತಮಿಳು ಭಾಷೆಯಲ್ಲಿ ಸಿಂಹಳ ಪದಗಳೂ ಬೆರಕೆಯಾಗಿರುವುದು ಸಹಜ. ಶ್ರೀಲಂಕಾದ ಶಾಸನ ಗಳಲ್ಲಿ ಪೆರುಮಾಗನ್ ಮುಂತಾದ ಪದಗಳು ಇರುವುದನ್ನು ಡಾ. ಟಿ.ಪಿ. ಮೀನಾಕ್ಷಿ ಸುಂದರಂ ಎಂಬುವರು ಗುರುತಿಸಿದ್ದಾರೆ. ಈ ಭಾಷೆಯಲ್ಲಿ ತಮಿಟನ್ ಎಂಬ ಪದ ತಮಿಳು ಎಂದು ಬಳಸಲ್ಪಟ್ಟಿದೆ.

iii) ಥಾಯ್ ಭಾಷೆಗೆ :

ಥಾಯ್‌ಲ್ಯಾಂಡ್‌ನಲ್ಲಿ ಕೊಂಡಾಡಲ್ಪಡುವ ಆ ದೇಶದ ಉಯ್ಯಾಲೆ ಹಬ್ಬವನ್ನು ತ್ರಿಯಂಬಾವೆ, ತಿರುಬಾವೆ ಎಂದು ಕರೆಯುತ್ತಾರೆ. ಇವು ತಮಿಳಿನ 'ತಿರುವೆಂಬಾವೈ' 'ತಿರುಪ್ಪಾವೈ' ಎಂಬ ಪದಗಳೇ ಹೊರತು ಬೇರೆ ಏನಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೩) ತಮಿಳು ಭಾಷೆಯಿಂದ ಪಶ್ಚಿಮ ದೇಶದ ಭಾಷೆಗಳಿಗೆ :

i) ಹಿಬ್ರೂ ಭಾಷೆಗೆ :

ಬಾಬಿಲೋನಿಯರೊಂದಿಗೆ ಹಿಂದಿನ ಕಾಲದಿಂದಲೇ ದ್ರಾವಿಡರು ವ್ಯಾಪಾರ ಸಂಪರ್ಕ ಹೊಂದಿದ್ದರು. ಪಶ್ಚಿಮ ಕಡಲ ಕರೆಯಲ್ಲಿ ದೊರಕಿದ ತೇಗದ ಮರಗಳು ಬಾಬಿಲೋನಿಯರ ಪಿರಮಿಡ್ಡುಗಳಲ್ಲಿ ಕಂಡು ಬರುವುದೇ ಇದಕ್ಕೆ ಸಾಕ್ಷಿಯಾಗಿದೆ. ಸುಮೇರಿಯಾವಿನ ರಾಜಧಾನಿಯಾದ ಊರ್ ಎಂಬುದಕ್ಕೂ, ಗ್ರಾಮವನ್ನು ಗುರುತಿಸಲು ಬರುವ ತಮಿಳು ಪದವಾದ ಊರ್ ಎಂಬುದಕ್ಕೂ ಸಂಬಂಧವಿರಬಹು ದೆಂಬದು ವಿದ್ವಾಂಸರ ಅಭಿಪ್ರಾಯ. ಕಾಲ್ಡ್‌ವೆಲ್ ಅವರು ಹಿಬ್ರೂ ಭಾಷೆಯಲ್ಲಿರುವ ತುಗಿ ಎಂಬುದು ತಮಿಳಿನ ತೋಗೈ ಎನ್ನುವ ಪದದಿಂದ ಬಂದಿರಬಹುದು ಎಂದು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ii) ಗ್ರೀಕ್ ಭಾಷೆಗೆ :

ಗ್ರೀಕ್ ಭಾಷೆಯಲ್ಲಿರುವ ಒರುಸಾ ಎಂಬ ಪದ ತಮಿಳಿನ ಅರಿಸಿ ಎಂಬ ಪದ ದಿಂದ ರಚನೆಯಾಗಿದೆ. ಅದರಂತೆಯೇ ಡೊಮರಿಕಾ ಎನ್ನುವ ಪದ ತಮಿಳಗಂ ಎಂಬ ಪದದಿಂದ ರಚನೆಯಾಗಿರಬಹುದು.

iii) ಆಂಗ್ಲ ಭಾಷೆಗೆ :

ಹಲವಾರು ತಮಿಳು ಪದಗಳು ಆಂಗ್ಲ ಭಾಷೆಯಲ್ಲೂ ಬೆರಕೆಯಾಗಿವೆ. ಆಂಗ್ಲರು ಭಾರತಕ್ಕೆ ಬಂದಾಗ ಇಲ್ಲಿ ಉಪಯೋಗದಲ್ಲಿದ್ದ ನಾಣ್ಯಗಳು, ಅಳತೆಗಳು, ತೇಗದ ಮರಗಳು, ಪ್ರಯಾಣ ವಾಹನಗಳು ಮತ್ತು ಆಹಾರ ಪದಾರ್ಥಗಳು ಮುಂತಾದವು ಗಳಲ್ಲಿ ಯಾವುದಕ್ಕೆ ಆಂಗ್ಲ ಭಾಷೆಯಲ್ಲಿ ಪದಗಳಿಲ್ಲವೋ ಅವುಗಳಿಗೆ ಪದಗಳನ್ನು ತಮಿಳಿನಿಂದ ಸ್ವೀಕರಿಸಿಕೊಂಡರು. ಹಾಗೆ ಸ್ವೀಕರಿಸಲ್ಪಟ್ಟ ಪದಗಳಲ್ಲಿ ಕೆಲವು ನೇರ ವಾಗಿಯೂ ಕೆಲವು ಬೇರೆ ಭಾಷೆಗಳ ಮೂಲಕವೂ ಸ್ವೀಕೃತವಾಗಿವೆ.

ತಮಿಳು ಪದ	ಆಂಗ್ಲ ಪದ
ಅಣೈಕಟ್ಟು	anicut
ಕಂಚಿ	Conjee, Congee
ಕಟ್ಟುಮರಂ	Catamaran
ಕಯಿಱು	Coir
ಕಱಿ	Curry
ಕಾಸು	Cash
ಕುಯಿಲ್	Koel

9

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೂಲಿ	Coolie
ತೇಕ್ಕು	Teak
ತೋಪು	Tope
ಮಾಂಗಾಯ್	Mango
ಪಲಕಣಿ	Balcony

ಈ) ತಮಿಳಿನಿಂದ ಸಂಸ್ಕೃತ ಭಾಷೆಗೆ :

ಸಂಸ್ಕೃತ ಪದಗಳು ತಮಿಳುಭಾಷೆಯಲ್ಲಿ ಬೆರಕೆಯಾಗಿರುವಂತೆಯೇ ತಮಿಳು ಪದಗಳು ಸಂಸ್ಕೃತದಲ್ಲಿ ಬೆರಕೆಯಾಗಿವೆ ಎಂದು ಹೇಳಿದರೆ ತಪ್ಪಾಗಲಾರದು. ಡಾ. ಕಾಲ್ಡ್‌ವೆಲ್, ಡಾ. ಬರೋ ಮುಂತಾದ ಭಾಷಾ ವಿಜ್ಞಾನಿಗಳು ಇದನ್ನು ಕುರಿತು ಬಹಳಷ್ಟು ಅಧ್ಯಯನ ಮಾಡಿದ್ದಾರೆ. ನೀರು, ಮೀನು ಮುಂತಾದ ಪದಗಳು ಸಂಸ್ಕೃತದಲ್ಲಿ ಇರುವುದನ್ನು ನೋಡಬಹುದು. ಋಗ್ವೇದದಲ್ಲಿ ಕಂಡುಬರುವ ದ್ರಾವಿಡ ಪದಗಳನ್ನು ಕುರಿತು ಬರೋ ಎನ್ನುವ ಭಾಷಾತಜ್ಞರು ಸಂಸ್ಕೃತಭಾಷೆ ಎನ್ನುವ ತಮ್ಮ ಕೃತಿಯಲ್ಲಿ ವಿವರಿಸುವಾಗ ಕೆಳಗಿನ ಪದಗಳು ಸಂಸ್ಕೃತ ಭಾಷೆಯಲ್ಲಿ ಬೆರಕೆಯಾಗಿವೆ ಎಂಬುದನ್ನು ಗುರುತಿಸಿದ್ದಾರೆ.

ತಮಿಳು	ಸಂಸ್ಕೃತ	ಅರ್ಥ
ಅನಲ್	ಅನಲ	Fire
ಉಲಕ್ಕೈ	ಉಲೂಖಲಾ	Mortar
ಕುಡಂ	ಕುಡ	Pot
ಕಳ್ಳನ್	ಖಲ	Rogue
ಮಯಿಲ್	ಮಯೂರ	Peacock
ಮಾಲೈ	ಮಾಲಾ	Garland

2 ಇತರ ಭಾಷೆಗಳಿಂದ ತಮಿಳು ಭಾಷೆಗೆ :

i) ಮುಂಡಾ ಬಾಷೆಯಿಂದ ;

ದ್ರಾವಿಡ ಭಾಷೆಗಳಿಗೆ ಬಹಳ ಹತ್ತಿರವಾದ ಪ್ರಾಚೀನ ಭಾಷೆ ಮುಂಡಾ ಭಾಷೆ ಎಂಬುದನ್ನು ಹಿಂದಿನ ಭಾಗದಲ್ಲೇ ಸೂಚಿಸಲಾಗಿದೆ. ಆದ್ದರಿಂದ ಆ ಭಾಷೆಯು ಪ್ರಭಾವ ತಮಿಳಿನಲ್ಲಿ ಕಂಡುಬರುವುದು ಸಹಜ. ತವಳೈ, ಇಳನೀರ್, ಮೀಸೈ ಮುಂತಾದ ಪದಗಳು ಮುಂಡಾ ಭಾಷೆಯ ತಬೆಗ್, ನಿಯೋರ್, ವೀಸೈ ಮುಂತಾದ ಪದಗಳಿಂದ ತಮಿಳು ಭಾಷೆಗೆ ಬಂದಿರಬಹುದು ಎಂಬುದು ವಿದ್ವಾಂಸರ ಅಭಿಪ್ರಾಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ii) ಸಂಸ್ಕೃತದಿಂದ ;

ತೊಲ್ಕಾಪ್ಪಿಯರ್ ಅವರ ವಿಧಿಗಳಿಗೆ ಅನ್ವಯವಾಗದ ಕೆಲವು ಪದಗಳನ್ನು ಸಂಘ ಕಾಲದ ಸಾಹಿತ್ಯಗಳಲ್ಲಿ ಕಾಣಬಹುದು. ಈ ಪದಗಳು ಸಂಸ್ಕೃತ ಪದಗಳಾಗಿ ಕಂಡು ಬರುತ್ತವೆ.

ಉದಾ : ಯವಣರ್, ಯಾಮಂ

ಸಂಸ್ಕೃತ ಭಾಷೆಯಲ್ಲಿರುವ ಅಂಕಿತ ನಾಮಪದಗಳನ್ನು ಸಂಘಕಾಲದ ಸಾಹಿತ್ಯದಲ್ಲಿ ಕಾಣಬಹುದು.

ಉದಾ ; ಉರುತ್ತಿರನ್, ವಾನ್ಮೀಕಿಯಾರ್

ಶಿಲಪ್ಪದಿಗಾರಂ, ಮಣಿಮೇಖಲೈ, ತಿರುಕ್ಕುರಳ್ ಮುಂತಾದ ಸಾಹಿತ್ಯಗಳಲ್ಲೂ ಕೆಲವು ಸಂಸ್ಕೃತ ಪದಗಳನ್ನು ನೋಡಬಹುದು. 'ಶಿಲಪ್ಪದಿಗಾರಂ'ನಲ್ಲಿ ಸಾವಗರ್, ಸಾರಣರ್, ಧಾನಂ, ಧರ್ಮಂ, ಜ್ಞಾನಂ, ವೇಚ್ಚೈ, ಯಕ್ಕಿ, ಇಂದಿರನ್, ಅಂದಿ ಮುಂತಾದ ಪದಗಳೂ, 'ಮಣಿಮೇಖಲೈ'ಯಲ್ಲಿ ಕರುಮಂ, ಭಾವನೈ, ನರಗರ್, ಅನಿತ್ತಂ, ತುಕ್ಕಂ ಮುಂತಾದ ಪದಗಳೂ ಬಳಸಲ್ಪಟ್ಟಿವೆ.

ರಾಜಕೀಯ, ಮತ ಮತ್ತು ತತ್ತ್ವಗಳ ಪ್ರಭಾವದಿಂದಲೂ ಸಂಸ್ಕೃತ ಪದಗಳು ತಮಿಳಿನಲ್ಲಿ ಬೆರಕೆಯಾಗಿವೆ.

ರಾಜಕೀಯದಿಂದ :—ಸಬೈ, ಗಣಂ, ಚದುರ್‌ವೇದಿಮಂಗಲಂ
ಮತದಿಂದ :—ಅರ್‌ಚ್ಚನೈ, ಈಚ್ಚುರಂ.

3 ದಕ್ಷಿಣ ಮತ್ತು ಪೂರ್ವ ದೇಶದ ಭಾಷೆಗಳಿಂದ :

1) ಸಿಂಹಳ ಭಾಷೆಯಿಂದ :-

ಕ್ರಿ.ಪೂ. ದಿಂದಲೇ ಸಿಂಹಳರೊಂದಿಗೆ ತಮಿಳರು ಸಂಪರ್ಕ ಹೊಂದಿದ್ದರು ಎಂಬುದನ್ನೂ ಆ ಸಂಪರ್ಕದ ಕಾರಣದಿಂದ ತಮಿಳು ಭಾಷೆಯ ಪದಗಳು ಸಿಂಹಳ ಭಾಷೆಯಲ್ಲಿಯೂ ಸಿಂಹಳ ಭಾಷೆಯ ಪದಗಳು ತಮಿಳಿನಲ್ಲೂ ಸೇರಿವೆ ಎಂಬುದನ್ನೂ ಹಿಂದಿನ ಭಾಗದಲ್ಲೇ ಸೂಚಿಸಲಾಗಿದೆ. ಈ ಕೆಳಗಿನ ಸಿಂಹಳ ಭಾಷೆಯ ಪದಗಳು ತಮಿಳು ಭಾಷೆಯಲ್ಲಿ ಕಾಣಿಸಿಕೊಳ್ಳುತ್ತವೆ.

ಉದಾ : ಮುರುಂಗೈ, ಪಿಲ್ಲಿ

2) ಚೀನಾ ಭಾಷೆಯಿಂದ :

ಚೀನಾ ದೇಶದವರೊಂದಿಗೆಯೂ ತಮಿಳರಿಗೆ ಸಂಪರ್ಕವಿದ್ದ ಕಾರಣದಿಂದ ಆ ಭಾಷೆಯಿಂದಲೂ ಹಲವಾರು ಪದಗಳು ತಮಿಳಿಗೆ ಬಂದಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಚಂಪಾನ್
ಕಾಂಗು
ಪೀಂಗಾನ್

4 ಪಶ್ಚಿಮ ದೇಶದ ಭಾಷೆಗಳಿಂದ :

(ಅ) ಗ್ರೀಕ್ ಭಾಷೆಯಿಂದ :-

ಕ್ರಿ. ಪೂ. ದಿಂದಲೇ ಗ್ರೀಕರೂ, ರುಮೇನಿಯರೂ ತಮಿಳರೊಂದಿಗೆ ಸಂಪರ್ಕ ಹೊಂದಿದ್ದರು ಎಂಬುದಕ್ಕೆ ಪೆರಿಪ್ಲೆಸ್‌ನ 'ಎರಿತ್ರಿಯನ್ ಸೀ' ಕೃತಿಯೂ ಟಾಲೆಮೀ, ಪ್ಲೀನಿ ಮುಂತಾದವರ ಕೃತಿಗಳೂ ನೆರವಾಗುತ್ತವೆ. ಈ ಕೆಳಕಂಡ ಪದಗಳು ತಮಿಳು ಭಾಷೆಗೆ ಗ್ರೀಕ್ ಭಾಷೆಯು ಕೊಡುಗೆಗಳಾಗುತ್ತವೆ.

ಉದಾ : ಮತ್ತಿಗೈ, ಸುರುಂಗೈ
ಕನ್ನಲ್, ಓರೈ

(ಆ) ಅರೇಬಿಕ್ ಭಾಷೆಯಿಂದ ;

ಇಲಾಕ್ಕಾ, ಸುಬೇದಾರ್, ಸರ್‌ಕ್ಕಾರ್, ದಬ್ಬೇದಾರ್, ದಿವಾನ್, ಸರ್‌ದಾರ್, ಜಾಮೀನ್ ಮುಂತಾದ ಪದಗಳು ಅರೇಬಿಕ್ ಭಾಷೆಯಿಂದ ತಮಿಳು ಭಾಷೆಗೆ ಬಂದು ಸೇರಿವೆ.

5 ದ್ರಾವಿಡ ಭಾಷೆಗಳಿಂದ :

(ಅ) ತೆಲುಗು ಭಾಷೆಯಿಂದ :-

ವಿಜಯನಗರ ಅರಸರ ಆಳ್ವಿಕೆಯ ಕಾಲದಲ್ಲಿ ಹಲವು ತೆಲುಗು ಪಾಳೆಯಗಾರರು ತಮಿಳುನಾಡಿನಲ್ಲಿ ಪ್ರಸಿದ್ಧರಾಗಿ ಬೆಳಗಿದರು. ಆಗ ತೆಲುಗರು ತಿರುನೆಲ್‌ವೇಲಿ ಜಿಲ್ಲೆಗೆ ಬಂದು ತಮಿಳರೊಂದಿಗೆ ಸೇರಿ ಬಾಳಿದರು. ಆದ್ದರಿಂದ ವಿಜಯನಗರ ಅರಸರ ಕಾಲದಲ್ಲಿ ತೆಲುಗು ಭಾಷೆಯಿಂದ ಹಲವು ಪದಗಳು ತಮಿಳಿಗೆ ಬಂದವು. ತಮಿಳಿನಲ್ಲಿ ಒಟ್ಟು 325 ತೆಲುಗು ಪದಗಳು ಇರುವುದಾಗಿ ತಮಿಳು ನಿಘಂಟು ಗುರುತಿಸುತ್ತದೆ.

ಉದಾ : ಅಕ್ಕಡ, ಅಟ್ಟೆ, ಟಾಪ್ಪು, ತುರೈ, ಬೆತ್ತ,
ತೀವಟ್ಟಿ, ಜಾಡಿ, ಜತೈ, ಕಡಪ್ಪಾರೈ,
ಕಟ್ಟಡಂ, ಕಲಪ್ಪಡಂ, ಚೊಕ್ಕಾ, ಪಲಪ್ಪಂ,
ರವಿಕ್ಕೈ, ಕಣ್ಣಾರಾವಿ, ಗಬೋದಿ, ಕೊಲುಸು,
ವಾಣಲಿ, ರಂಭಂ, ಕಾಯಂ, ಕುಡುಮಿ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಅ) ಕನ್ನಡ ಭಾಷೆಯಿಂದ :-

ತಮಿಳರಿಗೂ ಕನ್ನಡಿಗರಿಗೂ ಹಿಂದಿನಿಂದಲೂ ಸಂಬಂಧವಿತ್ತು ಎಂಬುದಕ್ಕೆ ಹಲವು ಬಗೆಯ ಉಲ್ಲೇಖಗಳು ದೊರೆಯುತ್ತವೆ. ಸಂಘ ಸಾಹಿತ್ಯಗಳು ಕನ್ನಡಿಗರನ್ನು 'ವಡುಗರ್' ಎಂದು ಗುರುತಿಸಿದೆ. ವಿಜಯನಗರದ ರಾಜರುಗಳಲ್ಲಿ ಕೆಲವರು ತೆಲುಗು ದೇಶವನ್ನು ಸೇರಿದವರಾಗಿಯೂ ಕೆಲವರು ಕರ್ನಾಟಕ ದೇಶವನ್ನು ಸೇರಿದವರಾಗಿಯೂ ಕಂಡುಬರುತ್ತಾರೆ. ಇವುಗಳಲ್ಲದೆ ಹೊಯ್ಸಳರು ಸ್ವಲ್ಪಕಾಲ ಚೋಳನಾಡನ್ನು ಆಕ್ರಮಿಸಿ ಆಳಿದರು. ಹೀಗೇ ತಮಿಳರು ಮತ್ತು ಕನ್ನಡಿಗರ ಮಧ್ಯದಲ್ಲಿ ಹಲವಾರು ರೀತಿಯಲ್ಲಿ ಸಂಪರ್ಕಗಳು ಇದ್ದ ಕಾರಣದಿಂದ ಕನ್ನಡ ಭಾಷೆಯಿಂದ ತಮಿಳಿನಲ್ಲಿ ಹೆಚ್ಚು ಕಡಿಮೆ 38 ಪದಗಳು ಬಳಸಲಾಗಿವೆ.

ಉದಾ : ಅಟ್ಟಿಗೈ, ಇದಾ, ಎಗತ್ತಾಳಂ, ಸಮಾಳಿತ್ತಲ್,
ಸೊತ್ತು, ಪಟ್ಟಾಕ್ಕತ್ತಿ, ಓದಂ, ಇಟ್ಟಳಂ,
ಕುಲುಕ್ಕುದಲ್, ಕುಟ್ಟು, ಕೆಂಪು, ತಾಂಡಲ್,

(ಇ) ಮಲಯಾಳದಿಂದ :-

ಹಳೆಯ ಚೇರನಾಡೇ ಈಗಿನ ಕೇರಳ ಎನ್ನಬಹುದು. ಮಲಯಾಳ ಭಾಷೆ ಕ್ರಿ. ಶ. 10ನೇ ಶತಮಾನದಿಂದಲೇ ಪ್ರತ್ಯೇಕ ಭಾಷೆಯಾಗಿ ರೂಪುಗೊಂಡಿದೆ. ಇದಕ್ಕೆ ಹಿಂದೆ ಮಲಯಾಳ ಭಾಷೆ ತಮಿಳು ಭಾಷೆಯ ಒಂದು ಉಪ ಭಾಷೆಯಾಗಿ ಬಳಕೆಯಲ್ಲಿತ್ತು. ಆದುದರಿಂದ ತಮಿಳು ಭಾಷೆಗೂ ಮಲಯಾಳ ಭಾಷೆಗೂ ಮಧ್ಯದಲ್ಲಿ ನಿಕಟವಾದ ಸಂಪರ್ಕವಿರುವುದನ್ನು ನೋಡಬಹುದು. ಈ ನಿಕಟ ಸಂಪರ್ಕದಿಂದ ಮಲಯಾಳ ಭಾಷೆಯ ಪದಗಳು ತಮಿಳಿಗೆ ಬಂದಿವೆ ಎಂದು ಹೇಳಿದರೆ ಆಶ್ಚರ್ಯವೇನಿಲ್ಲ.

ಉದಾ : ಕಚ್ಚವಡಂ, ಕಾಲನ್, ತಳವಾಡಂ,
ನೆರಿಯಲ್, ಪಿರದಮನ್. ವಂಜಿ,
ಚಕ್ಕೈ, ವೆಳ್ಳಂ, ಅವಿಯಲ್,
ಅಚ್ಚಿ, ಅಡಿಯಂದಿರಂ, ಪಟ್ಟಿ.

6 ಪೂರ್ವದಿಕ್ಕಿನ ಭಾಷೆಗಳಿಂದ :

ಕ್ರಿ. ಶ. 15ನೇ ಶತಮಾನದಿಂದ ಪೋರ್ಚ್‌ಗೀಸರು, ಡಚ್ಚರು, ಫ್ರೆಂಚರು, ಆಂಗ್ಲರು ಮುಂತಾದವರು ಭಾರತಕ್ಕೆ ಬರಲು ಆರಂಭಿಸಿದರು. ಇದರಿಂದಾಗಿ ಈ ಭಾಷೆಗಳ ಪದಗಳು ತಮಿಳು ಭಾಷೆಯಲ್ಲಿ ಸೇರ್ಪಡೆಯಾಗಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪೋರ್ಚುಗೀಸ್ : ಪರಂಗಿ, ಕಡುದಾಸಿ, ಪೇನಾ, ವಾತ್ತು,
ಅಲಮಾರಿ, ಮೇಸೈ, ಚಾವಿ, ಆಯಾ,
ಕೋಪ್ಪೈ, ಪೀಪ್ಪಾಯ್, ವರಾಂಡ,
ಏಲಂ, ದೋಸೈ, ಬಿಸ್ಕೋತ್ತು, ಪೊತ್ತಾನ್.

ಫ್ರೆಂಚ್ : ಪೋತ್ತಲ್, ಆಸು, ಲಾಂದರ್, ಕಮ್ಯೂನ್,
ಆಸ್ಪತ್ರೆ, ಬೀರೋ.

ಡಚ್ : ಕಕ್ಕೂಸ್, ಕುಟ್ಟು, ಪಟ್ಟಿಮಾಸ್, ತೋಪ್ಪು.

ಆಂಗ್ಲ : ಕೋರ್ಟ್, ಕಾಲರಾ, ಸೋಪ್ಪು, ಸಿನಿಮಾ,
ಟಿಕ್ಕೆಟ್, ಪೋಲೀಸ್, ಬಸ್, ಬಿಲ್, ಪೇಪರ್
ಓಟಲ್, ಲೀವು.

ಮೇಲೆ ಹೇಳಿದವುಗಳಿಂದ ತಮಿಳು ಭಾಷೆಯ ಪದಗಳು ಬೇರೆ ಭಾಷೆಗಳಿಗೆ ಹೋಗಿರುವಂತೆಯೇ ಬೇರೆ ಭಾಷೆಯ ಪದಗಳು ತಮಿಳು ಭಾಷೆಯಲ್ಲಿ ಸೇರಿರುವುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬಹುದು. ಇದರಿಂದ ತಮಿಳರ ಚರಿತ್ರೆಯನ್ನೂ ತಮಿಳು ಭಾಷೆಯ ಬಾಹ್ಯ ಚರಿತ್ರೆಯನ್ನೂ ಊಹಿಸಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾಗ ೨

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೧೪. ಸರ್ವನಾಮಗಳು

ಒಬ್ಬರನ್ನು ನಿರ್ದಿಷ್ಟವಾಗಿ ಸೂಚಿಸದೆ ವಿಶೇಷಣ. ಷಷ್ಠಿ ವಿಭಕ್ತಿ ಪದವಿನ್ಯಾಸ, ಸಂಖ್ಯಾವಾಚಕ ಮೊದಲಾದವುಗಳೊಂದಿಗೆ ಕೂಡಿಬಾರದೆ ಒಂದು ನಾಮಪದಕ್ಕೆ ಬದಲಾಗಿ ಬರುವುದೇ ಸರ್ವನಾಮ. ಸ ರ್ವ ನಾ ಮ ಗ ಳಿ ಗೆ ನಾಮರೂಪ ಮತ್ತು ಪರಿವರ್ತಿತ ವಿಭಕ್ತಿರೂಪ ಎಂಬ ಎರಡು ರೂಪಗಳಿವೆ. ಸರ್ವನಾಮಗಳ ಬೆಳವಣಿಗೆಗಳನ್ನು ವಿವರಿಸುವಾಗ ಈ ಎರಡು ಬಗೆಯ ರೂಪಗಳ ಬೆಳವಣಿಗೆಗಳನ್ನೂ ವಿವರಿಸಬೇಕಾದುದು ಅನಿವಾರ್ಯ.

ತಮಿಳು ಭಾಷೆಯ ಇತಿಹಾಸವನ್ನು ಮೂರು ಹಂತಗಳಾಗಿ ವಿಭಾಗಿಸಿಕೊಂಡು ಆ ಮೂರು ಹಂತಗಳಲ್ಲೂ ಸರ್ವನಾಮಗಳು ಹೇಗೆ ಬೆಳೆದಿವೆ ಎಂಬುದನ್ನು ವಿವರಿಸಬೇಕಾಗುತ್ತದೆ. ಈ ಮೂರು ಹಂತಗಳನ್ನು ಪ್ರಾಚೀನಕಾಲ. ಮಧ್ಯಕಾಲ ಮತ್ತು ಆಧುನಿಕಕಾಲ ಎಂದು ಕರೆಯಬಹುದು.

ಸರ್ವನಾಮದ ಬಗೆಗಳು :

ತಮಿಳಿನಲ್ಲಿ ಎರಡು ಬಗೆಯಾದ ಸರ್ವನಾಮಗಳಿವೆ. ಅವು ಪುರುಷಾರ್ಥಕ ಸರ್ವನಾಮ ಅಥವಾ ಸರಳ ಸರ್ವನಾಮ ಮತ್ತು ಸಾಧಿತ ಸರ್ವನಾಮ.

ಪುರುಷಾರ್ಥಕ ಸರ್ವನಾಮ :

ಪುರುಷಾರ್ಥಕ ಸರ್ವನಾಮ ಮತ್ತೆ ಉತ್ತಮಪುರುಷ ಸರ್ವನಾಮ, ಮಧ್ಯಮ ಪುರುಷ ಸರ್ವನಾಮ, ಪ್ರಥಮ ಪುರುಷ ಸರ್ವನಾಮ ಎಂದು ಮೂರು ಬಗೆಯಾಗಿ ವಿಂಗಡನೆಯಾಗಿದೆ. ಈ ಸರ್ವನಾಮಗಳು ಲಿಂಗಭೇದವನ್ನು ತೋರಿಸುವುದಿಲ್ಲ.

ಉತ್ತಮ ಪುರುಷ ಸರ್ವನಾಮ :

ಉತ್ತಮ ಪುರುಷ ಸರ್ವನಾಮದಲ್ಲಿ ಏಕವಚನ ಉತ್ತಮಪುರುಷ ಸರ್ವನಾಮ, ಬಹುವಚನ ಉತ್ತಮಪುರುಷ ಸರ್ವನಾಮ ಎಂಬೆರೆಡು ವಿಧಗಳಿವೆ. ಬಹುವಚನದಲ್ಲಿ ಸಮಾವೇಶಕ ಬಹುವಚನ ಮತ್ತು ಅಸಮಾವೇಶಕ ಬಹುವಚನ ಎಂಬ ಎರಡು ವಿಧವಾದ ಬಹುವಚನಗಳು ತಮಿಳಿನಲ್ಲಿ ಇರುವುದು ಒಂದು ವಿಶೇಷ. ಈ ಉತ್ತಮ ಪುರುಷ ಸರ್ವನಾಮದ ಬೆಳವಣಿಗೆಯನ್ನು ಕೆಳಕಂಡ ಪಟ್ಟಿಯಿಂದ ವಿಶದವಾಗಿ ತಿಳಿಯಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

	ಪ್ರಾಚೀನಕಾಲ		ಮಧ್ಯಕಾಲ		ಆಧುನಿಕಕಾಲ	
	ನಾಮ ರೂಪ	ಪರಿವರ್ತಿತ ವಿಭಕ್ತಿ ರೂಪ	ನಾಮ ರೂಪ	ಪರಿವರ್ತಿತ ವಿಭಕ್ತಿ ರೂಪ	ನಾಮ ರೂಪ	ಪರಿವರ್ತಿತ ವಿಭಕ್ತಿ ರೂಪ
ಏಕವಚನ	ಯಾನ್	ಎನ್	ಯಾನ್ ನಾನ್	ಎನ್	ನಾನ್ ಯಾಮ್	ಎನ್ ಎಮ್
ಸಮಾವೇಶಕ ಬ. ವ.	ನಾಮ್	ನಮ್ ನಂಗಳ್	ನಾಮ್	ನಮ್	ನಾಮ್	ನಮ್
ಅಸಮಾವೇಶಕ ಬ.ವ.	ಯಾಮ್ ಯಾಂಗಳ್	ಎಮ್ ಎಂಗಳ್	ಯಾಂಗಳ್ ನಾಂಗಳ್	ಎಮ್ ಎಂಗಳ್	ನಾಂಗಳ್	ಎಂಗಳ್

ಉತ್ತಮಪುರುಷ ಏಕವಚನದಲ್ಲಿ 'ಯಾನ್' ಎಂಬುದು ಪ್ರಾಚೀನಕಾಲದ ನಾಮರೂಪವಾಗುತ್ತದೆ. ಮಧ್ಯಕಾಲದಲ್ಲಿ ಅದರೊಂದಿಗೆ 'ನಾನ್' ಎಂಬುದು ಬರುತ್ತದೆ ಆಧುನಿಕ ಕಾಲದಲ್ಲಿ ಯಾನ್ ಎಂಬುದು ಬಳಕೆಯಿಂದ ತಪ್ಪಿಹೋಗಿ 'ನಾನ್' ಎಂಬುದರೊಂದಿಗೆ 'ಯಾಮ್' ಎಂಬುದು ಬಂದಿದೆ. ಇಲ್ಲಿ 'ಯಾಮ್' ಎಂಬುದು ಗೌರವಾರ್ಥಕ ಏಕವಚನ ನಾಮಪದವಾಗಿ ಬಳಸಲಾಗಿದೆ.

ಪರಿವರ್ತಿತ ವಿಭಕ್ತಿರೂಪದಲ್ಲಿ ಪ್ರಾಚೀನಕಾಲಕ್ಕೂ ಮಧ್ಯಕಾಲಕ್ಕೂ ಏನೂ ವ್ಯತ್ಯಾಸವಿಲ್ಲ. ಆದರೆ ಆಧುನಿಕಕಾಲದಲ್ಲಿ 'ಎನ್' ಎಂಬುದರೊಂದಿಗೆ 'ಎಮ್' ಎಂಬುದೂ ಪರಿವರ್ತಿತ ವಿಭಕ್ತಿರೂಪವಾಗಿ ಬರುತ್ತದೆ. ಇದು ಗೌರವಾರ್ಥಕ ಏಕವಚನ ಪರಿವರ್ತಿತ ವಿಭಕ್ತಿರೂಪವಾಗಿ ಬಳಕೆಯಾಗಿದೆ.

ಸಮಾವೇಶಕ ಬಹುವಚನದಲ್ಲಿ 'ನಾಮ್' ಎಂಬುದೇ ಮೂರುಕಾಲದಲ್ಲೂ ನಾಮಪದವಾಗಿ ಉಳಿದಿದೆ. ಆದರೆ ಪ್ರಾಚೀನ ಕಾಲದಲ್ಲಿ ಕಂಡುಬರುವ 'ನಮ್', 'ನಂಗಳ್' ಮೊದಲಾದ ಪರಿವರ್ತಿತ ವಿಭಕ್ತಿರೂಪದಲ್ಲಿ 'ನಮ್' ಎಂಬುದೊಂದೇ ಮಧ್ಯ ಮತ್ತು ಆಧುನಿಕಕಾಲಗಳಲ್ಲಿ ಪರಿವರ್ತಿತ ವಿಭಕ್ತಿರೂಪವಾಗಿ ಬರುತ್ತದೆ.

ಅಸಮಾವೇಶಕ ಬಹುವಚನದಲ್ಲಿ ಪ್ರಾಚೀನಕಾಲದ ನಾಮರೂಪವಾಗಿರುವ 'ಯಾಮ್' ಎಂಬುದು ಬಳಕೆಯಿಂದ ಮಾಯವಾಗಿ ಅದಕ್ಕೆ ಬದಲಾಗಿ ಮಧ್ಯಕಾಲದಲ್ಲಿ 'ನಾಂಗಳ್' ಎಂಬುದು ನಾಮರೂಪ ಪದವಾಗಿ ಕಾಣಿಸಿಕೊಂಡಿದೆ. ಮಧ್ಯಕಾಲದಲ್ಲಿರುವ ಎರಡು ನಾಮರೂಪಗಳಲ್ಲಿ 'ನಾಂಗಳ್' ಎಂಬುದೊಂದೇ ಆಧುನಿಕಕಾಲದ ನಾಮರೂಪವಾಗಿ ಬಳಕೆಯಾಗಿದೆ.

ಅಸಮಾವೇಶಕ ಬಹುವಚನ ಪರಿವರ್ತಿತ ವಿಭಕ್ತಿರೂಪದಲ್ಲಿ ಪ್ರಾಚೀನಕಾಲಕ್ಕೂ ಮಧ್ಯಕಾಲಕ್ಕೂ ಏನೂ ವ್ಯತ್ಯಾಸವಿಲ್ಲ. ಆದರೆ ಆಧುನಿಕ ಕಾಲದಲ್ಲಿ 'ಎಂಗಳ್' ಎಂಬುದೊಂದೇ ಬಳಸಲಾಗಿರುವುದನ್ನು ಕಾಣಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಧ್ಯಮಪುರುಷ ಸರ್ವನಾಮ:

ಉತ್ತಮಪುರುಷ ಸರ್ವನಾಮದಂತೆಯೇ ಮಧ್ಯಮಪುರುಷ ಸರ್ವನಾಮವನ್ನೂ ಏಕವಚನ ಮತ್ತು ಬಹುವಚನ ಎಂದು ವಿಂಗಡಿಸಲಾಗಿದೆ. ಇದರ ಬೆಳವಣಿಗೆಯನ್ನು ಕೆಳಕಂಡ ಪಟ್ಟಿಯಿಂದ ಸ್ಪಷ್ಟವಾಗಿ ತಿಳಿಯಬಹುದು.

	ಪ್ರಾಚೀನಕಾಲ		ಮಧ್ಯಕಾಲ		ಆಧುನಿಕಕಾಲ	
	ನಾಮ ರೂಪ	ಪರಿವರ್ತಿತ ವಿಭಕ್ತಿರೂಪ	ನಾಮ ರೂಪ	ಪರಿವರ್ತಿತ ವಿಭಕ್ತಿ ರೂಪ	ನಾಮ ರೂಪ	ಪರಿವರ್ತಿತ ವಿಭಕ್ತಿ ರೂಪ
ಏಕ ವಚನ	ನೀ	ಉನ್ ನಿನ್	ನೀ ನೀನ್	ಉನ್	ನೀ, ನೀರ್ ನೀಂಗಳ್	ಉನ್ ಉಂಗಳ್
ಬಹು ವಚನ	ನೀಮ್ ನೀಂಗಳ್ ನೀಯಿರ್ ನೀವಿರ್ ನೀರ್	ನುಮ್ ಉಮ್ ಉಂಗಳ್	ನೀರ್ ನೀಂಗಳ್	ಉಂಗಳ್	ನೀಂಗಳ್	ಉಂಗಳ್

ಪ್ರಾಚೀನ ಕಾಲದ ಮಧ್ಯಮಪುರುಷ ಏಕವಚನ ನಾಮರೂಪವಾದ 'ನೀ' ಎಂಬುದರೊಂದಿಗೆ ಮಧ್ಯಕಾಲದಲ್ಲಿ 'ನೀನ್' ಎಂಬುದು ಕಂಡು ಬರುತ್ತದೆ. ಆಧುನಿಕ ಕಾಲದಲ್ಲಿ ಮಧ್ಯಕಾಲದ ಏಕವಚನ ರೂಪವಾದ 'ನೀನ್' ಎಂಬುದು ಬಳಕೆಯಿಂದ ಹೋಗಿ ಅದಕ್ಕೆ ಬದಲಾಗಿ 'ನೀರ್', 'ನೀಂಗಳ್' ಎಂಬ ಬಹುವಚನ ನಾಮಪದಗಳು 'ನೀ' ಎಂಬುದರೊಂದಿಗೆ ಸೇರಿಕೊಂಡಿವೆ. ಇವು ಆಧುನಿಕ ಕಾಲದಲ್ಲಿ ಗೌರವಾರ್ಥಕ ಏಕವಚನವಾಗಿ ಬಳಕೆಯಾಗಿರುವುದನ್ನು ನೋಡಬಹುದು.

ಪರಿವರ್ತಿತ ವಿಭಕ್ತಿರೂಪದಲ್ಲಿ ಪ್ರಾಚೀನ ಕಾಲದ ರೂಪಗಳಲ್ಲಿ ಒಂದಾದ 'ನಿನ್' ಎಂಬುದು ಮಧ್ಯಕಾಲದಲ್ಲಿ ಬಳಕೆಯಿಂದ ಮಾಯವಾಗಿದೆ. ಆಧುನಿಕ ಕಾಲದಲ್ಲಿ ಮಧ್ಯಕಾಲದ ಪರಿವರ್ತಿತ ವಿಭಕ್ತಿರೂಪವಾದ 'ಉನ್' ಎಂಬುದರೊಂದಿಗೆ 'ಉಂಗಳ್' ಎಂಬುದು ಬರುವುದನ್ನು ನೋಡಬಹುದು. ಈ 'ಉಂಗಳ್' ಎಂಬ ಪರಿವರ್ತಿತ ವಿಭಕ್ತಿರೂಪ ಗೌರವಾರ್ಥಕ ಏಕವಚನವಾಗಿ ಬಳಸಲಾಗಿದೆ.

ಬಹುವಚನದಲ್ಲಿ ಪ್ರಾಚೀನ ಕಾಲದಲ್ಲಿ ಕಂಡುಬರುವ ನಾಮರೂಪಗಳಾದ 'ನೀಮ್', 'ನೀಯಿರ್', 'ನೀವಿರ್' ಮೊದಲಾದವು ಮಧ್ಯಕಾಲದಲ್ಲಿ ಬಳಕೆಯನ್ನು ಕಳೆದುಕೊಂಡಿವೆ. ಮಧ್ಯಕಾಲದಲ್ಲಿ ಬಳಕೆಯಲ್ಲಿರುವ ಎರಡು ನಾಮಪದಗಳಲ್ಲಿ 'ನೀಂಗಳ್' ಎಂಬುದು ಒಂದೇ ಆಧುನಿಕ ಕಾಲದಲ್ಲಿ ಬಳಕೆಯಲ್ಲಿದೆ.

ಪರಿವರ್ತಿತ ವಿಭಕ್ತಿರೂಪದಲ್ಲಿ ಪ್ರಾಚೀನಕಾಲದ ರೂಪಗಳಲ್ಲಿ ಒಂದಾದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಉಂಗಳ್' ಎಂಬುದೇ ಮಧ್ಯಕಾಲದಲ್ಲೂ ಆಧುನಿಕ ಕಾಲದಲ್ಲೂ ಬರುವುದನ್ನು ಸ್ಪಷ್ಟವಾಗಿ ಕಾಣಬಹುದು.

ಪ್ರಥಮ ಪುರುಷ ಸರ್ವನಾಮ :

ಉಳಿದ ಎರಡು ಪುರುಷಾರ್ಥಕ ಸರ್ವನಾಮಗಳಂತೆಯೇ ಪ್ರಥಮ ಪುರುಷ ಸರ್ವನಾಮಗಳನ್ನೂ ಏಕವಚನ ಮತ್ತು ಬಹುವಚನ ಎಂದು ಎರಡು ವಿಧಗಳಾಗಿ ವಿಭಾಗಿಸಬಹುದು. ಅದರ ಬೆಳವಣಿಗೆಯನ್ನು ಕೆಳಕಂಡಂತೆ ವಿವರವಾಗಿ ನಿರೂಪಿಸ ಬಹುದು.

	ಪ್ರಾಚೀನಕಾಲ		ಮಧ್ಯಕಾಲ		ಆಧುನಿಕಕಾಲ	
	ನಾಮ ರೂಪ	ಪರಿವರ್ತಿತ ವಿಭಕ್ತಿರೂಪ	ನಾಮ ರೂಪ	ಪರಿವರ್ತಿತ ವಿಭಕ್ತಿರೂಪ	ನಾಮ ರೂಪ	ಪರಿವರ್ತಿತ ವಿಭಕ್ತಿರೂಪ
ಏಕ ವಚನ	ತಾನ್	ತನ್	ತಾನ್	ತನ್	ತಾನ್ ತಾಂಗಳ್	ತನ್ ತಂಗಳ್
ಬಹು ವಚನ	ತಾಮ್	ತಮ್	ತಾಮ್ ತಾಂಗಳ್	ತಮ್ ತಂಗಳ್	ತಾಮ್ ತಾಂಗಳ್	ತಮ್ ತಂಗಳ್

ಮೇಲಿನ ಪಟ್ಟಿಯಿಂದ ಪ್ರಥಮಪುರುಷ ಏಕವಚನದಲ್ಲಿ ಪ್ರಾಚೀನ ಕಾಲಕ್ಕೂ ಮಧ್ಯಕಾಲಕ್ಕೂ ಯಾವ ವ್ಯತ್ಯಾಸವೂ ಇಲ್ಲದಿರುವುದು ತಿಳಿಯುತ್ತದೆ. ಆದರೆ ಆಧುನಿಕ ಕಾಲದಲ್ಲಿ 'ತಾನ್' ಎಂಬುದರೊಂದಿಗೆ 'ತಾಂಗಳ್' ಎಂಬುದೂ 'ತನ್' ಎಂಬುದ ರೊಂದಿಗೆ 'ತಂಗಳ್' ಎಂಬುದೂ ಗೌರವಾರ್ಥಕ ಏಕವಚನ ಸರ್ವನಾಮಗಳಾಗಿ ಬಳಸಲಾಗಿವೆ.

ಬಹುವಚನದಲ್ಲಿ ಪ್ರಾಚೀನಕಾಲದ ರೂಪದೊಂದಿಗೆ 'ತಾಂಗಳ್' 'ತಂಗಳ್' ಎಂಬುವು ಮಧ್ಯಕಾಲ ಮತ್ತು ಆಧುನಿಕ ಕಾಲಗಳಲ್ಲಿ ಬಳಕೆಯಾಗಿರುವುದನ್ನು ಕಾಣ ಬಹುದು. ಈ ಪ್ರಥಮಪುರುಷ ಏಕವಚನ ಮತ್ತು ಬಹುವಚನ ಸರ್ವನಾಮಗಳು ಕೆಲವೊಮ್ಮೆ ಆತ್ಮಾರ್ಥಕ ಸರ್ವನಾಮಗಳಾಗಿಯೂ ತಮಿಳು ಭಾಷೆಯಲ್ಲಿ ಬಳಸಲ್ಪಟ್ಟಿವೆ.

ಪ್ರಥಮ ಪುರುಷ ಸರ್ವನಾಮವನ್ನು ಕುರಿತ ಒಂದು ಮಾತು :

ಇಂದು ವಿದ್ವಾಂಸರು 'ತಾನ್', 'ತಾಮ್' ಎಂಬುವುಗಳನ್ನು ಪ್ರಥಮಪುರುಷ ಸರ್ವನಾಮಗಳಾಗಿ ಗುರುತಿಸುವುದಕ್ಕೆ ಬದಲಾಗಿ ಆಂಗ್ಲಭಾಷೆಯ ಪ್ರಭಾವದಿಂದ ಅವನ್, ಅವಳ್, ಅವರ್, ಅದು, ಅವೈ ಎಂಬುವುಗಳನ್ನು ಪ್ರಥಮಪುರುಷ ಸರ್ವ ನಾಮಗಳಾಗಿ ಪರಿಗಣಿಸುತ್ತಾರೆ. ಆದರೆ ಇವು ಸಾಧಿತ ಸರ್ವನಾಮಗಳೇ ಹೊರತು ಸರಳ ಸರ್ವನಾಮಗಳಲ್ಲ. ತಾನ್, ತಾಮ್ ಎಂಬುವುಗಳನ್ನೇ ಪ್ರಥಮಪುರುಷ ಸರ್ವ ನಾಮಗಳಾಗಿ ಪರಿಗಣಿಸಬೇಕು. ಅದಕ್ಕೆ ಕೆಳಕಂಡ ಕಾರಣಗಳು ಸಹಾಯವಾಗುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅ) ಉತ್ತಮಪುರುಷ ಮತ್ತು ಮಧ್ಯಮಪುರುಷ ಸರ್ವನಾಮಗಳಂತೆಯೇ ತಾನ್, ತಾಮ್ ಎಂಬುವುಗಳು ಸರಳ ಸರ್ವನಾಮಗಳಾಗಿ ಕಂಡು ಬರುತ್ತವೆ. ಅಂದರೆ ಈ ಸರ್ವನಾಮಗಳನ್ನು ಯಾವ ಮೂಲದಿಂದಲೂ ಸಾಧಿಸುವುದಕ್ಕೆ ಸಾಧ್ಯವಿಲ್ಲ.

ಆ) ಇತರ ಪುರುಷಾರ್ಥಕ ಸರ್ವನಾಮಗಳಂತೆಯೇ ಪ್ರಥಮಪುರುಷ ಸರ್ವನಾಮವೂ ಏಕವಚನ ಮತ್ತು ಬಹುವಚನ ಎಂದು ವಿಂಗಡನೆಯಾಗಬೇಕು ; ಅಲ್ಲದೆ ಲಿಂಗ ಪ್ರತ್ಯಯಗಳೊಂದಿಗೆ ಕೂಡಿಬರಬಾರದು. ಇಂದು ವಿದ್ವಾಂಸರು ಹೇಳುವ ಅವನ್, ಅವಳ್ ಮುಂತಾದವುಗಳನ್ನು ಪ್ರಥಮ ಪುರುಷವಾಗಿ ಪರಿಗಣಿಸಿದರೆ ಅವು ಮೇಲಿನ ಪುರುಷಾರ್ಥಕ ಸರ್ವನಾಮಗಳ ಗುಣಗಳಿಗೆ ವಿರುದ್ಧವಾಗಿ ಬರುವುದನ್ನು ನೋಡಬಹುದು. ಅಂದರೆ ಇವುಗಳು ಏಕವಚನ ಮತ್ತು ಬಹುವಚನ ಎಂಬುದರೊಂದಿಗೆ ಪುಲ್ಲಿಂಗ, ಸ್ತ್ರೀಲಿಂಗ, ಪುಂಸ್ತ್ರೀಲಿಂಗ, ನಪುಂಸಕಲಿಂಗ ಏಕವಚನ, ನಪುಂಸಕಲಿಂಗ ಬಹುವಚನ ಎಂಬ ಐದು ವಿಧವಾದ ಲಿಂಗಭೇದಗಳನ್ನು ಸೂಚಿಸುವ ಲಿಂಗಪ್ರತ್ಯಯಗಳೊಂದಿಗೆ ಕೂಡಿಬರುತ್ತವೆ.

ಇ) ಪುರುಷಾರ್ಥಕ ಸರ್ವನಾಮದಲ್ಲಿ '-ನ'ಕಾರ ಏಕವಚನವನ್ನೂ '-ಮ'ಕಾರ ಬಹುವಚನವನ್ನೂ ಸೂಚಿಸುತ್ತವೆ ಎಂಬುದು ಉತ್ತಮಪುರುಷ ಮತ್ತು ಮಧ್ಯಮ ಪುರುಷ ಸರ್ವನಾಮಗಳನ್ನು ನೋಡಿದರೆ ಗೊತ್ತಾಗುತ್ತದೆ. ಅವನ್, ಅವಳ್ ಮುಂತಾದವುಗಳನ್ನು ಪ್ರಥಮಪುರುಷ ಸರ್ವನಾಮಗಳೆಂದು ಪರಿಗಣಿಸಿದರೆ ಅವುಗಳ ಸ್ವಭಾವ ಉತ್ತಮಪುರುಷ ಮತ್ತು ಮಧ್ಯಮಪುರುಷ ಸರ್ವನಾಮಗಳ ಸ್ವಭಾವಕ್ಕೆ ವಿರುದ್ಧವಾಗಿರುವುದನ್ನು ತಿಳಿಯಬಹುದು. ಇವುಗಳಿಗೆ ಬದಲಾಗಿ ತಾನ್, ತಾಮ್ ಎಂಬುವುಗಳನ್ನು ಪ್ರಥಮಪುರುಷ ಸರ್ವನಾಮಗಳಾಗಿ ಪರಿಗಣಿಸಿದರೆ ಉತ್ತಮ ಪುರುಷ ಮತ್ತು ಮಧ್ಯಮಪುರುಷ ಸರ್ವನಾಮಗಳಿಗೆ ಅನುಗುಣವಾಗಿ ಬರುವುದನ್ನು ನೋಡಬಹುದು.

ಮೇಲಿನ ಈ ಮೂರು ಕಾರಣಗಳಿಂದ ಅವನ್, ಅವಳ್ ಎಂಬುವುಗಳನ್ನು ಪುರುಷಾರ್ಥಕ ಸರ್ವನಾಮಗಳಾಗಿ ಎತ್ತಿಹೇಳಲಿಕ್ಕೆ ಸಾಧ್ಯವೇ ಇಲ್ಲ ಎಂಬುದನ್ನು ತಿಳಿಯಬಹುದು.

ಸಾಧಿತ ಸರ್ವನಾಮ :

ಒಂದು ಧಾತುವಿನಿಂದ ಸಾಧಿಸಲ್ಪಡುವ ಸರ್ವನಾಮಕ್ಕೆ ಸಾಧಿತ ಸರ್ವನಾಮ ಎಂದು ಹೆಸರು. ಸಾಧಿತ ಸರ್ವನಾಮಗಳನ್ನು ನಿರ್ದೇಶಕ ಸರ್ವನಾಮ ಮತ್ತು ಪ್ರಶ್ನಾರ್ಥಕ ಸರ್ವನಾಮ ಎಂದು ಎರಡು ಬಗೆಯಾಗಿ ವಿಂಗಡಿಸಬಹುದು. ಸಾಧಿತ ಸರ್ವನಾಮಕ್ಕೂ ಸರಳ ಸರ್ವನಾಮಕ್ಕೂ ವ್ಯತ್ಯಾಸವೇನೆಂದರೆ,

1. ಸಾಧಿತ ಸರ್ವನಾಮದಲ್ಲಿ ಲಿಂಗ ಪ್ರತ್ಯಯಗಳು ಬರುತ್ತವೆ. ಸರಳ ಸರ್ವನಾಮಗಳಲ್ಲಿ ಲಿಂಗ ಪ್ರತ್ಯಯಗಳು ಬರುವುದಿಲ್ಲ.

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

2. ಸಾಧಿತ ಸರ್ವನಾಮಗಳು, ನಾಮರೂಪಕ್ಕೂ ಪರಿವರ್ತಿತ ವಿಭಕ್ತಿ ರೂಪಕ್ಕೂ ಒಂದೇ ಪದವನ್ನು ಪಡೆದಿರುತ್ತವೆ. ಆದರೆ ಸರಳ ಸರ್ವನಾಮಗಳು ನಾಮರೂಪಕ್ಕೆ ಒಂದು ಪದವನ್ನೂ ಪರಿವರ್ತಿತ ವಿಭಕ್ತಿ ರೂಪಕ್ಕೆ ಮತ್ತೊಂದು ಪದ ವನ್ನೂ ಪಡೆದಿರುತ್ತವೆ.

ನಿರ್ದೇಶಕ ಸರ್ವನಾಮ :

ಅ, ಇ, ಉ ಎಂಬ ಮೂಲಗಳಿಂದ ಸಾಧಿಸಲ್ಪಡುವ ಪದಗಳಿಗೆ ನಿರ್ದೇಶಕ ಸರ್ವ ನಾಮಗಳು ಎಂದು ಹೆಸರು, ಇವುಗಳನ್ನು ಕ್ರಮವಾಗಿ ದೂರವರ್ತಿ, ಸಮೀಪವರ್ತಿ ಮತ್ತು ಮಧ್ಯವರ್ತಿ ಸರ್ವನಾಮ ಎಂದು ಹೆಸರಿಸಬಹುದು.

ದೂರವರ್ತಿ ನಿರ್ದೇಶಕ ಸರ್ವನಾಮ :

ದೂರದಲ್ಲಿರುವ ವ್ಯಕ್ತಿ ಅಥವಾ ವಸ್ತುವನ್ನು ಗುರುತಿಸಲು ಬರುವ ಸರ್ವ ನಾಮ ದೂರವರ್ತಿ ನಿರ್ದೇಶಕ ಸರ್ವನಾಮವಾಗುತ್ತದೆ. ಪ್ರಾಚೀನ ಕಾಲದ ತಮಿಳಿ ನಲ್ಲಿ ಐದುವಿಧವಾದ ದೂರವರ್ತಿ ನಿರ್ದೇಶಕ ಸರ್ವನಾಮಗಳು ಬಳಕೆಯಲ್ಲಿದ್ದವು. ಅವು ಪುಲ್ಲಿಂಗ ದೂರವರ್ತಿ ನಿರ್ದೇಶಕ ಸರ್ವನಾಮ, ಸ್ತ್ರೀಲಿಂಗ ದೂರವರ್ತಿ ನಿರ್ದೇಶಕ ಸರ್ವ ನಾಮ, ಪುಂಸ್ತ್ರೀಲಿಂಗ ದೂರವರ್ತಿ ನಿರ್ದೇಶಕ ಸರ್ವನಾಮ, ನಪುಂಸಕಲಿಂಗ ಏಕವಚನ ದೂರವರ್ತಿ ನಿರ್ದೇಶಕ ಸರ್ವನಾಮ, ನಪುಂಸಕಲಿಂಗ ಬಹುವಚನ ದೂರವರ್ತಿ ನಿರ್ದೇಶಕ ಸರ್ವನಾಮ ಎಂಬುವು. ಇದನ್ನು ಕೆಳಕಂಡ ವೃಕ್ಷನಕ್ಷೆಯಲ್ಲಿ ತೋರಿಸ ಬಹುದು.



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಧ್ಯಕಾಲದ ತಮಿಳಿನಲ್ಲಿ ಮೇಲಿನ ನಕ್ಷೆಯಲ್ಲಿ ಕಂಡುಬರುವ ಮಾನವ ಏಕವಚನ ದೂರವರ್ತಿ ನಿರ್ದೇಶಕ ಸರ್ವನಾಮ ಪುಲ್ಲಿಂಗ, ಸ್ತ್ರೀಲಿಂಗ, ಗೌರವಾರ್ಥಕ ಏಕವಚನ ಎಂಬುದಾಗಿ ಮೂರು ವಿಧವಾಗುತ್ತದೆ. ಇದರಿಂದ ಪ್ರಾಚೀನಕಾಲದಲ್ಲಿ ಐದುತೆರನಾಗಿದ್ದ ದೂರವರ್ತಿ ನಿರ್ದೇಶಕ ಸರ್ವನಾಮ ಮಧ್ಯಕಾಲದಲ್ಲಿ ಆರಾಗುತ್ತದೆ. ಪ್ರಾಚೀನ ಕಾಲದಲ್ಲಿ ಪುಂಸ್ತ್ರೀಲಿಂಗ ಬಹುವಚನವಾಗಿದ್ದ 'ಅವರ್' ಎಂಬುದು ಮಧ್ಯಕಾಲದಲ್ಲಿ ಗೌರವಾರ್ಥಕ ಏಕವಚನವಾಗಿ ಬರುತ್ತದೆ. ಪುಂಸ್ತ್ರೀಲಿಂಗ ಬಹುವಚನವನ್ನು ಸೂಚಿಸುವುದಕ್ಕೆ ಮಧ್ಯಕಾಲದಲ್ಲಿ 'ಅವರ್‌ಕಳ್' ಎಂಬುದು ಬಳಕೆಗೆ ಬಂದಿದೆ. ಇದನ್ನು ಈ ಕೆಳಕಂಡ ವೃಕ್ಷನಕ್ಷೆಯಲ್ಲಿ ನಿಖರವಾಗಿ ನಿರೂಪಿಸಿದೆ.

ದೂರವರ್ತಿ ನಿರ್ದೇಶಕ ಸರ್ವನಾಮ

- ಮಾನವ
  - ಏಕವಚನ
    - ಪುಲ್ಲಿಂಗ ಅವನ್
    - ಸ್ತ್ರೀಲಿಂಗ ಅವಳ್
    - ಗೌರವಾರ್ಥಕ ಅವರ್
  - ಬಹುವಚನ
    - ಪುಂಸ್ತ್ರೀಲಿಂಗ ಅವರ್‌ಕಳ್
- ಅಮಾನವ
  - ಏಕವಚನ
    - ನಪುಂಸಕಲಿಂಗ ಏಕವಚನ ಅದು
  - ಬಹುವಚನ
    - ನಪುಂಸಕಲಿಂಗ ಬಹುವಚನ ಅವೈ

ಆಧುನಿಕಕಾಲದ ತಮಿಳು ಭಾಷೆಯಲ್ಲಿ ಪುಲ್ಲಿಂಗ, ಸ್ತ್ರೀಲಿಂಗ ಇವುಗಳಲ್ಲೂ ಪ್ರತ್ಯೇಕವಾದ ಬಹುವಚನಗಳು ಬಳಕೆಗೆ ಬಂದಿವೆ. ಇದು ತಮಿಳು ಭಾಷೆಯ ಚಾರಿತ್ರಿಕ ಬೆಳವಣಿಗೆಗೆ ಸಾಕ್ಷಿ.

ದೂರವರ್ತಿ ನಿರ್ದೇಶಕ ಸರ್ವನಾಮ

- ಮಾನವ
  - ಏಕವಚನ
    - ಪುಲ್ಲಿಂಗ ಅವನ್
    - ಸ್ತ್ರೀಲಿಂಗ ಅವಳ್
    - ಪುಂಸ್ತ್ರೀಲಿಂಗ ಅವರ್
  - ಬಹುವಚನ
    - ಪುಲ್ಲಿಂಗ ಅವನ್‌ಕಳ್
    - ಸ್ತ್ರೀಲಿಂಗ ಅವಳ್‌ಕಳ್
    - ಪುಂಸ್ತ್ರೀಲಿಂಗ ಅವರ್‌ಕಳ್
- ಅಮಾನವ
  - ಏಕವಚನ
    - ನಪುಂಸಕ ಲಿಂಗ ಏಕವಚನ ಅದು
  - ಬಹುವಚನ
    - ನಪುಂಸಕ ಲಿಂಗ ಬಹುವಚನ ಅವೈ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಧ್ಯಕಾಲದ ಸರ್ವನಾಮಗಳಜೊತೆ ಅವನ್‌ಕಳ್, ಅವಳ್‌ಕಳ್ ಎಂಬುವು ಕ್ರಮವಾಗಿ ಪುಲ್ಲಿಂಗ ಮತ್ತು ಸ್ತ್ರೀಲಿಂಗ ಬಹುವಚನಗಳಾಗಿ ಬರುತ್ತವೆ.

ಹೀಗೆ ದೂರವರ್ತಿ ನಿರ್ದೇಶಕ ಸರ್ವನಾಮಗಳು ಪ್ರಾಚೀನಕಾಲದಲ್ಲಿ ಐದು ತೆರನಾಗಿಯೂ ಮಧ್ಯಕಾಲದಲ್ಲಿ ಆರುತೆರನಾಗಿಯೂ ಆಧುನಿಕಕಾಲದಲ್ಲಿ ಎಂಟುವಿಧವಾಗಿಯೂ ರೂಪುಗೊಂಡಿರುವುದನ್ನು ಗಮನಿಸಬಹುದು.

ಸಮೀಪವರ್ತಿ ಸರ್ವನಾಮ :

ದೂರವರ್ತಿ ಸರ್ವನಾಮದಂತೆಯೇ ಸಮೀಪವರ್ತಿ ಸರ್ವನಾಮವೂ ರೂಪುಗೊಂಡಿದೆ. ಆದರೆ ಇದು 'ಇ' ಎಂಬ ಮೂಲದಿಂದ ಸಾಧಿತವಾಗಿದೆ ಅಷ್ಟೇ.

ಮಧ್ಯವರ್ತಿ ಸರ್ವನಾಮ :

ಮಧ್ಯವರ್ತಿ ಸರ್ವನಾಮ 'ಉ' ಎಂಬ ಮೂಲದಿಂದ ಸಾಧಿತವಾಗಿದೆ. ತಮಿಳು ಭಾಷೆಯಲ್ಲಿ ಮಧ್ಯವರ್ತಿ ಸರ್ವನಾಮಗಳು ಮೂರು ಕಾಲದಲ್ಲೂ ಬಳಕೆಯನ್ನು ಕಳೆದುಕೊಂಡಿರುವುದೇ ಗಮನೀಯ ಅಂಶ.

ಪ್ರಶ್ನಾರ್ಥಕ ಸರ್ವನಾಮ :

ಪ್ರಶ್ನಾರ್ಥಕ ಸರ್ವನಾಮ ನಿರ್ದೇಶಕ ಸರ್ವನಾಮದಂತೆಯೇ ಪ್ರಾಚೀನಕಾಲದಲ್ಲಿ ಐದಾಗಿಯೂ ಮಧ್ಯಕಾಲದಲ್ಲಿ ಆರಾಗಿಯೂ ಆಧುನಿಕಕಾಲದಲ್ಲಿ ಎಂಟಾಗಿಯೂ ರೂಪುಗೊಂಡಿದೆ. ಇದು 'ಎ' ಎಂಬ ಪ್ರಶ್ನಾರ್ಥಕ ಮೂಲದಿಂದ ಸಾಧಿತವಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೧೫. ವಿಭಕ್ತಿಗಳು

ನಾಮಪದಗಳಿಗೂ ಕ್ರಿಯಾಪದಗಳಿಗೂ ನಡುವೆ ಇರುವ ಸಂಬಂಧವನ್ನು ವಿಭಕ್ತಿ ಎನ್ನುತ್ತಾರೆ. ತಮಿಳಿನಲ್ಲಿ ವಿಭಕ್ತಿಯನ್ನು ವೇಟ್ರುಮೈ ಎಂದು ಕರೆಯುತ್ತಾರೆ. ಒಂದು ವಾಕ್ಯದಲ್ಲಿ ಬರುವ ನಾಮಪದ ಮತ್ತು ಕ್ರಿಯಾಪದದ ನಡುವೆ ಇರುವ ಸಂಬಂಧವನ್ನು ಸೂಚಿಸುವುದಕ್ಕೆ ಬರುವ ಪ್ರತ್ಯಯವನ್ನು 'ವಿಭಕ್ತಿ ಪ್ರತ್ಯಯ' ಎಂದು ಕರೆಯುತ್ತಾರೆ. ಈ ವಿಭಕ್ತಿ ಪ್ರತ್ಯಯ ನಾಮಪದಗಳಿಗೂ ಕ್ರಿಯಾಪದಗಳಿಗೂ ನಡುವೆ ಇರುವ ಸಂಬಂಧವನ್ನು ಎತ್ತಿತೋರಿಸುವುದರಿಂದ ಒಂದು ನಾಮಪದವನ್ನು ಮತ್ತೊಂದು ನಾಮಪದದಿಂದ ಬೇರ್ಪಡಿಸುತ್ತದೆ.

ಉದಾ : ರಾಮನ್ ಮರತ್ತೈ ವೆಟ್ಟಿನಾನ್

ಈ ವಾಕ್ಯದಲ್ಲಿ 'ರಾಮನ್' ಮತ್ತು 'ಮರಂ' ಎಂಬ ಎರಡು ನಾಮಪದಗಳಿವೆ. ಈ ಎರಡು ನಾಮಪದಗಳಿಗೂ ಆ ವಾಕ್ಯದಲ್ಲಿ ಬರುವ ಕ್ರಿಯಾಪದಕ್ಕೂ ನಡುವೆ ಬೇರೆ ಬೇರೆ ರೀತಿಯಾದ ಸಂಬಂಧವಿರುವುದನ್ನು ನೋಡಬಹುದು. 'ರಾಮನ್' ಎಂಬ ನಾಮಪದಕ್ಕೂ 'ವೆಟ್ಟಿನಾನ್' ಎಂಬ ಕ್ರಿಯಾಪದಕ್ಕೂ ನಡುವೆ ಇರುವ ಸಂಬಂಧ 'ಕರ್ತೃ-ಕ್ರಿಯಾ' ಸಂಬಂಧ; 'ಮರಂ' ಎಂಬ ನಾಮಪದಕ್ಕೂ 'ವೆಟ್ಟಿನಾನ್' ಎಂಬ ಕ್ರಿಯಾಪದಕ್ಕೂ ನಡುವೆ ಇರುವ ಸಂಬಂಧ 'ಕರ್ಮ-ಕ್ರಿಯಾ' ಸಂಬಂಧ. ಹೀಗೆ ನಾಮಪದಗಳಿಗೂ ಕ್ರಿಯಾಪದಕ್ಕೂ ನಡುವೆ ಇರುವ ಸಂಬಂಧಗಳು ಬೇರೆಬೇರೆಯಾಗಿರುವುದರಿಂದ ಈ ವಾಕ್ಯದಲ್ಲಿ ಬರುವ ಒಂದು ನಾಮಪದ ಕರ್ತೃವಾಗಿಯೂ ಮತ್ತೊಂದು ನಾಮಪದ ಕರ್ಮವಾಗಿಯೂ ಬರುತ್ತದೆ. ಈ ವಾಕ್ಯದಲ್ಲಿ ಬರುವ ನಾಮಪದಗಳಲ್ಲಿ ಒಂದು ನಾಮಪದ ಕರ್ತೃವಾಗಿಯೂ ಮತ್ತೊಂದು ನಾಮಪದ ಕರ್ಮವಾಗಿಯೂ ಬರುವುದಕ್ಕೆ ಕಾರಣ ಆ ನಾಮಪದಗಳೊಂದಿಗೆ ಬರುವ ವಿಭಕ್ತಿ ಪ್ರತ್ಯಯಗಳೇ. ರಾಮನ್ ಎಂಬ ನಾಮಪದದಜೊತೆ ಯಾವ ಪ್ರತ್ಯಯವೂ ಇಲ್ಲದಿರುವ ಕಾರಣದಿಂದ ಅದು ಕರ್ತೃವಾಗುತ್ತದೆ. ಮರಂ ಎಂಬ ನಾಮಪದದೊಂದಿಗೆ-ಐ ಎಂಬ ವಿಭಕ್ತಿ ಪ್ರತ್ಯಯ ಬರುವ ಕಾರಣದಿಂದ ಅದು ವಾಕ್ಯದಲ್ಲಿ ಕರ್ಮವಾಗುತ್ತದೆ. ಹೀಗೆ ವಿಭಕ್ತಿ ಪ್ರತ್ಯಯಗಳು ಒಂದು ನಾಮಪದದಿಂದ ಮತ್ತೊಂದು ನಾಮಪದವನ್ನು ಬೇರ್ಪಡಿಸುವುದನ್ನು ನೋಡಬಹುದು.

ತಮಿಳಿನಲ್ಲಿ ಒಟ್ಟು ಎಂಟು ವಿಭಕ್ತಿಗಳಿವೆ. ಅವು ಪ್ರಥಮ ವಿಭಕ್ತಿ, ದ್ವಿತೀಯ ವಿಭಕ್ತಿ, ತೃತೀಯಾ ವಿಭಕ್ತಿ, ಚತುರ್ಥಿ ವಿಭಕ್ತಿ, ಪಂಚಮೀ ವಿಭಕ್ತಿ, ಷಷ್ಠಿ ವಿಭಕ್ತಿ, ಸಪ್ತಮಿ ವಿಭಕ್ತಿ ಮತ್ತು ಸಂಬೋಧನಾ ವಿಭಕ್ತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅ) ಪ್ರಥಮ ವಿಭಕ್ತಿ (ಮುದಲಾಂ ವೇಱ್ಱುಮೈ ಅಥವಾ ಎೞುವಾಯ್ ವೇಱ್ಱುಮೈ):

ತೊಲ್ಕಾಪ್ಪಿಯರೂ ನನ್ನೂಲಾರರೂ ಈ ವಿಭಕ್ತಿಗೆ ಪ್ರತ್ಯೇಕವಾದ ಪ್ರತ್ಯಯ ಇಲ್ಲ ಎಂದು ಹೇಳಿದ್ದಾರೆ. ಒಂದು ವಾಕ್ಯದಲ್ಲಿ ಕರ್ತೃವಾಗಿ ಬರುವ ನಾಮಪದವನ್ನೇ ಪ್ರಥಮ ವಿಭಕ್ತಿಯಾಗಿ ಪರಿಗಣಿಸಿದ್ದಾರೆ.

ಉದಾ : ರಾಮನ್ ಪಣಂ ಕೊಡುತ್ತಾನ್

ಈ ವಾಕ್ಯದಲ್ಲಿ 'ರಾಮನ್' ಎಂಬುದು ಪ್ರಥಮ ವಿಭಕ್ತಿಯಾಗುತ್ತದೆ. ಇದು ವಾಕ್ಯದಲ್ಲಿ ಕರ್ತೃವಾಗಿಯೂ ಬರುವುದನ್ನು ನೋಡಬಹುದು. ಕರ್ತೃವೇ ವಿಭಕ್ತಿಯಾಗಿ ಬರುವುದರಿಂದ ಈ ವಿಭಕ್ತಿಯನ್ನು ಎೞುವಾಯ್ ವೇಱ್ಱುಮೈ ಎಂದೂ ಹೆಸರಿಸುತ್ತಾರೆ.

ಮಧ್ಯಕಾಲದ ವೀರಚೋೞಿಯಂ ಎಂಬ ವ್ಯಾಕರಣದಲ್ಲಿ '-ಚು' ಎಂಬುದು ಪ್ರಥಮ ವಿಭಕ್ತಿ ಪ್ರತ್ಯಯವಾಗಿ ಸೂಚಿಸಲಾಗಿದೆ. ಆದರೆ ತಮಿಳಿನಲ್ಲಿ ಈ ಪ್ರತ್ಯಯ ಬಳಸಲಾಗಲಿಲ್ಲ. ಆದ್ದರಿಂದ ಈ ಅಭಿಪ್ರಾಯವನ್ನು ಆಧುನಿಕ ಕಾಲದ ವಿಧ್ವಾಂಸರೂ ಒಪ್ಪಲಿಲ್ಲ.

ಆ) ದ್ವಿತೀಯ ವಿಭಕ್ತಿ (ಇರಂಡಾಂ ವೇಱ್ಱುಮೈ ಅಥವಾ ಚೆಯಪ್ಪಡು ಪೊರುಳ್ ವೇಱ್ಱುಮೈ) :

ದ್ವಿತೀಯ ವಿಭಕ್ತಿ ಪ್ರತ್ಯಯವಾಗಿ -ಐ ಎಂಬ ಪ್ರತ್ಯಯವನ್ನು ತೊಲ್ಕಾಪ್ಪಿಯರ್ ತಮ್ಮ ಗ್ರಂಥದಲ್ಲಿ ಗುರುತಿಸಿದ್ದಾರೆ.

ಉದಾ : ರಾಮನ್ ಮರತ್ತೈ ವೆಟ್ಟಿನಾನ್

ಈ ವಾಕ್ಯದಲ್ಲಿ 'ಮರಂ' ಎಂಬ ನಾಮಪದದೊಂದಿಗೆ -ಐ ಎಂಬ ದ್ವಿತೀಯ ವಿಭಕ್ತಿ ಪ್ರತ್ಯಯ ಬರುವುದರಿಂದ ಇದು ಕರ್ಮವಾಗುತ್ತದೆ. ಈ ವಿಭಕ್ತಿ ಪ್ರತ್ಯಯವನ್ನು ಕುರಿತು ವೈಯ್ಯಾಕರಣರಲ್ಲಿ ಯಾವ ಭಿನ್ನಾಭಿಪ್ರಾಯವೂ ಕಂಡುಬರಲಿಲ್ಲ. ಅಂದರೆ ಇದೊಂದೇ ಪ್ರತ್ಯಯ ಮೂರುಕಾಲದ ಭಾಷೆಯಲ್ಲೂ ಬಳಸಲಾಗಿದೆ. ಆದರೆ ಸಂಘಕಾಲದ ಸಾಹಿತ್ಯದಲ್ಲಿ -ಅ ಎಂಬುದೂ ದ್ವಿತೀಯ ವಿಭಕ್ತಿ ಪ್ರತ್ಯಯವಾಗಿ ಬಳಸಲ್ಪಟ್ಟಿರುವುನ್ನು ನೋಡಬಹುದು. ಈ ಪ್ರತ್ಯಯ ಕವನದಲ್ಲಿ ಮಾತ್ರವೇ ಬಳಸಲಾಗಿದೆ.

ಉದಾ ! ಕಾವಲೋನ ಕಳಿಱು ಅಂಜುಮ್ಮೇ

ಇದರಲ್ಲಿ 'ಕಾವಲೋನ' ಎಂಬುದರಲ್ಲಿ ಬರುವ -ಅ ಎಂಬುದು ದ್ವಿತೀಯ ವಿಭಕ್ತಿ ಪ್ರತ್ಯಯವಾಗಿದೆ.

-ಐ ಎಂಬ ಪ್ರತ್ಯಯ ಮಾನವ ನಾಮಪದದೊಂದಿಗೆ ಬರುವಾಗ ಪ್ರತ್ಯಕ್ಷವಾಗಿ ಬರಬೇಕು; ಅಲ್ಲದೆ ಪರೋಕ್ಷವಾಗಿ ಬಂದರೆ ಅರ್ಥಕ್ಕೆ ಊನವಾಗುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : 1) ರಾಮನ್ ರಾವಣನೈಕ್ ಕೊನ್ಡಾನ್
2) ರಾಮನ್ ರಾವಣನ್ ಕೊನ್ಡಾನ್

ಇದರಲ್ಲಿ ಮೊದಲನೆಯ ವಾಕ್ಯದಲ್ಲಿ ವಿಭಕ್ತಿ ಪ್ರತ್ಯಯ ಪ್ರತ್ಯಕ್ಷವಾಗಿ ಬರುತ್ತದೆ. ಹೀಗೆ ವಿಭಕ್ತಿ ಪ್ರತ್ಯಯ ಪ್ರತ್ಯಕ್ಷವಾಗಿ ಬರುವ ಕಾರಣದಿಂದ ಈ ವಾಕ್ಯ ಸ್ಪಷ್ಟವಾಗಿ ಅರ್ಥವಾಗುತ್ತದೆ. ಎರಡನೆಯ ವಾಕ್ಯದಲ್ಲಿ ವಿಭಕ್ತಿಪ್ರತ್ಯಯ ಪರೋಕ್ಷವಾಗಿ ಬರುತ್ತದೆ; ಆದ್ದರಿಂದ ಇದರ ಅರ್ಥದಲ್ಲಿ ತೊಡಕು ಉಂಟಾಗುತ್ತದೆ. ಅಂದರೆ ಈ ವಾಕ್ಯದಿಂದ ಯಾರು ಯಾರನ್ನು ಕೊಂದರು ಎಂಬುದು ಸ್ಪಷ್ಟವಾಗುವುದಿಲ್ಲ. ಈ ಕಾರಣದಿಂದ ದ್ವಿತೀಯ ವಿಭಕ್ತಿ ಪ್ರತ್ಯಯ ಮಾನವ ನಾಮಪದದೊಂದಿಗೆ ಖಂಡಿತವಾಗಿ ಪ್ರತ್ಯಕ್ಷವಾಗಿ ಬರಬೇಕು ಎಂಬುದು ಸ್ಪಷ್ಟವಾಗುತ್ತದೆ.

ಆದರೆ ಈ ಪ್ರತ್ಯಯ ಅಮಾನವ ನಾಮಪದದೊಂದಿಗೆ ಪ್ರತ್ಯಕ್ಷವಾಗಿ ಬರಲೇಬೇಕು ಎಂಬ ಕಡ್ಡಾಯ ಏನೂ ಇಲ್ಲ. ಅಂದರೆ ಪ್ರತ್ಯಕ್ಷವಾಗಿಯೂ ಬರಬಹುದು; ಪರೋಕ್ಷವಾಗಿಯೂ ಬರಬಹುದು ಎಂದರ್ಥ. ಹೇಗೆ ಬಂದರೂ ಅರ್ಥಕ್ಕೆ ಹಾನಿಯಾಗುವುದಿಲ್ಲ.

ಉದಾ : 1) ರಾಮನ್ ಮರಂ ವೆಟ್ಟಿನಾನ್
2) ರಾಮನ್ ಮರತ್ತೈ ವೆಟ್ಟಿನಾನ್

ಮೇಲಿನ ವಾಕ್ಯಗಳು ದ್ವಿತೀಯ ವಿಭಕ್ತಿ ಪ್ರತ್ಯಯವಾದ -ಐ ಎಂಬುದು ಪರೋಕ್ಷವಾಗಿಯೂ ಪ್ರತ್ಯಕ್ಷವಾಗಿಯೂ ಬರುವುದಕ್ಕೆ ಉದಾಹರಣೆಗಳಾಗಿವೆ. ಈ ಎರಡು ವಾಕ್ಯಗಳೂ ಒಂದೇ ಅರ್ಥವನ್ನು ಕೊಡುವುದರಿಂದ ಅಮಾನವ ನಾಮಪದದೊಂದಿಗೆ ದ್ವಿತೀಯ ವಿಭಕ್ತಿ ಪ್ರತ್ಯಯ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಬರಬಹುದು ಎಂಬುದು ತಿಳಿಯುತ್ತದೆ.

೩) ತೃತೀಯಾ ವಿಭಕ್ತಿ (ಮೂನ್ರಾಂ ವೇಱ್ಱುಮೈ) :

-ಒಡು, -ಆನ್ ಎಂಬುವು ತೃತೀಯಾ ವಿಭಕ್ತಿ ಪ್ರತ್ಯಯಗಳು. ಆದರೆ ವೀರಚೋೞಿಯಂನಲ್ಲಿ -ಆಲ್, -ಒಡು, -ಓಡು ಎಂಬುವು ತೃತೀಯಾ ವಿಭಕ್ತಿ ಪ್ರತ್ಯಯಗಳಾಗಿ ಗುರುತಿಸಲ್ಪಟ್ಟಿವೆ. ನನ್ನೂಲ್‌ನಲ್ಲಿ -ಆನ್, -ಆಲ್, -ಒಡು -ಓಡು ಎಂಬುವುಗಳು ಪ್ರತ್ಯಯಗಳಾಗಿ ಸೂಚಿಸಲಾಗಿವೆ. ಈ ನಾಲ್ಕು ಪ್ರತ್ಯಯಗಳಲ್ಲಿ -ಆನ್ ಮತ್ತು -ಒಡು ಎಂಬುವುಗಳನ್ನು ಮೂಲ ಪ್ರತ್ಯಯಗಳೆಂದೂ -ಆಲ್ ಮತ್ತು -ಓಡು ಎಂಬುವುಗಳನ್ನು ವಿಕೃತ ರೂಪಗಳೆಂದೂ ಹೇಳಬಹುದು. ಈ ಪ್ರತ್ಯಯಗಳು ಸಹವರ್ತಿ ಮತ್ತು ಸಾಧನ ಅರ್ಥಗಳಲ್ಲಿ ಬಳಸಲಾಗಿವೆ.

ಮಧ್ಯ ಕಾಲದಲ್ಲೂ ಆಧುನಿಕ ಕಾಲದಲ್ಲೂ ಈ ಪ್ರತ್ಯಯಗಳ ಪ್ರಯೋಗಕ್ಕೆ ಕೆಲವು ಕಟ್ಟುಪಾಡುಗಳು ಇರುವುದನ್ನು ನೋಡಬಹುದು. ಇವೆರಡು ಕಾಲಗಳಲ್ಲೂ -ಆನ್,-ಆಲ್ ಎಂಬುವು ಸಾಧನ ಅರ್ಥದಲ್ಲೂ -ಒಡು,-ಓಡು ಎಂಬುವು ಸಹವರ್ತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅರ್ಥದಲ್ಲೂ ಬಳಸಲಾಗಿವೆ. ಆದರೆ ಈ ಪ್ರತ್ಯಯಗಳು ಸಂಘ ಕಾಲದಲ್ಲಿ ಯಾವ ಕಟ್ಟುಪಾಡೂ ಇಲ್ಲದೆ ಎರಡು ಅರ್ಥದಲ್ಲೂ ಬಳಕೆಯಾಗಿವೆ.

ಉದಾ : 1. ಮರುಪ್ಪಿನಾನ್ ಕುತ್ತಿ
2. ಕಳಿಱು ತೂಂಗುಕ್ಕೈಯಾನ್ ಓಂಗು ನಡೈಯ
3. ನಾವಾಯ್ ಕಾಲೊಡು ಕರೈಸೇರ
4. ಮೆಯ್ಯಿನ್ ಇಯಱ್ಕೈ ಪುಳ್ಳಿಯೊಡು ನಿಲ್ಲೈಯಲ್

ಮೇಲಿನ ನಿದರ್ಶನಗಳಲ್ಲಿ ಮೊದಲನೆಯ ಎರಡು ವಾಕ್ಯಗಳಲ್ಲಿ-ಆನ್ ಎಂಬುದೂ ಅನಂತರ ಬರುವ ಎರಡು ವಾಕ್ಯಗಳಲ್ಲಿ-ಒಡು ಎಂಬುದೂ ಪ್ರತ್ಯಯಗಳಾಗಿ ಬಂದಿವೆ. -ಆನ್ ಎಂಬ ಪ್ರತ್ಯಯ ಮೊದಲನೆಯ ವಾಕ್ಯದಲ್ಲಿ ಸಾಧನ ಅರ್ಥದಲ್ಲೂ ಎರಡನೆಯ ವಾಕ್ಯದಲ್ಲಿ ಸಹವರ್ತಿ ಅರ್ಥದಲ್ಲೂ ಬರುತ್ತದೆ. ಅಂತೆಯೆ-ಒಡು ಎಂಬ ಪ್ರತ್ಯಯ ಮೂರನೆಯ ವಾಕ್ಯದಲ್ಲಿ ಸಾಧನ ಅರ್ಥದಲ್ಲೂ ನಾಲ್ಕನೆಯ ವಾಕ್ಯದಲ್ಲಿ ಸಹವರ್ತಿ ಅರ್ಥದಲ್ಲೂ ಬರುತ್ತದೆ.

ತೊಲ್ಕಾಪ್ಪಿಯಕ್ಕೆ ವ್ಯಾಖ್ಯಾನ ಬರೆದವರಲ್ಲಿ ನಚ್ಚಿನಾರ್ಕ್ಕಿನಿಯರ್ ಎಂಬವರು ತೃತೀಯಾ ವಿಭಕ್ತಿಯಲ್ಲಿ ಎರಡು ವಿಭಕ್ತಿಗಳಿವೆ ಎಂದೂ ಅವು ಸಾಧನ ವಿಭಕ್ತಿ ಮತ್ತು ಸಹವರ್ತಿ ವಿಭಕ್ತಿ ಎಂದೂ ತಮ್ಮ ಅಭಿಪ್ರಾಯವನ್ನು ಎತ್ತಿ ಹೇಳಿದ್ದಾರೆ. ಆದರೆ ಸೇನಾವರೈಯರ್ ಎಂಬ ವ್ಯಾಖ್ಯಾನಕಾರರು ತೃತೀಯಾ ವಿಭಕ್ತಿ ಒಂದೇ ವಿಭಕ್ತಿ ಎನ್ನುತ್ತಾರೆ. ಇವರು ತೃತೀಯಾ ವಿಭಕ್ತಿ ಒಂದೇ ವಿಭಕ್ತಿ ಎಂಬುದಕ್ಕೆ ಕೆಳಕಂಡ ಎರಡು ಕಾರಣಗಳನ್ನು ಎತ್ತಿ ಹೇಳುತ್ತಾರೆ.

1. ತೃತೀಯಾ ವಿಭಕ್ತಿಯ ಪ್ರತ್ಯಯಗಳು ಸ್ವಚ್ಛಂದ ಪರಿವರ್ತನೆಯಲ್ಲಿ ಬರುವುದು.
2. ಸಂಸ್ಕೃತದಲ್ಲಿ ತೃತೀಯಾ ವಿಭಕ್ತಿ ಒಂದೇ ವಿಭಕ್ತಿಯಾಗಿ ಇರುವುದು.

ಈ ಎರಡು ಕಾರಣಗಳಿಂದ ಸೇನಾವರೈಯರ್ ತೃತೀಯಾ ವಿಭಕ್ತಿ ಒಂದೇ ವಿಭಕ್ತಿ ಎಂದು ಸಾಧಿಸುತ್ತಾರೆ. ಆದರೆ ಇಂದಿನ ಭಾಷಾವಿಜ್ಞಾನಿಗಳು ನಚ್ಚಿನಾರ್ಕ್ಕಿನಿಯರಂತೆಯೇ ತೃತೀಯಾ ವಿಭಕ್ತಿಯಲ್ಲಿ ಎರಡು ವಿಭಕ್ತಿಗಳು ಅಡಗಿರುವುದಾಗಿ ಹೇಳಿ ಅವುಗಳನ್ನು ಸಾಧನ ವಿಭಕ್ತಿ ಮತ್ತು ಸಹವರ್ತಿ ವಿಭಕ್ತಿ ಎಂದು ಹೆಸರಿಸುತ್ತಾರೆ. ಇವರು ತಮ್ಮ ವಾದವನ್ನು ಸಮರ್ಥಿಸುವುದಕ್ಕೆ ಕೆಳಕಂಡ ಎರಡು ಕಾರಣಗಳನ್ನು ಒತ್ತಿಹೇಳುತ್ತಾರೆ.

1. ಸಹವರ್ತಿ ವಿಭಕ್ತಿ ಪ್ರತ್ಯಯವನ್ನು ಸಂಯೋಜಕ ಪ್ರತ್ಯಯದಿಂದ ಸರಳಾನುವಾದ ಮಾಡಬಹುದು ಎಂಬುದು.

ಉದಾ : ರಾಮನೊಡು ಸೀತೈ ವಂದಾಳ್ → ರಾಮನುಂ ಸೀತೈಯುಂ ವಂದನರ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಲ್ಲಿ–ಒಡು ಎಂಬ ಸಹವರ್ತಿ ಪ್ರತ್ಯಯವನ್ನು-ಉಂ ಎಂಬ ಸಂಯೋಜಕ ಪ್ರತ್ಯಯ ದಿಂದ ಸರಳಾನುವಾದ ಮಾಡಿರುವುದನ್ನು ನೋಡಬಹುದು. ಆದರೆ ಸಾಧನ ವಿಭಕ್ತಿ ಪ್ರತ್ಯಯವನ್ನು ಹೀಗೆ ಸರಳಾನುವಾದ ಮಾಡುವುದಕ್ಕೆ ಆಗುವುದಿಲ್ಲ.

2. ಸಾಧನ ವಿಭಕ್ತಿ ಪ್ರತ್ಯಯ ಕರ್ಮಣಿ ಪ್ರಯೋಗದಲ್ಲಿ ಬರುತ್ತದೆ. ಆದರೆ ಸಹವರ್ತಿ ವಿಭಕ್ತಿ ಪ್ರತ್ಯಯ ಕರ್ಮಣಿ ಪ್ರಯೋಗದಲ್ಲಿ ಬರುವುದಿಲ್ಲ.

ಉದಾ : ರಾಮನ್ ಅಂಬಿನಾಲ್ ಕೊಲ್ಲಪ್ಪಟ್ಟಾನ್

ಈ ಕರ್ಮಣಿ ವಾಕ್ಯದಲ್ಲಿ-ಆಲ್ ಎಂಬ ಸಾಧನ ವಿಭಕ್ತಿ ಪ್ರತ್ಯಯ ಬರುತ್ತದೆ. ಹೀಗೆ ಕರ್ಮಣಿ ಪ್ರಯೋಗದಲ್ಲಿ ಸಹವರ್ತಿ ಪ್ರತ್ಯಯವಾದ–ಒಡು ಎಂಬುದನ್ನು ಬಳಸಲಿಕ್ಕೆ ಸಾಧ್ಯವಿಲ್ಲ. ಈ ಎರಡು ಕಾರಣಗಳಿಂದ ತೃತೀಯಾ ವಿಭಕ್ತಿಯಲ್ಲಿ ಎರಡು ವಿಭಕ್ತಿಗಳು ಅಡಗಿರುವುದಾಗಿ ಇಂದಿನ ಭಾಷಾವಿಜ್ಞಾನಿಗಳು ವಾದಿಸುತ್ತಾರೆ.

ತೊಲ್ಕಾಪ್ಪಿಯರ ಕಾಲದಲ್ಲಿ-ಒಡು ಎಂಬ ಪ್ರತ್ಯಯದ ಬಳಕೆಗೆ ಸಂಬಂಧಿಸಿದಂತೆ ಒಂದು ಕಟ್ಟುಪಾಡು ಇತ್ತು. ಅದೇನೆಂದರೆ ಅವರ ಕಾಲದಲ್ಲಿ ಈ ಪ್ರತ್ಯಯ ಗೌರ ವಾರ್ಥಕ ನಾಮಪದದೊಂದಿಗೆ ಮಾತ್ರ ಸೇರಿಸಲಾಗಿದೆ.

ಉದಾ : ಆಸಿರಿಯನೊಡು ಮಾಣವನ್ ವಂದಾನ್

ತೊಲ್ಕಾಪ್ಪಿಯರ ಈ ನಿಯಮದ ಪ್ರಕಾರ–ಒಡು ಎಂಬ ಪ್ರತ್ಯಯವನ್ನು ಅಗೌರವಾರ್ಥಕ ನಾಮಪದದೊಂದಿಗೆ ಸೇರಿಸಬಾರದು. ಆದರೆ ಆಧುನಿಕ ಕಾಲದಲ್ಲಿ ಈ ಪ್ರತ್ಯಯ ಗೌರವ ಮತ್ತು ಅಗೌರವ ನಾಮಪದಗಳೊಂದಿಗೆ ಬಳಸಲ್ಪಡುತ್ತದೆ.

ಆಧುನಿಕ ಭಾಷೆಯಲ್ಲಿ-ಆನ್ ಎಂಬ ಸಾಧನ ವಿಭಕ್ತಿ ಪ್ರತ್ಯಯಕ್ಕೆ ಬದಲಾಗಿ 'ಕೊಂಡು' ಎಂಬ ಪದಪ್ರತ್ಯಯವೂ–ಒಡು ಎಂಬ ಪ್ರತ್ಯಯಕ್ಕೆ ಬದಲಾಗಿ 'ಉಡನ್' ಎಂಬ ಪದಪ್ರತ್ಯಯವೂ ಬಳಸಲ್ಪಡುತ್ತವೆ.

ಉದಾ : 1. ಕತ್ತಿಕೊಂಡು ವೆಟ್ಟಿನಾನ್
2. ರಾಮನುಡನ್ ಸೀತೈ ವಂದಾಳ್

ಈ) ಚತುರ್ಥಿ ವಿಭಕ್ತಿ (ನಾನ್ಕಾಂ ವೇಟ್ರುಮೈ) :

ಚತುರ್ಥಿ ವಿಭಕ್ತಿ ಪ್ರತ್ಯಯ-ಕ್ಕು ಎಂಬುದು. ಇದರ ವಿಕೃತ ರೂಪ–ಕ್ಕ ಎಂಬುದು. –ಕ್ಕ ಎಂಬುದು ಕವನದಲ್ಲಿ ಮಾನವ ನಾಮಪದದೊಂದಿಗೆ ಬರುತ್ತದೆ.

ಉದಾ : ನಂಬಿ ಊರುಕ್ಕುಪ್ ಪೋನಾನ್
ಕಡಿನಿಲೈಯಿನ್ರೇ ಆಸಿರಿಯರ್‌ಕ್ಕ

ಆದರೆ-ಕ್ಕು ಎಂಬ ಪ್ರತ್ಯಯ ಸಾಧಾರಣವಾಗಿ ಎಲ್ಲಾ ನಾಮಪದಗಳೊಂದಿಗೆಯೂ ಬಳಸಲ್ಪಡುತ್ತದೆ. ಇದು ದಿಕ್ಕನ್ನು ಸೂಚಿಸುವ ಅರ್ಥದಲ್ಲಿ ಬರುತ್ತದೆ. ವೀರ ಚೋಳಿಯಂನಲ್ಲಿ 'ಪೊರುಟ್ಟು' ಎಂಬ ಪದಪ್ರತ್ಯಯವೂ ಪ್ರತ್ಯಯವಾಗಿ ಸೂಚಿಸ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲಾಗಿದೆ. ಆಧುನಿಕ ಕಾಲದ ಭಾಷೆಯಲ್ಲಿ-ಕ್ಕು ಮತ್ತು ಪೊರುಟ್ಟು ಎಂಬ ಎರಡೂ ಪ್ರತ್ಯಯಗಳಾಗಿ ಬಳಸಲಾಗುತ್ತವೆ.

ಉ) ಪಂಚಮೀ ವಿಭಕ್ತಿ (ಐಂದಾಂ ವೇಱ್ಱುಮೈ) :

ಪಂಚಮೀ ವಿಭಕ್ತಿಯ ಪ್ರತ್ಯಯ-ಇನ್ ಎಂಬುದು. ಇದು ಹೋಲಿಕೆಯ ಅರ್ಥದಲ್ಲಿ ಹೆಚ್ಚಾಗಿಯೂ ಇಂದ ಎಂಬ ಅರ್ಥದಲ್ಲಿ ಕ್ವಚಿತಾಗಿಯೂ ಉಪಯೋಗವಾಗಿದೆ.

ಉದಾ : 1. ರಾಮನಿನ್ ಉಯರಮಾನವನ್ ಕಣ್ಣನ್
2. ಮಲೈಯಿನ್ ವೀಟ್ ಅರುವಿ

ಈ ಉದಾಹರಣೆಗಳಲ್ಲಿ-ಇನ್ ಎಂಬ ಪ್ರತ್ಯಯ ಕ್ರಮವಾಗಿ ಹೋಲಿಕೆಯ ಅರ್ಥದಲ್ಲೂ ಇಂದ ಎಂಬ ಅರ್ಥದಲ್ಲೂ ಬಳಸಲಾಗಿದೆ.

ಡಾ|| ಕಾಲ್ಡ್‌ವೆಲ್-ಇನ್ ಎಂಬ ಪ್ರತ್ಯಯವೇ ಪಂಚಮೀ ಮತ್ತು ಸಪ್ತಮಿ ವಿಭಕ್ತಿ ಎರಡರಲ್ಲೂ ಬರುವುದರಿಂದ ಇವು ಎರಡನ್ನೂ ಬೇರೆ ಬೇರೆ ವಿಭಕ್ತಿ ಎಂದು ಪರಿಗಣಿಸಬೇಕಾಗಿಲ್ಲ ಎಂದೂ ಎರಡೂ ಒಂದೇ ವಿಭಕ್ತಿಯೆಂದೂ ವಾದಿಸಿದ್ದಾರೆ.

ಉದಾ : 1. ಮಲೈಯಿನ್ ಅರುವಿ ವಿಟುಂದದು
'The water-falls fell from the mountain'
2. ಮಲೈಯಿನ್ ಅರುವಿ ಇರುಂದುದು
'The water-falls was in the mountain'

ಮೇಲಿನ ವಾಕ್ಯಗಳಲ್ಲಿ-ಇನ್ ಎಂಬ ಪ್ರತ್ಯಯ ಬರುವುದನ್ನು ನೋಡಬಹುದು. ಆದರೆ ಈ ಎರಡು ವಾಕ್ಯಗಳ ಅರ್ಥಗಳು ವ್ಯತ್ಯಾಸವಾಗುತ್ತವೆ. ಈ ಅರ್ಥ ವ್ಯತ್ಯಾಸಕ್ಕೆ ಮೇಲಿನ ವಾಕ್ಯಗಳಲ್ಲಿ ಬರುವ-ಇನ್ ಎಂಬ ಪ್ರತ್ಯಯ ಕಾರಣವಲ್ಲ ಎಂದೂ ಆ ಪ್ರತ್ಯಯದ ಮುಂದೆ ಬರುವ ಕ್ರಿಯಾಪದಗಳೇ ಕಾರಣವಾಗುತ್ತವೆಎಂದೂ ಕಾಲ್ಡ್‌ವೆಲ್ ಹೇಳಿದ್ದಾರೆ. ಅಂದರೆ ಈ ಎರಡು ವಾಕ್ಯಗಳಲ್ಲೂ ಕ್ರಿಯಾಪದಗಳು ಬೇರೆ ಬೇರೆಯಾಗಿ ಬರುವ ಕಾರಣದಿಂದ ಅವುಗಳ ಅರ್ಥಗಳೂ ಬೇರೆ ಬೇರೆಯಾಗಿವೆ ಎಂದರ್ಥ. ಆದ್ದರಿಂದ ಇವುಗಳನ್ನು ಎರಡು ವಿಭಕ್ತಿಗಳಾಗಿ ಪರಿಗಣಿಸಬಾರದು ಎಂಬುದು ಕಾಲ್ಡ್‌ವೆಲ್ ಅವರ ವಾದ.

ಆದರೆ ಈ ಎರಡು ವಿಭಕ್ತಿಯಲ್ಲೂ ಬರುವ ಪ್ರತ್ಯಯವಾದ-ಇನ್ ಎಂಬುದರ ರೂಪ ಒಂದೇಯಾಗಿದ್ದರೂ ಅವು ಬೇರೆ ಬೇರೆ ವಿಭಕ್ತಿಗಳೇ ಎಂಬುದು ಇಂದಿನ ಭಾಷಾ ತಜ್ಞರ ಅಭಿಪ್ರಾಯ. ಇವರು ತಮ್ಮ ವಾದವನ್ನು ಸಮರ್ಥಿಸುವುದಕ್ಕೆ ಪಂಚಮೀ ವಿಭಕ್ತಿ ಪ್ರತ್ಯಯವಾದ-ಇನ್ ಎಂಬುದು ಎಲ್ಲಾ ನಾಮಪದಗಳೊಂದಿಗೆಯೂ ಸೇರಿ ಬರುವುದನ್ನೂ ಸಪ್ತಮಿ ವಿಭಕ್ತಿ ಪ್ರತ್ಯಯವಾದ ಇನ್ ಎಂಬುದು ಅಮಾನವ ನಾಮಪದದೊಂದಿಗೆ ಮಾತ್ರ ಸೇರಿಬರುವುದನ್ನೂ ಎತ್ತಿತೋರಿಸುತ್ತಾರೆ.

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಉದಾ : 1. ಅವನಿನ್ ಪೆರಿಯವನ್

2. ಮಲೈಯಿನ್ ಉಯರಮಾನದು

ಇವು ಪಂಚಮೀ ವಿಭಕ್ತಿ ಪ್ರತ್ಯಯವಾದ–ಇನ್ ಎಂಬುದು ಮಾನವ ಮತ್ತು ಅಮಾನವ ನಾಮಪದದೊಂದಿಗೆ ಬರುವುದಕ್ಕೆ ಉದಾಹರಣೆಗಳು. ಈ ಎರಡು ವಾಕ್ಯಗಳೂ ಸರಿಯಾದ ಅರ್ಥವನ್ನು ವ್ಯಕ್ತಪಡಿಸುತ್ತವೆ. ಆದರೆ ಸಪ್ತಮಿ ವಿಭಕ್ತಿ ಪ್ರತ್ಯಯವಾದ–ಇನ್ ಎಂಬುದು ಕೆಳಕಂಡ ಉದಾಹರಣೆಗಳಲ್ಲಿ ಅಮಾನವ ನಾಮಪದದೊಂದಿಗೆ ಬರುವಾಗ ಸರಿಯಾದ ಅರ್ಥವನ್ನೂ ಮಾನವ ನಾಮಪದದೊಂದಿಗೆ ಬರುವಾಗ ಸಲ್ಲದ ಅರ್ಥವನ್ನೂ ಕೊಡುವುದನ್ನು ನೋಡಬಹುದು.

ಉದಾ : 1. ಮಲೈಯಿನ್ ಅರುವಿ ಇರುಂದದು

*2. ಅವನಿನ್ ಪೆಟ್ಟಿ ಇರುಂದದು

ನನ್ನೂಲಾರರು ಈ ಪಂಚಮೀ ವಿಭಕ್ತಿಗೆ-ಇನ್ ಎಂಬುದರೊಂದಿಗೆ-ಇಲ್ ಎಂಬುದನ್ನೂ ವಿಭಕ್ತಿ ಪ್ರತ್ಯಯವಾಗಿ ಸೂಚಿಸಿದ್ದಾರೆ. ವೀರಚೋೞಿಯಂ ಎಂಬ ವ್ಯಾಕರಣ ಇವುಗಳೊಂದಿಗೆ–ನಿನ್ರುಂ ಎಂಬುದನ್ನು ವಿಭಕ್ತಿ ಪ್ರತ್ಯಯವಾಗಿ ಒತ್ತಿ ಹೇಳಿದೆ. ಆಧುನಿಕ ಕಾಲದ ತಮಿೞು ಭಾಷೆಯಲ್ಲಿ-ಐವಿಡ ಹಾಗೂ–ಇಲಿರುಂದು ಎಂಬುವು ಪ್ರತ್ಯಯಗಳು.

ಉದಾ : 1. ರಾಮನೈವಿಡ ಪೆರಿಯವನ್

2. ಊರಿಲಿರುಂದು ವನ್ದಾನ್

ಉ) ಷಷ್ಠಿ ವಿಭಕ್ತಿ (ಆಱಾಂ ವೇಱ್ಱುಮೈ) :

ತೊಲ್ಕಾಪ್ಪಿಯರ್-ಅದು ಎಂಬುದನ್ನು ಷಷ್ಠಿವಿಭಕ್ತಿ ಪ್ರತ್ಯಯವಾಗಿ ಗುರುತಿಸಿದ್ದಾರೆ. ಈ ಪ್ರತ್ಯಯ ಒಡೆತನ ಎಂಬರ್ಥದಲ್ಲಿ ಬರುವುದಾಗಿಯೂ ಹೇಳಿದ್ದಾರೆ. ಆದರೆ ನನ್ನೂಲಾರರು-ಅದು,-ಅ ಎಂಬ ಎರಡು ಪ್ರತ್ಯಯಗಳನ್ನು-ಅದು ಎಂಬುದರೊಂದಿಗೆ ವಿಭಕ್ತಿ ಪ್ರತ್ಯಯಗಳಾಗಿ ಒತ್ತಿ ಹೇಳಿದ್ದಾರೆ. ಇವುಗಳಲ್ಲಿ-ಅದು,–ಆದು ಎಂಬ ಪ್ರತ್ಯಯಗಳು ಏಕವಚನ ನಾಮಪದದೊಂದಿಗೆಯೂ–ಅ ಎಂಬ ಪ್ರತ್ಯಯ ಬಹುವಚನ ನಾಮಪದದೊಂದಿಗೆಯೂ ಬರುವುದಾಗಿ ವಿವರಿಸಿದ್ದಾರೆ.

ಉದಾ : 1. ಎನದು ಕೈ

2. ಎನಾದು ಕೈ

3. ನಮ್ಮ ವೀಡು

ಆಧುನಿಕ ತಮಿೞು ಭಾಷೆಯಲ್ಲಿ ಈ ವಿಭಕ್ತಿ ಪ್ರತ್ಯಯಗಳಲ್ಲಿ –ಅದು ಮತ್ತು –ಅ ಎಂಬುವು ಬಳಕೆಯಲ್ಲಿಲ್ಲ. ಇವುಗಳಿಗೆ ಬದಲಾಗಿ ಉಡೈಯ ಎಂಬ ಪದ ಪ್ರತ್ಯಯವೇ ಹೆಚ್ಚಾಗಿ ಬಳಸಲಾಗಿದೆ. ಈ ಪದ ಪ್ರತ್ಯಯವನ್ನೇ ವೀರಚೋೞಿಯಂ ಉಡೈಯಆನ್, ಉಡೈಯಆಳ್, ಉಡೈಯಆರ್, ಉಡೈಯದು, ಉಡೈಯನ ಎಂಬ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಹಲವಾರು ಪ್ರತ್ಯಯಗಳಾಗಿ ಸೂಚಿಸಿದೆ. ಆಧುನಿಕ ತಮಿಳು ಭಾಷೆಯಲ್ಲಿ ಕೆಲವೊಮ್ಮೆ –ಇನ್ ಎಂಬ ಪ್ರತ್ಯಯು ಷಷ್ಠಿ ವಿಭಕ್ತಿ ಪ್ರತ್ಯಯವಾಗಿ ಬರುತ್ತದೆ.

ಉದಾ : 1. ಎನ್ನುಡೈಯ ಕೈ
2. ಎನದು ಕೈ
3. ರಾಮನಿನ್ ಪೆಟ್ಟಿ

ಏ) ಸಪ್ತಮಿ ವಿಭಕ್ತಿ (ಏಟಾಂ ವೇಟ್ರುಮೈ ಅಥವಾ ಇಡವೇಟ್ರುಮೈ) :

ಸಪ್ತಮಿ ವಿಭಕ್ತಿಗೆ ಹಲವಾರು ಪ್ರತ್ಯಯಗಳು ಇದ್ದರೂ -ಕಣ್ ಎಂಬ ಪ್ರತ್ಯಯ ವನ್ನು ಇದರ ಪ್ರತ್ಯಯವಾಗಿ ತೊಲ್ಕಾಪ್ಪಿಯರ್ ಸೂಚಿಸಿದ್ದಾರೆ. ಹಲವಾರು ಪ್ರತ್ಯ ಯಗಳಲ್ಲಿ ಈ ಪ್ರತ್ಯಯಕ್ಕೆ ತೊಲ್ಕಾಪ್ಪಿಯರ್ ಮುಖ್ಯತ್ತ್ವ ಕೊಡುವುದಕ್ಕೆ ಕಾರಣ ಈ ಪ್ರತ್ಯಯು ಎಲ್ಲಾ ನಾಮಪದಗಳೊಂದಿಗೆಯೂ ಬರುವುದೇ ಆಗಿದೆ. ಇತರ ಪ್ರತ್ಯ ಯಗಳು ಇದರಂತೆ ಎಲ್ಲಾ ನಾಮಪದಗಳೊಂದಿಗೆಯೂ ಬರುವುದಿಲ್ಲ.

ಉದಾ 1. ವೀಟ್ಟಿನ್‌ಕಣ್ ಇರುಂದಾನ್
2. ಅವನ್‌ಕಣ್ ವಿಡಲ್

ಇದರೊಂದಿಗೆ –ಕಾಲ್, –ಪುಱಂ, –ಅಗಂ, –ಉಳ್, –ಉಟ್ರೈ, –ಕೀಟ್, –ಮೇಲ್, –ಪಿನ್, –ಸಾರ್, –ಅಯಲ್, –ಪುಡೈ, –ತೇ, –ವಗೈ, –ಮುನ್, –ಇಡೈ, –ಕಡೈ, –ತಲೈ, –ವಲಂ, –ಇಡಂ ಎಂಬ ಪ್ರತ್ಯಯಗಳನ್ನೂ ಸಪ್ತಮಿ ವಿಭಕ್ತಿ ಪ್ರತ್ಯಯಗಳಾಗಿ ತಿಳಿಸಿದ್ದಾರೆ.

ನನ್ನೂಲಾರರು ತೊಲ್ಕಾಪ್ಪಿಯರು ಹೇಳುವ ಪ್ರತ್ಯಯಗಳೊಂದಿಗೆ –ಮುದಲ್ –ಪಾಡು, –ಅಲೈ, –ವಱಿ, –ಉೞಿ, –ಉಳಿ, –ಇಲ್, –ವಾಯ್, –ತಿಸೈ, -ವಯಿನ್ ಮುಂತಾದ ಪ್ರತ್ಯಯಗಳನ್ನು ಸಪ್ತಮಿ ವಿಭಕ್ತಿ ಪ್ರತ್ಯಯಗಳಾಗಿ ಸೂಚಿಸಿದ್ದಾರೆ. ಪುತ್ತಮಿತ್ತಿರನಾರ್ ಎನ್ನುವ ವೈಯಾಕರಣಿ –ಕೇ. –ಪಕ್ಕಲ್ ಎಂಬುವುಗಳನ್ನು ಸಪ್ತಮಿ ವಿಭಕ್ತಿಯ ಪ್ರತ್ಯಯಗಳಾಗಿ ಎತ್ತಿಹೇಳಿದ್ದಾರೆ.

ಆಧುನಿಕ ತಮಿಳು ಭಾಷೆಯಲ್ಲಿ –ಇಲ್, –ಇಡಂ. -ಕಣ್ ಎಂಬ ಪ್ರತ್ಯಯಗಳೇ ಸಹಜವಾಗಿ ಬಳಕೆಯಾಗುತ್ತವೆ.

ಐ) ಸಂಬೋಧನಾ ವಿಭಕ್ತಿ (ಎಟ್ಟಾಂ ವೇಟ್ರುಮೈ ಅಥವಾ ವಿಳಿವೇಟ್ರುಮೈ)

–ಆ, –ಏ, -ಓ ಎಂಬುವುಗಳನ್ನು ಸಂಬೋಧನಾವಿಭಕ್ತಿ ಪ್ರತ್ಯಯಗಳಾಗಿ ವ್ಯಾಕರಣಕಾರರು ಸೂಚಿಸಿದ್ದಾರೆ. ಇವುಗಳೊಂದಿಗೆ -ಓಲ್, –ಓಯ್, –ಕಾಳ್ ಮುಂತಾದವುಗಳನ್ನು ವೀರಚೋೞಿಯಂ ಎಂಬ ವ್ಯಾಕರಣ ಒತ್ತಿ ಹೇಳಿದೆ.

ಮೇಲೆ ಹೇಳಿದ ವಿವರಣೆಗಳಿಂದ ತಿಳಿದುಬರುವ ವಿಭಕ್ತಿ ಪ್ರತ್ಯಯಗಳ ಬದಲಾ ವಣೆಗಳನ್ನು ಕೆಳಕಂಡ ಪಟ್ಟಿ ಸ್ಪಷ್ಟವಾಗಿ ತಿಳಿಸುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಭಕ್ತಿಗಳು	ಪ್ರಾಚೀನಕಾಲ	ಮಧ್ಯಕಾಲ	ಆಧುನಿಕಕಾಲ
ಪ್ರಥಮ	ϕ	ϕ	ϕ
ದ್ವಿತೀಯ	-ಐ, -ಅ	-ಐ	-ಐ
ತೃತೀಯಾ	-ಆನ್, -ಒಡು	-ಆಲ್, -ಆನ್, -ಒಡು, -ಓಡು	-ಆಲ್, ಕೊಂಡು, -ಒಡು, ಉಡನ್, -ಓಡು
ಚತುರ್ಥಿ	-ಕ್ಕು, -ಕ್ಕ	-ಕ್ಕು, ಪೊರುಟ್ಟು	-ಕ್ಕು, ಪೊರುಟ್ಟು
ಪಂಚಮೀ	-ಇನ್	-ಇಲ್, -ಇನ್, -ನಿನ್ನುಂ	-ಐವಿಡ, -ಇಲಿರುಂದು
ಷಷ್ಠಿ	-ಅದು	-ಅದು, -ಆದು, - ಅ	-ಅದು, ಉಡೈಯ, -ಇನ್
ಸಪ್ತಮಿ	-ಕಾಣ್, -ಕಾಲ್, -ಪುಱಂ, -ಅಗಂ, -ಉಳ್ -ಉಟ್ಟೈ, -ಕೀೞ್, -ಮೇಲ್, -ಪಿನ್, -ಸಾರ್, -ಅಯಲ್, -ಪುಡೈ, -ತೇ, -ವಗೈ, -ಮುನ್, -ಇಡೈ, -ಕಡೈ, -ತಲೈ, _ವಲಂ, _ಇಡಂ	ಪ್ರಾಚೀನ ಕಾಲದ ಪ್ರತ್ಯಯಗಳೊಂದಿಗೆ -ಮುಂದಲ್, -ಪಾಡು, -ಅಳೈ, -ವೞಿ -ಉೞಿ, -ಉಳಿ, -ವಾಯ್, -ತಿಸೈ. -ವಯಿನ್, -ಕೇ, -ಪಕ್ಕಲ್	-ಇಲ್, -ಇಡಂ, -ಕಣ್
ಸಂಬೋಧನಾ	-ಏ, -ಓ, -ಆ	-ಏ, -ಓ, -ಈ, -ಓಲ್, -ಓಯ್, -ಕಾಳ್	-ಆ, -ಏ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೧೬. ಕ್ರಿಯಾಪದಗಳ ರಚನೆ ಮತ್ತು ವರ್ಗೀಕರಣ

ಸಾಮಾನ್ಯವಾಗಿ ಕ್ರಿಯಾಪದಗಳನ್ನು ಅರ್ಥ ಮತ್ತು ರಚನೆಯ ಹಿನ್ನೆಲೆಯಲ್ಲಿ ವಿದ್ವಾಂಸರು ವಿವರಿಸುತ್ತಾರೆ.

ಅರ್ಥಾತ್ಮಕ ವಿವರಣೆ :

ಒಂದು ಕ್ರಿಯೆಯನ್ನು ಸೂಚಿಸುವ ಪದವನ್ನು ಕ್ರಿಯಾಪದ ಎನ್ನುತ್ತಾರೆ.

ರಚನಾತ್ಮಕ ವಿವರಣೆ :

ವಿಭಕ್ತಿ ಪ್ರತ್ಯಯಗಳೊಂದಿಗೆ ಸೇರದೆ ಕಾಲಸೂಚಕ ಪ್ರತ್ಯಯಗಳನ್ನು ಪಡೆದು ಕೊಂಡು ಬರುವ ಪದಕ್ಕೆ ಮಾತ್ರ ಕ್ರಿಯಾಪದ ಎಂದು ಹೆಸರು.

ಸಾಮಾನ್ಯ ವಿವರಣೆ :

ಕ್ರಿಯಾಪದ ಎಂಬುದು ವಿಭಕ್ತಿ ಪ್ರತ್ಯಯಗಳೊಂದಿಗೆ ಸೇರದೆ ಕಾಲಸೂಚಕ ಪ್ರತ್ಯಯಗಳನ್ನು ಪಡೆದುಕೊಂಡು ಬಂದು ಒಂದು ಕ್ರಿಯೆಯನ್ನು ಸೂಚಿಸುವುದು.

ಕ್ರಿಯಾಪದಗಳ ಬಗೆಗಳು :

ಕ್ರಿಯಾಪದಗಳನ್ನು ಎರಡು ಬಗೆಯಾಗಿ ವಿಭಾಗಿಸುತ್ತಾರೆ. ಅವು ಕಾಲಸೂಚಕ ಕ್ರಿಯಾಪದ ಮತ್ತು ಲಕ್ಷಿತ ಕ್ರಿಯಾಪದ.

ಕಾಲಸೂಚಕ ಕ್ರಿಯಾಪದ :

ಕಾಲವನ್ನು ಪ್ರತ್ಯಕ್ಷವಾಗಿ ತೋರಿಸುವ ಕ್ರಿಯಾಪದ ಕಾಲಸೂಚಕ ಕ್ರಿಯಾಪದ.

ಉದಾ : ವ — ನ್ತ್ — ಆನ್

ಇದರಲ್ಲಿ-ನ್ತ್-ಎಂಬ ಕಾಲಸೂಚಕ ಪ್ರತ್ಯಯ ಪ್ರತ್ಯಕ್ಷವಾಗಿ ಬರುವುದನ್ನು ನೋಡ ಬಹುದು. ಆದ್ದರಿಂದ ಈ ಕ್ರಿಯಾಪದ ಕಾಲಸೂಚಕ ಕ್ರಿಯಾಪದವಾಗುತ್ತದೆ.

ಲಕ್ಷಿತ ಕ್ರಿಯಾಪದ :

ಕಾಲವನ್ನು ಪರೋಕ್ಷವಾಗಿ ಸೂಚಿಸುವ ಕ್ರಿಯಾಪದ ಲಕ್ಷಿತ ಕ್ರಿಯಾಪದ. ಈ ಬಗೆಯ ಕ್ರಿಯಾಪದಗಳಲ್ಲಿ ಕಾಲಸೂಚಕ ಪ್ರತ್ಯಯ ಪ್ರತ್ಯಕ್ಷವಾಗಿ ಬಂದು ಒಂದು ಕಾಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವನ್ನು ನಿರ್ದಿಷ್ಟವಾಗಿ ಸೂಚಿಸದಿರುವುದರಿಂದ ಇವು ಮೂರು ಕಾಲವನ್ನೂ ಸೂಚಿಸುವಂಶಾಗಿವೆ.

ಉದಾ : ಕರಿ—ಅನ್

ಇದರಲ್ಲಿ ಕಾಲಸೂಚಕ ಪ್ರತ್ಯಯು ಯಾವುದೂ ಇಲ್ಲ. ಆದರೆ ಇದರ ಹಿಂದೆ ಮೂರು ಕಾಲವನ್ನೂ ಸೂಚಿಸುವ ಕಾಲಸೂಚಕ ಪದವನ್ನು ಬಳಸಿ.

ನಿನ್ನೆ ಕರಿಯಂನ್
ಇಂದು ಕರಿಯುನ್
ನಾಳೆ ಕರಿಯುನ್

ಎಂದು ಹೇಳಬಹುದು.

ಕಾಲಸೂಚಕ ಕ್ರಿಯಾಪದಗಳ ಬಗೆಗಳು :

ಕಾಲಸೂಚಕ ಕಿಯಾಪದಗಳು ಪೂರ್ಣ ಕ್ರಿಯಾಪದ ಮತ್ತು ಅಪೂರ್ಣ ಕ್ರಿಯಾಪದ ಎಂದು ಎರಡು ವಿಧವಾಗುತ್ತವೆ.

ಪೂರ್ಣ ಕ್ರಿಯಾಪದ :

ಪೂರ್ಣ ಕ್ರಿಯಾಪದ ಎನ್ನುವುದು ಲಿಂಗಪ್ರತ್ಯಯುವನ್ನು ಪದದ ಅಂತ್ಯದಲ್ಲಿ ಹೊಂದಿ ಬರುವುದು ; ಅರ್ಥವನ್ನು ಪೂರ್ಣಗೊಳಿಸುವಂತದ್ದು.

ಉದಾ : ವ-ನ್ತ್-ಅನ್

ಇದರಲ್ಲಿ-ಅನ್ ಎಂಬ ಲಿಂಗಪ್ರತ್ಯಯು ಅಂತ್ಯದಲ್ಲಿ ಬರುತ್ತದೆ ; ಅರ್ಥವೂ ಪೂರ್ಣವಾಗುತ್ತದೆ.

ಪೂರ್ಣ ಕ್ರಿಯಾಪದದ ರಚನೆ :

ಪೂರ್ಣ ಕ್ರಿಯಾದದಲ್ಲಿ ಮೂರು ಅಂಶಗಳಿವೆ. ಅವು ಕ್ರಿಯಾಧಾತು, ಕಾಲಸೂಚಕ ಪ್ರತ್ಯಯು ಮತ್ತು ಲಿಂಗಪ್ರತ್ಯಯು.

ಪೂ.ಕ್ರಿ.ಪ = ಕ್ರಿ.ಧಾ. + ಕಾ.ಸೂ.ಪ್ರ. + ಲಿ.ಪ್ರ.

ಉದಾ : ವ-ನ್ತ್-ಅನ್

ಇದರಲ್ಲಿ ವ-ಎಂಬುದು ಕ್ರಿಯಾಧಾತು;-ನ್ತ್-ಎಂಬುದು ಕಾಲಸೂಚಕ ಪ್ರತ್ಯಯು ; -ಅನ್ ಎಂಬುದು ಲಿಂಗಪ್ರತ್ಯಯು. ಹೀಗೆ ಈ ಮೂರು ಅಂಶಗಳನ್ನೊಳಗೊಂಡು ಬರುವ ಕ್ರಿಯಾಪದಗಳು ಪೂರ್ಣ ಕ್ರಿಯಾಪದಗಳಾಗುತ್ತವೆ.

ಕ್ರಿಯಾಧಾತು :

ಕ್ರಿಯಾಪದಗಳ ಧಾತುಗಳನ್ನು ತನ್‌ವಿನ್ನೈಧಾತು ಮತ್ತು ಪಿಐವಿನ್ನೈಧಾತು ಎಂದು ಎರಡು ವಿಧವಾಗಿ ವಿಭಾಗಿಸಬಹುದು.

CC-0. In Public Domain. Gurukul Kangri Collection, Haridwar

ತನ್‌ವಿನೈ ಧಾತು :

ತಾನೇ ಅಥವಾ ಕರ್ತೃವೇ ಮಾಡುವ ಕ್ರಿಯೆಯನ್ನು ಸೂಚಿಸುವ ಧಾತುವಿಗೆ ತನ್‌ವಿನೈ ಧಾತು ಎಂದು ಹೆಸರು.

ಉದಾ : ಅವನ್ ನಡಂದಾನ್

ಈ ವಾಕ್ಯದಲ್ಲಿ ಬರುವ ನಡಂದಾನ್ ಎನ್ನುವ ಪೂರ್ಣ ಕ್ರಿಯಾಪದದ ಧಾತುವಾದ ನಡ-ಎಂಬುದು ತನ್‌ವಿನೈ ಧಾತುವಾಗುತ್ತದೆ. ಏಕೆಂದರೆ ನಡೆಯುವ ಕ್ರಿಯೆಯನ್ನು ಈ ವಾಕ್ಯದಲ್ಲಿ ಬರುವ ಅವನ್ ಎನ್ನುವ ಕರ್ತೃವೇ ಮಾಡುತ್ತದೆ

ಪಿಱವಿನೈ ಧಾತು :

ಬೇರೆಯವರಿಂದ ಮಾಡಿಸಲ್ಪಡುವ ಕ್ರಿಯೆಯನ್ನು ಗುರುತಿಸುವ ಧಾತುವಿಗೆ ಪಿಱವಿನೈ ಧಾತು ಎಂದು ಹೆಸರು.

ಉದಾ : ಅವನ್ ನಡತ್ತಿನಾನ್

ಈ ವಾಕ್ಯದಲ್ಲಿ ಬರುವ ಪೂರ್ಣ ಕ್ರಿಯಾಪದವಾದ ನಡತ್ತಿನಾನ್ ಎಂಬುದರ ಧಾತು 'ನಡತ್ತು-' ಎಂಬುದು. ಇದು ಪಿಱವಿನೈ ಧಾತು. ಏಕೆಂದರೆ ಈ ವಾಕ್ಯದಲ್ಲಿ ಬರುವ ಕರ್ತೃ ಅವನ್ ಎಂಬುದು ನಡೆಯುವ ಕ್ರಿಯೆಯನ್ನು ಮಾಡುವುದಿಲ್ಲ ; ಬೇರೊಬ್ಬನೇ ಆ ಕ್ರಿಯೆಯನ್ನು ಮಾಡುವವನು. ಈ ವಾಕ್ಯದಲ್ಲಿ ಬರುವ ಅವನು ಎಂಬ ಕರ್ತೃ ಬೇರೊಬ್ಬನು ನಡೆಯುವುದಕ್ಕೆ ಕಾರಣವಾಗಿದ್ದಾನೆ ಅಷ್ಟೇ. ಆದ್ದರಿಂದ ನಡತ್ತು-ಎನ್ನುವ ಧಾತು ಪಿಱವಿನೈ ಧಾತುವಾಗುತ್ತದೆ.

ಎಲ್ಲಾ ತನ್‌ವಿನೈ ಧಾತುಗಳನ್ನೂ ಪಿಱವಿನೈ ಧಾತುಗಳಾಗಿ ಬದಲಾಯಿಸ ಬಹುದು.

ಪಿಱವಿನೈ ಧಾತುಗಳನ್ನು ರಚಿಸುವ ವಿಧಾನಗಳು :

ತನ್‌ವಿನೈ ಧಾತುಗಳಿಂದ ಪಿಱವಿನೈ ಧಾತುಗಳು ನಾಲ್ಕು ವಿಧಗಳಲ್ಲಿ ರಚಿತ ವಾಗುತ್ತವೆ.

ಅ) ತನ್‌ವಿನೈ ಧಾತುಗಳೊಂದಿಗೆ ಪಿಱವಿನೈ ಪ್ರತ್ಯಯವಾದ-ತ್ತ್-ಎಂಬುದನ್ನು ಸೇರಿಸಿ ಪಿಱವಿನೈ ಧಾತಗಳನ್ನು ರಚಿಸಬಹುದು.

ಉದಾ : ನಡ + ತ್ತ್ > ನಡತ್ತ್

ಮಲರ್ + ತ್ತ್ > ಮಲರ್‌ತ್ತ್

---

* ಕನ್ನಡದಲ್ಲಿ ಬರುವ ಅಕರ್ಮಕ, ಸಕರ್ಮಕ ಎಂಬ ಪದಗಳಿಗೂ ತಮಿಳಿನ ತನ್‌ವಿನೈ, ಪಿಱವಿನೈ ಎಂಬ ಪದಗಳಿಗೂ ವ್ಯತ್ಯಾಸಗಳು ಇರುವುದರಿಂದ ಇಲ್ಲಿ ತಮಿಳು ಪದಗಳನ್ನೇ ಬಳಸ ಲಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆ) ಕೆಲವು ತನ್‌ವಿನೈ ಧಾತುಗಳ ಅಂತ್ಯದಲ್ಲಿ ಬರುವ ಸ್ಪರ್ಶಧ್ವನಿಯನ್ನು ಸಜಾತೀಯ ಸಂಯುಕ್ತಾಕ್ಷರಗಳಾಗಿ ಮಾಡುವುದರಿಂದ ಪಿಐವಿನೈ ಧಾತುಗಳನ್ನು ರಚಿಸ ಬಹುದು.

ಉದಾ : ಪಟಿಕು > ಪಟಿಕ್ಕು
ಆಟು > ಆಟ್ಟು
ಕರುಕು > ಕರುಕ್ಕು

ಇ) ಕೆಲವು ತನ್‌ವಿನೈ ಧಾತುಗಳ ಅಂತ್ಯದಲ್ಲಿ ಬರುವ ಅನುನಾಸಿಕ ಮತ್ತು ಸ್ಪರ್ಶ ಧ್ವನಿಗಳನ್ನು ಸಜಾತೀಯ ಸಂಯುಕ್ತ ಸ್ಪರ್ಶ ಧ್ವನಿಗಳಾಗಿ ಬದಲಾಯಿಸಿದರೆ ಅವು ಪಿಐವಿನೈ ಧಾತುಗಳಾಗುತ್ತವೆ.

ಉದಾ : ತಿರುಮ್ಬು > ತಿರುಪ್ಪು
ಅಡಂಕು > ಅಡಕ್ಕು
ತಿರುನ್ದು > ತಿರುತ್ತು

ಈ) ಕೆಲವು ಕ್ರಿಯಾಪದಗಳು ಇವೆರಡಕ್ಕೂ ಒಂದೇ ವಿಧವಾದ ಧಾತುವನ್ನೇ ಪಡೆದಿರುತ್ತವೆ.

ಉದಾ : ಆಟಿ (ತನ್‌ವಿನೈ)
ಆಟಿ (ಪಿಐವಿನೈ)

ಆದರೆ ಇವೆರಡೂ ಪೂರ್ವಕಾಲಿಕ ಕೃದಂತ ಪ್ರತ್ಯಯವಾದ-ಅ ಎಂಬುದರೊಂದಿಗೆ ಸೇರಿಬರುವಾಗ ಬೇರೆ ಬೇರೆ ರೀತಿಯಲ್ಲಿ ಬರುತ್ತವೆ. ತನ್‌ವಿನೈ ಧಾತುವಾದ ಆಟಿ ಎಂಬುದರೊಂದಿಗೆ-ಅ ಎಂಬುದನ್ನು ಸೇರಿಸುವಾಗ ಆಟಿಯ ಎಂದೂ ಪಿಐವಿನೈ ಧಾತು ವಾದ ಆಟಿ ಎಂಬುದರೊಂದಿಗೆ-ಅ ಎಂಬುದನ್ನು ಸೇರಿಸುವಾಗ ಆಟಿಕ್ಕ ಎಂದೂ ಬರುತ್ತದೆ.

ಉದಾ : ಆಟಿ + ಅ > ಆಟಿಯ
ಆಟಿ + ಅ > ಆಟಿಕ್ಕ

ಕಾಲಸೂಚಕ ಪ್ರತ್ಯಯಗಳು :

ಕಾಲವನ್ನು ಸೂಚಿಸುವ ಪ್ರತ್ಯಯಗಳನ್ನು ಕಾಲಸೂಚಕ ಪ್ರತ್ಯಯಗಳು ಎನ್ನ ಬಹುದು. ತಮಿಳಿನಲ್ಲಿ ವರ್ತಮಾನಕಾಲ, ಭೂತಕಾಲ, ಭವಿಷ್ಯತ್‌ಕಾಲ ಎಂಬ ಮೂರು ವಿಧವಾದ ಕಾಲಸೂಚಕ ಪ್ರತ್ಯಗಳನ್ನು ಕಾಣಬಹುದು.

ವರ್ತಮಾನ ಕಾಲಸೂಚಕ ಪ್ರತ್ಯಯಗಳು :

ತಮಿಳಿನಲ್ಲಿ-ಕಿಱ್-, -ಕಿನ್ಱ್-, -ಕ್ಕಿಱ್-, -ಕ್ಕಿನ್ಱ್- ಮುಂತಾದ ಪ್ರತ್ಯಯಗಳು ವರ್ತಮಾನ ಕಾಲಸೂಚಕ ಪ್ರತ್ಯಯಗಳಾಗಿ ಬಳಕೆಯಾಗಿವೆ. ಇವುಗಳಲ್ಲಿ -ಕಿಱ್-,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

-ಕಿನ್ಱ್- ಎಂಬುವುಗಳನ್ನು ಮೂಲ ರೂಪಗಳೆಂದೂ -ಕ್ಕಿಱ್-, ಕ್ಕಿನ್ಱ್- ಎಂಬುವುಗಳನ್ನು ವಿಕೃತರೂಪಗಳೆಂದೂ ಭಾವಿಸಬಹುದು. -ಕ್ಕಿಱ್-. -ಕಿನ್ಱ್-ಎಂಬುವುಗಳೂ -ಕ್ಕಿಱ್-, -ಕ್ಕಿನ್ಱ್-ಎಂಬುವುಗಳೂ ಸ್ವಚ್ಛಂದ ಪರಿವರ್ತನೆಯಲ್ಲಿ ಬರುವುದನ್ನು ನೋಡಬಹುದು.

ಉದಾ : ವರು + { ಕಿಱ್ / ಕಿನ್ಱ್ } + ಆನ್

ನಟ + { ಕ್ಕಿಱ್ / ಕ್ಕಿನ್ಱ್ } + ಆನ್

ಭೂತಕಾಲಸೂಚಕ ಪ್ರತ್ಯಯಗಳು :

-ತ್-, -ತ್ತ್-, -ನ್ತ್-, -ಇನ್-ಮುಂತಾದವು ಭೂತಕಾಲ ಸೂಚಕ ಪ್ರತ್ಯಯಗಳು.

ಉದಾ : ಚೆಯ್ + ತ್ + ಆನ್ > ಚೆಯ್ತಾನ್
ಪಡಿ + ತ್ತ್ + ಆನ್ > ಪಡಿತ್ತಾನ್
ವ + ನ್ತ್ + ಆನ್ > ವನ್ತಾನ್
ಓಡು + ಇನ್ + ಆನ್ > ಓಡಿನಾನ್

ಕೆಲವು ಧಾತುಗಳ ಅಂತ್ಯದಲ್ಲಿ ಬರುವ ಸ್ಪರ್ಶ ಧ್ವನಿಯನ್ನು ಒತ್ತಕ್ಷರವಾಗಿ ಮಾರ್ಪಡಿಸುವುದರ ಮೂಲಕ ಭೂತಕಾಲವನ್ನು ಸೂಚಿಸಬಹುದು.

ಉದಾ : ನಟು > ನಟ್ಟಾನ್
ಪಟು > ಪಟ್ಟಾನ್
ನಕು > ನಕ್ಕಾನ್
ಪೆಱು > ಪೆಱ್ಱಾನ್

ಭವಿಷ್ಯತ್‌ಕಾಲ ಸೂಚಕ ಪ್ರತ್ಯಯಗಳು :

-ವ್-, -ಪ್-, -ಪ್ಪ್-, -ಉಂ- ಮುಂತಾದ ಪ್ರತ್ಯಯಗಳು ತಮಿಳಿನಲ್ಲಿ ಭವಿಷ್ಯತ್ ಕಾಲಸೂಚಕ ಪ್ರತ್ಯಯಗಳಾಗಿ ಬಳಕೆಯಾಗಿವೆ. ಇವುಗಳಲ್ಲಿ -ಉಂ-ಎನ್ನುವ ಪ್ರತ್ಯಯ ನಪುಂಸಕಲಿಂಗ ಕ್ರಿಯಾಪದಗಳಲ್ಲಿ ಭವಿಷ್ಯತ್ ಕಾಲವನ್ನು ಸೂಚಿಸಲು ಬರುತ್ತದೆ.

ಉದಾ : ವರು + ವ್ + ಆನ್ > ವರುವಾನ್
ಉಣ್ + ಪ್ + ಆನ್ > ಉಣ್ಪಾನ್
ಪಡಿ + ಪ್ಪ್ + ಆನ್ > ಪಡಿಪ್ಪಾನ್
ವರ್ + ಉಂ > ವರುಂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಈ -ಉಂ-ಎಂಬ ಪ್ರತ್ಯಯು ಅದು, ಅವೈ ಎಂಬ ನಾಮಪದಗಳಿಗೆ ಮಾತ್ರ ಬರುತ್ತದೆ)

ಲಿಂಗ ಪ್ರತ್ಯಯಗಳು :

ಪೂರ್ಣ ಕ್ರಿಯಾಪದಗಳಲ್ಲಿ ಮೂರನೆಯ ಅಂಶವಾಗಿ ಬರುವುದು ಲಿಂಗ ಪ್ರತ್ಯಯ. ಉತ್ತಮ ಪುರುಷ, ಮಧ್ಯಮ ಪುರುಷ ಮತ್ತು ಪ್ರಥಮ ಪುರುಷ ಲಿಂಗ ಪ್ರತ್ಯಯಗಳೆಂದು ತಮಿಳಿನಲ್ಲಿ ಮೂರು ವಿಧವಾದ ಲಿಂಗ ಪ್ರತ್ಯಯಗಳು ಇವೆ.

ಉತ್ತಮ ಪುರುಷ ಲಿಂಗ ಪ್ರತ್ಯಯಗಳು :

ಉತ್ತಮ ಪುರುಷ ಲಿಂಗ ಪ್ರತ್ಯಯಗಳು ಏಕವಚನ ಮತ್ತು ಬಹುವಚನ ಲಿಂಗ ಪ್ರತ್ಯಯಗಳೆಂದು ಎರಡು ಬಗೆಯಾಗುತ್ತವೆ. ಬಹುವಚನ ಲಿಂಗ ಪ್ರತ್ಯಯಗಳು ಮತ್ತೆ ಸಮಾವೇಶಕ ಮತ್ತು ಅಸಮಾವೇಶಕ ಲಿಂಗ ಪ್ರತ್ಯಯಗಳೆಂದು ವಿಭಾಗಿಸಲಾಗಿವೆ.

-ಏನ್ ಎಂಬುದು ಏಕವಚನ ಪ್ರತ್ಯಯವಾಗಿಯೂ-ಓಂ ಎಂಬುದು ಬಹುವಚನ ಪ್ರತ್ಯಯವಾಗಿಯೂ ಬರುತ್ತವೆ.-ಓಂ ಎಂಬ ಪ್ರತ್ಯಯ ಸಮಾವೇಶಕ, ಅಸಮಾವೇಶಕ ಎರಡರಲ್ಲೂ ಬಹುವಚನ ಪ್ರತ್ಯಯವಾಗಿ ಬಳಸಲಾಗಿದೆ.

ಉದಾ : ವ + ನ್ತ್ + ಏನ್ > ವನ್ತೇನ್
ವ + ನ್ತ್ + ಓಂ > ವನ್ತೋಂ

ಮಧ್ಯಮ ಪುರುಷ ಲಿಂಗ ಪ್ರತ್ಯಯಗಳು :

ಉತ್ತಮ ಪುರುಷದಂತೆಯೇ ಮಧ್ಯಮ ಪುರುಷ ಲಿಂಗ ಪ್ರತ್ಯಯಗಳು ಏಕವಚನ ಮತ್ತು ಬಹುವಚನ ಎಂದು ಎರಡು ವಿಧವಾಗುತ್ತವೆ. ಇದರಲ್ಲಿ ಏಕವಚನ ಲಿಂಗ ಪ್ರತ್ಯಯಗಳು ಮತ್ತೆ ಏಕವಚನ ಮತ್ತು ಗೌರವಾರ್ಥಕ ಏಕವಚನ ಪ್ರತ್ಯಯಗಳೆಂದು ವಿಭಾಗಿಸಲಾಗಿವೆ. ಗೌರವಾರ್ಥಕ ಏಕವಚನ ಮತ್ತೆ ಗೌರವಾರ್ಥಕ ಮತ್ತು ಅತೀ ಗೌರವಾರ್ಥಕ ಎಂದು ಎರಡು ವಿಧವಾಗುತ್ತದೆ. ಬಹುವಚನದಲ್ಲಿ ಯಾವ ಬಗೆಯ ಬದಲಾವಣೆಯೂ ಕಂಡು ಬರಲಿಲ್ಲ.

-ಆಯ್,-ಈರ್.-ಈರ್‌ಕಳ್ ಮುಂತಾದ ಪ್ರತ್ಯಯಗಳು ಮಧ್ಯಮ ಪುರುಷ ಲಿಂಗಪ್ರತ್ಯಯಗಳು. ಇವುಗಳಲ್ಲಿ-ಆಯ್ ಎಂಬುದು ಏಕವಚನ ಲಿಂಗಪ್ರತ್ಯಯವಾಗಿಯೂ-ಈರ್ ಎಂಬುದು ಗೌರವಾರ್ಥಕ ಏಕವಚನ ಲಿಂಗಪ್ರತ್ಯಯವಾಗಿಯೂ -ಈರ್‌ಕಳ್ ಎಂಬುದು ಅತೀ ಗೌರವಾರ್ಥಕ ಏಕವಚನ ಮತ್ತು ಬಹುವಚನ ಪ್ರತ್ಯಯವಾಗಿಯೂ ಉಪಯೋಗವಾಗುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ವ + ನ್ತ್ + ಆಯ್ > ವನ್ತಾಯ್ (ಏಕವಚನ)
ವ + ನ್ತ್ + ಈರ್ > ವನ್ತೀರ್ (ಗೌರವಾರ್ಥಕ ಏಕವಚನ)
ವ + ನ್ತ್ + ಈರ್‌ಕಳ್ > ವನ್ತೀರ್‌ಕಳ್ (ಅತೀ ಗೌರವಾರ್ಥಕ ಏಕವಚನ ಮತ್ತು ಬಹುವಚನ)

ಪ್ರಥಮಪುರುಷ ಲಿಂಗಪ್ರತ್ಯಯಗಳು :

ಪ್ರಥಮಪುರುಷ ಲಿಂಗಪ್ರತ್ಯಯಗಳು ತೊಲ್ಕಾಪ್ಪಿಯರ್ ಕಾಲದಲ್ಲಿ ಐದು ವಿಧವಾಗಿ ಇದ್ದವು. ಅನಂತರ ಅವು ಆರು ವಿಧವಾಗಿ ಬೆಳವಣಿಗೆ ಹೊಂದಿವೆ.

ಪ್ರಥಮಪುರುಷ ಲಿಂಗಪ್ರತ್ಯಯಗಳನ್ನು ಪುಲ್ಲಿಂಗ. ಸ್ತ್ರೀಲಿಂಗ, ಪುಂಸ್ತ್ರೀಲಿಂಗ. ನಪುಂಸಕಲಿಂಗ ಏಕವಚನ, ನಪುಂಸಕಲಿಂಗ ಬಹುವಚನ ಎಂದು ಐದು ಬಗೆಯಾಗಿ ಪ್ರಾಚೀನ ಕಾಲದ ವ್ಯಾಕರಣಗಳು ವಿವರಿಸುತ್ತವೆ. ಆದರೆ ಆಧುನಿಕ ತಮಿಳು ಭಾಷೆಯಲ್ಲಿ ಇವುಗಳೊಂದಿಗೆ ಗೌರವಾರ್ಥಕ ಏಕವಚನ ಎಂಬುದು ಕಂಡು ಬರುತ್ತದೆ.

ಉದಾ :

ವ + ನ್ತ್ +	ಆನ್	> ವನ್ತಾನ್	(ಪು.ಏ.ವ.)
	ಆಳ್	ವನ್ತಾಳ್	(ಸ್ತ್ರೀ.ಏ.ವ.)
	ಆರ್	ವನ್ತಾರ್	(ಗೌ.ಏ.ವ.)
	ಆರ್‌ಕಳ್	ವನ್ತಾರ್‌ಕಳ್	(ಪುಂ.ಬ.ವ.)
	ಅದು	ವನ್ತದು	(ನ. ಏ.ವ.)
	ಅನ	ವನ್ತನ	(ನ.ಬ.ವ.)

ಅಪೂರ್ಣ ಕ್ರಿಯಾಪದದ ರಚನೆ :

ಅಪೂರ್ಣ ಕ್ರಿಯಾಪದದಲ್ಲಿ ಧಾತು, ಕಾಲಸೂಚಕ ಪ್ರತ್ಯಯ ಮತ್ತು ಕೃದಂತ ಪ್ರತ್ಯಯ ಎಂಬ ಮೂರು ಅಂಶಗಳಿವೆ. ಇಂಥ ಕ್ರಿಯಾಪದಗಳು ಅರ್ಥವನ್ನು ಪೂರ್ಣಗೊಳಿಸುವುದಿಲ್ಲ.

ಅಪೂರ್ಣ ಕ್ರಿಯಾಪದ = ಕ್ರಿ. ಧಾ. + ಕಾ. ಸೂ. ಪ್ರ. + ಕೃ. ಪ್ರ.

ಅಪೂರ್ಣ ಕ್ರಿಯಾಪದಗಳು ಎರಡು ಬಗೆಗಳಾಗುತ್ತವೆ. ಅವು ಸಂಬಂಧ ಸೂಚಕ ಕೃದಂತ ಮತ್ತು ಕ್ರಿಯಾಸೂಚಕ ಕೃದಂತ.

೧) ಸಂಬಂಧಸೂಚಕ ಕೃದಂತ :

ವಾಕ್ಯದಲ್ಲಿ ನಾಮಪದಗಳಿಂದ ಪೂರ್ಣಗೊಳ್ಳುವ ಅಪೂರ್ಣ ಕ್ರಿಯಾಪದಗಳನ್ನು ಸಂಬಂಧ ಸೂಚಕ ಕೃದಂತ ಎಂದು ಕರೆಯಬಹುದು. ಇದು ಮತ್ತೆ ವರ್ತಮಾನ ಕಾಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಬಂಧ ಸೂಚಕ, ಭೂತಕಾಲ ಸಂಬಂಧ ಸೂಚಕ, ಭವಿಷ್ಯತ್ ಕಾಲ ಸಂಬಂಧ ಸೂಚಕ, ನಿಷೇಧಾರ್ಥಕ ಸಂಬಂಧ ಸೂಚಕ ಕೃದಂತ ಎಂದು ನಾಲ್ಕು ಬಗೆಯಾಗಿ ವಿಂಗಡಣೆಯಾಗಿದ.

ವರ್ತಮಾನ ಕಾಲ ಸಂಬಂಧಸೂಚಕ ಕೃದಂತ :

ಈ ಬಗೆಯ ಸಂಬಂಧಸೂಚಕ ಕೃದಂತ, ವರ್ತಮಾನ ಕಾಲ ಕ್ರಿಯಾ ಧಾತುವಿನೊಂದಿಗೆ ಸಂಬಂಧ ಸೂಚಕ ಕೃದಂತ ಪ್ರತ್ಯಯುವನ್ನು ಸೇರಿಸಿ ರಚಿಸಲ್ಪಡುತ್ತದೆ.

ಉದಾ : ವರುಕಿನ್ಟ್ + ಅ > ವರುಕಿನ್ಟ

ನಟಕ್ಕಿನ್ಟ್ + ಅ > ನಟಕ್ಕಿನ್ಟ

ಭೂತಕಾಲ ಸಂಬಂಧ ಸೂಚಕ ಕೃದಂತ :

ಭೂತಕಾಲ ಧಾತುವಿನೊಂದಿಗೆ ಸಂಬಂಧ ಸೂಚಕ ಕೃದಂತ ಪ್ರತ್ಯಯುವನ್ನು ಸೇರಿಸಿ. ಈ ಭೂತಕಾಲ ಸಂಬಂಧಸೂಚಕ ಕೃದಂತವನ್ನು ರಚಿಸಬಹುದು.

ಉದಾ : ವನ್ತ್ + ಅ > ವನ್ತ

ನಟನ್ತ್ + ಅ > ನಟನ್ತ

ಭವಿಷ್ಯತ್‌ಕಾಲ ಸಂಬಂಧಸೂಚಕ ಕೃದಂತ :

ಕ್ರಿಯಾಧಾತುವೂ ಸಂಬಂಧಸೂಚಕ ಕೃದಂತ ಪ್ರತ್ಯಯುವೂ ಸೇರಿ ಭವಿಷ್ಯತ್ ಕಾಲ ಸಂಬಂಧಸೂಚಕ ಕೃದಂತ ರಚನೆಯಾಗುತ್ತದೆ. ಇಲ್ಲಿ ಸಂಬಂಧ ಸೂಚಕ ಕೃದಂತ ಪ್ರತ್ಯಯುವಾಗಿ ಬರುವುದು–ಉಂ ಎನ್ನುವ ಪ್ರತ್ಯಯ. ಈ ಪ್ರತ್ಯಯಕ್ಕೆ–ಕ್ಕುಂ ಎನ್ನುವ ವಿಕೃತ ರೂಪ ಇರುವುದನ್ನು ನೋಡಬಹುದು.

ಉದಾ : ವರ್ + ಉಂ > ವರುಂ

ನಟ + ಕ್ಕುಂ > ನಟಕ್ಕುಂ

ನಿಷೇಧಾರ್ಥಕ ಸಂಬಂಧ ಸೂಚಕ ಕೃದಂತ :

ಸಂಘ ಕಾಲದಲ್ಲಿ ಈ ಕೃದಂತ, ಕ್ರಿಯಾ ಧಾತುವಿನೊಂದಿಗೆ–ಆ ಎನ್ನುವ ನಿಷೇಧಾರ್ಥಕ ಪ್ರತ್ಯಯುವನ್ನು ಸೇರಿಸುವುದರಿಂದ ರಚಿತವಾಯಿತು.

ಉದಾ : ವಾರ್ + ಆ > ವಾರಾ

ಆದರೆ ಇಂದಿನ ತಮಿಳು ಭಾಷೆಯಲ್ಲಿ ಈ ಬಗೆಯ ನಿಷೇಧಾರ್ಥಕ ಕೃದಂತಗಳು ಅಪರೂಪವಾಗಿ ಬಳಸಲ್ಪಡುತ್ತವೆ, ಇದಕ್ಕೆ ಬದಲಾಗಿ ಇಂದಿನ ಭಾಷೆಯಲ್ಲಿ ಧಾತು, ನಿಷೇಧಾರ್ಥಕ ಪ್ರತ್ಯಯ –ಆತ್–, ಕೃದಂತ ಪ್ರತ್ಯಯ – ಅ ಎಂಬುವು ಸೇರಿ ಬರುವ ರೂಪಗಳು ಹೆಚ್ಚಾಗಿ ಬಳಕೆಯಲ್ಲಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ವರ್ + ಆತ್ + ಅ > ವರಾತ

೨) ಕ್ರಿಯಾಸೂಚಕ ಕೃದಂತ :

ಬೇರೊಂದು ಪೂರ್ಣ ಕ್ರಿಯಾಪದದಿಂದ ಪೂರ್ಣವಾಗುವ ಅಪೂರ್ಣ ಕ್ರಿಯಾಪದವನ್ನು ಕ್ರಿಯಾಸೂಚಕ ಕೃದಂತವೆನ್ನುತ್ತಾರೆ. ಇದು ಪೂರ್ವಕಾಲಿಕ ಕೃದಂತ, ಸಂಯೋಜಕ ಕೃದಂತ, ಸಾಪೇಕ್ಷ ಅಥವಾ ನಿಯತ ಕೃದಂತ, ಕ್ರಮಾಗತ ಕೃದಂತ, ಸಮಕಾಲಿಕ ಕೃದಂತ, ನಿಷೇಧಾರ್ಥಕ ಕ್ರಿಯಾ ಸೂಚಕ ಕೃದಂತ ಎಂದು ಆರು ಬಗೆಗಳಾಗುತ್ತದೆ,

ಪೂರ್ವ ಕಾಲಿಕ ಕೃದಂತ :

ಪೂರ್ವಕಾಲಿಕ ಕೃದಂತ ಪ್ರತ್ಯಯ – ಅ. ಇದರ ವಿಕೃತರೂಪ – ಕ ಮತ್ತು – ಕ್ಕ. ಈ ಪ್ರತ್ಯಯಗಳು ಕ್ರಿಯಾ ಧಾತುವಿನೊಂದಿಗೆ ಸೇರುವಾಗ ಪೂರ್ವಕಾಲಿಕ ಕೃದಂತ ರಚಿತವಾಗುತ್ತದೆ.

ಉದಾ : ವರ್ + ಅ > ವರ
ಪೋ + ಕ > ಪೋಕ
ಪಡಿ + ಕ್ಕ > ಪಡಿಕ್ಕ

ಸಂಯೋಜಕ ಕೃದಂತ :

– ತು, – ತ್ತು, – ಇ ಮುಂತಾದವು ಸಂಯೋಜಕ ಕೃದಂತದ ಪ್ರತ್ಯಯಗಳು. – ತು ಎಂಬ ಪ್ರತ್ಯಯಕ್ಕೆ – ತ್ತು ಎಂಬುದು ವಿಕೃತ ರೂಪ. ಈ ಪ್ರತ್ಯಯಗಳು ಕ್ರಿಯಾ ಧಾತುವಿನೊಂದಿಗೆ ಸೇರಿ ಸಂಯೋಜಕ ಕೃದಂತವನ್ನು ರಚಿಸುತ್ತವೆ.

ಉದಾ : ಚೆಯ್ + ತು > ಚೆಯ್ತು
ಪಡಿ + ತ್ತು > ಪಡಿತ್ತು
ಪಾಡು + ಇ > ಪಾಡಿ

ಸಾಪೇಕ್ಷ ಅಥವಾ ನಿಯತ ಕೃದಂತ :

—ಆಲ್ ಎಂಬ ನಿಯತ ಕೃದಂತ ಪ್ರತ್ಯಯದ ವಿಕೃತರೂಪ—ನಾಲ್ ಎಂಬುದು. ಈ ಪ್ರತ್ಯಯಗಳನ್ನು ಸಂಯೋಜಕ ಕೃದಂತದೊಂದಿಗೆ ಸೇರಿಸಿದರೆ ನಿಯತ ಕೃದಂತ ರಚಿತವಾಗುತ್ತದೆ.

ಉದಾ : ಚೆಯ್ತು + ಆಲ್ > ಚೆಯ್ತಾಲ್
ಪಾಡಿ + ನಾಲ್ > ಪಾಡಿನಾಲ್

ಸಂಘಕಾಲದ ತಮಿಳು ಭಾಷೆಯಲ್ಲಿ–ಆಲ್ ಎಂಬುದಕ್ಕೆ ಬದಲಾಗಿ–ಇನ್ ಎಂಬ ಪ್ರತ್ಯಯ ನಿಯತ ಕೃದಂತ ಪ್ರತ್ಯಯವಾಗಿ ಬಳಸಲಾಗಿದೆ. ಆದರೆ ಈ–ಇನ್ ಎಂಬ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರತ್ಯಯು ಕ್ರಿಯಾಧಾತುವಿನೊಂದಿಗೆ ಸೇರಿ ನಿಯತ ಕೃದಂತವನ್ನು ರಚಿಸಿದೆ.

ಉದಾ : ಚೆಯ್ + ಇನ್ > ಚೆಯಿನ್

ಪಾಡು + ಇನ್ > ಪಾಡಿನ್

ಕ್ರಮಾಗತ ಕೃದಂತ :

ಭೂತಕಾಲ ಕ್ರಿಯಾಧಾತುವಿನೊಂದಿಗೆ-ಅತುಂ ಎನ್ನುವ ಕ್ರಮಾಗತ ಕೃದಂತ ಪ್ರತ್ಯಯುವನ್ನು ಸೇರಿಸಿದರೆ ಕ್ರಮಾಗತ ಕೃದಂತ ರಚನೆಯಾಗುತ್ತದೆ.

ಉದಾ : ಚೆಯ್ತ್ + ಅತುಂ > ಚೆಯ್ತತುಂ

ಪಾಡಿನ್ + ಅತುಂ > ಪಾಡಿನತುಂ

ಸಮಕಾಲಿಕ ಕೃದಂತ ;

—ಕೈಯಿಲ್ ಎನ್ನುವ ಸಮಕಾಲಿಕ ಕೃದಂತ ಪ್ರತ್ಯಯುದ ವಿಕೃತ ರೂಪ -ಕ್ಕೈಯಿಲ್ ಎಂಬುದು. ಈ ಪ್ರತ್ಯಯುಗಳನ್ನು ಕ್ರಿಯಾಧಾತುವಿನೊಂದಿಗೆ ಸೇರಿಸಿ ಸಮಕಾಲಿಕ ಕೃದಂತವನ್ನು ರಚಿಸಬಹುದು.

ಉದಾ : ಚೆಯ್ + ಕೈಯಿಲ್ > ಚೆಯ್ಕೈಯಿಲ್

ಪಡಿ + ಕ್ಕೈಯಿಲ್ > ಪಡಿಕ್ಕೈಯಿಲ್

ನಿಷೇಧಾರ್ಥಕ ಕ್ರಿಯಾಸೂಚಕ ಕೃದಂತ :

ಕ್ರಿಯಾಧಾತುವಿನೊಂದಿಗೆ-ಆತು ಅಥವಾ-ಆಮಲ್ ಎಂಬ ಪ್ರತ್ಯಯುಗಳನ್ನು ಸೇರಿಸಿದರೆ ನಿಷೇಧಾರ್ಥಕ ಕ್ರಿಯಾಸೂಚಕ ಕೃದಂತ ರಚನೆಯಾಗುತ್ತದೆ.-ಆತು ಎಂಬುದಕ್ಕೆ-ಕಾತು,-ಕ್ಕಾತು ಎಂಬುವುಗಳೂ-ಆಮಲ್ ಎಂಬುದಕ್ಕೆ-ಕಾಮಲ್,-ಕ್ಕಾಮಲ್ ಎಂಬುವುಗಳೂ ವಿಕೃತರೂಪಗಳಾಗಿ ಬರುತ್ತವೆ. -ಆತು,-ಕಾತು, -ಕ್ಕಾತು ಎಂಬುವು ಕ್ರಮವಾಗಿ-ಆಮಲ್,-ಕಾಮಲ್,-ಕ್ಕಾಮಲ್ ಎಂಬ ಪ್ರತ್ಯಯುಗಳೊಂದಿಗೆ ಸ್ವಚ್ಛಂದ ಪರಿವರ್ತನೆಯಲ್ಲಿ ಬರುತ್ತವೆ.

ಉದಾ : ಪಾಡು + [ಆತು / ಆಮಲ್] > [ಪಾಡಾತು / ಪಾಡಾಮಲ್]

ಪೋ + [ಕಾತು / ಕಾಮಲ್] > [ಪೋಕಾತು / ಪೋಕಾಮಲ್]

ಪಡಿ + [ಕ್ಕಾತು / ಕ್ಕಾಮಲ್] > [ಪಡಿಕ್ಕಾತು / ಪಡಿಕ್ಕಾಮಲ್]

ಲಕ್ಷಿತ ಕ್ರಿಯಾಪದ :

ಲಕ್ಷಿತ ಕ್ರಿಯಾಪದಗಳು ಕಾಲಸೂಚಕ ಕ್ರಿಯಾಪದಗಳಂತೆಯೆ ಪೂರ್ಣ, ಅಪೂರ್ಣ ಎಂದು ಎರಡು ವಿಧವಾಗುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪೂರ್ಣ ಲಕ್ಷಿತ ಕ್ರಿಯಾಪದಗಳು :

ಈ ಬಗೆಯ ಕ್ರಿಯಾಪದಗಳು ಅರ್ಥವನ್ನು ಪೂರ್ಣಗೊಳಿಸುತ್ತವೆ.

ಉದಾ : ಕರಿಯನ್
ಕರಿಯಳ್

ಇವು ಎರಡೂ ಕರಿ ಎಂಬ ಗುಣವಾಚಕ ಧಾತುವಿನಿಂದ ರಚನೆಯಾಗಿವೆ. ಅಲ್ಲದೆ ಕರಿಯನ್ ಎಂಬುದು ನಿನ್ನೆ ಕರಿಯನ್, ಇಂದು ಕರಿಯನ್, ನಾಳೆ ಕರಿಯನ್ ಎಂದು ಮೂರು ಕಾಲಕ್ಕೂ ಸೀಮಿತವಾಗಿ ಬರುವುದನ್ನು ನೋಡಬಹುದು.

ಅಪೂರ್ಣ ಲಕ್ಷಿತ ಕ್ರಿಯಾಪದಗಳು :

ಇದರಲ್ಲೂ ಲಕ್ಷಿತ ಸಂಬಂಧ ಸೂಚಕ ಕೃದಂತ, ಲಕ್ಷಿತ ಕ್ರಿಯಾಸೂಚಕ ಕೃದಂತ ಎಂಬ ಎರಡು ಬಗೆಯಾದ ಕೃದಂತಗಳನ್ನು ನೋಡಬಹುದು.

ಲಕ್ಷಿತ ಸಂಬಂಧ ಸೂಚಕ ಕೃದಂತ :

ಕಾಲ, ಕ್ರಿಯೆ, ಲಿಂಗ ಮುಂತಾದುವುಗಳಲ್ಲಿ ಯಾವುದನ್ನೂ ತೋರಿಸದೆ ನಾಮ ಪದದಿಂದ ಪೂರ್ಣಗೊಳ್ಳುವ ಕೃದಂತಗಳನ್ನು ಲಕ್ಷಿತ ಸಂಬಂಧ ಸೂಚಕ ಕೃದಂತ ಎನ್ನುತ್ತಾರೆ.

ಉದಾ : ಪೆರಿಯ ಕುದಿರೈ
ಪುದಿಯ ವೀಡು
ಇನಿಯ ಪಾಟ್ಟು

ಲಕ್ಷಿತ ಕ್ರಿಯಾ ಸೂಚಕ ಕೃದಂತ:

ಇದು ಸಹ ಕಾಲ, ಕ್ರಿಯೆ,ಲಿಂಗ ಮುಂತಾದುವುಗಳಲ್ಲಿ ಯಾವುದನ್ನೂ ತೋರಿಸದೆ ಬರುತ್ತದೆ. ಆದರೆ ಇದು ಪೂರ್ಣವಾಗುವುದಕ್ಕೆ ಕ್ರಿಯಾಪದಗಳು ಬೇಕಾಗುತ್ತವೆ.

ಉದಾ : ಇನ್ನಿ—ಕೆಡುಂ
ಅಱಿನಿನ್ನಿ—ಕೊನ್ಱಾನ್

ಸಂಕೀರ್ಣ ಕ್ರಿಯಾಪದಗಳು :

ಎರಡು ಅಥವಾ ಎರಡಕ್ಕಿಂತ ಹೆಚ್ಚು ಕ್ರಿಯಾಪದಗಳಿಂದ ರೂಪುಗೊಳ್ಳುವ ಅಥವಾ ತೋರಿಕೆ ಮತ್ತು ಸ್ಥಿತಿಸೂಚಕ ಸಹಾಯಕ ಕ್ರಿಯಾಪದಗಳೊಡನೆ ಕೂಡಿಬರುವ ಕ್ರಿಯಾಪದಗಳಿಗೆ ಸಂಕೀರ್ಣ ಕ್ರಿಯಾಪದ ಎಂದು ಹೆಸರು.

ತಮಿಳು ಭಾಷೆಯಲ್ಲಿ ಸಂಯುಕ್ತ ಕ್ರಿಯಾ ಮೂಲರೂಪಗಳು ಐದು ರೀತಿಯಲ್ಲಿ ರಚನೆಯಾಗುತ್ತವೆ. ಅವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೧) ನಾಮ + ಕ್ರಿಯೆ
೨) ಕ್ರಿ.ಸೂ. ಕೃ. + ಕ್ರಿಯೆ
೩) ಕ್ರಿ. ಧಾತು + ಕ್ರಿಯೆ
೪) ಲ.ಕ್ರಿ.ಪ. + ಕ್ರಿಯೆ
೫) ಪ್ರತ್ಯಯ + ಕ್ರಿಯೆ

೧) ನಾಮ + ಕ್ರಿಯೆ :

ನಾಮಪದವೂ ಕ್ರಿಯಾಪದವೂ ಸೇರಿ ಈ ಬಗೆಯ ಸಂಯುಕ್ತ ಕ್ರಿಯಾ ಮೂಲ ರೂಪಗಳು ರಚನೆಯಾಗುತ್ತವೆ.

ಉದಾ : ಕೋಪಂ + ಕೊಳ್ > ಕೋಪಂ ಕೊಳ್ 'get angry'
ಕೋಪಂ + ಪಟು > ಕೋಪಪ್ಪಟು 'get angry'
ಕೇಲಿ + ಚೆಯ್ > ಕೇಲಿಚೆಯ್ 'mock'
ಕೇಲಿ + ಪಣ್ಣು > ಕೇಲಿಪಣ್ಣು 'mock'
ಚರಿ + ಪಟುತ್ತು > ಚರಿಪಟುತ್ತು 'mend'
ಪುಲನ್ + ಆಕು > ಪುಲನಾಕು 'be perceptible'
ಚರಿ + ಆಕ್ಕು > ಚರಿಯಾಕ್ಕು 'mend'
ಪೋರ್ + ಆಟು > ಪೋರಾಟು 'struggle'

೨) ಕ್ರಿ. ಸೂ. ಕೃ. + ಕ್ರಿಯೆ :

ಈ ಬಗೆಯ ಸಂಯುಕ್ತ ಕ್ರಿಯಾಮೂಲರೂಪಗಳು ಕ್ರಿಯಾ ಸೂಚಕ ಕೃದಂತ ಮತ್ತು ಕ್ರಿಯಾಪದದಿಂದ ರೂಪುಗೊಳ್ಳುತ್ತವೆ.

ಉದಾ : ಎಟುಂತು + ಇರು > ಎಟುಂತಿರು 'get up'
ಕಂಟು + ಪಿಟಿ > ಕಂಟುಪಿಟಿ 'discover'
ಒತ್ತು + ಕೊಳ್ > ಒತ್ತುಕ್ಕೊಳ್ 'agree'
ವಿಟ್ಟು + ಕೊಟು > ವಿಟ್ಟುಕ್ಕೊಟು 'give in'
ವೇಂಟಿ + ಕೊಳ್ > ವೇಂಟಿಕ್ಕೊಳ್ 'request'

೩) ಕ್ರಿ. ಧಾತು + ಕ್ರಿಯೆ :

ಕ್ರಿಯಾಧಾತುಗಳೊಡನೆ ಕ್ರಿಯಾಪದಗಳು ಸೇರಿ ಈ ಬಗೆಯ ಸಂಯುಕ್ತ ಕ್ರಿಯಾ ಮೂಲರೂಪಗಳು ರಚನೆಯಾಗುತ್ತವೆ.

ಉದಾ : ಕೊಲ್ + ಉಣ್ > ಕೊಲ್ಲುಣ್ 'be killed'
ಪುತೈ + ಉಣ್ > ಪುತೈಯುಣ್ 'be burried'

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಟಿ + ಪಟು > ಅಟಿಪಟು 'be beaten'
ಉಟೈ + ಪಟು > ಉಟೈಪಟು 'be broken'

ಳ) ಲ. ಕ್ರಿ. ಪ. + ಕ್ರಿಯೆ :

'ಉಂಟು' ಎಂಬ ಲಕ್ಷಿತ ಕ್ರಿಯಾಪದದೊಡನೆ ಆಕು ಅಥವಾ ಆಕ್ಕು ಎಂಬ ಕ್ರಿಯಾಪದಗಳನ್ನು ಸೇರಿಸಿ ಈ ಬಗೆಯ ಸಂಯುಕ್ತ ಕ್ರಿಯಾಮೂಲರೂಪಗಳು ರಚಿಸಲಾಗುತ್ತವೆ.

ಉದಾ : ಉಂಟು + ಆಕು > ಉಂಟಾಕು 'rise'
ಉಂಟು + ಆಕ್ಕು > ಉಂಟಾಕ್ಕು 'produce'

ೞ) ಪ್ರತ್ಯಯ + ಕ್ರಿಯೆ :

ಕೆಲವು ಪ್ರತ್ಯಯಗಳೂ ಕ್ರಿಯಾಪದಗಳೂ ಸೇರಿ ರಚನೆಯಾಗುವುದು ಈ ಬಗೆಯ ಸಂಯುಕ್ತ ಕ್ರಿಯಾಮೂಲರೂಪಗಳು.

ಉದಾ : ಮುನ್ + ಏಱು > ಮುನ್ನೇಱು 'progress'
ಮುನ್ + ಪಟು > ಮುಱ್ಪಟು 'come forward
ಪಿನ್ + ಪಟು > ಪಿಱ್ಪಟು 'lag behind'
ಮೇಂ + ಪಟು > ಮೇಂಪಟು 'improve'
ಕೀೞ್ + ಪಟು > ಕೀೞ್ಪಟು 'deteriorate'
ಕಟೈ + ಪಟು > ಕಟೈಪ್ಪಟು 'fall behind'
ಕಟೈ + ಪಿಟಿ > ಕಟೈಪ್ಪಿಟಿ 'observe'

ತೋರಿಕೆಯ ಕ್ರಿಯಾಪದಗಳು :

ಕ್ರಿಯೆಯ ಹಲವಾರು ಬಗೆಯಾದ ಗುಣಗಳನ್ನು ವ್ಯಕ್ತಪಡಿಸುವುದೇ ತೋರಿಕೆಯ ಕ್ರಿಯಾಪದಗಳು. ಇವು ಮುಖ್ಯ ಕ್ರಿಯಾಪದದೊಂದಿಗೆ ಸಹಾಯಕ ಕ್ರಿಯಾಪದಗಳನ್ನು ಸೇರಿಸುವಾಗ ರಚನೆಯಾಗುತ್ತವೆ. ಸಹಾಯಕ ಕ್ರಿಯಾಪದಗಳನ್ನು ಸೇರಿಸುವಾಗ ಮುಖ್ಯಕ್ರಿಯಾಪದ ಕ್ರಿಯಾಸೂಚಕ ಕೃದಂತರೂಪದಲ್ಲಿ ಇರುತ್ತದೆ. ಇದರ ರಚನೆಯನ್ನು ಕೆಳಕಂಡಂತೆ ಸೂಚಿಸಬಹುದು.

ತೋರಿಕೆಯ ಕ್ರಿಯಾಪದ = ಕ್ರಿ.ಸೂ.ಕೃ. + ಸ.ಕ್ರಿ.ಪ. + ಕಾ.ಸೂ.ಪ್ರ. + ಲಿ.ಪ್ರ.

ಉದಾ : ವನ್ತು + ವಿಟು + ವ್ + ಆರ್ 'definitely come'
ವನ್ತು + ಇರು + ನ್ತ್ + ಆರ್ 'had come'

ಈ ತೋರಿಕೆಯ ಕ್ರಿಯಾಪದಗಳು ಮುಖ್ಯಕ್ರಿಯಾಪದದೊಡನೆ ಸೇರಿಸಲ್ಪಡುವ ಸಹಾಯಕ ಕ್ರಿಯಾಪದಗಳಿಗೆ ತಕ್ಕಂತೆ ಹಲವಾರು ಬಗೆಗಳಾಗಿ ವರ್ಗೀಕರಿಸಲಾಗಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಲವಾರು ಬಗೆಗಳಾಗಿ ವರ್ಗೀಕರಿಸಲ್ಪಟ್ಟ ತೋರಿಕೆಯ ಕ್ರಿಯಾಪದಗಳು ಅವುಗಳ ಅರ್ಥಕ್ಕೆ ತಕ್ಕಂತೆ ಹೆಸರಿಸಲ್ಪಡುತ್ತವೆ. ಅವುಗಳನ್ನು ಕೆಳಗೆ ವಿವರಿಸಿದೆ.

೧) ಮುಂದುವರಿಕಾ ಸೂಚಕ ಕ್ರಿಯಾಪದಗಳು :

ಕ್ರಿ.ಸೂ.ಕೃ. + ಕೊಂಟಿರು + ಕಾ.ಸೂ.ಪ್ರ. + ಲಿ.ಪ್ರ.

ಉದಾ : ಪಟಿತ್ತು + ಕೊಂಟಿರು + ನ್ತ್ + ಆರ್

ಪಟಿತ್ತುಕ್ಕೊಂಟಿರುನ್ತಾರ್ 'he was reading'

೨) ಪೂರ್ಣತೆ ಸೂಚಕ ಕ್ರಿಯಾಪದಗಳು :

ಕ್ರಿ.ಸೂ.ಕೃ. + ಇರು + ಕಾ.ಸೂ.ಪ್ರ. + ಲಿ.ಪ್ರ.

ಉದಾ : ವನ್ತು + ಇರು + ನ್ತ್ + ಆರ್

ವನ್ತಿರುನ್ತಾರ್ 'he had come'

೩) ನಿಶ್ಚಿತ ಸೂಚಕ ಕ್ರಿಯಾಪದಗಳು :

ಕ್ರಿ.ಸೂ.ಕೃ + ವಿಟು + ಕಾ.ಸೂ ಪ್ರ. + ಲಿ.ಪ್ರ.

ಉದಾ : ವನ್ತು + ವಿಟು + ವ್ + ಆರ್

ವನ್ತುವಿಟುವಾರ್ 'he will difinitely come'

೪) ಪ್ರಯತ್ನ ಸೂಚಕ ಕ್ರಿಯಾಪದಗಳು :

ಕ್ರಿ.ಸೂ.ಕೃ. + ಪಾರ್ + ಕಾ.ಸೂ.ಪ್ರ. + ಲಿ.ಪ್ರ.

ಉದಾ : ಎಟುತಿ + ಪಾರ್ + ತ್ತ್ + ಆರ್

ಎಟುತಿಪಾರ್ತ್ತಾರ್ 'he tried writing'

೫) ಪ್ರದರ್ಶನ ಸೂಚಕ ಕ್ರಿಯಾಪದಗಳು :

ಕ್ರಿ.ಸೂ.ಕೃ. + ಕಾಟ್ಟು + ಕಾ.ಸೂ ಪ್ರ. + ಲಿ.ಪ್ರ.

ಉದಾ : ಎಟುತಿ + ಕಾಟ್ಟು + ವ್ + ಆರ್

ಎಟುತಿಕಾಟ್ಟುವಾರ್ 'he will demonstrate how to write'

೬) ಆತ್ಮಾರ್ಥಕ ಸೂಚಕ ಕ್ರಿಯಾಪದಗಳು

ಕ್ರಿ.ಸೂ.ಕೃ. + ಕೊಳ್ + ಕಾ.ಸೂ.ಪ್ರ. + ಲಿ.ಪ್ರ.

ಉದಾ : ವಾಂಕಿ + ಕೊಳ್ + ವ್ + ಆರ್

ವಾಂಕಿಕ್ಕೊಳ್ವಾರ್ 'he will buy for himself'

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೭) ಪರಸ್ಪರ ಸೂಚಕ ಕ್ರಿಯಾಪದಗಳು :

ಕ್ರಿ.ಸೂ.ಕೃ + ಕೊಳ್ + ಕಾ.ಸೂ.ಪ್ರ + ಲಿ.ಪ್ರ.

ಉದಾ : ಕಾತಲಿತ್ತು + ಕೊಳ್ + ನ್ತ್ + ಆರ್‌ಕಳ್

ಕಾತಲಿತ್ತುಕ್ಕೊಂಟಾರ್‌ಕಳ್ 'they loved each other'

೮) ಆಕಸ್ಮಿಕ ಸೂಚಕ ಕ್ರಿಯಾಪದಗಳು :

ಕ್ರಿ.ಸೂ.ಕೃ + ಪೋ + ಕಾ.ಸೂ.ಪ್ರ. + ಲಿ.ಪ್ರ.

ಉದಾ : ಉಟೈನ್ತು + ಪೋ + ಇನ್ + ತು

ಉಟೈನ್ತುಪೋಯಿಟ್ಟು 'it broke'

೯) ಉಪೇಕ್ಷಾ ಸೂಚಕ ಕ್ರಿಯಾಪದಗಳು :

ಕ್ರಿ.ಸೂ.ಕೃ + ತೊಲ್ಯೆ + ಕಾ.ಸೂ.ಪ್ರ. + ಲಿ.ಪ್ರ.

ಉದಾ : ಎಟುತಿ + ತೊಲ್ಯೆ + ತ್ತ್ + ಆರ್

ಎಟುತಿ ತೊಲ್ಯೆತ್ತಾರ್ 'he wrote with contempt'

೧೦) ಸಂರಕ್ಷಣಾ ಸೂಚಕ ಕ್ರಿಯಾಪದಗಳು :

ಕ್ರಿ.ಸೂ.ಕೃ + ವೈ + ಕಾ.ಸೂ.ಪ್ರ. + ಲಿ.ಪ್ರ.

ಉದಾ : ವಾಂಕಿ + ವೈ + ತ್ತ್ + ಆರ್

ವಾಂಕಿವೈತ್ತಾರ್ 'he bought and kept it (for future utility)'

೧೧) ಉಪಕಾರ ಸೂಚಕ ಕ್ರಿಯಾಪದಗಳು :

ಕ್ರಿ.ಸೂ.ಕೃ. + ಅರುಳ್ + ಕಾ.ಸೂ.ಪ್ರ. + ಲಿ.ಪ್ರ.

ಉದಾ : ಚೊಲ್ಲಿ + ಅರುಳ್ + ಇನ್ + ಆರ್

ಚೊಲ್ಲಿಯರುಳಿನಾರ್ 'he said'

ಈ ಬಗೆಯ ಕ್ರಿಯಾಪದಗಳ ರಚನೆಗೆ ಸಹಾಯವಾಗಿ ಬರುವ ಕ್ರಿಯಾಪದಗಳು ಮುಖ್ಯಕ್ರಿಯಾಪದಗಳಾಗಿಯೂ ಬರಬಲ್ಲವು ಎಂಬುದು ಗಮನಾರ್ಹ ಅಂಶ.

ಸ್ಥಿತಿಸೂಚಕ ಕ್ರಿಯಾಪದಗಳು :

ಆಡುವವನ ಮನದ ಸ್ಥಿತಿಯನ್ನು ಪ್ರತಿಪಾದಿಸುವ ಕ್ರಿಯಾಪದಗಳೇ ಸ್ಥಿತಿ ಸೂಚಕ ಕ್ರಿಯಾಪದಗಳು.

ಸ್ಥಿತಿಸೂಚಕ ಸಹಾಯಕ ಕ್ರಿಯಾಪದಗಳು, ಮುಖ್ಯ ಕ್ರಿಯಾಪದದ ಪೂರ್ವಕಾಲಿಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೃದಂತರೂಪದೊಡನೆ ಸೇರಿಸಲಾಗುತ್ತವೆ. ಸಹಾಯಕ ಕ್ರಿಯಾಪದಗಳ ವಾಕ್ಯಾತ್ಮಕ ಗುಣಕ್ಕೆ ತಕ್ಕಂತೆ ಸ್ಥಿತಿಸೂಚಕ ಕ್ರಿಯಾಪದಗಳು ವರ್ಗೀಕರಿಸಲಾಗಿವೆ.

೧) ಕಾರ್ಯಾರಂಭ ಸೂಚಕ ಕ್ರಿಯಾಪದಗಳು :

ಪೂ. ಕಾ. ಕೃ. + ಪೋ + ಕಾ. ಸೂ. ಪ್ರ. + ಲಿ. ಪ್ರ.

ಉದಾ : ವರ + ಪೋ + ಕಿಱ್ + ಆರ್

ವರಪ್ಪೋಕಿಱಾರ್ 'he is going to come'

೨) ಕಾರ್ಯಯತ್ನ ಸೂಚಕ ಕ್ರಿಯಾಪದಗಳು :

ಪೂ. ಕಾ. ಕೃ. + ಪಾರ್ + ಕಾ. ಸೂ. ಪ್ರ. + ಲಿ. ಪ್ರ.

ಉದಾ : ಓಟ + ಪಾರ್ + ತ್ತ್ + ಆನ್

ಓಟಪ್ಪಾರ್ತ್ತಾನ್ he tried to run'

೩) ಸಾಧ್ಯತಾ ಸೂಚಕ ಕ್ರಿಯಾಪದಗಳು :

ಪೂ. ಕಾ. ಕೃ. + ಕೂಟುಂ

ಉದಾ : ವರ + ಕೂಟುಂ

ವರಕ್ಕೂಟುಂ 'may come'

ಇನ್ಱು ಮೞೈ ವರಕ್ಕೂಟುಂ 'it may rain today'

೪) ಆವಶ್ಯಕ ಸೂಚಕ ಕ್ರಿಯಾಪದಗಳು :

ಪೂ. ಕಾ. ಕೃ. + ವೇಂಟುಂ

ಉದಾ : ಪೋಕ + ವೇಂಟುಂ

ಪೋಕವೇಂಟುಂ 'must go'

ನಾನ್ ಇಪ್ಪೋತು ಪೋಕವೇಂಟುಂ' 'I must go now'

೫) ನಿಷೇಧಾರ್ಥ ಸೂಚಕ ಕ್ರಿಯಾಪದಗಳು :

ಅ). ಪೂ. ಕಾ. ಕೃ. + ಮಾಟ್ಟ್ + ಲಿ. ಪ್ರ.

ಉದಾ : ವರ + ಮಾಟ್ಟ್ + ಆರ್

ವರಮಾಟ್ಟಾರ್ 'he won't come'

ಆ). ಪೂ. ಕಾ. ಕೃ. + ಇಲ್ಲೈ

ಉದಾ : ವರ + ಇಲ್ಲೈ

ವರವಿಲ್ಲೈ 'does/did not come'

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಯೋಗ :

ಕರ್ಮಣಿ ಪ್ರಯೋಗ :

ಎಲ್ಲಾ ಕರ್ಮಣಿ ವಾಕ್ಯಗಳಲ್ಲೂ ಸಕರ್ಮಕ ಕ್ರಿಯಾಪದಗಳು ಪೂರ್ವಕಾಲಿಕ ಕೃದಂತವಾಗಿ ಬದಲಾವಣೆಯಾಗುತ್ತವೆ ; ಅನಂತರ ಅವುಗಳೊಂದಿಗೆ ಪಟು ಎನ್ನುವ ಸಹಾಯಕ ಕ್ರಿಯಾಪದವನ್ನು ಸೇರಿಸಲಾಗುತ್ತದೆ.

ಉದಾ : ಕೊಲ್ > ಕೊಲ್ಲ

ಕೊಲ್ಲ + ಪಟು > ಕೊಲ್ಲಪ್ಪಟು 'be killed'

ಕಾರಣಾತ್ಮಕ ಕ್ರಿಯಾಪದಗಳು :

ಕಾರಣಾತ್ಮಕ ವಾಕ್ಯಗಳಲ್ಲಿ ಕ್ರಿಯಾಪದಗಳು ಪೂರ್ವ ಕಾಲಿಕ ಕೃದಂತಗಳಾಗಿ ಬದಲಾವಣೆಯಾಗಿ ಅನಂತರ ಅವು ವೈ, ಚೆಯ್, ಪಣ್ಣು ಮುಂತಾದ ಸಹಾಯಕ ಕ್ರಿಯಾಪದಗಳೊಡನೆ ಸೇರಿ ಬರುತ್ತವೆ.

ಉದಾ : ಓಟು > ಓಟ

ಓಟ + { ವೈ / ಚೆಯ್ / ಪಣ್ಣು } > { ಓಟವ್ವೈ / ಓಟ ಚ್ಚೆಯ್ / ಓಟಪ್ಪಣ್ಣು } 'cause to run'

ಅಪೂರ್ಣ ಸಂಯುಕ್ತ ಕ್ರಿಯಾಪದಗಳು :

೧) ಸಂಯುಕ್ತ ಕ್ರಿಯಾಸೂಚಕ ಕೃದಂತಗಳು :

ತಮಿಳು ಭಾಷೆಯಲ್ಲಿ ಸರಳ ಕ್ರಿಯಾಸೂಚಕ ಕೃದಂತಗಳೊಡನೆ ಸಂಯುಕ್ತ ಕ್ರಿಯಾಸೂಚಕ ಕೃದಂತಗಳೂ ಕಾಣಸಿಕೊಳ್ಳುತ್ತವೆ.

ಅ) ಸಮಕಾಲಿಕ ಕ್ರಿಯಾಸೂಚಕ ಕೃದಂತಗಳು :

ಕ್ರಿಯಾಸೂಚಕ ಕೃದಂತದೊಡನೆ 'ಕೊಂಟು' ಎಂಬುದನ್ನು ಸೇರಿಸಿದರೆ ಸಂಯುಕ್ತ ಸಮಕಾಲಿಕ ಕ್ರಿಯಾಸೂಚಕ ಕೃದಂತ ರಚನೆಯಾಗುತ್ತದೆ.

ಉದಾ : ಎಟುತಿ + ಕೊಂಟು > ಎಟುತಿಕ್ಕೊಂಟು

ಅವರ್ ಎಟುತಿಕ್ಕೊಂಟು ಪೇಚಿನಾರ್

'He talked while writing'

ಆ) ವಿಭಾಜಕ ಕ್ರಿಯಾಸೂಚಕ ಕೃದಂತ :

ಕ್ರಿಯಾಸೂಚಕ ಕೃದಂತದೊಡನೆ 'ವಿಟ್ಟು' ಎಂಬುದನ್ನು ಸೇರಿಸಿ ವಿಭಾಜಕ ಕ್ರಿಯಾಸೂಚಕ ಕೃದಂತ ರಚಿಸಲಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಎಟುತಿ + ವಿಟ್ಟು > ಎಟುತಿವಿಟ್ಟು

ಅವರ್ ಎಟುತಿವಿಟ್ಟುಪ್ಪಟಿತ್ತಾರ್

'He read after finished writing'

ಇ) ನಿಷೇಧಾರ್ಥಕ ನಿಯತ ಕ್ರಿಯಾಸೂಚಕ ಕೃದಂತಗಳು :

ಕ್ರಿಯಾಮೂಲರೂಪದೊಂದಿಗೆ 'ಆ' ಎಂಬುದನ್ನೂ 'ವಿಟ್ಟಾಲ್' ಎಂಬುದನ್ನೂ ಸೇರಿಸಿದರೆ ಈ ಬಗೆಯ ಕೃದಂತ ರಚನೆಯಾಗುತ್ತದೆ. 'ಆ' ಕಾರದ ವಿಕೃತ ರೂಪಗಳು 'ಕಾ' ಮತ್ತು 'ಕ್ಕಾ'.

ಉದಾ : ಪಾಟು + ಆ + ವಿಟ್ಟಾಲ್ > ಪಾಟಾವಿಟ್ಟಾಲ್

ನೀ ಪಾಟಾವಿಟ್ಟಾಲ್ ನಾನುಂ ಪಾಟಮಾಟ್ಟೇನ್

'If you don't sing I won't sing either'

ಈ) ಇತರ ಕ್ರಿಯಾಸೂಚಕ ಕೃದಂತಗಳು :

ತಮಿಳು ಭಾಷೆಯಲ್ಲಿ ಸಂಬಂಧ ಸೂಚಕ ಕೃದಂತದೊಡನೆ ಪೋತು, ಉಟನ್ ಮುಂತಾದ ಪ್ರತ್ಯಯಗಳನ್ನು ಸೇರಿಸಿದರೆ ಕೆಲವು ಬಗೆಯ ಸಂಯುಕ್ತ ಕ್ರಿಯಾಸೂಚಕ ಕೃದಂತಗಳು ರಚನೆಯಾಗುತ್ತವೆ. ಇವುಗಳನ್ನು ಸಮಯ ಕ್ರಿಯಾಸೂಚಕ ಕೃದಂತ' ರೀತಿ ಕ್ರಿಯಾಸೂಚಕ ಕೃದಂತ. ಪರಿಮಿತಿ ಕ್ರಿಯಾಸೂಚಕ ಕೃದಂತ, ವಿತರಣಾ ಕ್ರಿಯಾ ಸೂಚಕ ಕೃದಂತ ಎಂದು ಕರೆಯಬಹುದು.

1. ಸಮಯ ಕ್ರಿಯಾಸೂಚಕ ಕೃದಂತಗಳು :

ಸಮಯ ಕ್ರಿಯಾಸೂಚಕ ಕೃದಂತದಲ್ಲಿ ಬಳಸಲಾಗುವ ಪ್ರತ್ಯಯಗಳು ಪೋತು । ಪೊಟುತು, ಮುನ್ । ಮುನ್ಪು, ಪಿನ್ । ಪಿನ್ಪು । ಪಿನ್ನಾಲ್ । ಪಿಱಕು. ಮತ್ತು ಉಟನ್ । ಉಟನೇ. ಇವುಗಳಲ್ಲಿ ಪೋತು ಎಂಬುದು ವರ್ತಮಾನಕಾಲ, ಭೂತಕಾಲ, ಭವಿಷ್ಯತ್‌ಕಾಲ ಮತ್ತು ನಿಷೇಧಾರ್ಥಕ ಸಂಬಂಧ ಸೂಚಕ ಕೃದಂತಗಳೊಡನೆ ಬರುತ್ತದೆ. ಮುನ್ ಎಂಬುದು ಭವಿಷ್ಯತ್‌ಕಾಲ ಮತ್ತು ನಿಷೇಧಾರ್ಥಕ ಸಂಬಂಧ ಸೂಚಕ ಕೃದಂತಗಳೊಡನೆಯೂ ಇತರ ಪ್ರತ್ಯಯಗಳು ಭೂತಕಾಲ ಸಂಬಂಧ ಸೂಚಕ ಕೃದಂತ ದೊಡನೆಯೂ ಬರುತ್ತವೆ.

ಅ) ಸಂಬಂಧ ಸೂಚಕ ಕೃದಂತ + [ಪೋತು / ಪೊಟುತು]

ಉದಾ : ವರುಕಿಱ + [ಪೋತು / ಪೊಟುತು] 'when Sb./Sth, comes'

ವನ್ತ + [ಪೋತು / ಪೊಟುತು] 'when Sb./ Sth came'

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವರುಂ + { ಪೋತು / ಪೊಟಿುತು } 'when Sb./ Sth. comes'

ವರಾತ + { ಪೋತು / ಪೊಟಿುತು } 'when Sb./ Sth. does not come'

ಆ) ಸಂಬಂಧ ಸೂಚಕ ಕೃದಂತ + { ಮುನ್ / ಮುನ್ಪು }

ಉದಾ : ವರುಂ + { ಮುನ್ / ಮುನ್ಪು } 'before Sb./ Sth. comes'

ವಾರಾ + [ಮುನ್ / ಮುನ್ಪು] 'before Sb /Sth. does not come'

ಇ) ಸಂಬಂಧ ಸೂಚಕ ಕೃದಂತ + { [ಪಿನ್ / ಪಿನ್ಪು / ಪಿಱಕು] / [ಉಟನ್ / ಉಟನೇ] }

ಉದಾ : ವನ್ತ + { ಪಿನ್ / ಪಿನ್ಪು / ಪಿಱಕು } 'after Sb./ Sth. came'

ವನ್ತ + [ಉಟನ್ / ಉಟನೇ] 'as soon as Sb./Sth, came'

2. ರೀತಿ ಕ್ರಿಯಾಸೂಚಕ ಕೃದಂತಗಳು :

ರೀತಿ ಕ್ರಿಯಾಸೂಚಕ ಕೃದಂತಕ್ಕೆ ಬರುವ ಪ್ರತ್ಯಯಂಗಳು ಪಟಿ, ವಾಱು, ಮತ್ತು ವಣ್ಣಂ.

ಸಂಬಂಧ ಸೂಚಕ ಕೃದಂತ + { ಪಟಿ / ವಾಱು / ವಣ್ಣಂ }

ಉದಾ : ಚೊನ್ನ + { ಪಟಿ / ವಾಱು / ವಣ್ಣಂ } 'as Sb said'

ಚೊಲ್ಕಿಱ + { ಪಟಿ / ವಾಱು / ವಣ್ಣಂ } 'as Sb. says'

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಿಮಿತಿ ಕ್ರಿಯಾ ಸೂಚಕ ಕೃದಂತ :

ಪರಿಮಿತಿ ಕ್ರಿಯಾಸೂಚಕ ಕೃದಂತಕ್ಕೆ ಬರುವ ಪ್ರತ್ಯಯಗಳು ವರೈ, ವರೈಯಿಲ್ ಮತ್ತು ಮಟ್ಟುಂ.

ಸಂಬಂಧ ಸೂಚಕ ಕೃದಂತ + { ವರೈ / ವರೈಯಿಲ್ / ಮಟ್ಟುಂ }

ಉದಾ : ವರುಕಿಐ + { ವರೈ / ವರೈಯಿಲ್ / ಮಟ್ಟುಂ } 'until Sb /Sth, comes'

ವರುಂ + { ವರೈ / ವರೈಯಿಲ್ / ಮಟ್ಟುಂ } 'until Sb./Sth, comes'

4) **ವಿತರಣಾ ಕ್ರಿಯಾಸೂಚಕ ಕೃದಂತಗಳು :**

ಉಳಿದ ಮೂರು ಕ್ರಿಯಾಸೂಚಕ ಕೃದಂತಗಳಂತೆ ಈ ಕೃದಂತ ಸಾಮಾನ್ಯವಾದುದಲ್ಲ. ಇದರ ರಚನೆ ಸಂಬಂಧ ಸೂಚಕ ಕೃದಂತ + ತೋಱುಂ।ತೊಱುಂ. ಈ ಪ್ರತ್ಯಯ ಭವಿಷ್ಯತ್‌ಕಾಲ ಸಂಬಂಧಸೂಚಕ ಕೃದಂತದೊಡನೆ ಮಾತ್ರ ಬರುವುದು ಗಮನಾರ್ಹ ಅಂಶ.

ಉದಾ : ವರುಂ + [ತೋಱುಂ / ತೊಱುಂ] 'every time when Sb/ Sth. comes'

ಆಯುಂ + [ತೋಱುಂ / ತೊಱುಂ] 'whenever Sb. studies'

೨) **ಸಂಯುಕ್ತ ಸಂಬಂಧ ಸೂಚಕ ಕೃದಂತಗಳು :**

ತಮಿಳು ಭಾಷೆಯಲ್ಲಿ ಕೆಲವು ಸಂಯುಕ್ತ ಸಂಬಂಧಸೂಚಕ ಕೃದಂತಗಳೂ ಬಳಕೆಯಲ್ಲಿವೆ. ಈ ಬಗೆಯ ಕೃದಂತಗಳು ವೇಂಟಿಯ, ಕೂಟಿಯ, ತಕ್ಕ, ವಲ್ಲ ಮುಂತಾದವುಗಳನ್ನು ಪೂರ್ವಕಾಲಿಕ ಕೃದಂತದೊಡನೆ ಸೇರಿಸುವುದರಿಂದ ರಚನೆಯಾಗುತ್ತವೆ.

ಉದಾ : ಪಾರ್‌ಕ್ಕ + ವೇಂಟಿಯ '(Sb./Sth.) one should see'
ಪಾಟ + ಕೂಟಿಯ '(Sb.) who can sing'
ಪಾರ್‌ಕ್ಕ + ತಕ್ಕ '(Sth.) worth seeing'
ಪಾಟ + ವಲ್ಲ '(Sb.) who can sing'

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಯುಕ್ತ ನಿಷೇಧಾರ್ಥಕ ಕ್ರಿಯಾಪದಗಳು :

ತಮಿಳಿನಲ್ಲಿ ಸಂಯುಕ್ತ ನಿಷೇಧಾರ್ಥಕ ರಚನೆ ಕ್ರಮರಹಿತವೂ ಗೊಂದಲಮಯವೂ ಆಗಿದೆ. ಆದರೂ ಅವುಗಳನ್ನು ಸ್ಪಷ್ಟಪಡಿಸಲು ಪ್ರಯತ್ನ ಮಾಡಲಾಗಿದೆ.

ಅ) ಅಪೇಕ್ಷಿತ ನಿಷೇಧಾರ್ಥಕ :

ಕ್ರಿಯಾ ಮೂಲರೂಪದೊಂದಿಗೆ ಆಮಲ್ ಮತ್ತು ಇರುಕ್ಕಟ್ಟುಂ ಎಂಬುವುಗಳನ್ನು ಸೇರಿಸಿದರೆ ರಚಿತವಾಗುವುದೇ ಅಪೇಕ್ಷಿತ ನಿಷೇಧಾರ್ಥಕ ಕ್ರಿಯಾಪದ.

ಉದಾ : ವರ್ + ಆಮಲ್ + ಇರುಕ್ಕಟ್ಟುಂ 'let Sb. / Sth. not come'

ಕೆಲವು ಬಾರಿ ಇರುಕ್ಕಟ್ಟುಂ ಎಂಬುದಕ್ಕೆ ಬದಲಾಗಿ ಪೋಕಟ್ಟುಂ ಎಂಬುದು ಬರಬಹುದು.

ಆ) ಇಚ್ಛಾರ್ಥಕ ನಿಷೇಧಾರ್ಥಕ :

ಕ್ರಿಯಾಮೂಲ + ಆತು + ಒಟಿಕ ಎಂಬ ರಚನೆಯಲ್ಲಿ ಇಚ್ಛಾರ್ಥಕ ನಿಷೇಧಾರ್ಥಕ ಬರುತ್ತದೆ.

ಉದಾ ; ವರ್ + ಆತ್ + ಒಟಿಕ 'may Sb./Sth, not come'

ಇ) ಸಂಭಾವನಾತ್ಮಕ ನಿಷೇಧಾರ್ಥಕ :

ಸಂಭಾವನಾತ್ಮಕ ನಿಷೇಧಾರ್ಥಕ ಕ್ರಿಯಾಪದದ ರಚನೆ ಕ್ರಿಯಾಮೂಲ + ಆಮಲ್ + ಇರುಕ್ಕಲಾಂ/ಪೋಕಲಾಂ ಎಂಬುದು.

ಉದಾ . ವರ್ + ಆಮಲ್ + [ಇರುಕ್ಕಲಾಂ / ಪೋಕಲಾಂ] 'Sb./Sth. may not come'

ಈ) ಪೂರ್ವಕಾಲಿಕ ನಿಷೇಧಾರ್ಥಕ ಕೃದಂತ :

ಕ್ರಿಯಾಮೂಲ + ಆಮಲ್/ಕಾಮಲ್ + ಇರುಕ್ಕ/ಪೋಕ ಎಂಬ ರಚನೆಯಲ್ಲಿ ಬರುವುದು ಈ ಪೂರ್ವಕಾಲಿಕ ನಿಷೇಧಾರ್ಥಕ ಕೃದಂತ.

ಉದಾ : ಕೇಳ್ + ಕಾಮಲ್ [ಇರುಕ್ಕ / ಪೋಕ] 'not to ask'

ಉ) ಸಂಯೋಜಕ ನಿಷೇಧಾರ್ಥಕ ಕೃದಂತ :

ಇದರ ರಚನೆ ಕ್ರಿಯಾಮೂಲ + ಆಮಲ್/ಕಾಮಲ್ + ಇರುನ್ತು/ಪೋಯಿಟ್ ಎಂಬುದು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಚೆಯ್ + ಆಮಲ್ + [ಇರುನ್ತು / ಪೋಯ್] 'having not done'

ಪೋ + ಕಾಮಲ್ + ಇರುನ್ತು 'having not gone'

ಊ) ನಿಯತ ನಿಷೇಧಾರ್ಥಕ ಕೃದಂತ :

ತಮಿಳಿನಲ್ಲಿ ಈ ನಿಯತ ನಿಷೇಧಾರ್ಥಕ ಕೃದಂತ ಕೆಳಕಂಡ ರಚನೆಯಲ್ಲಿ ಬರುತ್ತದೆ.

ಕ್ರಿಯಾಮೂಲ + [ಆಮಲ್ / ಕಾಮಲ್] + [ಇರುನ್ತಾಲ್ / ಪೋನಾಲ್]

ಉದಾ : ವರ್ + ಆಮಲ್ + [ಇರುನ್ತಾಲ್ / ಪೋನಾಲ್] 'if Sb/Sth. did not come'

ಪೋ + ಕಾಮಲ್ + [ಇರುನ್ತಾಲ್ / ಪೋನಾಲ್] 'if Sb/Sth. did did not go'

ಎ) ಕ್ರಮಾಗತ ನಿಷೇಧಾರ್ಥಕ ಕೃದಂತ :

ಇದು ಕ್ರಿಯಾಮೂಲ + ಆಮಲ್ + ಪೋನತುಂ ಎಂಬ ರಚನೆಯಲ್ಲಿ ಬರುತ್ತದೆ

ಉದಾ : ಚೆಯ್ + ಆಮಲ್ + ಪೋನತುಂ 'as soon as Sb, / Sth, did not do'

ಏ) ಸಮಕಾಲಿಕ ನಿಷೇಧಾರ್ಥಕ ಕೃದಂತ :

ಕ್ರಿಯಾಮೂಲ + ಆಮಲ್ + ಇರುಕ್ಕೈಯಿಲ್ ಎಂಬ ರಚನೆಯಲ್ಲಿ ಬರುವುದು ಸಮಕಾಲಿಕ ನಿಷೇಧಾರ್ಥಕ ಕೃದಂತ.

ಉದಾ : ಚೆಯ್ + ಆಮಲ್ + ಇರುಕ್ಕೈಯಿಲ್ 'when Sb, / Sth. has not done'

ಐ) ಕೃನ್ನಾಮ ನಿಷೇಧಾರ್ಥಕ ಕೃದಂತ :

ಕೃನ್ನಾಮ ನಿಷೇಧಾರ್ಥಕ ಕೃದಂತದ ರಚನೆ ತಮಿಳು ಭಾಷೆಯಲ್ಲಿ ಹೀಗಿದೆ :

೧) ಕ್ರಿಯಾ ಮೂಲ + ಆಮಲ್ + ಇರುತ್ತಲ್

ಉದಾ : ಚೆಯ್ + ಆಮಲ್ + ಇರುತ್ತಲ್ 'act of not doing

೨) ಕ್ರಿಯಾಮೂಲ + ಆಮಲ್ + ಇರು + ಕಾ.ಸೂ.ಪ್ರ. + ಅತು

ಉದಾ : ಚೆಯ್ + ಆಮಲ್ + ಇರು + ನ್ತ್ + ಅತು 'the fact that Sb. has not done'

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೩) ಕ್ರಿಯಾಮೂಲ + ಆಮಲ್ + [ಇರುನ್ತ / ಇರುಕ್ಕಿನ್ಱ] + ಮೈ

ಉದಾ : ಚೆಯ್ + ಆಮಲ್ + ಇರುನ್ತ + ಮೈ 'the fact that Sb. did not do'

ಚೆಯ್ + ಆಮಲ್ + ಇರುಕ್ಕಿನ್ಱ + ಮೈ 'the fact that Sb. does not do'

ಸ್ವೀಕೃತ ಕೃದಂತ :

ಸರಳ ಪೂರ್ವಕಾಲಿಕ ಕೃದಂತ ಅಥವಾ ಸರಳ ಸಂಯೋಜಕ ಕೃದಂತ ಮತ್ತೆ ಮತ್ತೆ ಬಂದು ಈ ಸ್ವೀಕೃತ ಕೃದಂತವನ್ನು ರಚಿಸುತ್ತದೆ.

ಉದಾ : ವರ ವರ 'the more Sb./Sth. comes'

ವನ್ತು ವನ್ತು 'having come repeatedly'

ಮೇಲಿನ ವಿವರಣೆ ಇಂದಿನ ತಮಿಳು ಭಾಷೆಯ ಕ್ರಿಯಾಪದಗಳ ರಚನೆ ಮತ್ತು ವರ್ಗೀಕರಣವನ್ನು ಸ್ಪಷ್ಟಪಡಿಸುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೧೭. ಕಾಲಸೂಚಕ ಪ್ರತ್ಯಯಗಳು

ಪ್ರಾಚೀನ ಕಾಲದ ತಮಿಳು ಭಾಷೆಯಲ್ಲಿ ಭೂತಕಾಲ ಮತ್ತು ಅಭೂತಕಾಲ ಎಂಬ ಎರಡು ಕಾಲಸೂಚನೆಗಳು ಮಾತ್ರವೆ ಇದ್ದವು. ಅನಂತರ ಅಭೂತಕಾಲ, ವರ್ತಮಾನಕಾಲ ಮತ್ತು ಭವಿಷ್ಯತ್‌ಕಾಲ ಎಂದು ವಿಕಾಸಕೊಂಡು ಕಾಲಸೂಚನೆಗಳು ಮೂರಾದವು ಎಂಬುದು ಭಾಷಾವಿಜ್ಞಾನಿಗಳ ಅಭಿಪ್ರಾಯ. ಆದುದರಿಂದಲೇ ತೊಲ್ಕಾಪ್ಪಿಯರ್ ತಮ್ಮ ವ್ಯಾಕರಣ ಗ್ರಂಥದಲ್ಲಿ ಕಾಲಸೂಚನೆ ಮೂರು ಎಂದು ಹೇಳಿದ್ದರೂ ಅವುಗಳನ್ನು ಸೂಚಿಸುವ ಪ್ರತ್ಯಯಗಳನ್ನು ಕುರಿತು ಏನೂ ಹೇಳಲಿಲ್ಲ ವೆಂದೂ ಭಾಷಾ ವಿಜ್ಞಾನಿಗಳು ವಾದಿಸುತ್ತಾರೆ. ಇವರ ವಾದ ಹೇಗಿದ್ದರೂ ತೊಲ್ಕಾಪ್ಪಿಯರ್‌ಗೆ ಅನಂತರ ಬಂದ ವ್ಯಾಕರಣಕಾರರು ಕಾಲಸೂಚಕ ಮೂರು ಎಂದು ಹೇಳುವುದರಿಂದಲೂ ಸಾಮಾನ್ಯವಾಗಿ ಎಲ್ಲಾ ಭಾಷೆಗಳಲ್ಲೂ ಮೂರು ವಿಧವಾದ ಕಾಲ ಸೂಚನೆಗಳು ಕಂಡು ಬರುವುದರಿಂದಲೂ ಕಾಲಸೂಚಕ ಮೂರು ಎಂದು ದೃಢವಾಗಿ ಹೇಳಬಹುದು.

ಭೂತಕಾಲ ಸೂಚಕ ಪ್ರತ್ಯಯಗಳು :

ಅ) ಪೂರ್ಣ ಕ್ರಿಯಾಪದಗಳಲ್ಲಿ :

ಸಂಘ ಕಾಲದ ತಮಿಳು ಭಾಷೆಯಲ್ಲಿ-ತ್,-,-ತ್ತ್-,-ನ್ತ್-,-ಇನ್-ಮುಂತಾದ ಪ್ರತ್ಯಯಗಳು ಭೂತಕಾಲ ಸೂಚಕ ಪ್ರತ್ಯಯಗಳಾಗಿ ಬಳಸಲಾಗಿವೆ. ಈ ಪ್ರತ್ಯಯ ಗಳೊಂದಿಗೆ ಕೆಲವು ಕ್ರಿಯಾಪದಗಳಲ್ಲಿ ಬರುವ ಅಂತ್ಯ ಸ್ಪರ್ಶ ಧ್ವನಿಯನ್ನು ಸಜಾತೀಯ ಸಂಯುಕ್ತ ಸ್ಪರ್ಶ ಧ್ವನಿಯಾಗಿ ಮಾಡುವುದರ ಮೂಲಕವೂ ಭೂತಕಾಲವನ್ನು ಸೂಚಿಸಬಹುದು.

ಉದಾ : ಚೆಯ್ + ತ್ + ಆನ್ > ಚೆಯ್ತಾನ್
ಪಟಿ + ತ್ತ್ + ಆನ್ > ಪಟಿತ್ತಾನ್
ನಟ + ನ್ತ್ + ಆನ್ > ನಟನ್ತಾನ್
ಓಟು + ಇನ್ + ಆನ್ > ಓಟಿನಾನ್
ಚುಟು + ಆನ್ > ಚುಟ್ಟಾನ್

—ಇ-ಎಂಬ ಭೂತಕಾಲ ಪ್ರತ್ಯಯದ ವಿಕೃತ ರೂಪಗಳು—ಇಯ್—,ಇನ್— ಎಂಬುವು, ಇವುಗಳಲ್ಲಿ—ಇ—ಎಂಬುದು ಕ್ರಿಯಾಸೂಚಕ ಕೃದಂತದಲ್ಲೂ—ಇಯ್— ಎಂಬುದು ಸಂಘಕಾಲದ ತಮಿಳಿನಲ್ಲಿ ಸಂಬಂಧ ಸೂಚಕ ಕೃದಂತದಲ್ಲೂ ಕೃದಂತ ಪ್ರತ್ಯಯಗಳ ಹಿಂದೆ ಬರುತ್ತವೆ. —ಇನ್—ಎಂಬುದು ಪೂರ್ಣ ಕ್ರಿಯಾಪದದಲ್ಲಿ ಬಳಸ ಲಾಗಿದೆ. ಸಂಘಕಾಲಕ್ಕೆ ಅನಂತರ—ಇನ್—ಎಂಬುದು ಸಂಬಂಧ ಸೂಚಕ ಕೃದಂತದಲ್ಲೂ ಬಳಕೆಯಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಧುನಿಕ ತಮಿಳು ಭಾಷೆಯಲ್ಲಿ–ಇನ್–ಮತ್ತು–ಇಯ್–ಎಂಬ ಪ್ರತ್ಯಯಗಳು ಕೃದಂತ ಪ್ರತ್ಯಯಗಳಿಗೆ ಹಿಂದೆ ಸ್ವಚ್ಛಂದ ಪರಿವರ್ತನೆಯಲ್ಲಿ ಬರುತ್ತವೆ.

ಉದಾ : ಓಟ್ + [ಇನ್ / ಇಯ್] + ಅ > [ಓಟಿನ್ / ಓಟಿಯ]

ಸಂಘ ಕಾಲದ ತಮಿಳು ಭಾಷೆಯಲ್ಲಿ ಪೂರ್ಣಕ್ರಿಯಾಪದಗಳು, ಕಾಲಸೂಚಕ ಪ್ರತ್ಯಯಗಳು ಮತ್ತು ಲಿಂಗ ಪ್ರತ್ಯಯಗಳ ಮಧ್ಯದಲ್ಲಿ ಆಗಮವನ್ನು ಪಡೆದೂ ಪಡೆಯದೆಯೂ ಬಂದವು. ಪೂರ್ಣ ಕ್ರಿಯಾಪದದ ಲಿಂಗ ಪ್ರತ್ಯಯ ದೀರ್ಘ ಸ್ವರದಲ್ಲಿ ಆರಂಭವಾದರೆ ಅದು ಆಗಮವನ್ನು ಪಡೆಯುವುದಿಲ್ಲ ; ಹೃಸ್ವಸ್ವರದಲ್ಲಿ ಆರಂಭವಾದರೆ ಅದು ಆಗಮವನ್ನು ಪಡೆದುಬರುತ್ತದೆ.

ಉದಾ : ಉಣ್ + ಟ್ + ಆನ್ > ಉಂಟಾನ್

ಉಣ್ + ಟ್ + ಅನ್ + ಅನ್ > ಉಂಟನನ್

ಆಧುನಿಕ ತಮಿಳು ಭಾಷೆಯಲ್ಲಿ ಆಗಮ ನಪುಂಸಕಲಿಂಗ ಬಹುವಚನ ಲಿಂಗ ಪ್ರತ್ಯಯದ ಹಿಂದೆ ಕಡ್ಡಾಯವಾಗಿ ಬರುತ್ತದೆ. ಇತರ ಲಿಂಗ ಪ್ರತ್ಯಯಗಳು ಆಗಮವನ್ನು ಪಡಯದೆ ಬರುವುದನ್ನು ಸಹಜವಾಗಿ ನೋಡಬಹುದು. ಆಡು ಭಾಷೆಯಲ್ಲಿ–ನ್ತ್–,-ತ್ತ್–ಎಂಬ ಭೂತಕಾಲಸೂಚಕ ಪ್ರತ್ಯಯಗಳು–ಞ್ಚ್–,–ಚ್ಚ್– ಎಂದು ತಾಲವ್ಯೀಕರಣವಾಗಿವೆ. ಈ ತಾಲವ್ಯೀಕರಣ–ಇ,–ಯ್,–ಎ ಎಂಬ ಧ್ವನಿಗಳಲ್ಲಿ ಅಂತ್ಯವಾಗುವ ಧಾತುಗಳ ಮುಂದೆ ಬರುವಾಗ ಮಾತ್ರ ಜರಗುತ್ತದೆ.

ಉದಾ : ಚಾಯ್ + ನ್ತ್ + ಆನ್ > ಚಾಯ್ಞ್ಚಾನ್

ಪಡಿ + ತ್ತ್ + ಆನ್ > ಪಡಿಚ್ಚಾನ್

ಆ) ಅಪೂರ್ಣ ಕ್ರಿಯಾಪದಗಳಲ್ಲಿ :

೧) **ಭೂತಕಾಲ ಕ್ರಿಯಾಸೂಚಕ ಕೃದಂತದಲ್ಲಿ :**

ಪೂರ್ಣ ಕ್ರಿಯಾಪದಗಳಲ್ಲಿ ಬರುವ ಭೂತಕಾಲಸೂಚಕ ಪ್ರತ್ಯಯಗಳೇ ಈ ಕೃದಂತದಲ್ಲೂ ಬರುತ್ತವೆ. ಈ ಬಗೆಯ ಕೃದಂತಗಳಲ್ಲಿ ಕಾಲಸೂಚಕ ಪ್ರತ್ಯಯಗಳ ಮುಂದೆ ಕ್ರಿಯಾಸೂಚಕ ಕೃದಂತ ಪ್ರತ್ಯಯವಾದ–ಉ ಕಾರ ಬರುತ್ತದೆ. ಕೆಲವು ಪದಗಳಲ್ಲಿ ಕೃದಂತ ಪ್ರತ್ಯಯದ ವಿಕೃತರೂಪವಾಗಿ 'ϕ' ಬರುತ್ತದೆ.

ಉದಾ : ಉಟು + ತ್ + ಉ > ಉಟುತು

ನಟ + ನ್ತ್ + ಉ > ನಟನ್ತು

ಪಾರ್ + ತ್ತ್ + ಉ > ತಪಾರ್ತ್ತು

ನಟು + ಟ್ + ಉ > ನಟ್ಟು

ಪಾಟು + ಇ + ϕ > ಪಾಟಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೨) ಭೂತಕಾಲ ಸಂಬಂಧ ಸೂಚಕ ಕೃದಂತದಲ್ಲಿ :

ಇದರಲ್ಲೂ ಮೇಲೆ ಹೇಳಿದ ಭೂತಕಾಲ ಸೂಚಕ ಪ್ರತ್ಯಯಗಳೆಲ್ಲಾ ಬರುತ್ತವೆ. ಆದರೆ ಇದರಲ್ಲಿ ಕಾಲಸೂಚಕ ಪ್ರತ್ಯಯಗಳಿಗೆ ಮುಂದೆ ಸಂಬಂಧ ಸೂಚಕ ಕೃದಂತ ಪ್ರತ್ಯಯವಾದ-ಅ ಕಾರ ಬರುತ್ತದೆ.

ಉದಾ : ಚೆಯ್ + ತ್ + ಅ > ಚೆಯ್ತ
ವ + ನ್ತ್ + ಅ > ವನ್ತ
ಪಡಿ + ತ್ತ್ + ಅ > ಪಡಿತ್ತ
ಓಡ್ + ಇಯ್ + ಅ > ಓಡಿಯ
ಕೆಟ್ + ಟ್ + ಅ > ಕೆಟ್ಟ

ವರ್ತಮಾನಕಾಲಸೂಚಕ ಪ್ರತ್ಯಯಗಳು :

ಸಂಘಕಾಲಕ್ಕೆ ಅನಂತರ-ಕಿಱ್-,-ಕಿನ್ಱ್-ಎಂಬುವು ವರ್ತಮಾನಕಾಲಸೂಚಕ ಪ್ರತ್ಯಯಗಳಾಗಿ ಬಳಸಲಾಗಿವೆ. ಅವುಗಳ ವಿಕೃತ ರೂಪಗಳು-ಕ್ಕಿಱ್-,-ಕ್ಕಿನ್ಱ್-ಎಂಬುವು. ಸುಬ್ರಮಣ್ಯಶಾಸ್ತ್ರಿ ಎಂಬವರು ಈ ಪ್ರತ್ಯಯಗಳು ಸಾಹಿತ್ಯಗಳಲ್ಲಿ ಕ್ರಿ.ಶ. 12ನೇ ಶತಮಾನದವರೆಗೂ ಅಪರೂಪವಾಗಿಯೇ ಬಳಕೆಯಲ್ಲಿದ್ದವು ಎಂದು ಹೇಳುತ್ತಾರೆ.

ಸಂಘಕಾಲ ಸಾಹಿತ್ಯಗಳಲ್ಲಿ ಪರಿಪಾಡಲ್ ಎಂಬ ಸಾಹಿತ್ಯದಲ್ಲಿ ಮಾತ್ರ ಒಂದೇ ಒಂದು ಪದದಲ್ಲಿ-ಕಿನ್ಱ್-ಎನ್ನುವ ಪ್ರತ್ಯಯ ಬಂದಿದೆ.

ಉದಾ : ಚೇರ್ + ಕಿನ್ಱ್ + ಅ > ಚೇರ್ಕಿನ್ಱ

ಆದರೆ ಸಂಘಕಾಲಕ್ಕೆ ಅನಂತರದ ಕಾವ್ಯಗಳಾದ ಶಿಲಪ್ಪದಿಗಾರಂ, ಮಣಿಮೇಖಲೈಗಳಲ್ಲಿ ಈ ಪ್ರತ್ಯಯಗಳು ಹಲವಾರು ಸ್ಥಳಗಳಲ್ಲಿ ಕಂಡುಬರುತ್ತವೆ.

ಉದಾ : ಓಸನಿ + ಕ್ಕಿನ್ಱ್ + ಅ > ಓಸನಿಕ್ಕಿನ್ಱ
ಊರ್ + ಕಿನ್ಱ್ + ಅ > ಊರ್ಕಿನ್ಱ } ಶಿಲಪ್ಪದಿಗಾರಂ
ಉರುಳ್ + ಕ್ಱಿನ್ + ಅ > ಉರುಳ್ಕಿನ್ಱ
ಸಾದಿ + ಕ್ಕಿನ್ಱ್ + ಅ > ಸಾದಿಕ್ಕಿನ್ಱ-ಮಣಿಮೇಖಲೈ

ಹಳೆಯ ತಮಿಳು ಸಾಹಿತ್ಯಗಳಲ್ಲಿ ಈ ಪ್ರತ್ಯಯಗಳು ಸಂಬಂಧಸೂಚಕ ಕೃದಂತದಲ್ಲಿ ಮಾತ್ರವೆ ಬಂದವು ಎಂಬುದು ಗಮನಾರ್ಹ ಅಂಶ. ಶೈವ ಮತ್ತು ವೈಷ್ಣವ ಸಾಹಿತ್ಯಗಳಲ್ಲಿ ಈ ಪ್ರತ್ಯಯಗಳು ಪೂರ್ಣ ಕ್ರಿಯಾಪದಗಳಲ್ಲಿಯೂ ಬರುವುದನ್ನು ನೋಡಬಹುದು.

ಕ್ರಿ.ಶ. 11ನೇ ಶತಮಾನಕ್ಕೆ ಸೇರಿದ ವ್ಯಾಕರಣವಾದ ವೀರಚೋಳಿಯಂ ವರ್ತಮಾನಕಾಲ ಪ್ರತ್ಯಯಗಳನ್ನು ಕುರಿತು ಚರ್ಚಿಸುವಾಗ-ಕಿನ್ಱ್-ಎಂಬ ಪ್ರತ್ಯಯ ಪ್ರಥಮ ಪುರುಷ ಕ್ರಿಯಾಪದಗಳಲ್ಲಿ ಪುಂಸ್ತ್ರೀಲಿಂಗ, ನಪುಂಸಕಲಿಂಗ ಏಕವಚನ ಮತ್ತು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಹುವಚನ ಪ್ರತ್ಯಯಗಳಿಗೆ ಹಿಂದೆ ಬರಬಹುದು ಎಂದೂ ಇತರ ಲಿಂಗಪ್ರತ್ಯಯಗಳಿಗೆ -ಕಿಜ್- ಎಂಬ ಪ್ರತ್ಯಯ ಬರಬಹುದೆಂದೂ ವಿವರಿಸಿದೆ.

ಉದಾ : ವರು + ಕಿನ್ಱ್ + { ಆರ್ / ಅದು / ಅನ }

ವರು + ಕಿಜ್ + { ಏನ್ / ಓಂ / ಆಯ್ / ಈರ್ (ಗಳ್) / ಆನ್ / ಆಳ್ }

ಆಧುನಿಕ ತಮಿಳುಭಾಷೆಯಲ್ಲಿ-ಕಿನ್ಱ್-, -ಕಿಜ್-ಎಂಬುವು ಪ್ರಥಮಪುರುಷ ನಪುಂಸಕಲಿಂಗ ಬಹುವಚನ ಪ್ರತ್ಯಯವನ್ನು ಬಿಟ್ಟು ಇತರ ಎಲ್ಲಾ ಲಿಂಗ ಪ್ರತ್ಯಗಳ ಹಿಂದೆಯೂ ಸ್ವಚ್ಛಂದ ಪರಿವರ್ತನೆಯಲ್ಲಿ ಬರುತ್ತವೆ. ಆದರೆ ಪ್ರಥಮಪುರುಷ ನಪುಂಸಕ ಲಿಂಗ ಬಹುವಚನದಲ್ಲಿ ಮಾತ್ರ-ಕಿನ್ಱ್-ಎಂಬ ಪ್ರತ್ಯಯ ಒಂದೇ ಬರುತ್ತದೆ.

ಉದಾ : ಚೆಯ್ + [ಕಿನ್ಱ್ / ಕಿಜ್] + ಏನ್

ಚೆಯ್ + [ಕಿನ್ಱ್ / ಕಿಜ್] + ಓಂ

ಚೆಯ್ + [ಕಿನ್ಱ್ / ಕಿಜ್] + ಆಯ್

ಚೆಯ್ + [ಕಿನ್ಱ್ / ಕಿಜ್] + ಈರ್(ಗಳ್)

ಚೆಯ್ + [ಕಿನ್ಱ್ / ಕಿಜ್] + ಆನ್

ಚೆಯ್ + [ಕಿನ್ಱ್ / ಕಿಜ್] + ಆಳ್

ಚೆಯ್ + [ಕಿನ್ಱ್ / ಕಿಜ್] + ಆರ್

ಚೆಯ್ + [ಕಿನ್ಱ್ / ಕಿಜ್] + ಅದು

ಚೆಯ್ + ಕಿನ್ಱ್ + ಅನ

ಮಧ್ಯಕಾಲದ ತಮಿಳುಭಾಷೆಯಲ್ಲಿ-ಅನಿನ್ಱ್-ಎಂಬುದೂ ವರ್ತಮಾನಕಾಲ ಸೂಚಕ ಪ್ರತ್ಯಯವಾಗಿ ಬಳಸಲಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ಚೆಯ್ + ಆನಿನ್ಱ್ + ಅನ್

ವರ್ತಮಾನಕಾಲ ಸೂಚಕ ಪ್ರತ್ಯಯಗಳು ಸ್ವಾಭಾವಿಕ ಮತ್ತು ನಿಶ್ಚಿತ ಅರ್ಥಗಳಲ್ಲೂ ಬಳಕೆಯಾಗಿವೆ.

ಉದಾ : ಸೂರಿಯನ್ ಕಿೞಕ್ಕೇ ಉದಿಕ್ಕಿನ್ಱದು (ಸ್ವಾಭಾವಿಕ)
ನಾನ್ ನಾಳೈವರುಕಿಱೇನ್ (ನಿಶ್ಚಿತ)

ಕೆಲವೊಮ್ಮೆ ಇವು ಭವಿಷ್ಯತ್‌ಕಾಲವನ್ನು ಸೂಚಿಸುವುದನ್ನೂ ಗಮನಿಸಬಹುದು.

ಉದಾ : ಪಿರದಮರ್ ನಾಳೈ ಮೈಸೂರುಕ್ಕು ವರುಕಿಱಾರ್

ಅಪೂರ್ಣ ಕ್ರಿಯಾಪದಗಳಲ್ಲಿ :

ವರ್ತಮಾನಕಾಲ ಸಂಬಂಧ ಸೂಚಕ ಕೃದಂತದಲ್ಲಿ :

ವರ್ತಮಾನಕಾಲ ಸಂಬಂಧ ಸೂಚಕ ಕೃದಂತದಲ್ಲೂ ಮೇಲೆ ಹೇಳಿದ ವರ್ತಮಾನ ಕಾಲ ಸೂಚಕ ಪ್ರತ್ಯಯಗಳೇ ಬರುತ್ತವೆ. ಆದರೆ ಇಲ್ಲಿ ಈ ಪ್ರತ್ಯಯಗಳ ಮುಂದೆ ಸಂಬಂಧಸೂಚಕ ಕೃದಂತ ಪ್ರತ್ಯಯ ಬರುತ್ತದೆ.

ಉದಾ : ವರು + [ಕಿಱ್ / ಕಿನ್ಱ್] + ಅ

ಭವಿಷ್ಯತ್ ಕಾಲಸೂಚಕ ಪ್ರತ್ಯಯಗಳು :

ಉತ್ತಮ ಪುರುಷ, ಮಧ್ಯಮಪುರುಷ ಮತ್ತು ಪ್ರಥಮ ಪುರುಷ ಪುಂಸ್ತ್ರೀಲಿಂಗ ಬಹುವಚನ ಕ್ರಿಯಾಪದಗಳಲ್ಲಿ ಅನುನಾಸಿಕ ಧ್ವನಿಯಲ್ಲಿ ಕೊನೆಗೊಳ್ಳುವ ನಿರ್ಬಲ ಕ್ರಿಯಾಧಾತುಗಳ ಮುಂದೆ–ಪ–ಕಾರವೂ ಇತರ ನಿರ್ಬಲ ಕ್ರಿಯಾಧಾತುಗಳ ಮುಂದೆ–ವ–ಕಾರವೂ ಭವಿಷ್ಯತ್‌ಕಾಲ ಸೂಚಕ ಪ್ರತ್ಯಯಗಳಾಗಿ ಬರುತ್ತವೆ.

ಉದಾ : ಉಣ್ + ಪ್ + ಆರ್
ವರು + ವ್ + ಆನ್

ಸಬಲ ಕ್ರಿಯಾಪದಗಳಲ್ಲಿ–ಪ್ಪ್–ಎಂಬುದು ಭವಿಷ್ಯತ್‌ಕಾಲ ಸೂಚಕ ಪ್ರತ್ಯಯವಾಗಿ ಬರುತ್ತದೆ.

ಉದಾ : ಪಡಿ + ಪ್ಪ್ + ಅನ್

ಸಂಘಕಾಲದ ತಮಿಳುಭಾಷೆಯಲ್ಲಿ ಪ್ರಥಮ ಪುರುಷ ಪುಲ್ಲಿಂಗ ಏಕವಚನ, ಸ್ತ್ರೀಲಿಂಗ ಏಕವಚನ, ನಪುಂಸಕಲಿಂಗ ಏಕವಚನ ಮತ್ತು ಬಹುವಚನ ಕ್ರಿಯಾಪದಗಳಲ್ಲಿ–ಉಂ ಎಂಬ ಭವಿಷ್ಯತ್ ಕಾಲಸೂಚಕ ಪ್ರತ್ಯಯ ಕಾಣಸಿಕೊಳ್ಳುತ್ತದೆ. ಆದರೆ ಈ ಪ್ರತ್ಯಯದ ಮುಂದೆ ಯಾವ ಲಿಂಗ ಪ್ರತ್ಯಯವೂ ಬರುವುದಿಲ್ಲ.

ಉದಾ : ವರ್ + ಉಂ > ವರುಂ
ಅವನ್ ವರುಂ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಅವಳ್ ವರುಂ
ಅದು ವರುಂ
ಅವೈ ವರುಂ

ಆಧುನಿಕ ತಮಿಳುಭಾಷೆಯಲ್ಲಿ–ಉಂ ಎಂಬ ಪ್ರತ್ಯಯ ನಪುಂಸಕಲಿಂಗ ಏಕವಚನ ಮತ್ತು ಬಹುವಚನಗಳಿಗೆ ಮಾತ್ರವೆ ಬರುತ್ತದೆ. ಪ್ರಥಮಪುರುಷ ಪುಲ್ಲಿಂಗ ಮತ್ತು ಸ್ತ್ರೀಲಿಂಗ ಏಕವಚನಗಳಿಗೆ–ವ-ಕಾರ ಕಾಲಸೂಚಕ ಪ್ರತ್ಯಯವಾಗುತ್ತದೆ. ಇದರ ಮುಂದೆ ಅವುಗಳ ಲಿಂಗಪ್ರತ್ಯಯಗಳೂ ಬರುತ್ತವೆ.

ಉದಾ : ಅವನ್ ವರು+ವ್+ಆನ್
ಅವಳ್ ವರು+ವ್+ಆಳ್

ಕೆಲವು ಕ್ರಿಯಾಪದಗಳಲ್ಲಿ–ವ್–ಮತ್ತು–ಉಂ ಎರಡೂ ತನ್‌ವಿನೈ ಅರ್ಥದಲ್ಲೂ–ಪ್ಪ್– ಮತ್ತು–ಕ್ಕುಂ ಎರಡೂ ಪಿಱವಿನೈ ಅರ್ಥದಲ್ಲೂ ಬಳಸಲ್ಪಡುತ್ತವೆ.

ಉದಾ : ಚೇರ್ + ವ್ + ಏನ್ > ಚೇರ್ವೇನ್] ತನ್‌ವಿನೈ
ಚೇರ್ + ಉಂ > ಚೇರುಂ]
ಚೇರ್ + ಪ್ಪ್ + ಏನ್ > ಚೇರ್‌ಪ್ಪೇನ್] ಪಿಱವಿನೈ
ಚೇರ್ + ಕ್ಕುಂ > ಚೇರ್‌ಕ್ಕುಂ]

ಸಂಘಕಾಲದ ತಮಿಳು ಭಾಷೆಯಲ್ಲಿ–ಪ್ಪ್–ಮತ್ತು–ಕ್ಕುವ್–ಎರಡೂ ಸ್ವಚ್ಛಂದ ಪರಿವರ್ತನೆಯಲ್ಲಿ ಬರುವುದನ್ನು ನೋಡಬಹುದು.

ಉದಾ : ಕೊಡು + [ಪ್ಪ್ / ಕ್ಕುವ್] + ಏನ್
ಕೆಳ + [ಪ್ಪ್ / ಕ್ಕುವ್] + ಅಂ

ಇವುಗಳಂತೆಯೆ–ಕುವ್–ಎಂಬುದು–ವ-ಕಾರ–ಪ-ಕಾರಗಳೊಂದಿಗೆ ಸ್ವಚ್ಛಂದ ಪರಿವರ್ತನೆಯಲ್ಲಿ ಬರುತ್ತದೆ.

ಉದಾ : ಚೆಯ್ + [ಕುವ್ / ವ್] + ಏನ್
ಕಾಣ್ + [ಕುವ್ / ಪ್] + ಆಲ್

ಸಂಘಕಾಲದ ಸಾಹಿತ್ಯಗಳಲ್ಲಿ–ಕ-ಕಾರ ಉತ್ತಮಪುರುಷ ಕ್ರಿಯಾಪದಗಳಲ್ಲಿ ಭವಿಷ್ಯತ್‌ಕಾಲಸೂಚಕ ಪ್ರತ್ಯಯವಾಗಿ ಬರುವುದನ್ನು ನೋಡಬಹುದು. ಈ ಪ್ರತ್ಯಯಕ್ಕೆ ಮುಂದೆ–ಉ ಎಂಬ ಪ್ರತ್ಯಯ ಉತ್ತಮಪುರುಷ ಏಕವಚನ ಲಿಂಗ ಪ್ರತ್ಯಯವಾಗಿಯೂ–ಅಂ,–ಉಂ,–ಏಂ ಎಂಬುವು ಉತ್ತಮಪುರುಷ ಬಹುವಚನ ಪ್ರತ್ಯಯಗಳಾಗಿಯೂ ಬರುತ್ತವೆ. ಬಹುವಚನ ಲಿಂಗ ಪ್ರತ್ಯಯಗಳಲ್ಲಿ–ಅಂ ಎಂಬುದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಹಜವಾಗಿಯೂ-ಉಂ,-ಏಂ ಎಂಬುವು ವಿರಳವಾಗಿಯೂ ಬಳಸಲಾಗಿವೆ.

ಉದಾ : ಎನ್ + ಕ್ + ಉ > ಎನ್ಕು (ಉ. ಪು. ಏ ವ.)

ಉಣ್ + ಕ್ + ಉಂ > ಉಣ್ಕುಂ
ಪಾಡು + ಕ್ + ಅಂ > ಪಾಡುಕಂ (ಉ.ಪು.ಬ.ವ.)
ಪಾಡು + ಕ್ + ಏಂ > ಪಾಡುಕೇಂ

ಸ್ವಾಭಾವಿಕ ಮತ್ತು ಭವಿಷ್ಯತ್‌ಕಾಲ ಸಂಬಂಧ ಸೂಚಕ ಕೃದಂತ :

ಕ್ರಿಯಾ ಧಾತುವಿನೊಡನೆ-ಉಂ ಎಂಬ ಪ್ರತ್ಯಯವನ್ನು ಸೇರಿಸಿದರೆ ಈ ಬಗೆಯ ಕೃದಂತ ರಚನೆಯಾಗುತ್ತದೆ. ಈ ಪ್ರತ್ಯಯದ ವಿಕೃತ ರೂಪಗಳು-ಉಂ ಮತ್ತು -ಕ್ಕುಂ ಎಂಬುವು.

ಉದಾ : ಎಟ್ + ಉಂ > ಎಟುಂ
ತರ್ + ಉಂ > ತರುಂ
ಪಾರ್ + ಕ್ಕುಂ > ಪಾರ್ಕ್ಕುಂ

ಮೇಲಿನ ವಿವರಣೆಗಳು ಕಾಲಸೂಚಕ ಪ್ರತ್ಯಯಗಳನ್ನೂ ಅವುಗಳ ಬೆಳವಣಿಗೆಗಳನ್ನೂ ಸ್ಪಷ್ಟಪಡಿಸುವುದನ್ನು ಕಾಣಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೧೮. ಲಿಂಗ ಪ್ರತ್ಯಯಗಳು

ಪೂರ್ಣ ಕ್ರಿಯಾ ಪದಗಳು ಲಿಂಗ ಪ್ರತ್ಯಯಗಳೊಂದಿಗೆ ಬರುವುದು ದ್ರಾವಿಡ ಭಾಷೆಗಳ ವಿಶಿಷ್ಟತೆಗಳಲ್ಲಿ ಒಂದು. ಪೂರ್ಣಕ್ರಿಯಾ ಪದಗಳಲ್ಲಿ ಬರುವ ಈ ಲಿಂಗ ಪ್ರತ್ಯಯಗಳು ಲಿಂಗವನ್ನು ಸೂಚಿಸುವುದರೊಂದಿಗೆ ವಚನ ಮತ್ತು ಪುರುಷವಾಚಕ ವನ್ನೂ ಸೂಚಿಸುತ್ತವೆ.

ಉತ್ತಮ ಪುರುಷ ಮತ್ತು ಮಧ್ಯಮ ಪುರುಷ ಕ್ರಿಯಾಪದಗಳಲ್ಲಿ ಬರುವ ಲಿಂಗ ಪ್ರತ್ಯಯಗಳು ಲಿಂಗವನ್ನು ಸೂಚಿಸದೆ ಪುರುಷ ಮತ್ತು ವಚನಗಳನ್ನು ಮಾತ್ರ ಸೂಚಿಸುವುದನ್ನು ನೋಡಬಹುದು. ಆದರೆ ಪ್ರಥಮ ಪುರುಷ ಕ್ರಿಯಾ ಪದಗಳಲ್ಲಿ ಬರುವ ಲಿಂಗ ಪ್ರತ್ಯಯಗಳು ಲಿಂಗ, ವಚನ ಮತ್ತು ಪುರುಷವನ್ನು ಸೂಚಿಸುತ್ತವೆ.

ಉತ್ತಮ ಪುರುಷ ಏಕವಚನ ಪ್ರತ್ಯಯಗಳು :

ತೊಲ್ಕಾಪ್ಪಿಯಂ–ಎನ್, –ಏನ್, –ಅಲ್, –ಕು, –ಟು, –ತು, –ಱು ಮುಂತಾದ ಪ್ರತ್ಯಯಗಳನ್ನು ಉತ್ತಮ ಪುರುಷ ಏಕವಚನ ಪ್ರತ್ಯಯಗಳಾಗಿ ಹೇಳಿದೆ.

ಉದಾ : ಉಣ್ + ಟ್ + ಅನ್ + ಎನ್
ಉಣ್ + ಟ್ + ಏನ್
ಉಣ್ + ಪ್ + ಅಲ್

ಈ ಪ್ರತ್ಯಯಗಳಲ್ಲಿ –ಎನ್ ಎಂಬುದು ಆಗಮ ಮತ್ತು ನಿರ್ದೇಶಾರ್ಥಕ ಪ್ರತ್ಯಯಗಳ ಮುಂದೆ ಬರುತ್ತದೆ.

ಉದಾ : ವ + ನ್ತ್ + ಅನ್ + ಎನ್
ವಾರ್ + ಅಲ್ + ಎನ್

–ಏನ್' ಎಂಬ ಪ್ರತ್ಯಯ ಎಲ್ಲಾ ಕಾಲ ಸೂಚಕ ಪ್ರತ್ಯಯಗಳೊಂದಿಗೆಯೂ ಬಂದರೂ ಭವಿಷ್ಯತ್ ಕಾಲ ಸೂಚಕ ಪ್ರತ್ಯಯದೊಂದಿಗೆ ಹೆಚ್ಚಾಗಿ ಬಳಸಲ್ಪಡುತ್ತದೆ.

ಉದಾ : ಉಣ್ + ಪ್ + ಏನ್

–ಅಲ್ ಎಂಬುದು ಭವಿಷ್ಯತ್ ಕಾಲ ಸೂಚಕ ಪ್ರತ್ಯಯಗಳೊಂದಿಗೆ ಬರುತ್ತದೆ.

ಉದಾ : ವರು + ವ್ + ಅಲ್

ತೊಲ್ಕಾಪ್ಪಿಯರ್ –ಕು, –ಟು, –ತು, –ಱು ಮುಂತಾದವು ಉತ್ತಮ ಪುರುಷ ಏಕವಚನ ಪ್ರತ್ಯಯಗಳಾಗಿ ಬರುತ್ತವೆ ಎಂದು ಗುರುತಿಸಿದ್ದರೂ ಸಂಘಕಾಲದ ಸಾಹಿತ್ಯಗಳಲ್ಲಿ ಈ ಪ್ರತ್ಯಯಗಳ ಪ್ರಯೋಗವನ್ನು ನೋಡಲಿಕ್ಕೆ ಸಾಧ್ಯವಿಲ್ಲ. –ಕು ಎಂಬುದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾತ್ರ ಭವಿಷ್ಯತ್ ಕಾಲವನ್ನು ಸೂಚಿಸುವ ಉತ್ತಮ ಪುರುಷ ಏಕವಚನ ಪ್ರತ್ಯಯ ವಾಗಿ ಬಂದಿದೆ.

ಉದಾ : ಕಾಣ್ + ಕು

ಮಧ್ಯಕಾಲದ ವ್ಯಾಕರಣವಾದ ನನ್ನೂಲ್‌ನಲ್ಲಿ ತೊಲ್ಕಾಪ್ಪಿಯರ್ ಹೇಳುವ ಪ್ರತ್ಯಯಗಳೊಂದಿಗೆ –ಅನ್ ಎಂಬ ಪ್ರತ್ಯಯನನ್ನೂ ಉತ್ತಮ ಪುರುಷ ಏಕವಚನ ಪ್ರತ್ಯಯವಾಗಿ ಆದರ ಕರ್ತೃ ಗುರುತಿಸಿದ್ದಾರೆ

ಉದಾ : ಉಣ್ + ಟ್ + ಅನ್ + ಅನ್

ಆಧುನಿಕ ತಮಿಳು ಭಾಷೆಯಲ್ಲಿ ಈ ಪ್ರತ್ಯಯಗಳಲ್ಲಿ –ಏನ್ ಎಂಬುದು ಒಂದೇ ಉತ್ತಮ ಪುರುಷ ಏಕವಚನ ಪ್ರತ್ಯಯವಾಗಿ ಬಳಕೆಯಲ್ಲಿದೆ.

ಉದಾ : ವ + ನ್ತ್ + ಏನ್

ಉತ್ತಮ ಪುರುಷ ಬಹುವಚನ :

ಇದರ ಪ್ರತ್ಯಯಗಳಾಗಿ–ಅಮ್, –ಆಮ್, –ಎಮ್, –ಏಮ್, –ಕುಂ, –ಟುಂ, –ತುಂ, –ಱುಂ ಮುಂತಾದ ಎಂಟು ಪ್ರತ್ಯಯಗಳನ್ನು ತೊಲ್ಕಾಪ್ಪಿಯರ್ ವಿವರಿಸಿದ್ದಾರೆ. ಇವುಗಳಲ್ಲಿ–ಅಮ್, –ಆಮ್ ಎಂಬುವು ಸಮಾವೇಶಕ ಪ್ರತ್ಯಯಗಳಾಗಿಯೂ –ಎಮ್,–ಏಮ್ ಎಂಬುವು ಅಸಮಾವೇಶಕ ಪ್ರತ್ಯಯಗಳಾಗಿಯೂ ಇತರ ಪ್ರತ್ಯಯಗಳು ಎರಡಕ್ಕೂ ಸಮಾನವಾಗಿಯೂ ಬರುತ್ತವೆ. ಇವುಗಳಲ್ಲಿ ಕೊನೆಯ ನಾಲ್ಕು ಪ್ರತ್ಯಯಗಳೂ ಇಂದು ಬಳಕೆಯಲ್ಲಿ ಇಲ್ಲ.

ಉದಾ : ಉಣ್ + ಟ್ + ಅನ್ + ಅಮ್
ಉಣ್ + ಟ್ + ಅನ್ + ಎಮ್
ಉಣ್ + ಟ್ + ಆಮ್
ಉಣ್ + ಟ್ + ಏಮ್

ಇವುಗಳಲ್ಲಿ –ಅಮ್, –ಎಮ್ ಎಂಬುವು ಭೂತಕಾಲ ಮತ್ತು ವರ್ತಮಾನ ಕಾಲಗಳನ್ನು ಸೂಚಿಸುವ ಪೂರ್ಣ ಕ್ರಿಯಾ ಪದಗಳಲ್ಲಿ ಬರುವಾಗ ಆಗಮಗಳೊಂದಿಗೆ ಬರುತ್ತವೆ. ಭವಿಷ್ಯತ್‌ಕಾಲ ಕ್ರಿಯಾ ಪದಗಳಲ್ಲಿ ಆಗಮಗಳಿಲ್ಲದೆ ಬರುತ್ತವೆ.

ಉದಾ : 1 ಉಣ್ + ಟ್ + ಅನ್ + ಅಮ್
ಉಣ್ + ಕಿನ್ಱ್ + ಅನ್ + ಅಮ್
ಉಣ್ + ಪ್ + ಅಮ್
2 ಉಣ್ + ಟ್ + ಅನ್ + ಎಂ
ಉಣ್ + ಕಿನ್ಱ್ + ಅನ್ + ಎಂ
ಉಣ್ + ಪ್ + ಎಂ

ನನ್ನೂಲಾರರು ಮೇಲೆ ಹೇಳಿದ ಪ್ರತ್ಯಯಗಳೊಂದಿಗೆ –ಓಂ ಎಂಬ ಪ್ರತ್ಯಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವನ್ನೂ ಉತ್ತಮ ಪುರುಷ ಬಹುವಚನ ಪ್ರತ್ಯಯವಾಗಿ ಹೇಳಿದ್ದಾರೆ. ಈ ಪ್ರತ್ಯಯ ಅಸಮಾವೇಶಕ ಬಹುವಚನ ಪ್ರತ್ಯಯವಾಗಿ ಬರುತ್ತದೆ. ಇದು ಎಲ್ಲಾ ಕಾಲ ಪ್ರತ್ಯಯ ಗಳೊಂದಿಗೆಯೂ ಸೇರಿ ಬರಬಲ್ಲದು.

ಉದಾ : ಉಣ್ + { ಕಿನ್ಱ್ / ಟ್ / ಪ್ } + ಓಂ

ಆಧುನಿಕ ತಮಿಳು ಭಾಷೆಯಲ್ಲಿ -ಓಂ ಎನ್ನುವ ಪ್ರತ್ಯಯ ಒಂದೇ ಸಮಾ ವೇಶಕ ಮತ್ತು ಅಸಮಾವೇಶಕ ಪ್ರತ್ಯಯಗಳಾಗಿ ಬರುತ್ತದೆ.

ಮಧ್ಯಮ ಪುರುಷ ಏಕವಚನ :

ತೊಲ್ಕಾಪ್ಪಿಯರೂ ನನ್ನೂಲಾರರೂ -ಇ, -ಐ, -ಆಯ್, ಮುಂತಾದುವು ಗಳನ್ನು ಮಧ್ಯಮ ಪುರುಷ ಏಕವಚನ ಪ್ರತ್ಯಯಗಳಾಗಿ ಒತ್ತಿ ಹೇಳಿದ್ದಾರೆ. ಇವುಗಳೊಂದಿಗೆ -ಅಲ್, -ಏಲ್, -ಆಲ್, -ಈ, -ಏ, -ಓಯ್ ಮುಂತಾದ ಪ್ರತ್ಯಯಗಳೂ ತಮಿಳು ಭಾಷೆಗಳಲ್ಲಿ ಬರುವುದನ್ನು ಕಾಣಬಹುದು. ಇವುಗಳಲ್ಲಿ -ಅಲ್, -ಏಲ್, -ಆಲ್, ಮುಂತಾದ ಪ್ರತ್ಯಯಗಳು ನಿಷೇಧಾರ್ಥಕ ಕ್ರಿಯಾ ಪದಗಳಲ್ಲಿ ಮಾತ್ರವೆ ಬರುತ್ತವೆ.

ಉದಾ : ಚೆಯ್ + ತ್ + ಇ
ಅಱಿ + ತ್ + ಇ
ಚೆಯ್ + ತ್ + ಅನ್ + ಐ
ಚೆಯ್ + ತ್ + ಆಯ್
ವರು + ವ್ + ಓಯ್
ಉಣ್ + ಅತ್ + ಏ
ಚೆಯ್ಮ್ + ಏ
ಉಣ್ + ಏಲ್
ಉಣ್ + ಮರ್ + ಆಲ್
ಉಣ್ + ಆಲ್

ಆಧುನಿಕ ತಮಿಳು ಭಾಷೆಯಲ್ಲಿ -ಆಯ್, -ಏ ಎಂಬುವುಗಳು ಮಾತ್ರವೆ ಉಪಯೋಗವಾಗುತ್ತವೆ. ಇವುಗಳಲ್ಲಿ -ಆಯ್ ಎಂಬುದು ಅಸ್ತಿವಾಚಕ ಕ್ರಿಯಾ ಪದಗಳಲ್ಲೂ -ಏ ಎಂಬುದು ನಿಷೇಧಾರ್ಥಕ ಕ್ರಿಯಾಪದಗಳಲ್ಲೂ ಬಳಸಲಾಗಿವೆ.

ಉದಾ : ಉಣ್ + ಟ್ + ಆಯ್
ಉಣ್ + ಅತ್ + ಏ

ಇವುಗಳೊಂದಿಗೆ ಬಹುವಚನ ಪ್ರತ್ಯಯಗಳಾದ -ಈರ್, -ಈರ್‌ಗಳ್ ಗೌರವಾರ್ಥಕ ಏಕವಚನ ಪ್ರತ್ಯಯಗಳಾಗಿ ಬಳಸಲ್ಪಡುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾ : ವ + ಂದ್ + ಈರ್
ವ + ಂದ್ + ಈರ್‌ಗಳ್

ಮಧ್ಯಮ ಪುರುಷ ಬಹುವಚನ :

'–ಇರ್, –ಈರ್, –ಮಿನ್ ಪ್ರತ್ಯಯಗಳನ್ನು ಮಧ್ಯಮ ಪುರುಷ ಬಹುವಚನ ಪ್ರತ್ಯಯಗಳಾಗಿ ತೊಲ್ಕಾಪ್ಪಿಯರೂ ನನ್ನೂಲಾರರೂ ತಮ್ಮ ವ್ಯಾಕರಣ ಕೃತಿಗಳಲ್ಲಿ ಒತ್ತಿ ಹೇಳಿದ್ದಾರೆ. ಇವುಗಳಲ್ಲಿ –ಇರ್, –ಈರ್ ಎಂಬ ಪ್ರತ್ಯಯಗಳು ಆಸ್ತಿವಾಚಕ ಕ್ರಿಯಾ ಪದಗಳಲ್ಲೂ –ಮಿನ್ ಎನ್ನುವ ಪ್ರತ್ಯಯ ಆಜ್ಞಾರ್ಥಕ ಕ್ರಿಯಾಪದಗಳಲ್ಲೂ ಬರುತ್ತವೆ. –ಇರ್ ಎನ್ನುವ ಪ್ರತ್ಯಯ ಭೂತ ಮತ್ತು ವರ್ತಮಾನ ಕಾಲದೊಂದಿಗೆ ಬರುವಾಗ ಆಗಮಗಳೊಂದಿಗೆ ಬರುತ್ತದೆ. ಆದರೆ ಭವಿಷ್ಯತ್ ಕಾಲದೊಂದಿಗೆ ಬರುವಾಗ ಆಗಮ ಬರುವುದಿಲ್ಲ.

ಉದಾ : ಉಣ್ + ಟ್ + ಅನ್ + ಇರ್
ಉಣ್ + ಕಿನ್ಱ್ + ಅನ್ + ಇರ್
ಉಣ್ + ಪ್ + ಇರ್
ಉಣ್ + ಟ್ + ಈರ್
ಉಣ್ + ಮಿನ್

ನನ್ನೂಲ್ ಎನ್ನುವ ವ್ಯಾಕರಣದ ವ್ಯಾಖ್ಯಾನಕಾರರು –ಈರ್, –ಉಂ ಎಂಬ ಪ್ರತ್ಯಯಗಳೂ ಆಜ್ಞಾರ್ಥಕ ಕ್ರಿಯಾಪದಗಳಲ್ಲಿ ಬರಬಹುದು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಹಾಗೆ ಬರುವಾಗ ಕ್ರಿಯಾಧಾತುಗಳೊಂದಿಗೆ ನೇರವಾಗಿ ಸೇರುತ್ತವೆ.

ಉದಾ : ಉಣ್ + ಈರ್
ಉಣ್ + ಉಂ

ಆಧುನಿಕ ತಮಿಳು ಭಾಷೆಯಲ್ಲಿ –ಈರ್‌ಗಳ್ ಎಂಬ ಪ್ರತ್ಯಯ ಮಾತ್ರ ಬಹು ವಚನ ಪ್ರತ್ಯಯವಾಗಿ ಉಪಯೋಗವಾಗುತ್ತವೆ.

ಉದಾ : ಉಣ್ + ಟ್ + ಈರ್‌ಗಳ್

ಪ್ರಥಮ ಪುರುಷ :

ಪ್ರಥಮ ಪುರುಷ ಕ್ರಿಯಾ ಪದಗಳಲ್ಲಿ ಪುಲ್ಲಿಂಗ, ಸ್ತ್ರೀಲಿಂಗ, ಪುಂಸ್ತ್ರೀಲಿಂಗ ಬಹು ವಚನ, ನಪುಂಸಕಲಿಂಗ ಏಕವಚನ ಮತ್ತು ನಪುಂಸಕಲಿಂಗ ಬಹುವಚನ ಎಂಬ ಐದು ವಿಧವಾದ ಲಿಂಗಪ್ರತ್ಯಯಗಳು ಇವೆ.

ಪುಲ್ಲಿಂಗ ಏಕವಚನ :

–ಅನ್, –ಆನ್ ಎಂಬ ಪ್ರತ್ಯಯಗಳು ಪುಲ್ಲಿಂಗ ಏಕವಚನ ಪ್ರತ್ಯಯಗಳೆಂದು ತೊಲ್ಕಾಪ್ಪಿಯರ್ ಗುರುತಿಸಿದ್ದಾರೆ. ಇದರಲ್ಲಿ –ಅನ್ ಎಂಬುದು ಭೂತಕಾಲ ಮತ್ತು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವರ್ತಮಾನಕಾಲ ಕ್ರಿಯಾಪದಗಳಲ್ಲಿ ಆಗಮಗಳೊಂದಿಗೆ ಬರುತ್ತದೆ. ಭವಿಷ್ಯತ್ ಕಾಲ ಕ್ರಿಯಾಪದಗಳಲ್ಲಿ ಕಾಲ ಪ್ರತ್ಯಯದೊಂದಿಗೆ ಬರುತ್ತದೆ. –ಅನ್ ಎಂಬ ಪ್ರತ್ಯಯ ಎಲ್ಲ ಕ್ರಿಯಾಪದಗಳಲ್ಲೂ (ಮೂರು ಕಾಲ ಸೂಚಕ ಪದಗಳಲ್ಲೂ) ಕಾಲ ಪ್ರತ್ಯಯ ಗಳೊಂದಿಗೆ ಸೇರಿ ಬರುತ್ತದೆ. ಇದು ನಿಷೇಧಾರ್ಥಕ ಕ್ರಿಯಾ ಪದದಲ್ಲೂ ಬರುತ್ತದೆ. ಹಾಗೆ ಬರುವಾಗ ಕ್ರಿಯಾ ಧಾತುವಿನೊಂದಿಗೆ ಸೇರುತ್ತದೆ.

ಉದಾ : ಉಣ್ + ಟ್ + ಆನ್
ಉಣ್ + ಟ್ + ಅನ್ + ಅನ್
ಉಣ್ + ಕಿನ್ಱ್ + ಆನ್
ಉಣ್ + ಕಿನ್ಱ್ + ಅನ್ + ಅನ್
ಉಣ್ + ಪ್ + ಆನ್
ಉಣ್ + ಪ್ + ಅನ್
ಉಣ್ + ಆನ್

ನನ್ನೂಲಾರರೂ ಈ ಎರಡು ಪ್ರತ್ಯಯಗಳನ್ನೇ ಎತ್ತಿ ಹೇಳುತ್ತಾರೆ. ಆದರೆ ಆಧುನಿಕ ತಮಿಳು ಭಾಷೆಯಲ್ಲಿ-ಆನ್ ಎಂಬ ಪ್ರತ್ಯಯ ಹೆಚ್ಚಾಗಿ ಬಳಸಲ್ಪಡುತ್ತದೆ.

ಸ್ತ್ರೀಲಿಂಗ ಏಕವಚನ :

ತೊಲ್ಕಾಪ್ಪಿಯರೂ ನನ್ನೂಲಾರರೂ–ಆಳ್,–ಅಳ್ ಎಂಬ ಪ್ರತ್ಯಯಗಳನ್ನು ಸ್ತ್ರೀಲಿಂಗ ಪ್ರತ್ಯಯಗಳೆಂದು ನಿರೂಪಿಸಿದ್ದಾರೆ. ಇವುಗಳಲ್ಲಿ–ಅಳ್ ಎನ್ನುವ ಪ್ರತ್ಯಯ ಭೂತಕಾಲ ಮತ್ತು ವರ್ತಮಾನಕಾಲ ಕ್ರಿಯಾ ಪದಗಳಲ್ಲಿ ಆಗಮಗಳೊಂದಿಗೆಯೂ ಭವಿಷ್ಯತ್ ಕಾಲ ಕ್ರಿಯಾ ಪದಗಳಲ್ಲಿ ಕಾಲಪ್ರತ್ಯಯದೊಂದಿಗೆಯೂ ಬರುತ್ತದೆ. –ಆಳ್ ಎನ್ನುವುದು ಎಲ್ಲಾ ಕ್ರಿಯಾ ಪದಗಳಲ್ಲಿಯೂ ಕಾಲಸೂಚಕ ಪ್ರತ್ಯಯ ಗಳೊಂದಿಗೆ ಸೇರ್ಪಡೆಯಾಗಿದೆ. –ಆಳ್ ಎಂಬುದು ನಿಷೇಧಾರ್ಥಕ ಕ್ರಿಯಾಪದ ದೊಂದಿಗೆ ಸೇರುವಾಗ ಕ್ರಿಯಾ ಧಾತುವಿನೊಂದಿಗೆ ಸೇರುತ್ತದೆ.

ಉದಾ : ಉಣ್ + ಟ್ + ಆಳ್
ಉಣ್ + ಕಿನ್ಱ್ + ಅನ್ + ಅಳ್
ಉಣ್ + ಪ್ + ಅಳ್
ಉಣ್ + ಟ್ + ಅನ್ + ಅಳ್
ಉಣ್ + ಕಿನ್ಱ್ + ಆಳ್
ಉಣ್ + ಪ್ + ಆಳ್
ಉಣ್ + ಆಳ್

ಆಧುನಿಕ ತಮಿಳು ಭಾಷೆಯಲ್ಲಿ–ಆಳ್ ಎಂಬುದು ಹೆಚ್ಚಾಗಿ ಬಳಸಲ್ಪಡುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ಎರಡು ವಿಧವಾದ ಏಕವಚನದೊಂದಿಗೆ ಗೌರವಾರ್ಥಕ ಏಕವಚನವೂ ತಮಿಳು ಭಾಷೆಯಲ್ಲಿ ಕಂಡು ಬರುತ್ತದೆ. ಇದರ ಪ್ರತ್ಯಯ-ಆರ್ ಎಂಬುದು.

ಉದಾ : ವ + ಂದ್ + ಆರ್

ಪುಂಸ್ತ್ರೀಲಿಂಗ ಬಹುವಚನ :

ಪುಂಸ್ತ್ರೀಲಿಂಗ ಪ್ರತ್ಯಯಗಳಾಗಿ-ಅರ್,-ಆರ್,-ಪ,-ಮಾರ್ ಮುಂತಾದುವುಗಳು ತೊಳ್ಕಾಪ್ಪಿಯಂ ಮತ್ತು ನನ್ನೂಲ್ ವ್ಯಾಕರಣಗಳಲ್ಲಿ ಪ್ರತ್ಯಯಗಳಾಗಿ ಸೂಚಿಸಲ್ಪಟ್ಟಿವೆ. ಇವುಗಳಲ್ಲಿ-ಆರ್ ಎಂಬುದು ಆಗಮದೊಂದಿಗೆ ಬಂದಿದೆ. -ಅರ್ ಎಂಬುದು ಕಾಲ ಪ್ರತ್ಯಯಗಳೊಂದಿಗೆ ನೇರವಾಗಿ ಕೂಡಿಬರುತ್ತದೆ.

ಉದಾ : ಉಣ್ + ಟ್ + ಅನ್ + ಅರ್
ಉಣ್ + ಟ್ + ಆರ್
ಮೋಟಿ + ಪ
ಕಾಣ್ + ಮಾರ್

ಸಂಘ ಕಾಲದಲ್ಲಿ-ಮಾರ್ ಎಂಬ ಪ್ರತ್ಯಯ ಸಂಬಂಧ ಸೂಚಕ ಕೃದಂತದಲ್ಲಿ ಮಾತ್ರವೆ ಬಂದಿದೆ.

ಉದಾ : ಪಾಡಣ್ -ಮಾರ್ ಎವರೇ

ಆಧುನಿಕ ತಮಿಳು ಭಾಷೆಯಲ್ಲಿ -ಆರ್, -ಆರ್‌ಕಳ್ ಎಂಬ ಪ್ರತ್ಯಯಗಳು ಪುಂಸ್ತ್ರೀಲಿಂಗ ಬಹುವಚನ ಪ್ರತ್ಯಯಗಳಾಗಿ ಬರುತ್ತವೆ.

ಉದಾ : ವ + ಂದ್ + ಆರ್
ವ + ಂದ್ + ಆರ್‌ಕಳ್

ಪುಂಸ್ತ್ರೀಲಿಂಗ ಬಹುವಚನದೊಂದಿಗೆ ಪುಲ್ಲಿಂಗ ಮತ್ತು ಸ್ತ್ರೀಲಿಂಗ ಬಹುವಚನಗಳೂ ಇಂದು ಬಳಕೆಯಲ್ಲಿವೆ. ಪುಲ್ಲಿಂಗ ಬಹುವಚನ ಪ್ರತ್ಯಯವಾಗಿ -ಆನ್‌ಗಳ್ ಎಂಬುದೂ ಸ್ತ್ರೀಲಿಂಗ ಬಹುವಚನ ಪ್ರತ್ಯಯವಾಗಿ -ಆಳ್‌ಗಳ್ ಎಂಬುದೂ ಬರುತ್ತವೆ.

ಉದಾ : ವ + ಂದ್ + ಆನ್‌ಕಳ್
ವ + ಂದ್ + ಆಳ್‌ಕಳ್

ನಪುಂಸಕಲಿಂಗ ಏಕವಚನ :

ತೊಲ್ಕಾಪ್ಪಿಯರೂ ನನ್ನೂಲಾರರೂ -ಅತು, -ಟು, -ಱು, ಎಂಬುವು ನಪುಂಸಕಲಿಂಗ ಏಕವಚನ ಪ್ರತ್ಯಯಗಳೆಂದು ಹೇಳಿದ್ದಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇವುಗಳಲ್ಲಿ –ಅತು ಎಂಬುದು ಮೂರು ಕಾಲಪ್ರತ್ಯಯಗಳೊಂದಿಗೆಯೂ ಬರುತ್ತದೆ ಎಂದೂ –ಉ ಮತ್ತು –ಟು ಎಂಬುವು ಕ್ರಮವಾಗಿ ಭೂತಕಾಲ ಮತ್ತು ಲಕ್ಷಿತ ಕ್ರಿಯಾಪದಗಳಲ್ಲಿ ಮಾತ್ರ ಬರುತ್ತವೆ ಎಂದೂ ವಿವರಿಸಿದ್ದಾರೆ.

ಉದಾ : ನಟ + ನ್ತ್ + ಅತು
ನಟ + ಕ್ಕಿನ್ಱ್ + ಅತು
ನಟ + ಪ್ಪ್ + ಅತು
ಪೋಯ್ + ಇನ್ + ತು
ಪೊರುಳ್ + ಟು

ಆಧುನಿಕ ತಮಿಳು ಭಾಷೆಯಲ್ಲಿ –ಅತು ಎಂಬ ಪ್ರತ್ಯಯವೊಂದೇ ನಪುಂಸಕಲಿಂಗ ಏಕವಚನ ಪ್ರತ್ಯಯವಾಗಿ ಬರುತ್ತದೆ.

ಉದಾ : ಉಣ್ + ಕಿನ್ಱ್ + ಅತು
ವ + ನ್ತ್ + ಅತು

ಭವಿಷ್ಯತ್ ಕಾಲ ಕ್ರಿಯಾಪದಗಳಲ್ಲಿ –ಉಂ, ಎಂಬ ಪ್ರತ್ಯಯ ನಪುಂಸಕಲಿಂಗ ಏಕವಚನ ಪ್ರತ್ಯಯವಾಗಿ ಬರುತ್ತದೆ.

ಉದಾ : ವರ್ + ಉಂ

ನಪುಂಸಕಲಿಂಗ ಬಹುವಚನ :

ತೊಲ್ಕಾಪ್ಪಿಯರ್ –ಅ, –ಆ, –ವ ಎಂಬ ಪ್ರತ್ಯಯಗಳನ್ನು ನಪುಂಸಕಲಿಂಗ ಬಹುವಚನ ಪ್ರತ್ಯಯಗಳು ಎಂದು ಹೇಳಿದ್ದಾರೆ. ಇವುಗಳಲ್ಲಿ –ಅ, ಮತ್ತು –ವ ಎಂಬ ಪ್ರತ್ಯಯಗಳು ಅಸ್ತಿವಾಚಕ ಕ್ರಿಯಾಪದಗಳಲ್ಲೂ '–ಆ' ಎಂಬುದು ನಿಷೇಧಾರ್ಥಕ ಕ್ರಿಯಾಪದದಲ್ಲೂ ಬರುತ್ತವೆ.

ಉದಾ : ಚೆಯ್ + ತ್ + ಅನ್ + ಅ
ಪೊಟಿ + ವ
ಕೊಳ್ + ಆ
ವಾರ್ + ಆ

ನನ್ನೂಲಾರ್ –ಅ, –ಆ ಎಂಬ ಎರಡು ಪ್ರತ್ಯಯಗಳನ್ನು ಮಾತ್ರ ವಿವರಿಸಿದ್ದಾರೆ. ಆಧುನಿಕ ತಮಿಳು ಭಾಷೆಯಲ್ಲೂ ಇವೆರಡೇ ಪ್ರತ್ಯಯಗಳಾಗಿ ಬರುತ್ತವೆ. ಮೇಲೆ ಹೇಳಿದಂತೆ –ಅ ಎಂಬುದು ಅಸ್ತಿವಾಚಕ ಕ್ರಿಯಾ ಪದಗಳಲ್ಲೂ –ಆ ಎಂಬುದು ನಿಷೇಧಾರ್ಥಕ ಕ್ರಿಯಾ ಪದಗಳಲ್ಲೂ ಬರುತ್ತವೆ.

ಏಕವಚನದಲ್ಲಿ ಬರುವಂತೆಯೆ –ಉಂ ಎಂಬುದು ಭವಿಷ್ಯತ್‌ಕಾಲ ಬಹುವಚನ ಪ್ರತ್ಯಯವಾಗಿಯೂ ಬರುತ್ತದೆ.

ಉದಾ : ವರ್ + ಉಂ

CC-0. In Public Domain. Gurukul Kangri Collection, Haridwar

ಈ ಪಟ್ಟಿ ಲಿಂಗ ಪ್ರತ್ಯಯಗಳ ಬೆಳವಣಿಗೆಯನ್ನು ಎತ್ತಿ ತೋರಿಸುತ್ತದೆ.

		ಪ್ರಾಚೀನಕಾಲ	ಮಧ್ಯಕಾಲ	ಆಧುನಿಕಕಾಲ
ಉತ್ತಮ	ಏಕವಚನ	ಎನ್, ಏನ್, ಅಲ್, ಕು, ಟು, ತು. ಋ	ಎನ್,ಏನ್,ಅಲ್,ಅನ್,ಕು,ಟು,ತು,ಋ	ಏನ್
	ಬಹುವಚನ	ಅಮ್, ಆಮ್ } ಸಮಾವೇಶಕ	ಅವು, ಅಮ್ = ಸಮಾವೇಶಕ	ಓಂ
		ಎಮ್, ಏಮ್ } ಅಸಮಾವೇಶಕ	ಎಂ, ಏಂ, ಓಂ = ಅಸಮಾವೇಶಕ	
		ಕುಂ, ಟುಂ, ತುಂ, ಋಂ } ಸಮಾನ	ಕುಂ, ಟುಂ, ತುಂ, ಋಂ = ಸಮಾನ	
ಮಧ್ಯಮ	ಏಕವಚನ	ಇ ,ಐ, ಆಯ್,ಅಲ್,ಪಲ್,ಆಲ್,ಈ, ಏ, ಓಯ್	ಇ, ಐ, ಆಯ್	ಆಯ್,ಏ,ಈರ್,ಈರ್‌ಗಳ್
	ಬಹುವಚನ	ಇರ್, ಈರ್, ಮಿನ್	ಇರ್, ಈರ್ ಮಿನ್, ಉಂ	ಈರ್‌ಗಳ್
ಪ್ರಥಮಪುರುಷ	ಪುಲ್ಲಿಂಗ	ಅನ್, ಆನ್	ಅನ್, ಆನ್	ಅನ್-ಅಪರೂಪ, ಆನ್-ಹೆಚ್ಚಾಗಿ
	ಸ್ತ್ರೀಲಿಂಗ	ಅಳ್, ಆಳ್	ಅಳ್, ಆಳ್	ಅಳ್-ಅಪರೂಪ, ಆಳ್-ಹೆಚ್ಚಾಗಿ
	ಪುಂಸ್ತ್ರೀಲಿಂಗ	ಅರ್, ಆರ್, ಪ, ವಾರ್	ಅರ್, ಆರ್, ಪ, ವಾರ್	ಆರ್, ಆರ್‌ಗಳ್
	ನಪುಂಸಕಲಿಂಗ ಏಕವಚನ	ಅತು, ಟು, ಋ	ಅತು, ಟು, ಋ	ಅದು,ಉಂ
	ನಪುಂಸಕಲಿಂಗ ಬಹುವಚನ	ಅ, ಆ,ವ,	ಅ, ಆ,	ಅ, ಆ, ಉಂ

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೧೯. ನಿಷೇಧಾರ್ಥಕಗಳು

ಸಾಮಾನ್ಯವಾಗಿ ಲೋಕ ಭಾಷೆಗಳಲ್ಲಿ ಎರಡು ವಿಧವಾದ ವಾಕ್ಯಗಳನ್ನು ನೋಡಬಹುದು. ಅವು ಅಸ್ತಿವಾಚಕ ವಾಕ್ಯಗಳು ಮತ್ತು ನಿಷೇಧಾರ್ಥಕ ವಾಕ್ಯಗಳು.

ಯಾವುದಾದರೊಂದು ವಿಷಯವನ್ನು ಕುರಿತು ಎತ್ತಿ ಹೇಳುವುವು ಅಸ್ತಿವಾಚಕ ವಾಕ್ಯಗಳು. ಅವನ್ನು ಎದುರಿಸಿ ಇಲ್ಲ ಎಂದು ನಿಷೇಧಿಸಿ ಹೇಳುವುವು ನಿಷೇಧಾರ್ಥಕ ವಾಕ್ಯಗಳು.

ನಿಷೇಧಾರ್ಥಕಗಳ ಬಗೆ

ತಮಿಳು ಭಾಷೆಯಲ್ಲಿ ನಿಷೇಧಾರ್ಥಕಗಳನ್ನು ಎರಡು ರೀತಿಯಲ್ಲಿ ಗುರುತಿಸಬಹುದು. 'ಅಲ್' 'ಇಲ್' ಎಂಬ ಲಕ್ಷಿತ ನಿಷೇಧಾರ್ಥಕ ಕ್ರಿಯಾಪದಗಳನ್ನು ಹಲವಾರು ಕ್ರಿಯಾಪದಗಳೊಂದಿಗೆ ಸೇರಿಸುವುದು ಒಂದು ಬಗೆ.

ಉದಾ : ವರ + ಇಲ್ಲೈ > ವರವಿಲ್ಲೈ
ವನ್ದದು + ಇಲ್ಲೈ > ವನ್ದದಿಲ್ಲೈ
ವರುಕಿನ್ಱದು + ಇಲ್ಲೈ > ವರುಕಿನ್ಱದಿಲ್ಲೈ

ಕೆಲವು ನಿಷೇಧಾರ್ಥಕ ಪ್ರತ್ಯಯಗಳನ್ನು ಕ್ರಿಯಾಧಾತುವಿನೊಂದಿಗೆ ಸೇರಿಸಿ ಪದವನ್ನು ರಚಿಸಿ ನಿಷೇಧಾರ್ಥಕವನ್ನು ಸೂಚಿಸುವುದು ಎರಡನೆಯ ಬಗೆ.

ಉದಾ : ಚೆಯ್ + ಅ + ಮಲ್ > ಚೆಯ್ಯಾಮಲ್
ಚೆಯ್ + ಅ + ವ್ವೈ > ಚೆಯ್ಯಾವ್ವೈ

ಮೊದಲನೆಯ ಬಗೆಯ ನಿಷೇಧಾರ್ಥಕವನ್ನು ವಾಕ್ಯಾತ್ಮಕ ನಿಷೇಧಾರ್ಥಕವೆಂದೂ ಎರಡನೆಯ ಬಗೆಯ ನಿಷೇಧಾರ್ಥಕವನ್ನು ಪದಾತ್ಮಕ ನಿಷೇಧಾರ್ಥಕವೆಂದೂ ಕರೆಯಬಹುದು. ಮೊದಲನೆಯ ಬಗೆಯ ನಿಷೇಧಾರ್ಥಕಗಳು ಕ್ರಿಯಾಪದಗಳೊಂದಿಗೆ ಮಾತ್ರವಲ್ಲದೆ ಇತರ ಕೆಲವು ವ್ಯಾಕರಣ ಅಂಶಗಳೊಂದಿಗೆಯೂ ಬರುತ್ತವೆ.

ಉದಾ : ಅವನ್ ಕಣ್ಣನ್ ಇಲ್ಲೈ
ಅವನ್ ಇಲ್ಲೈ
ಅಪ್ಪಡಿ ಇಲ್ಲೈ
ಮುನ್ನಾಲ್ ಇಲ್ಲೈ

ಪೂರ್ಣ ಕ್ರಿಯಾಪದಗಳಲ್ಲಿ ನಿಷೇಧಾರ್ಥಕಗಳು :

ಪ್ರಾಚೀನಕಾಲದ ತಮಿಳಿನಲ್ಲಿ ಪೂರ್ಣ ಕ್ರಿಯಾಪದಗಳಲ್ಲಿ ನಿಷೇಧಾರ್ಥಕವನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೂಚಿಸಲಿಕ್ಕೆ ನಿಷೇಧಾರ್ಥಕ ಪ್ರತ್ಯಯ 'ಆ' ಎಂಬುದು ಬರುತ್ತದೆ. ಇದರ ವಿಕೃತ ರೂಪ 'ϕ'. ಪ್ರಥಮ ಪುರುಷ ನಪುಂಸಕಲಿಂಗ ಏಕವಚನ ಮತ್ತು ಬಹುವಚನ ಲಿಂಗ ಪ್ರತ್ಯಯಗಳನ್ನು ಬಿಟ್ಟು ಇತರ ಎಲ್ಲ ಲಿಂಗ ಪ್ರತ್ಯಯಗಳೊಂದಿಗೆಯೂ ϕ ಎಂಬುದು ನಿಷೇಧಾರ್ಥಕ ಪ್ರತ್ಯಯವಾಗಿ ಬರುತ್ತದೆ. ಪ್ರಥಮ ಪುರುಷ ನಪುಂಸಕಲಿಂಗ ಏಕವಚನ ಮತ್ತು ಬಹುವಚನ ಲಿಂಗ ಪ್ರತ್ಯಯಗಳೊಂದಿಗೆ –ಆ– ಎಂಬುದು ನಿಷೇಧಾರ್ಥಕ ಪ್ರತ್ಯಯವಾಗಿ ಬರುತ್ತದೆ. ಆದರೆ ನಿಷೇಧಾರ್ಥಕ ಪತ್ಯಯವಾದ-ಆ-ಎಂಬುದರ ಮುಂದೆ ಪ್ರಥಮ ಪುರುಷ ನಪುಂಸಕಲಿಂಗ ಬಹುವಚನ ಪ್ರತ್ಯಯ ಬರುವುದಿಲ್ಲ.

ಉದಾ :	ಏಕವಚನ	ಬಹುವಚನ
ಉ. ಪು :	ಕಾಣ್ + ϕ – ಏನ್ > ಕಾಣೇನ್	ಕಾಣ್ + ϕ + ಏಂ > ಕಾಣೇಂ
ಮ. ಪು :	ಕಾಣ್ + ϕ + ಆಯ್ > ಕಾಣಾಯ್	ಕಾಣ್ + ϕ + ಈರ್‌ಕಳ್ > ಕಾಣೀರ್‌ಕಳ್
ಪ್ರ. ಪು :	ಕಾಣ್ + ϕ + ಆನ್ > ಕಾಣಾನ್ ಕಾಣ್ + ϕ + ಆಳ್ > ಕಾಣಾಳ್	ಕಾಣ್ + ϕ + ಆರ್‌ಕಳ್ ಕಾಣಾರ್‌ಕಳ್
	ಕಾಣ್ + ಆ + ತು > ಕಾಣಾತು	ಕಾಣ್ + ಆ + ϕ > ಕಾಣಾ

ಸಂಘಕಾಲದ ತಮಿಳು ಭಾಷೆಯಲ್ಲಿ ಅಲ್, ಇಲ್ ಮುಂತಾದ ಲಕ್ಷಿತ ಕ್ರಿಯಾ ಪದಗಳು ಲಿಂಗ ಪ್ರತ್ಯಯಗಳೊಂದಿಗೆ ಸೇರಿ ನಿಷೇಧಾರ್ಥವನ್ನು ಸೂಚಿಸಿದ್ದವು. ಈ ನೀಷೇಧಾರ್ಥಕ ಲಕ್ಷಿತ ಕ್ರಿಯಾಪದಗಳು ಮತ್ತೊಂದು ಕ್ರಿಯಾಧಾತುವಿನೊಂದಿಗೆ ಸೇರಿ ಬಂದು ಅಭೂತಕಾಲವನ್ನು ಸೂಚಿಸುತ್ತವೆ.

ಉದಾ : ಅಲ್ + ಏನ್ > ಅಲ್ಲೇನ್
ಇಲ್ + ಏನ್ > ಇಲ್ಲೇನ್
ವಾರ್ + ಅಲ್ + ಏನ್ > ವಾರಲೇನ್ (ಅಭೂತಕಾಲ)

'ಇಲ್' ಎಂಬ ನಿಷೇಧಾರ್ಥಕ ಲಕ್ಷಿತ ಕ್ರಿಯಾಪದದ ಬಳಕೆ :

ಇಲ್ ಎನ್ನುವ ನಿಷೇಧಾರ್ಥಕ ಲಕ್ಷಿತ ಕ್ರಿಯಾಪದ ಭೂತಕಾಲ ಕ್ರಿಯಾಸೂಚಕ ಕೃದಂತದೊಂದಿಗೆ ಸೇರಿ ಭೂತಕಾಲ ನಿಷೇಧಾರ್ಥಕವನ್ನು ಸೂಚಿಸುತ್ತದೆ.

ಉದಾ : ವನ್ತು + ಇಲ್ + ಆರ್ > ವನ್ತಿಲರ್

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಕಲಿತ್ತೊಗ್ಗೈ ಎಂಬ ಸಂಘಕಾಲದ ಸಂಕಲನದಲ್ಲಿ ಇಲ್ ಎಂಬ ಲಕ್ಷಿತ ನಿಷೇಧಾರ್ಥಕ ಕ್ರಿಯಾಪದ ಕ್ರಿಯಾಧಾತುವಿನೊಂದಿಗೆ ಸೇರಿ ಅಭೂತಕಾಲ ನಿಷೇಧಾರ್ಥಕವನ್ನು ಸೂಚಿಸುತ್ತದೆ.

ಉದಾ : ಅಜುಕ್ + ಇಲ್ + ಏನ್ > ಅಜುಕಿಲೇನ್

ಇಲ್ ಎಂಬ ನಿಷೇಧಾರ್ಥಕ ಕ್ರಿಯಾಪದ ಕೃದಂತ ಪರಕನಾಮ, ಕ್ರಿಯಾನಾಮ, ವಸ್ತುನಾಮ ಮುಂತಾದವುಗಳೊಂದಿಗೆ ಸೇರಿ ಬರುತ್ತದೆ.

ಉದಾ : ಉಂಡಲುಂ + ಇಲ್ + ಆರೇ > ಉಂಡೇಲುಂ ಇಲರೇ
ಅಜುಂತದು + ಇಲ್ + ಏನ್ > ಅಜುಂತದಿಲೇನ್
ಸೆಲ್ವಮುಂ + ಇಲ್ + ಅನ್ > ಸೆಲ್ವೆಮುಂ ಇಲನ್

'ಅಲ್' ಎಂಬ ನಿಷೇಧಾರ್ಥಕ ಲಕ್ಷಿತ ಕ್ರಿಯಾಪದದ ಬಳಕೆ :

ಸಂಘ ಕಾಲದಲ್ಲಿ ಅಲ್ ಎಂಬ ಧಾತುವಿನಿಂದ ರಚಿತವಾಗುವ ನಿಷೇಧಾರ್ಥಕ ಲಕ್ಷಿತ ಕ್ರಿಯಾಪದಗಳು ನಿರ್ಧಾರಿತ ಅಥವಾ ವಿಧಾಯಕ ಕ್ರಿಯಾಪದಗಳೊಂದಿಗೆ ಸೇರಿ ಭೂತಕಾಲ ಮತ್ತು ಅಭೂತಕಾಲ ಅರ್ಥಗಳಲ್ಲಿ ಬಂದಿವೆ. ಹೀಗೆ ಬರುವಾಗ 'ಅಲ್' ಎನ್ನುವ ನಿಷೇಧಾರ್ಥಕ ಲಕ್ಷಿತ ಕ್ರಿಯಾಪದದಲ್ಲಿ ಬರುವ ಲಿಂಗ ಪ್ರತ್ಯಯವೂ ಅದರ ಹಿಂದೆ ಬರುವ ನಿರ್ಧಾರಿತ ಕ್ರಿಯಾಪದದಲ್ಲಿ ಬರುವ ಲಿಂಗ ಪ್ರತ್ಯಯವೂ ಒಂದೇ ಆಗಿ ಬರುವುದನ್ನು ನೋಡಬಹುದು.

ಉದಾ : ಕಲಂಗಿನೇನ್ + ಅಲ್ + ಏನ್ > ಕಲಂಗಿನೇನ್ ಅಲ್ಲೇನ್
ಸೆಲ್ವೇಂ + ಅಲ್ + ಏಂ > ಸೆಲ್ವೇಂ ಅಲ್ಲೇಂ

ಕೆಲವು ಸಮಯದಲ್ಲಿ ಅಲ್ ಎಂಬ ನಿಷೇಧಾರ್ಥಕ ಕ್ರಿಯಾಪದ ನಾಮಪದ ದೊಂದಿಗೆಯೂ ಕೃದಂತ ಪರಕನಾಮ ಪದದೊಂದಿಗೆಯೂ ಬರುತ್ತದೆ.

ಉದಾ : ಪೆಂಡಿರೇಂ + ಅಲ್ + ಏಂ > ಪೆಂಡಿರೇಂ ಅಲ್ಲೇಂ
ಮಲೈಂದೋನ್ + ಅಲ್ + ಅನ್ > ಮಲೈಂದೋನ್ ಅಲ್ಲನ್

ಆಧುನಿಕ ತಮಿಳಿನಲ್ಲಿ ನಿಷೇಧಾರ್ಥಕ, ವಾಕ್ಯರಚನೆಯಿಂದ ಸೂಚಿಸಲ್ಪಡುತ್ತದೆ. ಇಲ್ಲೈ ಎನ್ನುವ ನಿಷೇಧಾರ್ಥಕ ಕ್ರಿಯಾಪದವನ್ನು ಪೂರ್ವಕಾಲಿಕ ಕೃದಂತ ಮತ್ತು ಕೃದಂತ ಪರಕನಾಮ ಮುಂತಾದವುಗಳೊಂದಿಗೆ ಸೇರಿಸಿ ನಿಷೇಧಾರ್ಥಕವನ್ನು ಸೂಚಿಸಲಾಗಿದೆ. ಹೀಗೆ ಎರಡು ಬಗೆಯಲ್ಲಿ ಆಧುನಿಕ ತಮಿಳಿನಲ್ಲಿ ಭೂತಕಾಲ ನಿಷೇಧಾರ್ಥಕ ಗುರುತಿಸಲಾಗಿದ.

ಉದಾ : ಚೆಯ್ಯ + ಇಲ್ಲೈ > ಚೆಯ್ಯವಿಲ್ಲೈ
ಪಾರ್ತ್ತದು + ಇಲ್ಲೈ > ಪಾರ್ತ್ತದಿಲ್ಲೈ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವರ್ತಮಾನಕಾಲ ಮತ್ತು ಕೃದಂತ ಪರಕನಾಮ ಇವುಗಳೊಂದಿಗೆ ಇಲ್ಲೈ ಎನ್ನು ವುದನ್ನು ಸೇರಿಸುವಾಗ ವರ್ತಮಾನಕಾಲ ಮತ್ತು ಸ್ವಾಭಾವಿಕ ನಿಷೇಧಾರ್ಥಕಗಳು ರಚಿತವಾಗುತ್ತವೆ.

ಉದಾ : ವರುಕಿನ್ನದು + ಇಲ್ಲೈ > ವರುಕಿನ್ನದಿಲ್ಲೈ

ಪೂರ್ವಕಾಲಿಕ ಕೃದಂತದೊಂದಿಗೆ ಮಾಟ್ ಎಂಬ ನಿಷೇಧಾರ್ಥಕ ಸಹಾಯಕ ಕ್ರಿಯಾಪದವನ್ನು ಸೇರಿಸುವುದರಿಂದ ಭವಿಷ್ಯತ್‌ಕಾಲ ನಿಷೇಧಾರ್ಥಕ ರಚಿತವಾಗುತ್ತದೆ. ಈ ನಿಷೇಧಾರ್ಥಕ ಸಹಾಯಕ ಕ್ರಿಯಾಪದ ಪ್ರಥಮಪುರುಷ ನಪುಂಸಕಲಿಂಗ ಏಕವಚನಕ್ಕೆ ಮಾತ್ರ ಬರುವುದಿಲ್ಲ.

ಉದಾ : ಚೆಯ್ಯು + ಮಾಟ್ +

ಏನ್	ಚೆಯ್ಯುಮಾಟ್ಟೇನ್
ಓಂ	ಚೆಯ್ಯುಮಾಟ್ಟೋಂ
ಆಯ್	ಚೆಯ್ಯುಮಾಟ್ಟಾಯ್
ಈರ್‌ಗಳ್	ಚೆಯ್ಯುಮಾಟ್ಟೀರ್‌ಕಳ್
ಆನ್	ಚೆಯ್ಯುಮಾಟ್ಟಾನ್
ಆಳ್	ಚೆಯ್ಯುಮಾಟ್ಟಾಳ್
ಆರ್‌ಕಳ್	ಚೆಯ್ಯುಮಾಟ್ಟಾರ್‌ಕಳ್
ಆ	ಚೆಯ್ಯುಮಾಟ್ಟಾ

ಪ್ರಥಮಪುರುಷ ನಪುಂಸಕಲಿಂಗ ಏಕವಚನಕ್ಕೆ 'ಆ' ಎಂಬ ಪ್ರತ್ಯಯವೇ ನಿಷೇಧಾರ್ಥಕ ಪ್ರತ್ಯಯವಾಗಿ ಬರುತ್ತದೆ. ಆಂದರೆ ಸಂಘಕಾಲದ ಪ್ರಯೋಗವೆ ಇಂದೂ ಬಳಸಲಾಗುತ್ತದೆ.

ಉದಾ : ಚೆಯ್ + ಆ + ತು

ಕೃದಂತ ಪರಕನಾಮದೊಡನೆ ಇಲ್ಲೈ ಎಂಬ ನಿಷೇಧಾರ್ಥಕ ಕ್ರಿಯಾಪದವನ್ನು ಸೇರಿಸಿ ಕೆಲವು ವೇಳೆ ಭವಿಷ್ಯತ್‌ಕಾಲ ನಿಷೇಧಾರ್ಥಕ ರಚಿಸಲಾಗಿದೆ

ಉದಾ : ಚೆಯ್ವದು + ಇಲ್ಲೈ > ಚೆಯ್ವದಿಲ್ಲೈ

ಅಪೂರ್ಣ ಕ್ರಿಯಾಪದ :

ನಿಷೇಧಾರ್ಥಕ ಕ್ರಿಯಾಸೂಚಕ ಕೃದಂತ :

ಕ್ರಿಯಾಧಾತುವಿನೊಡನೆ ನಿಷೇಧಾರ್ಥಕ ಪ್ರತ್ಯಯವಾದ 'ಆ' ಎಂಬುದನ್ನು ಸೇರಿಸಿ ನಿಷೇಧಾರ್ಥಕ ಕ್ರಿಯಾಸೂಚಕ ಕೃದಂತವನ್ನು ರಚಿಸಬಹುದು. ಈ ನಿಷೇಧಾರ್ಥಕ ಪ್ರತ್ಯಯದ ವಿಕೃತ ರೂಪಗಳು ಆದು ಮತ್ತು ಆಮಲ್ ಎಂಬುವು.

ಉದಾ : ಚೆಯ್ + ಆ > ಚೆಯ್ಯಾ

ಚೆಯ್ + ಆದು > ಚೆಯ್ಯಾದು

ಚೆಯ್ + ಆಮಲ್ > ಚೆಯ್ಯಾಮಲ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಧುನಿಕ ತಮಿಳು ಭಾಷೆಯಲ್ಲಿ ಆಮಲ್ ಎಂಬ ಪ್ರತ್ಯಯು ಸಹಜವಾಗಿ ಬಳಕೆಯಾಗಿದೆ. 'ಆ' ಎಂಬುದು ನಿಷೇಧಾರ್ಥಕ ನಿಯತ ಕ್ರಿಯಾಪದಗಳಲ್ಲಿ ವಿಟ್ಟಾಲ್ ಎಂಬ ಸಹಾಯಕ ಕ್ರಿಯಾಪದದ ಹಿಂದೆಬರುತ್ತದೆ.

ಉದಾ : ಚೆಯ್ + ಆ + ವಿಟ್ಟಾಲ್ > ಚೆಯ್ಯಾವಿಟ್ಟಾಲ್

ನಿಷೇಧಾರ್ಥಕ ಸಂಬಂಧ ಸೂಚಕ ಕೃದಂತ :

ಸಂಘಕಾಲದ ತಮಿಳು ಭಾಷೆಯಲ್ಲಿ ನಿಷೇಧಾರ್ಥಕ ಪ್ರತ್ಯಯುವಾದ 'ಆ' ಎಂಬುದನ್ನು ಕ್ರಿಯಾ ಧಾತುವಿನೊಡನೆ ಸೇರಿಸಿ ನಿಷೇಧಾರ್ಥಕ ಸಂಬಂಧಸೂಚಕ ಕೃದಂತವನ್ನು ರಚಿಸಲಾಗುತ್ತದೆ. ಇದರ ವಿಕೃತ ರೂಪ 'ಆತ್' ಎಂಬುದು. 'ಆ'ಎಂಬ ನಿಷೇಧಾರ್ಥಕ ಪ್ರತ್ಯಯದ ಮುಂದೆ 'ಅ' ಎಂಬ ಕೃದಂತ ಪ್ರತ್ಯಯು ಬರುವುದಿಲ್ಲ. ಆಧುನಿಕ ತಮಿಳು ಭಾಷೆಯಲ್ಲಿ 'ಆತ್' ಎಂಬುದೇ ಹೆಚ್ಚಾಗಿ ಬಳಸಲಾಗುತ್ತದೆ.

ಉದಾ : ಚೆಯ್ + ಆ + ϕ > ಚೆಯ್ಯಾ

ಚೆಯ್ + ಆತ್ + ಅ > ಚೆಯ್ಯಾತ

ನಿಷೇಧಾರ್ಥಕ ಕೃನ್ನಾಮ :

ಕ್ರಿಯಾ ಧಾತುವಿನೊಡನೆ ನಿಷೇಧಾರ್ಥಕ ಪ್ರತ್ಯಯುವಾದ 'ಆ' ಎಂಬುದೂ ಕೃನ್ನಾಮ ಪ್ರತ್ಯಯುವಾದ 'ಮೈ' ಎಂಬುದೂ ಸೇರಿ ನಿಷೇಧಾರ್ಥಕ ಕೃನ್ನಾಮ ರಚಿತವಾಗುತ್ತದೆ.

ಉದಾ : ಅಱಿ + ಆ + ಮೈ > ಅಱಿಯಾಮೈ

ಕಲ್ + ಆ + ಮೈ > ಕಲ್ಲಾಮೈ

ಹೀಗೆ ತಮಿಳು ಭಾಷೆಯಲ್ಲಿ ನಿಷೇಧಾರ್ಥಕ ಹಲವಾರು ರೀತಿಯಲ್ಲಿ ಆವಿಷ್ಕಾರಗೊಂಡಿರುವುದನ್ನು ಆ ಭಾಷೆಯ ಸ್ವರೂಪವನ್ನು ಸ್ಥೂಲವಾಗಿ ಅಧ್ಯಯನ ಮಾಡುವವರು ಸುಲಭವಾಗಿ ತಿಳಿದುಕೊಳ್ಳಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

REFERENCE BOOKS

1. Agesthialingom. S., 1983, "Sangat tamil-1", All India Tamil Linguistic Association, Annamalai Nagar.
2. — — — 1983, "Sangat tamil-2", All India Tamil Linguistic Association, Annamalai Nagar.
3. — — — 1984, "Colliyal-peyariyal", All India Tamil Linguistic Association, Annamalai Nagar.
4. Bhavanandhi Munivar, 1966, "Nannul", Arumuga Navalar V. Printers, Madras.
5. Gleason, 1961, "An Introduction to Descriptive Linguistics," Holt, Renehart and Winston, New york.
6. Kempe gowda K., 1976, "Bhasha Vijnana Kosha", Institute of Kannada Studies, University of Mysore, Mysore.
7. Kothandaraman, pon., 1974, "Sentamil", Tamil Nulagam, Alwarpet, Madras-18.
8. — — — 1977, "The verb in Modern Tamil", Tamil Nulagam, Alwarpet, Madras-18.
9. Manian. Thanga., 1978, "Pattirikait tamil", Manikkap Pathippakam, Paranam, Trichy, Dt.
10. — — — 1986, "Pattirikai moli Natai", Manikkappathippakam, Paranam, Trichy, Dt.
11. Meenakshi Sundaram T. P. 1965, "A history of Tamil Language" Deccan College, Poona.

CC-0. In Public Domain. Gurukul Kangri Collection, Haridwar

12. Puttappa. K.V. (Ed)., 1988, "Kannada Kaipidi-vol. 1", University of Mysore, Mysore.

13. Shaktivel. S., 1984, "Tamil Moli Varalaru", Manivasakar Pathippakam, Chidambaram.

14. Shanmugam. S. V., 1968, "The Language of Tamil Inscriptions(1300-1700 A.D.)", Annamalai University, Annamalai Nagar.

15. — — — 1971, "Dravidian Nouns", Annamalai University, Annamalai Nagar.

16. Subramanyam. P. S., 1971, "Dravidian Verb Morphology" Annamalai University, Annamalai Nagar.

17. Tholkappiar 1967, "Tholkappiam (Original)" The South Indian Saiva Siddhanta works Publishing Society, Limited, Tinnelveli.

18. Varadharajan. M., 1966, "Moli Varalaru", The South Indian Saiva Siddhanta Works Publishing Society, Limited, Tinnelveli.

19. — — — 1985, "Moli Nul", The South Indian Saiva Siddhanta works Publishing Society Limited, Tinnelveli.

20. Vijaya Venugopal. G. 1968, "A Modern Evaluation of Nannul (Eluttatikaram)", Annamalai University, Annamalai Nagar.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಾರಿಭಾಷಿಕ ಪದಗಳು

ಅಂಕಿತ ನಾಮ	Proper noun
ಅಂತ್ಯ ಸ್ಪರ್ಶ ಧ್ವನಿ	Final Stop sound
ಅಗೋಳ	Unrounded
ಅಗ್ರಸ್ವರ	Front Vowel
ಅಘೋಷ	Voiceless
ಅರ್ಥಾತ್ಮಕ ಮಟ್ಟ	Semantic level
ಅರ್ಥಾತ್ಮಕ ವಿವರಣೆ	Semantic description
ಅರ್ಧ ಸ್ವರ	Semi Vowel
ಅಧಿಕ ಸ್ಪರ್ಶದ ಪಾರ್ಶ್ವಿಕ	Laterals with more contact
ಅನುನಾಸೀಕೃತ ಸ್ವರ	Nasalised vowel
ಅನುಮತಿ ಸೂಚಕ ಕ್ರಿಯಾಪದ	Permissive verb
ಅಪೂರ್ಣ ಕ್ರಿಯಾಪದ	Non-finite verb/participle
ಅಪೂರ್ಣ ಸಂಯುಕ್ತ ಕ್ರಿಯಾಪದ	Participial compound verb
ಅಪೇಕ್ಷಿತ ನಿಷೇಧಾರ್ಥಕ ಕ್ರಿಯಾಪದ	Desiderative negative verb
ಅಭೂತ ಕಾಲ	Non-past tense
ಅಮಾನವ ಕ್ರಿಯಾಪದ	Non-human verb
ಅಮಾನವ ನಾಮಪದ	Non-human noun
ಅಲ್ಪ ಸ್ಪರ್ಶದ ಪಾರ್ಶ್ವಿಕ	Laterals with less contact
ಅವಶ್ಯಕ ಸೂಚಕ ಕ್ರಿಯಾಪದ	Obligatory verb
ಅಸಮಾವೇಶಕ ಬಹುವಚನ	Exclusive Plural
ಅಸ್ತಿವಾಚಕ ವಾಕ್ಯ	Affirmative sentence
ಆಂತರಿಕ ಪುನರ್ರಚನೆ	Internal reconstruction
ಆಕಸ್ಮಿಕ ಸೂಚಕ ಕ್ರಿಯಾಪದ	Accidental verb
ಆಕೃತಿಮಾ	Morpheme
ಆಕೃತಿಮಾ ವಿಜ್ಞಾನ	Morphology
ಆಜ್ಞಾಸೂಚಕ ಕೃದಂತ	Imperative verbal participle
ಆತ್ಮನೇಯ ಕ್ರಿಯಾಪದ	Middle verb
ಆತ್ಮಾರ್ಥಕ ಸರ್ವನಾಮ	Reflexive pronoun

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆತ್ಮಾರ್ಥಕ ಸೂಚಕ ಕ್ರಿಯಾಪದ	Reflexive verb
ಇಚ್ಛಾರ್ಥಕ ನಿಷೇಧಾರ್ಥಕ ಕ್ರಿಯಾಪದ	Optative negative verb
ಇಚ್ಛಾರ್ಥಕ ಪ್ರತ್ಯಯ	Optative marker
ಉತ್ತಮ ಪುರುಷ	First person
ಉತ್ತಮ ಪುರುಷ ಲಿಂಗ ಪ್ರತ್ಯಯ	First person gender marker
ಉತ್ತಮ ಪುರುಷ ಸರ್ವನಾಮ	First person pronoun
ಉದ್ದೇಶ ವಾಚಕ ಪ್ರತ್ಯಯ	Purposive marker
ಉಪಕಾರ ಸೂಚಕ ಕ್ರಿಯಾಪದ	Benefactive verb
ಉಪಧ್ವನಿ	Allo-phone
ಉಪ ಭಾಷಾ ಭೂಗೋಳ	Dialect geography
ಉಪೇಕ್ಷಾ ಸೂಚಕ ಕ್ರಿಯಾಪದ	Contemptive Verb
ಊಷ್ಮ ಧ್ವನಿ	Fricative sound
ಓಷ್ಠ್ಯ ಧ್ವನಿ	Labial sound
ಕಂಠ್ಯ	Velar
ಕಂಪನ ಧ್ವನಿ	Trill sound
ಕರ್ಮಣಿ ಪ್ರಯೋಗ	Passive voice
ಕಾರ್ಯ ಯತ್ನ ಸೂಚಕ ಕ್ರಿಯಾಪದ	Attemptive verb
ಕಾರ್ಯಾರಂಭ ಸೂಚಕ ಕ್ರಿಯಾಪದ	Inceptive verb
ಕಾರಣ ಅರ್ಥ	Causative meaning
ಕಾರಣಾರ್ಥಕ ಧಾತು	Causative verbal root
ಕಾಲ ಸೂಚಕ ಕ್ರಿಯಾಪದ	Tense verb
ಕಾಲ ಸೂಚಕ ಪ್ರತ್ಯಯ	Tense marker
ಕೃದಂತ ಪರಕನಾಮ	Adjectival noun
ಕೃದಂತ ಪ್ರತ್ಯಯ	Participial marker
ಕೃನ್ನಾಮ ನಿಷೇಧಾರ್ಥಕ ಕೃದಂತ	Verbal noun negative participle
ಕ್ರಮಾಗತ ಕೃದಂತ	Consecutive participle
ಕ್ರಮಾಗತ ನಿಷೇಧಾರ್ಥಕ ಕೃದಂತ	Consecutive negative participle
ಕ್ರಿಯಾ ಧಾತು	Verbal root
ಕ್ರಿಯಾಪದ	Verb
ಕ್ರಿಯಾ ಮೂಲ	Verbal stem
ಕ್ರಿಯಾಸೂಚಕ ಕೃದಂತ	Verbal participle
ಗುಣಿತಾಕ್ಷರ	Syllabic letter

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗೋಳ	Rounded
ಗೌರವಾರ್ಥಕ ನಾಮಪದ	honorific noun
ಘೋಷ	Voiced
ಚಲನ ಅರ್ಥ	Sense of Motion
ಜನಪದ ಸಾಹಿತ್ಯ	Folk literature
ಜಿಹ್ವಾ ಫಲಕ ಧ್ವನಿ	Sound produced by the blade of the tongue
ಜಿಹ್ವೆ ತುದಿಯ ಧ್ವನಿ	Sound produced by the tip of the tongue
ತನ್ ವಿನ್ಯೆ ಧಾತು	Self-action verb
ತಾಲವ್ಯ	Palatal
ತಾಲವ್ಯ ಅಘೋಷ ಸ್ಪರ್ಶ ಧ್ವನಿ	Palatal voiceless Stop sound
ತಾಲವ್ಯೀಕರಣ	Palatalization
ತೋರಿಕೆಯ ಕ್ರಿಯಾಪದ	Aspectual verb
ದಂತ್ಯೋಷ್ಠ್ಯ	Labio-Dental
ದಂತ್ಯ ಅನುನಾಸಿಕ ಧ್ವನಿ	Dental nasal sound
ದೂರವರ್ತಿ ಸರ್ವನಾಮ	Remote pronoun
ದ್ವಿ-ಓಷ್ಠ್ಯ	Bi-labial
ಧ್ವನಿ ಪರಿವರ್ತನೆ/ಧ್ವನ್ಯಾತ್ಮಕ ಪರಿವರ್ತನೆ	Phonetic change
ಧ್ವನಿಮೈಕ್ಯ	Phonemic merger
ಧ್ವನಿಮಾ ಪರಿವರ್ತನೆ	Phonemic change
ಧ್ವನಿಮಾ ವಿಜ್ಞಾನ	Phonology
ಧ್ವನಿಮಾತ್ಮಕ ಮಟ್ಟ	Phonemic level
ನಡುವರ್ಗ	Middle type
ನಡುವರ್ಗ ಕ್ರಿಯಾಪದ	Middle verb
ನಾಮಪದ	Noun
ನಾಮ ರೂಪ	Subjective case form
ನಾಮ ರೂಪ ಸಂಖ್ಯಾವಾಚಕ	Numeral noun
ನಿರ್ದೇಶಕ ಸರ್ವನಾಮ	Demonstrative pronoun
ನಿರ್ದೇಶಕ ವಿಶೇಷಣ	Demonstrative Adjective
ನಿರ್ಧಾರಿತ/ವಿಧಾಯಕ ಕ್ರಿಯಾಪದ	Affirmative verb
ನಿರ್ಬಂಧಿತ ಕೃದಂತ ಪ್ರತ್ಯಯ	Conditional participle marker

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿರ್ಬಂಧಿತ ಕ್ರಿಯಾ ಸೂಚಕ ಕೃದಂತ	Conditional verbal participle
ನಿರ್ಬಲ ಕ್ರಿಯಾಪದ	Weak verb
ನಿಯಂತ ನಿಷೇಧಾರ್ಥಕ ಕೃದಂತ	Conditional negative verba participle
ನಿಯಮಿತ ಕ್ರಿಯಾಪದ	Weak verb
ನಿಷೇಧ	Negative
ನಿಷೇಧಾರ್ಥಕ ಕೃನ್ನಾಮ	Negative verbal noun
ನಿಷೇಧಾರ್ಥಕ ನಿಯಂತ ಕ್ರಿಯಾ ಸೂಚಕ ಕೃದಂತ	Negative conditional verbal participle
ನಿಷೇಧಾರ್ಥಕ ಪ್ರತ್ಯಯ	Negative marker
ನಿಷೇಧಾರ್ಥಕ ವಾಕ್ಯ	Nagative sentence
ನಿಷೇಧಾರ್ಥ ಸೂಚಕ ಕ್ರಿಯಾಪದ	Negative verb
ಪದ ಪರಿವರ್ತನೆ	Lexical change
ಪದ ಪ್ರತ್ಯಯ	Word marker
ಪರಸ್ಪರ ಸೂಚಕ ಕ್ರಿಯಾಪದ	Reciprocal Verb
ಪರಿಮಿತಿ ಕ್ರಿಯಾಸೂಚಕ ಕೃದಂತ	Limitative Verbal Participle
ಪರಿವರ್ತಿತ ವಿಭಕ್ತಿರೂಪ	Oblique form
ಪಶ್ಚಗಾಮಿ ಸಮೀಕರಣ	Regressive assimilation
ಪಶ್ಚಸ್ವರ	Back vowel
ಪಿಜಿವಿನ್ಯೆ ಧಾತು	Non-self action verbal root
ಪುರುಷಾರ್ಥಕ ಸರ್ವನಾಮ	Personal pronoun
ಪೂರ್ಣ ಕ್ರಿಯಾಪದ	Finite verb
ಪೂರ್ಣತೆ ಸೂಚಕ ಕ್ರಿಯಾಪದ	Perfective verb
ಪೂರ್ವಕಾಲಿಕ ಕೃದಂತ । ಪೂರ್ವಕಾಲಿಕ ಕ್ರಿಯಾಸೂಚಕ ಕೃದಂತ	Infinitive participle/ Infinitive verbal participle
ಪೂರ್ವಕಾಲಿಕ ನಿಷೇಧಾರ್ಥಕ ಕೃದಂತ	Infinitive negative verbal participle
ಪೂರ್ವ ಬರಹ ಭಾಷಾ ಚರಿತ್ರೆ	Pre-history of language
ಪೂರ್ವ ವರ್ತಿ ಸಮೀಕರಣ	Progressive assimilation
ಪ್ರಥಮಪುರುಷ	Third person
ಪ್ರಥಮಪುರುಷ ಲಿಂಗಪ್ರತ್ಯಯ	Third person gender marker
ಪ್ರಥಮಪುರುಷ ಸರ್ವನಾಮ	Third person pronoun

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಪ್ರದರ್ಶನ ಸೂಚಕ ಕ್ರಿಯಾಪದ	Demonstrational verb
ಪ್ರಯತ್ನ ಸೂಚಕ ಕ್ರಿಯಾಪದ	Trial verb
ಪ್ರಶ್ನಾರ್ಥಕ ಸರ್ವನಾಮ	Interrogative pronoun
ಬರಹ ಭಾಷಾ ಚರಿತ್ರೆ	History of written language
ಬರಹ ಸಾಹಿತ್ಯ	Written literature
ಬಾಹ್ಯ ಪುನರ್ರಚನೆ/ತೌಲನಿಕ ಪದ್ಧತಿ	External reconstruction
ಭಾಷಾ ಕಾಲಕ್ರಮ ವಿಜ್ಞಾನ	Glotto chronology
ಭಾಷಾ ಚರಿತ್ರೆ	History of language
ಭೂತಕಾಲ	Past tense
ಮಧ್ಯಮ ಪುರುಷ	Second person
ಮಧ್ಯಮ ಪುರುಷ ಲಿಂಗಪ್ರತ್ಯಯ	Second person gender marker
ಮಧ್ಯಮ ಪುರುಷ ಸರ್ವನಾಮ	Second persen pronoun
ಮಧ್ಯವರ್ತಿ ಸರ್ವನಾಮ	Intermediate pronoun
ಮಧ್ಯಸ್ವರ	Central vowel
ಮಹಾಪ್ರಾಣ ಧ್ವನಿ	Aspirated sound
ಮಾನವ ಕ್ರಿಯಾಪದ	Human verb
ಮಾನವ ನಾಮಪದ	Human noun
ಮೂರ್ಧನ್ಯ	Retroflex
ರಚನಾತ್ಮಕ ವಿವರಣೆ	Structural description
ರೀತಿ ಕ್ರಿಯಾಸೂಚಕ ಕೃದಂತ	Manneral verbal participle
ರೂಪ ಪರಿವರ್ತನೆ	Shape change
ಲಕ್ಷಿತ ಕೃದಂತ	Implied participle
ಲಕ್ಷಿತ ಕ್ರಿಯಾಪದ	Implied / appelletive verb
ಲಕ್ಷಿತ ಕ್ರಿಯಾಸೂಚಕ ಕೃದಂತ	Implied verbal participle
ಲಕ್ಷಿತ ಸಂಬಂಧ ಸೂಚಕ ಕೃದಂತ	Implied relative participle
ವರ್ತ್ಸ್ಯ ಅನುನಾಸಿಕ ಧ್ವನಿ	Alveolar nasal sound
ವರ್ತ್ಸ್ಯ ಧ್ವನಿ	Alveolar sound
ವರ್ತ್ಸ್ಯ ಸಂಘರ್ಷಧ್ವನಿ	Alveolar fricative sound
ವಾಕ್ಯ ವಿಜ್ಞಾನ	Syntax
ವಿತರಣಾ ಕ್ರಿಯಾಸೂಚಕ ಕೃದಂತ	Distributive verbal participle
ವಿಭಕ್ತಿ ಪ್ರತ್ಯಯ	Case marker
ವಿಭಾಜಕ ಕ್ರಿಯಾಸೂಚಕ ಕೃದಂತ	Disjunctive verbal participle

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿವೃತ ಸ್ವರ	Open vowel
ವಿಸರ್ಪಧ್ವನಿ	Glide sound
ವಿಸರ್ಪ ಸ್ವರ	Vowel glide
ವ್ಯಂಜನ ಧ್ವನಿಮಾ ಪರಿವರ್ತನೆ	Consonantal phonemic change
ವ್ಯಂಜನ ಯುಗ್ಮ	Consonantal cluster
ವ್ಯಾಕರಣ ಪರಿವರ್ತನೆ	Grammatical change
ವ್ಯಾಕರಣಾತ್ಮಕ ಮಟ್ಟ	Grammatical level
ಸಂಕೀರ್ಣ ಕ್ರಿಯಾಪದ	Complex verb
ಸಂಖ್ಯಾವಾಚಕ	Numeral
ಸಂಖ್ಯಾವಾಚಕ ವಿಶೇಷಣ ರೂಪ	Numeral adjective
ಸಂಘರ್ಷ	Fricative
ಸಂಧಿ ಪರಿವರ್ತನೆ	Sandhi change
ಸಂಧಿ ಮಟ್ಟ	Sandhi level
ಸಂಬಂಧ ಸೂಚಕ ಕೃದಂತ	Relative participle
ಸಂಭಾವನಾತ್ಮಕ ನಿಷೇಧಾರ್ಥಕ ಕ್ರಿಯಾಪದ	Potential negative verb
ಸಂಯುಕ್ತ ವ್ಯಂಜನ/ವ್ಯಂಜನ ಯುಗ್ಮ	Consonant cluster
ಸಂಯುಕ್ತಾಕ್ಷರ	Cluster
ಸಂಯುಕ್ತ ಕ್ರಿಯಾಸೂಚಕ ಕೃದಂತ	Compound verbal participle
ಸಂಯೋಜಕ ಪ್ರತ್ಯಯ	Conjunctive marker
ಸಂಯೋಜಕ ಕೃದಂತ	Conjunctive participle
ಸಂಯೋಜಕ ನಿಷೇಧಾರ್ಥಕ ಕೃದಂತ	Conjunctive negative verbal participle
ಸಂರಕ್ಷಣಾ ಸೂಚಕ ಕ್ರಿಯಾಪದ	Preservative verb
ಸಂವೃತ ಸ್ವರ	Closed vowel
ಸಜಾತೀಯ ಸಂಯುಕ್ತ ಸ್ಪರ್ಶಧ್ವನಿ	Geminated stop sound
ಸಬಲ ಕ್ರಿಯಾಪದ	Strong verb
ಸಮಯ ಕ್ರಿಯಾಸೂಚಕ ಕೃದಂತ	Temporal verbal participle
ಸಮಸ್ಪರ್ಶಿ	Homorganic plosive
ಸಮಕಾಲಿಕ ಕೃದಂತ/	Simultaneous participle/
ಸಮಕಾಲಿಕ ಕ್ರಿಯಾಸೂಚಕ ಕೃದಂತ	Simultaneous verbal participle
ಸಮಕಾಲಿಕ ನಿಷೇಧಾರ್ಥಕ ಕೃದಂತ	Simultaneous negative verbal participle

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಮಾನ ಕ್ರಿಯಾಪದ	Common verb
ಸಮಾನಾರ್ಥಿ	Synonym
ಸಮಾವೇಶಕ ಬಹುವಚನ	Inclusive plural
ಸಮೀಕರಣ	Assimilation
ಸಮೀಪವರ್ತಿ ಸರ್ವನಾಮ	Proximate pronoun
ಸರ್ವನಾಮ	Pronoun
ಸಹವರ್ತಿ ಅರ್ಥ	Sociative meaning
ಸಹವರ್ತಿ ಪ್ರತ್ಯಯ	Sociative marker
ಸಹಾಯಕ ಕ್ರಿಯಾಪದ	Auxiliary verb
ಸಾಧನ ಅರ್ಥ	Instrumental meaning
ಸಾಧನ ವಿಭಕ್ತಿ ಪ್ರತ್ಯಯ	Instrumental case marker
ಸಾಧ್ಯತಾ ಸೂಚಕ ಕ್ರಿಯಾಪದ	Probabilitive verb
ಸಾಧಿತ ನಾಮಪದ	Derived noun
ಸಾಧಿತ ಸರ್ವನಾಮ	Derived pronoun
ಸಾಪೇಕ್ಷ ಕೃದಂತ	Conditional participle
ಸಾಮಾನ್ಯ ವಿವರಣೆ	Common deseription
ಸ್ಪರ್ಶ ಧ್ವನಿ	Stop sound
ಸ್ವಚ್ಛಂದ ಪರಿವರ್ತನೆ	Free variation
ಸ್ವರ ಧ್ವನಿಮಾ ಪರಿವರ್ತನೆ	Vowel phonemic change
ಸ್ವರ ಯುಗ್ಮ	Vowel cluster
ಸ್ಥಿತಿಸೂಚಕ ಕ್ರಿಯಾಪದ	Modal verb
ಸ್ವೀಕೃತ ಕೃದಂತ	Receptive verbal participle
ಹೋಲಿಕೆಯ ಅರ್ಥ	Comparative Sense

4 0?824

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

UKUL KANGRI LIBRARY
Signature Date

GURUKUL KANGRI LIBRARY
Date
17-7-98
Access on
Class on
Date on
Tag etc
Filing
E.A.R.
Any other
Checked

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Presented free of
Cost with best
Compliments from
The Central Indian
Institute of Languages
Govt. of India
Mysore-6

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಡಾ. ಟಿ. ಮಣಿಯನ್ ಅವರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ನನ್ನ ಸಹೋದ್ಯೋಗಿ ಯಾಗಿ ಕೆಲಸ ಮಾಡುತ್ತಿದ್ದಾರೆ. ಇವರು ಸರಳವಾದ ಕನ್ನಡ ಭಾಷೆಯಲ್ಲಿ ತಮಿಳು ಭಾಷೆಯ ಇತಿಹಾಸವನ್ನು ಪರಿಚಯ ಮಾಡಿಕೊಡುವ 'ತಮಿಳು ಭಾಷಾ ಚರಿತ್ರೆ' ಎಂಬ ಪುಸ್ತಕವನ್ನು ಹೊರತಂದು ಕನ್ನಡಿಗರಿಗೆ ಮಹದುಪಕಾರ ಮಾಡಿದ್ದಾರೆ. ಇದು ತಮಿಳು ಭಾಷೆಯ ಬೆಳವಣಿಗೆಯನ್ನು ತಿಳಿಸುವ ಮೊಟ್ಟ ಮೊದಲ ತುಂಬ ಉಪಯುಕ್ತ ವಾದ ಪುಸ್ತಕ. ಈ ಪುಸ್ತಕವನ್ನು ಹೊರತಂದಿರುವ ನನ್ನ ಮಿತ್ರರಾದ ಡಾ. ಟಿ. ಮಣಿಯನ್ ಅವರನ್ನು ಇದಕ್ಕಾಗಿ ತುಂಬು ಹೃದಯದಿಂದ ಅಭಿನಂದಿಸಲು ನನಗೆ ತುಂಬ ಸಂತೋಷವಾಗುತ್ತದೆ.

ಡಾ. ಟಿ. ಮಣಿಯನ್ ಅವರು ತಮ್ಮ ಪುಸ್ತಕದಲ್ಲಿ ತಮಿಳು ಭಾಷೆಯ ಇತಿಹಾಸ ವನ್ನು ಎರಡು ಪ್ರಧಾನ ವಿಭಾಗಗಳಲ್ಲಿ ಪರಿಚಯ ಮಾಡಿಕೊಡುವ ಪ್ರಯತ್ನ ಮಾಡಿದ್ದಾರೆ. ಮೊದಲ ವಿಭಾಗದ ಹದಿಮೂರು ಅಧ್ಯಾಯಗಳಲ್ಲಿ ತಮಿಳು ಭಾಷೆ ಬೆಳೆದುಬಂದ ವಿಧಾನವನ್ನು ಕಾಲಕ್ರಮಕ್ಕನುಗುಣವಾಗಿ ವಿವರಿಸಿದರೆ, ಎರಡನೇ ವಿಭಾಗದ ಉಳಿದ ಆರು ಅಧ್ಯಾಯಗಳಲ್ಲಿ ತಮಿಳು ಭಾಷೆಯ ಒಂದೊಂದು ವ್ಯಾಕರಣಾಂಶವೂ ಐತಿಹಾಸಿಕವಾಗಿ ಬೆಳೆದುಬಂದ ವಿಧಾನವನ್ನು ವಿವರಿಸಲಾಗಿದೆ, ಇದರಲ್ಲಿ ಡಾ. ಟಿ. ಮಣಿಯನ್ ಅವರ ಪಾಂಡಿತ್ಯ, ಭಾಷಾವಿಜ್ಞಾನ ಜ್ಞಾನ, ವಿಷಯ ನಿರೂಪಣೆಯ ವಿಧಾನ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಆಧುನಿಕ ಭಾಷಾ ವಿಜ್ಞಾನದ ಹಿನ್ನೆಲೆಯಲ್ಲಿ ತಮಿಳು ಭಾಷೆಯ ಚರಿತ್ರೆಯನ್ನು ವಿವರಿಸುವ ಈ ಗ್ರಂಥ ಹೆಚ್ಚು ಉಪಯುಕ್ತವೂ ವೈಜ್ಞಾನಿಕವೂ ಆಗಿದೆ.

ಡಾ. ಟಿ ಮಣಿಯನ್ ಅವರ ಮಾತೃಭಾಷೆ ತಮಿಳು. ಆದರೂ ಇವರ ಕನ್ನಡ ಭಾಷೆಯ ಜ್ಞಾನ ತುಂಬ ಮೆಚ್ಚುವಂಥದ್ದು. ಇವರ ಕನ್ನಡ ಪ್ರಯೋಗಗಳಲ್ಲಿ ತಮಿಳಿನ ಛಾಯೆ ಕಂಡು ಬರುತ್ತದೆಯಾದರೂ ಅವು ಕನ್ನಡದತನವನ್ನು ಕಳೆದು ಕೊಂಡಿಲ್ಲ. ಇವರಿಂದ ಇನ್ನೂ ಹೆಚ್ಚಿನ ಕನ್ನಡ ಪುಸ್ತಕಗಳನ್ನು ನಿರೀಕ್ಷಿಸಬಹುದಾಗಿದೆ.

ಡಾ. ಕೆ. ಕೆಂಪೇಗೌಡ
ಪ್ರಾಧ್ಯಾಪಕ, ಭಾಷಾವಿಜ್ಞಾನ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–6.

CC-0. In Public Domain. Gurukul Kangri Collection, Haridwar